ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು
ಭಾನುವಾರ, 31 ಮೇ 2026
ಸಂಪುಟ 33, ಸಂಚಿಕೆ 210, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital



ಸಾಗರ ಭದ್ರತೆಗೆ ನೌಕಾ ಥಿಯೇಟರ್ ಕಮಾಂಡ್: ತ್ರಿಪಾಠಿ

09

ಗಡಿ ಜಿಲ್ಲೆಗಳ ಜನಸಂಖ್ಯೆ ಬದಲು ದೇಶಕ್ಕೆ ಸವಾಲು: ಶಾ

09



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಹುಣ್ಣಿಮೆ, ನಕ್ಷತ್ರ: ಅನುರಾಧೆ

ದಿನದ ಮಾತು

ಕೆಲಸ ಮಾಡುತ್ತಿದ್ದರೆ ಬಡತನವಿರುವುದಿಲ್ಲ. ಪರಮಾತ್ಮನ ಧ್ಯಾನ ಮಾಡುತ್ತಿದ್ದರೆ ಪಾಪ ವುಂಟಾಗುವುದಿಲ್ಲ. ಮೌನವಾಗಿದ್ದರೆ ಜಗಳವುಂಟಾಗುವುದಿಲ್ಲ.

▲ ಚಾಣಕ್ಯ

ಹೀಗೊಂದು ಮಸಾಲೆಪುರಿ ಆರ್ಡರ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ಮಾನವ ಹಕ್ಕು ಆಯೋಗ ಅಧ್ಯಕ್ಷ

• **ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

• ಪುಟ ೭

ವರ್ಚಸ್ಸು ಹೆಚ್ಚಿಸಿಕೊಳ್ಳಲು ಉಗ್ರ ಪಾಕಿಸ್ತಾನದ ಕಸರತ್ತು

• ಪುಟ ೫

ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಜಯಂತಿ ಇಂದು

• ಪುಟ ೫

ಮಲಪ್ಪುರಂ ಸ್ಫೋಟಕ ವಶ ಪ್ರಕರಣ: ಎನ್‌ಐಎ ದಾಳಿ

• ಪುಟ ೫

ಪಂಜಾಬ್ ಸ್ಥಳೀಯ ಕದನ; ಬಲ ವೃದ್ಧಿಸಿಕೊಂಡ ಬಿಜೆಪಿ

• ಪುಟ ೫

ಉ.ಪ್ರದೇಶದಲ್ಲಿ ಭಾರೀ ಮಳೆಗೆ 28 ಜನ ಸಾವು

• ಪುಟ ೫

ತಿರುವಾಂಕೂರು ರಾಜಮನೆತನದಿಂದ ಸ್ಪಷ್ಟನೆ: ಚಿನ್ನ ನಾಪತ್ತೆಯಾಗಿಲ್ಲ

• ಪುಟ ೫



ರಕ್ಷಣಾ ಸ್ವಾವಲಂಬನೆ

ಭಾರತದ ಸೇನಾ ಬಲ ಹೆಚ್ಚಿಸಿದ ಸೂರ್ಯಾಸ್ತ

• ಪುಟ ೫

ಸುದ್ದಿ ಸಮಗ್ರ

ಸಿಎಲ್‌ಪಿ ನಾಯಕರಾಗಿ ಆಯ್ಕೆ | ರಾಜ್ಯಪಾಲರ ಭೇಟಿ | ಸರ್ಕಾರ ರಚನೆಗೆ ಹಕ್ಕು ಮಂಡನೆ

ಬುಧವಾರ ಡಿಕೆಶಿ ಪ್ರಮಾಣವಚನ

• **ಬೆಂಗಳೂರು:** ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಶನಿವಾರ ಮತ್ತೊಂದು ಮಹತ್ವದ ಅಧ್ಯಾಯ ಆರಂಭವಾಗಿದೆ. ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ, ಹೈಕಮಾಂಡ್ ಸೂಚನೆಯಂತೆ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಘೋಷಿಸಲಾಗಿದೆ.



ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಶನಿವಾರ ಸಂಜೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲ ಶಾಸಕರು ಒಮ್ಮತದ ನಿರ್ಧಾರ ಕೈಗೊಂಡರು. ಸಭೆಯ ಆರಂಭದಲ್ಲಿಯೇ ಸಿದ್ದರಾಮಯ್ಯ ಅವರು ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯನ್ನು ಹೈಕಮಾಂಡ್‌ಗೆ ಬಿಡಲಾಗಿದೆ ಎಂದರು. ಬಳಿಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಅವರು ಆಯ್ಕೆಯಾಗಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯ ದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಘೋಷಿಸಿದರು.

ಡಿಕೆಶಿ ಹೆಸರು ಸೂಚಿಸಿದ ಸಿದ್ದರಾಮಯ್ಯ: 10 ನಿಮಿಷಗಳ ವಿರಾಮದ ಬಳಿಕ ಮತ್ತೆ ಸಭೆ ಸೇರಿ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಪ್ರಸ್ತಾಪಿಸಿದರು. ಶಾಸಕ ಡಾ.ಜಿ.ಪರಮೇಶ್ವರ್ ಅವರು ಸಿದ್ದರಾಮಯ್ಯ ಪ್ರಸ್ತಾವನೆ ಅನುಮೋದಿಸಿದರು. ಶಿವಕುಮಾರ್ ಹೆಸರು ಅನುಮೋದನೆಯಾಗುತ್ತಿದ್ದಂತೆಯೇ ಸಭೆಯಲ್ಲಿದ್ದ ಶಾಸಕರು ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು. ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಎಲ್ಲಾ ಶಾಸಕರು ಕೈ ಎತ್ತುವ ಮೂಲಕ ಡಿ.ಕೆ. ಶಿವಕುಮಾರ್ ಅವರ ಆಯ್ಕೆಯನ್ನು ಅನುಮೋದಿಸಿದರು.

ಹೈಕಮಾಂಡ್ ನಿರ್ಧಾರಕ್ಕೆ ಶಾಸಕರ ಸಹಮತ: ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಮುಂದಿನ ಮುಖ್ಯಮಂತ್ರಿ ಯಾರು ಎಂಬ ಕುತೂಹಲಕ್ಕೆ ಹೈಕಮಾಂಡ್ ಈಗಾಗಲೇ ತೆರೆ ಎಳೆದಿತ್ತು.

➡ ಪುಟ ೭



17 ವರ್ಷ ಬಳಿಕ ಪಟ್ಟ ಬಿಟ್ಟುಕೊಟ್ಟ ಸಿದ್ದರಾಮಯ್ಯ

ಮಾಜಿ ಸಿಎಂ ಸಿದ್ದರಾಮಯ್ಯನವರು ಬರೋಬ್ಬರಿ 17 ವರ್ಷ ಸುದೀರ್ಘವಾಗಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಇದೀಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕಾಂಗ ಪಕ್ಷದ ನಾಯಕನ ಸ್ಥಾನವನ್ನು ಬಿಟ್ಟುಕೊಟ್ಟಿದ್ದಾರೆ.

ಸಿದ್ದರಾಮಯ್ಯ ಪರ ಡಿಕೆಶಿ ಗೌರವ ನಿರ್ಣಯ ಮಂಡನೆ

ಸಿದ್ದರಾಮಯ್ಯನವರು ಒಂದೇ ವಾಕ್ಯದ ನಿರ್ಣಯ ಮಂಡಿಸುವುದರ ಮೂಲಕ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯನಾಗಿ ಆಯ್ಕೆ ಮಾಡಲಾಯಿತು. ಬಳಿಕ ಡಿಕೆ ಶಿವಕುಮಾರ್ ಅವರು ಸಿದ್ದರಾಮಯ್ಯ ಪರ ಗೌರವ ನಿರ್ಣಯ ಮಂಡಿಸಿದ್ದು, ಸಿಎಂ ಆಗಿ ಅವರ ಸೇವೆಯನ್ನು ಸಭೆಯಲ್ಲಿ ಮೆಲುಕು ಹಾಕಲಾಗುತ್ತದೆ.

ನುಡಿದಂತೆ ನಡೆದಿದ್ದೇವೆ: ಸಿಎಲ್‌ಪಿ ಸಭೆಯಲ್ಲಿ ಸಿದ್ದರಾಮಯ್ಯ

ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಮಾತನಾಡಿದ ಮಾಜಿ ಸಿಎಂ ಸಿದ್ದರಾಮಯ್ಯ, ತಮ್ಮ ಆಡಳಿತದ ಬಗ್ಗೆ ವಿವರಿಸಿದರು. ರಾಜ್ಯದಲ್ಲಿ ನುಡಿದಂತೆ ನಡೆದಿದ್ದೇವೆ. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಸರ್ವ ಜನರ ಏಳಿಗೆಗಾಗಿ ನಾನು ಸೇರಿದಂತೆ ನಮ್ಮ ಪಕ್ಷದ ಎಲ್ಲ ಶಾಸಕರು, ಸಂಪುಟ ಸಹೋದ್ಯೋಗಿಗಳು ಉತ್ತಮ ಕೆಲಸ ನಿರ್ವಹಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಹೈಕಮಾಂಡ್‌ನ ಎಲ್ಲ ನಾಯಕರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಡಿಕೆಶಿ

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬೆನ್ನಲ್ಲೇ ಡಿ.ಕೆ. ಶಿವಕುಮಾರ್ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಶಾಸಕಾಂಗ ಪಕ್ಷದ ನಿರ್ಣಯದ ಪತ್ರದೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿ, ತಮಗೆ ಬಹುಮತ ಇರುವ ಬಗ್ಗೆ ಮಾಹಿತಿ ನೀಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಈ ವೇಳೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್, ಸುರ್ಜೇವಾಲಾ ಇದ್ದರು.

ಜೂ.3ರಂದು ಪ್ರಮಾಣವಚನ

ಡಿ.ಕೆ.ಶಿವಕುಮಾರ್ ಅವರ ಪದ ಗ್ರಹಣ ಸಮಾರಂಭಕ್ಕೆ ಈಗಾಗಲೇ ದಿನಾಂಕ ಮತ್ತು ಸಮಯ ನಿಗದಿ ಯಾಗಿದೆ. ಬರುವ ಬುಧವಾರ (ಜೂ.3) ಸಂಜೆ 4.05 ಗಂಟೆಗೆ ಬೆಂಗಳೂರಿನ ಲೋಕಭವನದಲ್ಲಿ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಸಮಾರಂಭಕ್ಕೆ ದೆಹಲಿಯ ಹೈಕ ಮಾಂಡ್ ನಾಯಕರು ಹಾಗೂ ನೆರೆಯ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾಗಲಿದ್ದಾರೆ.

ಅಜ್ಜಯ್ಯಗೆ ಡಿ.ಕೆ. ಶಿವಕುಮಾರ್ ವಿಶೇಷ ಪೂಜೆ

ಸಿಎಲ್‌ಪಿ ಸಭೆಗೂ ಮುನ್ನವೇ ಡಿ.ಕೆ. ಶಿವಕುಮಾರ್ ತಮ್ಮ ನೆಚ್ಚಿನ ಗುರುಗಳಾದ ಅಜ್ಜಯ್ಯರಿಗೆ ವಿಶೇಷ ಪೂಜೆ ಸಲ್ಲಿಸಿದರು.ಎಲ್ಲರನ್ನೂ ಹೊರಗೆ ಕಳುಹಿಸಿ ವಿಧಾನಸೌಧ ಕೊಠಡಿ ಯಲ್ಲಿ ಆರಾಧ್ಯ ದೈವ ಅಜ್ಜಯ್ಯರಿಗೆ ಪೂಜೆ ಸಲ್ಲಿಸಿದರು. ಬಳಿಕ ಶಾಸಕಾಂಗ ಪಕ್ಷದ ಸಭೆಗೆ ತೆರಳಿದರು.

> ಚುನಾವಣಾ ಪೂರ್ವದಲ್ಲಿ ಜನರಿಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಿದ್ದೇವೆ. ಇದರೊಂದಿಗೆ ಅತ್ಯುತ್ತಮ ಆಡಳಿತ ನೀಡುವ ಪ್ರಯತ್ನ ಮಾಡಿದ್ದೇನೆ. ಕೇಂದ್ರದ ತಾರತಮ್ಯ ನೀತಿಯ ಹೊರತಾಗಿಯೂ ಉತ್ತಮ ಆರ್ಥಿಕ ನಿರ್ವಹಣೆ ಮಾಡಿದ್ದೇವೆ.
> ■ **ಸಿದ್ದರಾಮಯ್ಯ**, ಮಾಜಿ ಸಿಎಂ

> ಸಾಮಾಜಿಕ ನ್ಯಾಯದ ಮೇಲಿನ ಸಿದ್ದರಾಮಯ್ಯ ಅವರ ಸಮರ್ಪಣಾ ಭಾವ ಮತ್ತು ಆಡಳಿತಾತ್ಮಕ ಸಾಮರ್ಥ್ಯವು ಪ್ರತಿ ಕಾಂಗ್ರೆಸ್ಸಿಗನಿಗೂ ಮಾದರಿಯಾಗಿದೆ. ಅವರ ಮಾರ್ಗದರ್ಶನದಲ್ಲಿ ನಮ್ಮ ಸರ್ಕಾರ ಮುನ್ನಡೆಯಲಿದೆ
> ■ **ಡಿ.ಕೆ.ಶಿವಕುಮಾರ್**, ನಿಯೋಜಿತ ಸಿಎಂ

> ಹೈಕಮಾಂಡ್ ನಿರ್ಣಯದಂತೆ ಡಿ.ಕೆ.ಶಿವಕುಮಾರ್ ಅವರನ್ನು ಒಮ್ಮತದಿಂದ ಶಾಸಕಾಂಗ ಸಭೆಯ ನಾಯಕರನ್ನಾಗಿ ಆಯ್ಕೆ ಮಾಡಿದ್ದೇವೆ. ಸಿದ್ದರಾಮಯ್ಯ ಅವರು ಶಿವಕುಮಾರ್ ಹೆಸರನ್ನು ಸೂಚಿಸಿದ್ದು, ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.
> ■ **ಕೆ.ಸಿ.ವೇಣುಗೋಪಾಲ್**, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿಕೆ

ಆಪರೇಷನ್ ಸಿಂದೂರ್ 2.0ಗೆ ಸಿದ್ಧ

• **ಹೊಸದಿಲ್ಲಿ:** ನಮ್ಮ ಮೂರು ಸೇನಾ ಪಡೆಗಳೂ ಆಪರೇಷನ್ ಸಿಂದೂರ್ 2.0ಗೆ ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಶನಿವಾರ ಹೇಳಿದ್ದಾರೆ.



ಮೂರು ಸೇವೆಗಳು ಭೂಮಿ, ವಾಯು ಮತ್ತು ಸಮುದ್ರವನ್ನು ಮೀರಿ ವಿಸ್ತರಿಸಿರುವ ಆಧುನಿಕ ಮಲ್ಟಿ-ಡೊಮೇನ್ ಯುದ್ಧಕ್ಕೆ ಭಾರತೀಯ ಸೇನೆ ಸನ್ನದ್ಧವಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (ಎನ್‌ಡಿಎ) 150ನೇ ಕೋರ್ಸ್‌ನ ಪಾಸಿಂಗ್ ಔಟ್ ಪರೇಡ್ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜನರಲ್ ದ್ವಿವೇದಿ, ಪ್ರಸ್ತುತ ಕದನ ವಿರಾಮ ಅಸ್ತಿತ್ವದಲ್ಲಿದ್ದರೂ, ಮುಂದಿನ ಹಂತಕ್ಕೆ ಎಲ್ಲಾ ಮೂರು ಪಡೆಗಳು ತೀವ್ರವಾಗಿ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಆಪರೇಷನ್ ಸಿಂದೂರ ಇನ್ನೂ ಮುಗಿದಿಲ್ಲ. ಅದು ಮುಂದುವರಿದಿದೆ. ಯುದ್ಧಕ್ಕೆ ತಾತ್ಕಾಲಿಕ ಕದನ ವಿರಾಮ ಇದೆ ಅಷ್ಟೇ. ಆದ್ದರಿಂದ ಭಾರತೀಯ ಸೇನೆ ಮತ್ತು ಎಲ್ಲಾ ಮೂರು ಸೇವೆಗಳು ಆಪರೇಷನ್ ಸಿಂದೂರ್ 2.0ಗೆ ಉತ್ತಮವಾಗಿ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಆಧುನಿಕ ಯುದ್ಧಕ್ಕೆ ಸಿದ್ಧ: ಭವಿಷ್ಯದ ಯುದ್ಧವು ಭೂಮಿ, ಕಡಲ ಮತ್ತು ಗಾಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಬಾಹ್ಯಾಕಾಶ, ಸೈಬರ್ ಮತ್ತು ಅರಿವಿನ ಯುದ್ಧದಂತಹ ಉದಯೋನ್ಮುಖ ಕ್ಷೇತ್ರಗಳಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ. ಆಧುನಿಕ ಯುದ್ಧಭೂಮಿಗಳು ಹೆಚ್ಚು ಪಾರದರ್ಶಕವಾಗಿವೆ. ಮಿಲಿಟರಿ ಯೋಜಕರು ನಿಯೋಜನೆ ಮತ್ತು ರಕ್ಷಣಾ ಕ್ರಮಗಳ ಬಗ್ಗೆ ಜಾಗರೂಕರಾಗಿರಬೇಕು ಎಂದು ಜನರಲ್ ದ್ವಿವೇದಿ ಹೇಳಿದರು.

➡ ಪುಟ ೭

ದಾವೂದ್ ಜತೆ ನಂಟು | ಅಪಾರ ಮದ್ದುಗುಂಡು, ಶಸ್ತ್ರಾಸ್ತ್ರ ವಶ

ದಾಳಿ ಸಂಚು: 9 ಶಂಕಿತ ಉಗ್ರರ ಸೆರೆ

• **ಹೊಸದಿಲ್ಲಿ:** ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಭೂಗತ ಪಾತಕಿ ದಾವೂದ್ ಇಬ್ರಾಹಿಂನೊಂದಿಗೆ ಸಂಪರ್ಕ ಹೊಂದಿರುವ 9 ಶಂಕಿತ ಉಗ್ರರನ್ನು ದಿಲ್ಲಿಯಲ್ಲಿ ಬಂಧಿಸಲಾಗಿದೆ.



ಈ ತಂಡ ದಿಲ್ಲಿ, ಮುಂಬೈ ಮತ್ತು ದೇಶದ ಇತರ ಭಾಗಗಳಲ್ಲಿ ದಾಳಿ ನಡೆಸಲು ಯೋಜಿಸಿತ್ತು ಎಂಬ ಸ್ಫೋಟಕ ಮಾಹಿತಿ ತನಿಖೆಯಲ್ಲಿ ಬಹಿರಂಗಗೊಂಡಿತ್ತು. ಬಂಧಿತ ಆರೋಪಿಗಳು ದಿಲ್ಲಿ, ಮುಂಬೈ ಮತ್ತು ಪಂಜಾಬ್ ನಿವಾಸಿಗಳಾಗಿದ್ದು, ಕೆಲವರು ವಿದೇಶಿ ಪ್ರಜೆಗಳಾಗಿದ್ದಾರೆ ಎಂದು ದಿಲ್ಲಿ ಪೊಲೀಸರ ವಿಶೇಷ ಘಟಕ ತಿಳಿಸಿದೆ. ಬಂಧಿತರ ಬಳಿಯಿದ್ದ ಭಾರೀ ಪ್ರಮಾಣದ ಮದ್ದುಗುಂಡು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

➡ ಪುಟ ೭

ಜಾಲದ ಸಮಗ್ರ ತನಿಖೆ

ಸದ್ಯ ವಿಶೇಷ ಘಟಕವು ಈಗ ಹಣಕಾಸಿನ ಜಾಡು, ಸಂವಹನ ದಾಖಲೆಗಳು ಮತ್ತು ಘಟಕಕ್ಕೆ ಸಂಬಂಧಿಸಿದ ವ್ಯಾಪಕ ಜಾಲದ ಬಗ್ಗೆ ತನಿಖೆ ನಡೆಸುತ್ತಿದೆ. ಲಾಜಿಸ್ಟಿಕ್ಸ್, ಹಣಕಾಸು ಇತ್ಯಾದಿಗಳಿಗಾಗಿ ಆರೋಪಿಗಳು ಮತ್ತು ಸಂಘಟಿತ ಅಪರಾಧ ಜಾಲಗಳ ನಡುವಿನ ಸಂಭಾವ್ಯ ಸಂಪರ್ಕಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಐಎಸ್‌ಐ ಬೆಂಬಲಿತ ಎಂದು ಹೇಳಲಾಗುವ ದೇಶಭ್ರಷ್ಟ ಗ್ಯಾಂಗ್‌ಸ್ಟರ್ ದಾವೂದ್ ಇಬ್ರಾಹಿಂನ ಭೂಗತ-ಭಯೋತ್ಪಾದಕ ಜಾಲಕ್ಕೆ ಸಂಬಂಧಿಸಿರುವ ಇತ್ತೀಚಿನ ಬಂಧನಗಳ ನಂತರ ಈ ಕಾರ್ಯಾಚರಣೆ ನಡೆದಿದೆ.

ಮಹಿಳೆಯರಿಂದ ಕಾನೂನು ದುರ್ಬಳಕೆ: ಸುಪ್ರೀಂ ಆತಂಕ

• **ಹೊಸದಿಲ್ಲಿ :** ವರದಕ್ಷಿಣೆ ಹಿಂಸೆ, ಕೌಟುಂಬಿಕ ಹಿಂಸೆ, ಪೋಸ್ಕೋ ಹೆಸರಿನಲ್ಲಿ ಪತಿ ಮತ್ತು ಅತ್ತೆ-ಮಾವನ ವಿರುದ್ಧ ಕ್ಷುಲ್ಲಕ ಮತ್ತು ಕಿರುಕುಳ ನೀಡುವ ದೂರುಗಳನ್ನು ದಾಖಲಿಸುವ ಮೂಲಕ ಕಾನೂನನ್ನು ದುರ್ಬಳಕೆ ಮಾಡುವ ಮಹಿಳೆಯರ ಪ್ರಮಾಣ ಹೆಚ್ಚುತ್ತಿರುವ 'ಆತಂಕಕಾರಿ ಪ್ರವೃತ್ತಿ'ಯ ಬಗ್ಗೆ ಸುಪ್ರೀಂಕೋರ್ಟ್ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.ಲಾಭದಾಯಕ ಇತ್ಯರ್ಥಗಳಿಗಾಗಿ ಸುಳ್ಳು ದೂರುಗಳನ್ನು ದಾಖಲಿಸುವ ಮೂಲಕ 'ತೋಳುತಿರುಚುವ' ವಿಧಾನ ಅನುಸರಿಸುವ ಪತ್ನಿಯರ ಪ್ರಮಾಣ ಮಿತಿ ಮೀರುತ್ತಿರುವುದರಿಂದಾಗಿ ನಿಜವಾದ ಪ್ರಕರಣಗಳು ಮರೆಮಾಚಲ್ಪಡುತ್ತಿವೆ.

ಲಾಭದಾಯಕ ಇತ್ಯರ್ಥಗಳಿಗಾಗಿ ಸುಳ್ಳು ದೂರು ದಾಖಲು

➡ ಪುಟ ೭

ಈ ಸಲವ್ರೂ ಕಪ್ ನಮ್ದೆ?



ಐಪಿಎಲ್ ಫೈನಲ್ ಪಂದ್ಯ ಇಂದು

ರಜತ್ ಬಳಗಕ್ಕೆ ಗುಜರಾತ್ ಟೈಟಾನ್ಸ್ ಎದುರಾಳಿ



» ಟ್ರೋಫಿ ಉಳಿಸಿಕೊಂಡ ತಂಡ ದಾಖಲೆ ಮೇಲೆ ಆರ್‌ಸಿಬಿ ಕಣ್ಣು

» ಸಮಬಲ ಪೈಪೋಟಿಯಲ್ಲಿ ಗೆದ್ದವರೇ ಕಿಂಗ್!

ಉಭಯ ತಂಡಗಳ ಮುಖಾಮುಖಿ

ಪಂದ್ಯ 8

ಆರ್‌ಸಿಬಿ 4

ಗುಜರಾತ್ 4

ಗೆದ್ದವರಿಗಿದು ಎರಡನೇ ಕಪ್

▸ ಆರ್‌ಸಿಬಿ-2025
▸ ಗುಜರಾತ್-2022

ಆರ್‌ಸಿಬಿ ಬಲ VS **ಗುಜರಾತ್ ಬಲ**

ಆರ್‌ಸಿಬಿ ಬಲ	ಗುಜರಾತ್ ಬಲ
▸ ವಿರಾಟ್ ಕೊಹ್ಲಿ: 600 ರನ್	▸ ಶುಭಮನ್ ಗಿಲ್: 722 ರನ್
▸ ರಜತ್ ಪಾಟಿದಾರ್: 486 ರನ್	▸ ಸಾಯಿ ಸುದರ್ಶನ್: 710 ರನ್
▸ ಭುವನೇಶ್ವರ್ : 26 ವಿಕೆಟ್	▸ ಕಾಗಿಸೋ ರಬಾಡ: 28 ವಿಕೆಟ್

ಪಂದ್ಯ ವಿವರ

ಯಾವಾಗ: ಭಾನುವಾರ
ಎಲ್ಲಿ: ಅಹಮದಾಬಾದ್, ನರೇಂದ್ರ ಮೋದಿ ಕ್ರೀಡಾಂಗಣ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಶೇ.96.5 ಮನೆಗಳಿಗೆ ಶುದ್ಧ ನೀರು

2023-24ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಟ

• **ಹೊಸದಿಲ್ಲಿ :** 2023-24ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(ಎನ್‌ಎಫ್‌ಎಚ್‌ಎಸ್-6) ಬಿಡುಗಡೆ ಯಾಗಿದ್ದು, ಇದರಂತೆ ದೇಶದ ಶೇ.98.3ರಷ್ಟು ಮನೆಗಳಿಗೆ ಈಗ ವಿದ್ಯುತ್ ಸೌಲಭ್ಯ ಲಭಿಸಿದ್ದು, ಶುದ್ಧ ಕುಡಿಯುವ ನೀರು ಶೇ.96.5ರಷ್ಟು ಮನೆಗಳಿಗೆ ಲಭಿಸು ತ್ತಿದೆ. ಅಂತರ್ಜಾಲ ಬಳಸುವ ಮಹಿಳೆಯರ ಪ್ರಮಾಣ ದುಪ್ಪಟ್ಟಾಗಿದ್ದು, ಶೇ.64.3ಕ್ಕೇರಿದೆ. ಮನೆ ಅಥವಾ ಜಾಗ ಹೊಂದುವ ಮೂಲಕ ಭೂಮಿಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣವೂ ಶೇ.18.8ಕ್ಕೇರಿದೆ.

➡ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,90,000(2,85,000) ಅಪರಂಜಿ ಚಿನ್ನ: 1,54,090(1,51,390) ಆಭರಣ ಚಿನ್ನ: 1,46,750(1,44,150) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ.(ಆವರಣದಲ್ಲಿ ಹಿಂದಿನ ದಿನದ ದರ)

$1 = ₹95.01

ಮೂರಿನಕಟ್ಟೆ ವಿಚಾರದಲ್ಲಿ ಸರ್ಕಾರ ಮೌನ ಪ್ರಶ್ನಿಸಿದ ಕೋಟ

ಕುಂದಾಪುರ: ಸಮಾನತೆಯನ್ನು ನೋಡಬೇಕಾದುದು ಸರಕಾರದ ಮತ್ತು ಸಂವಿಧಾನದ ಜವಾಬ್ದಾರಿ. ದುರದೃಷ್ಟಕ್ಕೆ ಇಡೀ ಕಾಂಗ್ರೆಸ್ ಸರಕಾರ ಹಿಂದುಗಳ ಬದುಕಿನ ಹಕ್ಕಿನ ಪ್ರಶ್ನೆ ಬಂದಾಗ ನಿರ್ಲಕ್ಷ್ಯ ವಹಿಸುವುದು, ನಿರ್ಲಿಪ್ತತೆ ಮಾಡುವುದು ನಡೆಯುತ್ತಿದೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.



ಹೆಮ್ಮಾಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಟ್ಕಳ ಪ್ರಕರಣದಲ್ಲಿ ತಕ್ಷಣ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಂಡು, ನಿಮ್ಮ ಜೊತೆ ನಾವಿದ್ದೇವೆ ಎಂದು ವಿಶ್ವಾಸ ಮೂಡಿಸಿದ್ದರೆ ಇಂತಹ ಗೊಂದಲಗಳು ಆಗಿರಲು ಸಾಧ್ಯವಿರಲಿಲ್ಲ. ಹಿಂದುಗಳೆಲ್ಲ ಒಟ್ಟಾಗಿ ಬೀದಿಗೆ ಬಂದು ನಮ್ಮ ಬದುಕಿನ ಹಕ್ಕನ್ನು ರಕ್ಷಿಸಿ ಕೊಡಿ ಎಂದು ಸರಕಾರಕ್ಕೆ ಮನವಿ ಮಾಡಿರುವುದು ನೋವಿನ ಸಂಗತಿ. ಈ ಸಂಕಟದ ಸಮಯದಲ್ಲಿ ಎಲ್ಲಾ ಹಿಂದುಗಳ ನೋವಿನ ಪರವಾಗಿ ನಿಲ್ಲಬೇಕಾದ ಜವಾಬ್ದಾರಿ ಇದೆ. ನಾವೆಲ್ಲ ಹಿಂದುಗಳ ಪರವಾಗಿ ನಿಲ್ಲುತ್ತೇವೆ. ಸರಕಾರ ಏನು ಮಾಡುತ್ತದೆಯೋ ಮಾಡಿಕೊಳ್ಳಲಿ ಎಂದು ಅವರು ಸವಾಲು ಹಾಕಿದರು. ಹಿಂದುಗಳಿಗೆ ಅನ್ಯಾಯ ಆದರೆ ಯಾರನ್ನು ಏನೂ ಮಾಡದೆ ಇರುವ ಪರಂಪರೆ ಈ ಸರಕಾರದಲ್ಲಿ ಬೆಳೆದಿರುವ ಹಿನ್ನಲೆಯಲ್ಲಿ ಸಹಜವಾಗಿ ಸಮಾಜದಲ್ಲಿ ಗೊಂದಲ ಸೃಷ್ಟಿಯಾಗುತ್ತಿದ್ದು, ಭಟ್ಕಳದಲ್ಲಿ ಒಂದು ಸಮುದಾಯವರು ಬಂದು ಹಿಂದುಗಳ ಪೂಜಾ ಸ್ಥಳವಾದ ಮೂರಿನಕಟ್ಟೆಯನ್ನು ಒಡೆದು ಹೋದಾಗ, ಸರಕಾರ ನಿರ್ಲಿಪ್ತವಾದರೆ ಅನಿವಾರ್ಯವಾಗಿ ಹಿಂದು ಸಮಾಜ ಬಡಿದೆಳುವ ಪರಿಸ್ಥಿತಿ ಇದೆ. ಇಡೀ ರಾಜ್ಯದಲ್ಲಿ ಇದೇ ವಾತಾವರಣ ಇದೆ. ನೀವು ಹಿಂದುಗಳಿಗೆ ಏನು ಮಾಡಿದರೂ ಆಗುತ್ತದೆ, ಎಷ್ಟೇ ಅಪಮಾನ ಮಾಡಿದರೂ ಆಗುತ್ತದೆ ಎಂಬ ಪರಂಪರೆಯನ್ನು ಸರಕಾರ ಇಟ್ಟುಕೊಂಡಾಗ ಮತ್ತು ಹಿಂದುಗಳಿಗೆ ಅನ್ಯಾಯವಾದರೆ ಹಿಂದುಗಳ ಮೇಲೆಯೇ ಕೇಸು ಮಾಡುತ್ತೇವೆ ಎಂದು ದಬ್ಬಾಳಿಕೆ ಮಾಡಿದಾಗ, ಕೊನೆಯಲ್ಲಿ ಸಹನೆಯ ಕಟ್ಟೆ ಒಡೆದಿರುವ ಸಣ್ಣ ಉದಾಹರಣೆ ಭಟ್ಕಳದಲ್ಲಿ ನಡೆದಿದೆ ಎಂದರು.

ಶಾಸಕರ ಬೆಂಬಲ



ವಿಧಾನಸಭೆಯ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕರು ಕೈ ಎತ್ತುವ ಮೂಲಕ ಬೆಂಬಲಿಸಿದರು.

ಸಿಜೆಪಿ ವಿಚಾರಕ್ಕೆ ಸುನೀಲ್ ಅಂಬೇಕರ್ ಪ್ರತಿಕ್ರಿಯೆ

ಎಲ್ಲ ದನಿಗಳಿಗೂ ಇಲ್ಲಿ ಸ್ಥಾನವುಂಟು

ನಾಗ್ಪುರ: ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಉದಯದ ಕುರಿತು ಪ್ರತಿಕ್ರಿಯಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ್ ಅಂಬೇಕರ್, ಭಾರತೀಯ ಪ್ರಜಾಪ್ರಭುತ್ವವು ಎಲ್ಲ ಧ್ವನಿಗಳು ಹಾಗೂ ಭಾವನೆಗಳಿಗೆ ಅವಕಾಶ ಕಲ್ಪಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ.

- ಎಲ್ಲ ಧ್ವನಿಗಳು ಮತ್ತು ಭಾವನೆಗಳಿಗೆ ಭಾರತೀಯ ಪ್ರಜಾಪ್ರಭುತ್ವದಲ್ಲಿ ಅವಕಾಶ: ಆರ್‌ಎಸ್‌ಎಸ್
- ಜೆನ್ ಝೀ ಪೀಳಿಗೆಗೆ ದೇಶದ ಮೇಲೆ ಅಪಾರ ವಿಶ್ವಾಸವಿದೆ
- ಹೊಸ ರಾಜಕೀಯ ಅಭಿವ್ಯಕ್ತಿಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯ ಭಾಗ
- ಚುನಾವಣೆ, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣ ವ್ಯವಸ್ಥೆ ಮುಕ್ತವಾಗಿದೆ

ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬಲವಾಗಿದ್ದು, ಚುನಾವಣೆಗಳು ಪಾರದರ್ಶಕವಾಗಿ ನಡೆಯುತ್ತವೆ. ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳೂ ಮುಕ್ತವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಅಂಬೇಕರ್ ಅವರು ಅಭಿಪ್ರಾಯಪಟ್ಟರು.

ಜನರ ಅಭಿಪ್ರಾಯಗಳು, ಅಸಮಾಧಾನಗಳು ಅಥವಾ ಹೊಸ ರೀತಿಯ ರಾಜಕೀಯ ಅಭಿವ್ಯಕ್ತಿಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯ ಭಾಗವೇ ಆಗಿವೆ. ದೇಶದ ಯುವಜನತೆ, ವಿಶೇಷವಾಗಿ ಜೆನ್ ಝೀ ಪೀಳಿಗೆ, ಭಾರತದ ಮೇಲೆ ಅಪಾರ ನಂಬಿಕೆ ಹೊಂದಿದ್ದು, ಸಂವಿಧಾನಾತ್ಮಕ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು. ಕಾಕ್ರೋಚ್ ಜನತಾ ಪಾರ್ಟಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿರುವ ಬೆನ್ನಲ್ಲೇ ಅಂಬೇಕರ್ ಈ ಪ್ರತಿಕ್ರಿಯೆ ನೀಡಿದ್ದಾರೆ. ಈ ಬೆಳವಣಿಗೆಯನ್ನು ಅತಿಯಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಅವರು ಸೂಚಿಸಿದ್ದು, ಪ್ರಜಾಪ್ರಭುತ್ವದಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ ಎಂದು ಹೇಳಿದ್ದಾರೆ.

ಕಿರುಸುದ್ದಿ

ಲಿಂಗಾಯತ ಸಮುದಾಯಕ್ಕೆ ಡಿಸಿಎಂ ಸ್ಥಾನ ನೀಡಿ: ಪಾಟೀಲ್

ಬೆಂಗಳೂರು : ವೀರೇಂದ್ರ ಪಾಟೀಲ್ ಆದಮೇಲೆ ನಮ್ಮ ಸಮುದಾಯಕ್ಕೆ ಉತ್ತಮ ಸ್ಥಾನಮಾನ ಕಾಂಗ್ರೆಸ್‌ನಲ್ಲಿ ಸಿಕ್ಕಿಲ್ಲ. ಹೀಗಾಗಿ ಈ ಬಾರಿ ವೀರಶೈವ/ಲಿಂಗಾಯತ ಸಮುದಾಯದವರಿಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕೈಗಾರಿಕಾ ಮತ್ತು ವಾಣಿಜ್ಯ ಘಟಕದ ರಾಜ್ಯಾಧ್ಯಕ್ಷ ವಿಜಯಕುಮಾರ್ ಪಾಟೀಲ್ ಒತ್ತಾಯಿಸಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಸಚಿವ ಸಂಪುಟದಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಹಾಗೂ ಸಮುದಾಯದ ಹಿರಿಯ ನಾಯಕರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿದರು. ವೀರಶೈವ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಮಾತನಾಡಿ, ಲಿಂಗಾಯತ ಪ್ರಬಲ ಸಮುದಾಯಕ್ಕೆ ಈಗಿನ ಪರಿಸ್ಥಿತಿಯಲ್ಲಿ ಸಿಎಂ ಕೊಡೋಕೆ ಸಾಧ್ಯವಿಲ್ಲ. ಆದರಿಂದ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಹೇಳಿದರು.

ಈಜಲು ಹೋದ ಮೂವರು ಬಾಲಕರು ನೀರು ಪಾಲು

ಧಾರವಾಡ: ಕೆರೆಗೆ ಈಜಲು ಹೋಗಿದ್ದ ಮೂವರು ಬಾಲಕರು ಈಜು ಬಾರದೆ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ತಾಲೂಕಿನ ಸಿಂಗನಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ನಿವಾಸಿಗಳಾದ ಅನ್ವರ್ ಇಬ್ರಾಹಿಂ ವಟ್ನಾಳ(13), ಸುಭಾನಿ ಇಸಾಕ್ ಬಾಗಜಿಕೊಪ್ಪ(12) ಹಾಗೂ ಮೆಹಬೂಬ್ ದಾದಾಫಿರ್ ವಡ್ನಾಳ್ (15) ಮೃತ ಬಾಲಕರು. ಗ್ರಾಮದ ಕರೆಮ್ಮನಕೆರೆಗೆ ಮಧ್ಯಾಹ್ನ ಈಜಲು ಹೋದ ಬಾಲಕರು, ನೀರಿನ ಆಳ ತಿಳಿಯದೆ ಒಬ್ಬರನ್ನೊಬ್ಬರು ರಕ್ಷಿಸಲು ಹೋಗಿ ನೀರಲ್ಲಿ ಮುಳುಗಿದ್ದಾರೆ. ಬಾಲಕರು ಮನೆಗೆ ಬಾರದ ಹಿನ್ನಲೆ ಆತಂಕಗೊಂಡ ಪಾಲಕರು ಶೋಧ ನಡೆಸಿದಾಗ ಘಟನೆ ಬೆಳಕಿಗೆ ಬಂದಿದೆ. ಕೆರೆ ದಂಡೆಯಲ್ಲಿ ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಗರಗ ಠಾಣೆಯ ಪೊಲೀಸರು, ಪರಿಶೀಲನೆ ನಡೆಸಿದ್ದು, ಗ್ರಾಮಸ್ಥರ ನೆರವಿನಿಂದ ಶವಗಳನ್ನು ಹೊರ ತೆಗೆಯಲಾಗಿದೆ. ಈ ಕುರಿತು ಗರಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹೆಣ್ಣು ಶವಗಳ ವಿಡಿಯೋ ಚಿತ್ರೀಕರಣ: ಸೆರೆ

ಬೀದರ್: ಬ್ರಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ಬೆಚ್ಚಿ ಬೀಳಿಸುವ ಘಟನೆ ಬೆಳಕಿಗೆ ಬಂದಿದ್ದು, ಶವಾಗಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಟೆಂಡರ್‌ನೊಬ್ಬ ಪೋಸ್ಟ್ ಮಾರ್ಟ್‌ಮ್ ವೇಳೆ ಮಹಿಳಾ ಮೃತದೇಹಗಳ ಬೆತ್ತಲೆ ಚಿತ್ರಗಳನ್ನು ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ ಆರೋಪದ ಮೇಲೆ ಬಂಧಿಸಲಾಗಿದೆ.ಆರೋಪಿ ಮುನೀರ್ ಅಹ್ಮದ್ ಹಲವು ವರ್ಷಗಳಿಂದ ಆಸ್ಪತ್ರೆಯ ಶವಾಗಾರ ವಿಭಾಗದಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದಾನೆ. ಪೋಸ್ಟ್‌ಮಾರ್ಟ್‌ಮ್ ಪ್ರಕ್ರಿಯೆ ನಡೆಯುವ ವೇಳೆ ಮಹಿಳಾ ಶವಗಳ ಫೋಟೋಗಳನ್ನು ರಹಸ್ಯವಾಗಿ ತೆಗೆದು ಸಂಗ್ರಹಿಸಿಡುತ್ತಿದ್ದನೆಂಬ ವಿಚಾರ ತಿಳಿದು ಆಸ್ಪತ್ರೆ ಸಿಬ್ಬಂದಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.
ಮಾಹಿತಿಯ ಪ್ರಕಾರ, ಆರೋಪಿಯ ಮೊಬೈಲ್ ಫೋನ್ ಪರಿಶೀಲಿಸಿದಾಗ ಹಲವು ಮಹಿಳಾ ಮೃತದೇಹಗಳ ಬೆತ್ತಲೆ ಚಿತ್ರಗಳು ಪತ್ತೆಯಾಗಿವೆ. ಇದರಿಂದ ಆತ ಹಲವು ವರ್ಷಗಳಿಂದ ಇದೇ ರೀತಿಯ ವಿಕೃತ ಕೃತ್ಯ ಎಸಗುತ್ತಿದ್ದಾನೆಯೇ ಎಂಬ ಅನುಮಾನ ಮೂಡಿದ್ದು, ಪೊಲೀಸರು ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿದ್ದಾರೆ.

ರಾಜ್ಯಪಾಲರಿಂದ ಸರ್ಕಾರ ರಚಿಸುವಂತೆ ಶಿವಕುಮಾರ್‌ಗೆ ಆಹ್ವಾನ | ರಾಜಭವನದ ಗಾಜಿನ ಮನೆಯಲ್ಲಿ ಕಾರ್ಯಕ್ರಮ

ಡಿಕೆಶಿಗೆ ಗೋಧೂಳಿ ಮುಹೂರ್ತ ನಿಗದಿ

ಬೆಂಗಳೂರು: ಜೂ. 3ರ ಸಂಜೆ ರಾಜಭವನದ ಗಾಜಿನ ಮನೆಯಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿರುವ ಹಿನ್ನೆಲೆಯಲ್ಲಿ ಡಿಪಿಎಆರ್ ಕಾರ್ಯದರ್ಶಿ ಕೆ.ಜಿ. ಜಗದೀಶ್ ಅವರು ಗಾಜಿನ ಮನೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದರು. ಈ ನಡುವೆ ರಾಜ್ಯಪಾಲರು ಕೂಡಾ ಸರ್ಕಾರ ರಚಿಸುವಂತೆ ಶಿವಕುಮಾರ್ ಅವರಿಗೆ ಆಹ್ವಾನ ನೀಡಿದ್ದಾರೆ.

ನೂತನ ಮುಖ್ಯಮಂತ್ರಿಯಾಗಿ ಆಗಿ ಡಿ.ಕೆ. ಶಿವಕುಮಾರ್ ಪದಗ್ರಹಣ ಮಾಡಲು ಬುಧವಾರ ದಿನ ನಿಗದಿಯಾಗಿದೆ. ತೈಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಸರಳವಾಗಿ ಪ್ರಮಾಣ ವಚನ ಸ್ವೀಕರಿಸಲು ನಿರ್ಧರಿಸಿದ್ದಾರೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಲೋಕಭವನದ ಗಾಜಿನ ಮನೆಯಲ್ಲಿ ಸಂಜೆ ಸಮಾರಂಭ ನಡೆಯಲಿದೆ. ಲಕ್ಷಾಂತರ ಕಾರ್ಯಕರ್ತರಿಗೆ ಬಸ್ ವ್ಯವಸ್ಥೆ ಮಾಡುವ ಯೋಜನೆ ಕೈಬಿಡಲಾಗಿದ್ದು, ಸಿಎಂ ಆದ ಬಳಿಕ ಶಿವಕುಮಾರ್ ಅವರೇ ಸ್ವತಃ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಜನರಿಗೆ ಧನ್ಯವಾದ ಅರ್ಪಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿವಕುಮಾರ್ ನಿವಾಸದ ಮುಂದೆ ಶಾಸಕರ ದಂಡು: ಶಾಸಕಾಂಗ ಸಭೆಗೂ ಮುನ್ನ ಬೆಂಗಳೂರಿನ ಸದಾಶಿವನಗರದ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಮಾಜಿ ಸಚಿವರು, ಸಚಿವಾಕಾಂಕ್ಷಿಗಳು ಹಾಗೂ ಉನ್ನತ ಅಧಿಕಾರಿಗಳು ದಂಡು ದಂಡಾಗಿ ಆಗಮಿಸುತ್ತಿದ್ದಾರೆ. ಪ್ರಮುಖ ನಾಯಕರು ಸದಾಶಿವನಗರದ ನಿವಾಸಕ್ಕೆ ಭೇಟಿ ನೀಡಿ ಡಿ.ಕೆ.ಶಿವಕುಮಾರ್ ಜೊತೆ ಮಹತ್ವದ ಮಾತುಕತೆ ನಡೆಸುತ್ತಿದ್ದಾರೆ. ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ಗಿಟ್ಟಿಸಿಕೊಳ್ಳಲು ಸಚಿವಾಕಾಂಕ್ಷಿಗಳ ಕಸರತ್ತು ಜೋರಾಗಿದೆ.

ಸಿದ್ದರಾಮಯ್ಯ ನಿವಾಸಕ್ಕೆ ಶಾಸಕರು, ನಾಯಕರ ಭೇಟಿ: ಇತ್ತ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಕಾಂಗ್ರೆಸ್ ಶಾಸಕರು ಮತ್ತು ಪ್ರಮುಖ ನಾಯಕರು ಭೇಟಿ ನೀಡಿದರು. ಮಾಜಿ ಸಚಿವರಾದ ಕೆ.ಜೆ. ಜಾರ್ಜ್, ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ, ಶಾಸಕರಾದ ಎ.ಎಸ್. ಪೊನ್ನಣ್ಣ, ಪುಟ್ಟರಂಗಶೆಟ್ಟಿ ಅವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.



> ಕನ್ನಡಿಗರ ಜೀವನದಲ್ಲಿ ಬದಲಾವಣೆ ತರಲು ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಈ ಪಯಣದಲ್ಲಿ ಸಿದ್ದರಾಮಯ್ಯ ಅವರ ನಿರಂತರ ಪಾಲ್ಗೊಳ್ಳುವಿಕೆಯನ್ನು ಪಕ್ಷವು ಸದಾ ಬಯಸುತ್ತದೆ.
> ■ ಡಿ.ಕೆ.ಶಿವಕುಮಾರ್, ನಿಯೋಜಿತ ಸಿಎಂ

> ಮುಖ್ಯಮಂತ್ರಿ ಸ್ಥಾನದಿಂದ ಪದತ್ಯಾಗ ಮಾಡಿದ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಪರವಾಗಿ ಧನ್ಯವಾದಗಳು. 2013-2018 ಮತ್ತು 2023-2026 ರವರೆಗೆ ಮುಖ್ಯಮಂತ್ರಿಯಾಗಿ ಹಾಗೂ ಎರಡು ಅವಧಿಗಳಲ್ಲಿ ವಿರೋಧ ಪಕ್ಷದ ನಾಯಕನಾಗಿ ಸಲ್ಲಿಸಿದ ಸೇವೆ ಅನನ್ಯ.
> ■ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ



ಸಿದ್ದರಾಮಯ್ಯ ಅವರಿಗೆ ಧನ್ಯವಾದ

ನೂತನ ನಾಯಕನಾಗಿ ಆಯ್ಕೆಯಾದ ನಂತರ ಡಿ.ಕೆ. ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ಆಡಳಿತ ಮತ್ತು ನಾಯಕತ್ವವನ್ನು ಶ್ಲಾಘಿಸಿ ಧನ್ಯವಾದ ನಿರ್ಣಯ ಮಂಡಿಸಿದರು. ಇದನ್ನು ಎಲ್ಲಾ ಶಾಸಕರು ತುಂಬು ಹೃದಯದಿಂದ ಅನುಮೋದಿಸಿದರು.

ರಾಜ್ಯಪಾಲರ ಜೊತೆ ಭೇಟಿಯಾಗಿ ಮಾತುಕತೆ ನಡೆಸಿದ ಡಿಕೆಶಿ: ಶಾಸಕಾಂಗ ಸಭೆಗೂ ಮುನ್ನ ಲೋಕಭವನದಲ್ಲಿ ಡಿ.ಕೆ.ಶಿವಕುಮಾರ್ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಅನೌಪಚಾರಿಕ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕಾರದ ತಾತ್ಕಾಲಿಕ ವೇಳಾಪಟ್ಟಿ ಹಾಗೂ ರಾಜ್ಯಪಾಲರ ಲಭ್ಯತೆ ಕುರಿತು ಚರ್ಚಿಸಿದರು.

ಒಮ್ಮತದಿಂದ ಡಿಕೆಶಿ ಆಯ್ಕೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರ ಹೆಸರನ್ನು ಪ್ರಸ್ತಾಪಿಸಿದ್ದು, ಸರ್ವಾನುಮತದಿಂದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪ್ರಕಟಿಸಿದರು.



ವಿಧಾನಸೌಧದಲ್ಲಿ ಶನಿವಾರ ಸಂಜೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು, ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಡಿ.ಕೆ ಶಿವಕುಮಾರ್ ಅವರ ಹೆಸರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಸೂಚಿಸಿತು. ಸಿದ್ದರಾಮಯ್ಯ ಅವರ ಪ್ರಸ್ತಾವನೆಗೆ ಕಾಂಗ್ರೆಸ್ ಶಾಸಕಾಂಗ ಸಭೆಯು ಸರ್ವಾನುಮತದಿಂದ ಒಪ್ಪಿಕೊಂಡಿತು. ಡಾ.ಜಿ.ಪರಮೇಶ್ವರ ಅವರು ಈ ಪ್ರಸ್ತಾವನೆಯನ್ನು ಅನುಮೋದಿಸಿದರು ಎಂದು ಮಾಹಿತಿ ನೀಡಿದರು.

ಈ ಅಧಿಕಾರ ಹಸ್ತಾಂತರದಿಂದ ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಅನೇಕರು ನಿರೀಕ್ಷಿಸಿದ್ದರು. ಆದರೆ ನಮ್ಮದು ಕುಟುಂಬವಿದ್ದಂತೆ. ಎಲ್ಲರೂ ಸಿದ್ದರಾಮಯ್ಯ ಅವರ ನಡೆ ಹೇಗಿರಲಿದೆ ಎಂದು ಕೇಳುತ್ತಿದ್ದರು. ಆದರೆ ಸಿದ್ದರಾಮಯ್ಯ ಅವರು ನನ್ನ ಹೃದಯದಲ್ಲಿ ಕೇವಲ ಕಾಂಗ್ರೆಸ್ ಪಕ್ಷವಿದೆ. ಕಾಂಗ್ರೆಸ್ ಹೈಕಮಾಂಡ್ ನಿರ್ಧಾರವನ್ನು ಪಾಲಿಸುತ್ತೇನೆ ಎಂದು ಉತ್ತರ ನೀಡಿದ್ದರು. ಸಿದ್ದರಾಮಯ್ಯ ಅವರು ತಮ್ಮ ನಡೆ ಮೂಲಕ ಸಾಬೀತಪಡಿಸಿದರು. ಇದು ಕಾಂಗ್ರೆಸ್ ಒಂದು ಕುಟುಂಬ ಎಂಬುದಕ್ಕೆ ಸಾಕ್ಷಿ ಎಂದು ಬಣ್ಣಿಸಿದರು.

ಮತ್ತೆ 2028ರಲ್ಲಿ ಅಧಿಕಾರಕ್ಕೆ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯ ಅವರ 8 ವರ್ಷಗಳ ಅತ್ಯುತ್ತಮ ಸೇವೆಯನ್ನು ಶ್ಲಾಘಿಸಲಾಗಿದೆ. ಈ ನಿರ್ಣಯವನ್ನು ಸ್ವತಃ ಡಿ.ಕೆ ಶಿವಕುಮಾರ್ ಅವರು ಮಂಡಿಸಿದರು. ಇದು ಕಾಂಗ್ರೆಸ್ ಪಕ್ಷಕ್ಕೆ ಹೆಮ್ಮೆಯ ಕ್ಷಣ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಮಾರ್ಗದರ್ಶನದಂತೆ ಈ ಅಧಿಕಾರ ಹಸ್ತಾಂತರ ಮಾಡಲಾಗಿದೆ. ಸಿದ್ದರಾಮಯ್ಯ ಅವರ ಬೆಂಬಲದೊಂದಿಗೆ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ 2028ರಲ್ಲಿ ಅಧಿಕಾರಕ್ಕೆ ಬರಲಿದೆ ಎಂದರು.

ಭಾರತ್ ನೆಟ್ ಉದ್ಯಮಿ ಯೋಜನೆ ಜಾರಿ: ತ್ರಿಪಾಟಿ

ಹುಬ್ಬಳ್ಳಿ: ಬಿಎಸ್‌ಎನ್‌ಎಲ್ ವತಿಯಿಂದ ಗ್ರಾಮೀಣ ಭಾಗದಲ್ಲಿ ಡಿಜಿಟಲ್ ಸಂಪರ್ಕ ಹೆಚ್ಚಿಸಲು ತಿದ್ದುಪಡಿ ಮಾಡಿದ ಭಾರತ್ ನೆಟ್ ಉದ್ಯಮಿ (ಬಿಎನ್‌ಯು) ಯೋಜನೆಯನ್ನು ಜಾರಿಗೆ ತರಲಾಗಿದ್ದು, ಜನರು ಇದರ ಪ್ರಯೋಜನ ಪಡೆಯಬಹುದು ಎಂದು ಬಿಎಸ್‌ಎನ್‌ಎಲ್ ಹಿರಿಯ ಪ್ರಧಾನ ವ್ಯವಸ್ಥಾಪಕ ಧನಂಜಯ್ ಕುಮಾರ್ ತ್ರಿಪಾಟಿ ಹೇಳಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ರಾಂಚೈಸಿ ಮೂಲಕ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. 1.02 ಲಕ್ಷ ನೀಡಿ ಫ್ರಾಂಚೈಸಿ ಪಡೆಯಬಹುದು. ಫ್ರಾಂಚೈಸಿಯೊಂದಿಗೆ ಮೂರು ವರ್ಷಗಳ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಪ್ರತಿ ಬ್ರಾಡ್ ಬ್ಯಾಂಡ್ ಸಂಪರ್ಕಕ್ಕೆ ಅವರಿಗೆ 3,200ರಿಂದ 6,400 ನೀಡಲಾಗುತ್ತದೆ. ನಂತರ ಆದಾಯದಲ್ಲಿ ಶೇ 50ರಷ್ಟನ್ನು ಫ್ರಾಂಚೈಸಿಗೆ ಹಂಚಿಕೆ ಮಾಡಲಾಗುತ್ತದೆ ಎಂದರು.

ಸಮಗ್ರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಉದ್ದೇಶವನ್ನು ಈ ಯೋಜನೆ ಹೊಂದಿದೆ. 2022ರಲ್ಲಿ ಈ ಯೋಜನೆ ಆರಂಭವಾಗಿದ್ದು, ಇತ್ತೀಚೆಗೆ ಇದಕ್ಕೆ ತಿದ್ದುಪಡಿ ತರಲಾಗಿದೆ.



ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ 502 ಗ್ರಾಮ ಪಂಚಾಯಿತಿಗಳಿದ್ದು, ಅವುಗಳಲ್ಲಿ ಈಗಾಗಲೇ 160 ಗ್ರಾಮ ಪಂಚಾಯಿತಿಗಳಲ್ಲಿ ಫ್ರಾಂಚೈಸಿಗಳಿವೆ. ಬಹುತೇಕ ಕಡೆ ಜನರು ಫ್ರಾಂಚೈಸಿ ಪಡೆಯಲು ಮುಂದೆ ಬರುತ್ತಿಲ್ಲ ಎಂದು ತಿಳಿಸಿದರು.

ಬ್ರಾಡ್‌ಬ್ಯಾಂಡ್ ಸಂಪರ್ಕಕ್ಕೆ 12 ಯೋಜನೆಗಳಿವೆ. ಗ್ರಾಹಕರು ತಾವು ಆಯ್ಕೆ ಮಾಡಿಕೊಂಡ ಯೋಜನೆಗೆ ಮಾಸಿಕ ಬಿಲ್ ಮಾತ್ರ ಪಾವತಿಸಬೇಕು. ಹೆಚ್ಚುವರಿ ಯಾವುದೇ ಶುಲ್ಕ ಇರುವುದಿಲ್ಲ ಎಂದು ಹೇಳಿದರು.

ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ 370 ಟವರ್‌ಗಳಿವೆ. 4ಜಿ ನೆಟ್‌ವರ್ಕ್ ಸಮರ್ಪಕವಾಗಿ ನೀಡುವ ಉದ್ದೇಶದಿಂದ ಈ ಜಿಲ್ಲೆಗಳಲ್ಲಿ ಒಟ್ಟು 21 ಟವರ್‌ಗಳನ್ನು ಹೊಸದಾಗಿ ಅಳವಡಿಸಲಾಗಿದೆ ಎಂದು ತಿಳಿಸಿದರು.

ಪಡಿತರ ಶೇ. 50 ಜನರಿಗೆ ಸಿಗುತ್ತಿಲ್ಲ

ಬೆಂಗಳೂರು: ಗ್ಯಾರಂಟಿ ಫಲಾನುಭವಿಯ ಹೆಸರು ಏಕಾಏಕಿ ತೆಗೆದುಹಾಕುವುದು ಮತ್ತು ಕಿರುಕುಳ ಕೊಡುವುದು ಎಷ್ಟು ಸರಿ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆಕ್ಷೇಪಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಸುದ್ದಿ ಗೋಷ್ಠಿ ನಡೆಸಿದ ಅವರು, ಗೃಹಲಕ್ಷ್ಮಿ ಎಲ್ಲರಿಗೂ ಕೊಡುವುದಾಗಿ ಹೇಳಿದ್ದರು. ಗೃಹಜ್ಯೋತಿ ಕೊಡಿ ಎಂದು ಜನರು ಕಾಂಗ್ರೆಸ್ಸಿನವರನ್ನು ಕೇಳಿದ್ದಾರಾ? ಕಾಂಗ್ರೆಸ್ ದುಡ್ಡಿನಿಂದ ಕೊಡುತ್ತಿದ್ದಾರಾ? ಸರ್ಕಾರದ, ಜನರ ತೆರಿಗೆ ದುಡ್ಡಿನಿಂದ ಕೊಡುತ್ತಿದ್ದಾರೆ. ಇವರಿಗೆ ಮತ ಬೇಕಿತ್ತು. ಆಗ ಎಲ್ಲರಿಗೂ ಕೊಡುವುದಾಗಿ ಹೇಳಿ ಈಗ ಬರೆ ಎಳೆಯುವುದು ಸರಿಯೇ ಎಂದು ಪ್ರಶ್ನಿಸಿದರು. ಪಡಿತರ ಶೇ. 50 ಜನರಿಗೆ ಸಿಗುತ್ತಿಲ್ಲ. ಕೇವಲ ಸರತಿ ಸಾಲಿನಲ್ಲಿ ಕಾಯುವಂತಾಗಿದೆ. ಬಡವರಿಗೆ ಕಿರುಕುಳ ಕೊಡುವ ಸರ್ಕಾರ ಇದಾಗಿದೆ. ರೇಷನ್ ಇಲ್ಲ; ಕಾಯುವುದೇ ಗ್ಯಾರಂಟಿ ಎಂದು ಆಕ್ಷೇಪಿಸಿದರು.

ಕಾಂಗ್ರೆಸ್ ಆಡಳಿತದಲ್ಲಿ ಬೆಂಗಳೂರಿನ ಜನರು ಶಾಪಗ್ರಸ್ತರಾಗಿದ್ದಾರೆ. ನಗರವನ್ನು ಕಾಂಗ್ರೆಸ್ ಕಡೆಗಣಿಸಿದೆ. ಒಂದುವರೆ ಕೋಟಿ ಜನರಿದ್ದಾರೆ. 20ರಿಂದ 30 ಲಕ್ಷ ಜನರು ಬರುತ್ತಾರೆ. ಅವರು ಬೆಂಗಳೂರು ನಗರಕ್ಕೆ ಬರಲು ಹೆದರಬೇಕೇ? ಜಾಗೃತಿ ಕಾರ್ಯ ನಮ್ಮ ಕೆಲಸ ಎಂದು ತಿಳಿಸಿದರು. ಸರ್ಕಾರ ರೀ ಬೂಟ್ ಆಗುತ್ತಿದೆ. ಮೂರು ವರ್ಷ ಕಣ್ಣೀರಲ್ಲೇ ತೊಳೆದಿದ್ದಾರೆ. ಅಭಿವೃದ್ಧಿ ಶೂನ್ಯತೆ ಸೇರಿ ಭ್ರಷ್ಟಾಚಾರ, ಅವ್ಯವಸ್ಥೆ, ಕೆಟ್ಟ ಆಡಳಿತ ನೀಡಿದ್ದಾರೆ. ಮೂರು ವರ್ಷದ ಆಡಳಿತ ನೋಡಿಯೇ ಜನರು ಸುಸ್ತಾಗಿದ್ದಾರೆ ಎಂದು ಟೀಕಿಸಿದರು.

ವೆಂಕಟರಮಣಪ್ಪನವರ ಅಂತ್ಯಕ್ರಿಯೆ



ಪಾವಗಡ: ಶುಕ್ರವಾರ ನಿಧನರಾದ ಮಾಜಿ ಸಚಿವ ವೆಂಕಟರಮಣಪ್ಪನವರ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ಶನಿವಾರ ಹುಟ್ಟೂರು ಹನುಮಂತನಹಳ್ಳಿಯಲ್ಲಿ ನೆರವೇರಿಸಲಾಯಿತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ವೆಂಕಟರಮಣಪ್ಪ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಹೃದಯಾಘಾತದಿಂದ ಮೃತಪಟ್ಟಿದ್ದರು. ವೆಂಕಟರಮಣಪ್ಪ ಅವರು 2008ರ ಅವಧಿಯಲ್ಲಿ ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ, 2018ರಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ಅಂತಿಮದರ್ಶನ: ಹನುಮಂತನಹಳ್ಳಿಯಲ್ಲಿ ಇರುವ ತೋಟದ ಮನೆಯಲ್ಲಿ ಮಾಜಿ ಸಚಿವ ವೆಂಕಟರಮಣಪ್ಪ ಅವರ ಪಾರ್ಥೀವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗಿತ್ತು. ಹಂಗಾಮಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಸಚಿವರಾದ ಕೆ.ಜೆ. ಜಾರ್ಜ್, ಜಮೀರ್ ಅಹಮ್ಮದ್, ಶಾಸಕರಾದ ಕೆ.ಎನ್.ರಾಜಣ್ಣ, ಯತೀಂದ್ರ ಸಿದ್ದರಾಮಯ್ಯ, ರಾಜೇಂದ್ರ ರಾಜಣ್ಣ, ಪರಿಟಾಲ ಸುನೀತಮ್ಮ, ಕಲ್ಯಾಣದುರ್ಗ ಶಾಸಕ ಅಮಲಿನೇನಿ ಸುರೇಂದ್ರಬಾಬು, ಮಾಜಿ ಸಂಸದರಾದ ಮುದ್ದುಹನುಮೇಗೌಡ, ಜನಾರ್ದನಸ್ವಾಮಿ, ಮುಖಂಡರಾದ ಗೂಳಿಹಟ್ಟಿಶೇಖರ್, ರಘುವೀರಾರೆಡ್ಡಿ, ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸೇರಿದಂತೆ ಸುಮಾರು 19ಕ್ಕೂ ಹೆಚ್ಚು ವಿವಿಧ ಮಠಗಳ ಸ್ವಾಮೀಜಿಗಳು ಆಗಮಿಸಿ, ಅಂತಿಮ ದರ್ಶನ ಪಡೆದು ಮಂತ್ರೋಚ್ಚಾರಣೆಯೊಂದಿಗೆ ಆತ್ಮಕ್ಕೆ ಶಾಂತಿ ಕೋರಿದರು.

ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧ: ಸಂಸದ ಯದುವೀರ್ ಭರವಸೆ

ಮಡಿಕೇರಿಯ ಅರಮನೆ ಸಂರಕ್ಷಿತ ಸ್ಮಾರಕ

ಮೈಸೂರು: ಐತಿಹಾಸಿಕ ಮಡಿಕೇರಿ ಅರಮನೆ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಬೆಂಬಲ ದೊರೆತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು, ಮಡಿಕೇರಿ ಅರಮನೆಯನ್ನು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ತಾಣಗಳು ಹಾಗೂ ಅವಶೇಷಗಳ ಕಾಯ್ದೆ, 1958ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ ಎಂದು ಅಧಿಕೃತವಾಗಿ ತಿಳಿಸಿದ್ದಾರೆ ಎಂದರು.

ತಮ್ಮ ಪತ್ರದಲ್ಲಿ ಸಚಿವರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಡಿಕೇರಿ ಅರಮನೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ ಎಂದು ತಿಳಿಸಿದ್ದಾರೆ. ಇದರ ಭಾಗವಾಗಿ, ಪ್ರವಾಸಿಗರ ಅನುಭವವನ್ನು ಉತ್ತಮಗೊಳಿಸುವ ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಜಿಟಲ್ ಪ್ರದರ್ಶನಗಳನ್ನೊಳಗೊಂಡ ಆಧುನಿಕ ತಾಣ ವಸ್ತುಸಂಗ್ರಹಾಲಯ ಸ್ಥಾಪಿಸುವ ಪ್ರಸ್ತಾವನೆಯೂ ಪರಿಶೀಲನೆಯಲ್ಲಿದೆ. ಇದು ಕೊಡಗಿನ ಸಮೃದ್ಧ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಣಾಮಕಾರಿಯಾಗಿ ಪರಿಚಯಿಸುವ ಮಹತ್ವದ ಹೆಜ್ಜೆಯಾಗಲಿದೆ ಎಂದು ಹೇಳಿದ್ದಾರೆ.



ಈ ಬೆಳವಣಿಗೆಗೆ ಕಾರಣವಾದುದು, 2025ರ ಮಾರ್ಚ್ 18ರಂದು ಸಂಸತ್ ಸದಸ್ಯತ ಯದುವೀರ್ ಒಡೆಯರ್ ಅವರು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವಿವರವಾದ ಮನವಿ. ಆ ಮನವಿಯಲ್ಲಿ ಅವರು ಮಡಿಕೇರಿ ಅರಮನೆಗೆ ಸಂರಕ್ಷಿತ ಸ್ಮಾರಕ ಸ್ಥಾನಮಾನ ನೀಡುವುದು ಹಾಗೂ ಅಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸುವ ಕುರಿತು ಬಲವಾಗಿ ಆಗ್ರಹಿಸಿದ್ದರು.

ಮಡಿಕೇರಿ ಅರಮನೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮನಗಂಡು, ಯದುವೀರ್ ಒಡೆಯರ್ ಅವರು ಈ ವಿಷಯವನ್ನು ಕೇಂದ್ರ ಸರ್ಕಾರ ಹಾಗೂ ಎಎಸ್‌ಐ ಅಧಿಕಾರಿಗಳೊಂದಿಗೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ

ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್ ಒಡೆಯರ್, ಮಡಿಕೇರಿ ಅರಮನೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಬಹುಕಾಲದ ಬೇಡಿಕೆ ಇದೀಗ ಸಾಕಾರಗೊಳ್ಳುವ ಹಂತ ತಲುಪಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಕೊಡಗಿನ ವೈಭವಯುತ ಇತಿಹಾಸವನ್ನು ಪ್ರತಿಬಿಂಬಿಸುವ ಪ್ರಮುಖ ಪರಂಪರೆ ಮತ್ತು ಪ್ರವಾಸೋದ್ಯಮ ತಾಣವಾಗಿ ಮಡಿಕೇರಿ ಅರಮನೆಯನ್ನು ಅಭಿವೃದ್ಧಿಪಡಿಸುವುದರ ಜತೆಗೆ, ಭವಿಷ್ಯದ ಪೀಳಿಗೆಗಳಿಗೆ ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ಅವಕಾಶಗಳನ್ನು ಸೃಷ್ಟಿಸಲು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಈ ಬೆಳವಣಿಗೆ ಕರ್ನಾಟಕದ ಪ್ರಮುಖ ಐತಿಹಾಸಿಕ ಪರಂಪರೆ ತಾಣಗಳಲ್ಲಿ ಒಂದಾದ ಮಡಿಕೇರಿ ಅರಮನೆಯ ಸಂರಕ್ಷಣೆಯತ್ತ ಮಹತ್ವದ ಹೆಜ್ಜೆಯಾಗಿದೆ.

12 ಆರೋಪಿಗಳ ವಿರುದ್ಧ ಪ್ರಕರಣ ದಾಖಲು

ವಿಜಯಪುರ: ಭೀಮಾತೀರದಲ್ಲಿ ನಡೆದ ಭೀಕರ ಹತ್ಯೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಚಡಚಣ ಪೊಲೀಸ್ ಠಾಣೆಯಲ್ಲಿ 12 ಜನ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಗೋವಿಂದಪುರದ ಕಲ್ಲನಗೌಡ ಈಶ್ವರಗೌಡ ಪಾಟೀಲ, ಅಪ್ಪುಗೌಡ ಲಗಮನಗೌಡ ಉರ್ಫ್ ಲಕ್ಕನಗೌಡ ಪಾಟೀಲ, ಈಶ್ವರಪ್ಪ ಲಗಮನಗೌಡ ಪಾಟೀಲ, ಪ್ರಕಾಶ ಬಸವರಾಜ ಮಾಸ್ತರ್ ಉರ್ಫ್ ಪಾಟೀಲ, ಪ್ರಶಾಂತ ಉರ್ಫ್ ಪರುಗೌಡ ಬಸವರಾಜ ಮಾಸ್ತರ್ ಉರ್ಫ್ ಪಾಟೀಲ, ಸಿದ್ದರಾಮ ಕಲ್ಲನಗೌಡ ಪಾಟೀಲ, ಲಾಯಪ್ಪ ನೇನಪ್ಪ ಬಿರಾದಾರ, ಚಿದಾನಂದಗೌಡ ನಾಮದೇವ ಕೋಳಿ ಉರ್ಫ್ ಟಕ್ಕಲಕಿ, ಮಾಸಿದ್ದ ಶ್ರೀಮಂತ ಬಿರಾದಾರ, ಶ್ರೀಮಂತ ಶಂಕರಪ್ಪ ಬಿರಾದಾರ, ಶಂಕರಪ್ಪ ಮಾದೇವ ಅರಕೇರಿ, ಅಪ್ಪಾಸಾಹೇಬ ಶಂಕರ ಭೋವಿ ಆರೋಪಿಗಳಾಗಿದ್ದಾರೆ.

ಇಲ್ಲಿನ ಚೈತನ್ಯಕುಮಾರ ದುಂಡಪ್ಪ ನಿರಾಳೆ ಎಂಬುವರ ನೀಡಿದ ದೂರಿನ ಅನ್ವಯ ಪ್ರಕರಣದ ದಾಖಲಿಸಲಾಗಿದೆ.

ಶುಕ್ರವಾರ ತಡರಾತ್ರಿಯೇ ಘಟನಾ ಸ್ಥಳಕ್ಕೆ ಉತ್ತರ ವಲಯದ ಐಜಿಪಿ ಸಂದೀಪ ಪಾಟೀಲ ಹಾಗೂ ಎಸ್‌ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ, ಪರಿಶೀಲಿಸಿದರು. ಜಮೀನಿನಲ್ಲಿ ಎಂಟು ಜನರು ಕೆಲಸ ಮಾಡುವಾಗ ಏಕಾಏಕಿ ಬೈಕ್‌ಗಳಲ್ಲಿ 28 ಜನರು ಆಗಮಿಸಿ ಮಚ್ಚು ಹಾಗೂ ಆಯುಧದಿಂದ ಹಲ್ಲೆಗೈದು ಕೊಲೆ ಮಾಡಿದ್ದಾರೆ. ಇದರಲ್ಲಿ ಆರು ಜನರು ಸ್ಥಳದಲ್ಲೇ ಅಸುನೀಗಿದ್ದಾರೆ. ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ತನಿಖೆಗೆ ತಂಡ ರಚಿಸಲಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದರು.

ಭೀಕರ ಹತ್ಯೆಗೆ ಪ್ರೇಮ ಪ್ರಕರಣದ ನಂಟು!

ವಿಜಯಪುರ: ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದು, 6 ಜನರು ಭೀಕರ ಹತ್ಯೆಯಾಗಿರುವ ಘಟನೆ ಹಿಂದೆ ಕೇವಲ ಜಮೀನಿನ ವ್ಯಾಜ್ಯವಷ್ಟೇ ಅಲ್ಲ, ಪ್ರೇಮ ಪ್ರಕರಣವೂ ಕಾರಣವೆನ್ನುವುದು ದುರಂತದ ಸಂಗತಿ.

ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರದಲ್ಲಿ ಶುಕ್ರವಾರ ಒಂದೇ ಕುಟುಂಬ 5 ಜನ ಸೇರಿ 6 ಜನರು ಬರ್ಬರ ಹತ್ಯೆಯಾಗಿರುವ ಘಟನೆ ಜಿಲ್ಲೆಯನ್ನೆ ಬೆಚ್ಚಿ ಬೀಳಿಸುವಂತಾಗಿದೆ.

ಇಲ್ಲಿನ ಜಮೀನಿನಲ್ಲೇ ಒಂದೇ ಕುಟುಂಬದ ಐವರು ಸೇರಿದಂತೆ ಆರು ಜನರನ್ನು ಅತ್ಯಂತ ಕ್ರೂರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಮೇಲ್ನೋಟಕ್ಕೆ ಇದು ಜಮೀನು ವಿವಾದದಂತೆ ಕಂಡರೂ, ಈ ರಕ್ತಪಾತದ ಹಿಂದೆ 2015ರ ಹಳೆಯ ಪ್ರೇಮ ಪ್ರಕರಣ, ಕಿಡ್ನ್ಯಾಪ್ ಮತ್ತು ಕೊಲೆಯ ದ್ವೇಷದ ಘಟನೆ ಬಯಲಾಗಿದೆ.

ಈ ದ್ವೇಷ, ಹಗೆತನಕ್ಕೆ ಚಡಚಣ ಪಟ್ಟಣದ ದುಂಡಪ್ಪ ನಿರಾಳೆ (65), ಶಿವಪುತ್ರ ನಿರಾಳೆ (58), ಚಂದ್ರಕಾಂತ ನಿರಾಳೆ (55), ರಾಹುಲ್ ನಿರಾಳೆ (25), ಸಮರ್ಥ ನಿರಾಳೆ (23) ಹಾಗೂ ಇವರ ಜೊತೆಗಿದ್ದ ಶಬ್ಬೀರ್ ಅತ್ತಾರ (45) ಬಲಿಯಾದ ದುರ್ದೈವಿಗಳಾಗಿದ್ದು, ಇನ್ನು ಗಾಯಗೊಂಡ ಅರವಿಂದ ಕಟಗೆ, ಸಂದೀಪ ಮಾನೆ ಎಂಬವರನ್ನು ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಹೊಸ ದಿಗಂತ
ಭಾನುವಾರ, 31 ಮೇ 2026
ಬೆಂಗಳೂರು

ವಿದ್ಯಾರ್ಥಿ ರಾಜಕೀಯದಿಂದ ಸಿಎಂ ಕುರ್ಚಿಯವರೆಗೆ
ಡಿ.ಕೆ. ಶಿವಕುಮಾರ್



ದೊಡ್ಡಆಲಹಳ್ಳಿ ಕೆಂಪೇಗೌಡ ಶಿವಕುಮಾರ್ ಆದ ನಾನು...

– ಹೀಗೆ ಕರ್ನಾಟಕದ 32ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ. ಶಿವಕುಮಾರ್ ಅವರು ರಾಜಕೀಯ ಜೀವನವೇ ಒಂದು ಕುಲುಮೆಯಲ್ಲಿ ಬೆಂದ ಲೋಹದಂತೆ. ಬಲು ಗಟ್ಟಿ. ನೂರಾರು ಸವಾಲುಗಳು, ಅವಮಾನ, ಅಡೆತಡೆಗಳು ಎದುರಾದರೂ ಜೀವನದುದ್ದಕ್ಕೂ ಅವರ ತಾಳ್ಮೆಯೇ ಮೇಲುಗೈ ಸಾಧಿಸುತ್ತದೆ.

ಶಿವಕುಮಾರ್ ತಮ್ಮ ಬಾಲ್ಯವನ್ನು ರಾಜಾಜಿನಗರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿಠಲ ಶಾಖೆಯಲ್ಲಿ ಭಾಗವಹಿಸುತ್ತಾ ಕಳೆದರು. ಆದರೆ, ಈ ಒಡನಾಟವೂ ದೀರ್ಘಾವಧಿಯವರೆಗೆ ಮುಂದುವರಿಯಲಿಲ್ಲ. ಆರ್‌ಎಸ್‌ಎಸ್ (ಸಂಘ) ಜೊತೆಗಿನ ಅಲ್ಪಾವಧಿಯ ಒಡನಾಟದಲ್ಲಿ ಅದರ ಅನೇಕ ಕಾರ್ಯಕ್ರಮಗಳಿಗೆ ಹಾಜರಾಗಿದ್ದರು. ಸಂಘದ ಗಣವೇಷ(ಸಮವಸ್ತ್ರ)ವನ್ನೂ ಧರಿಸಿದ್ದರು. ಶಿವಕುಮಾರ್ 1985ರಲ್ಲಿ ವಿಧಾನಸಭಾ ಚುನಾವಣೆಗೆ ಪಾದಾರ್ಪಣೆ ಮಾಡುವ ಮೊದಲು, ಕಾಂಗ್ರೆಸ್ ಬೆಂಬಲಿತ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್‌ಎಸ್‌ಯುಐ) ಅವರಿಗೆ ವಿದ್ಯಾರ್ಥಿ ಚುನಾವಣಾ ಟಿಕೆಟ್ ನಿರಾಕರಿಸಿತ್ತು. ಆ ಸಮಯದಲ್ಲಿ, ಬಿಜೆಪಿಯ ಅನಂತ್ ಕುಮಾರ್ ಅವರು ಶಿವಕುಮಾರ್ ಅವರನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ)ಗೆ ಕರೆತರಲು ಪ್ರಯತ್ನಿಸಿದ್ದರು.



ಆರಂಭಿಕ ವರ್ಷಗಳು

ಬೆಂಗಳೂರಿನ ವಿದ್ಯಾರ್ಥಿ ರಾಜಕೀಯದಿಂದ ಹಿಡಿದು ಕರ್ನಾಟಕದ ಕಾಂಗ್ರೆಸ್‌ನ ಅತ್ಯಂತ ಶಕ್ತಿಶಾಲಿ ನಾಯಕರಲ್ಲಿ ಒಬ್ಬರಾಗುವವರೆಗೆ, ಶಿವಕುಮಾರ್ ಅವರ ಏಳಿಗೆಯು ಎಂಟು ವಿಧಾನಸಭಾ ಚುನಾವಣೆ ಗೆಲುವುಗಳು, ದಶಕಗಳ ಸರ್ಕಾರದಲ್ಲಿ, ಜೈಲಿನಲ್ಲಿ ಮತ್ತು ತಳಮಟ್ಟದ ರಾಜಕೀಯದ ಮೇಲಿನ ಬಲವಾದ ಹಿಡಿತದಿಂದ ರೂಪುಗೊಂಡಿದೆ. ಶಿವಕುಮಾರ್ 1981ರಲ್ಲಿ ಎನ್‌ಎಸ್‌ಯುಐ ಸೇರಿದಾಗ ಅವರಿಗೆ ಕೇವಲ 18 ವರ್ಷ. ಅವರು ರಾಮ್ ನಾರಾಯಣ್ ಚೆಲ್ಲಾರಂ ಕಾಲೇಜಿನಲ್ಲಿ ಓದುತ್ತಿರುವಾಗಲೇ ಎನ್‌ಎಸ್‌ಯುಐನ ಬೆಂಗಳೂರು ಜಿಲ್ಲಾಧ್ಯಕ್ಷರಾಗಿ ಮತ್ತು ನಂತರ ಕರ್ನಾಟಕ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ಬೆಳೆದರು. 1985 ರಲ್ಲಿ ಅವರಿಗೆ ಮೊದಲ ನಿಜವಾದ ಪರೀಕ್ಷೆ ಎದುರಾಯಿತು, ಕಾಂಗ್ರೆಸ್ ಪಕ್ಷವು ಯುವ ನಾಯಕನನ್ನು ಜನತಾದಳದ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾದ ಎಚ್.ಡಿ. ದೇವೇಗೌಡ ಅವರ ವಿರುದ್ಧ ಸಾತನೂರಿನಲ್ಲಿ ಕಣಕ್ಕಿಳಿಸಿತು. ಆದರೆ ಅವರು ಅಲ್ಪ ಮತಗಳ ಅಂತರದಲ್ಲಿ ಸೋತರು. ಶಿವಕುಮಾರ್ ಅವರು ಕ್ಷೇತ್ರದ ಜನರಿಗೆ ಹೆಚ್ಚು ಪರಿಚಿತರಲ್ಲದಿದ್ದರೂ ಭವಿಷ್ಯದ ಪ್ರಧಾನಿಗೆ ಸೆಡ್ಡು ಹೊಡೆದದ್ದು ಎಲ್ಲರ ದೃಷ್ಟಿ ಅವರತ್ತ ನೆಟ್ಟಿತು. ಅವರು 1987 ರ ಹೊತ್ತಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಶಿವಕುಮಾರ್ ಅವರ ಗೆಲುವಿನ ನಾಗಾಲೋಟಕ್ಕೆ ಅದು ಅಡಿಪಾಯವಾಗಿತ್ತು.

ಕಾಂಗ್ರೆಸ್‌ನಿಂದ ಗೆಲುವು-ಟಿಕೆಟ್ ನಿರಾಕರಣೆ

ಶಿವಕುಮಾರ್ 1989ರಲ್ಲಿ ಮೊದಲ ಬಾರಿಗೆ ಸಾತನೂರು ವಿಧಾನಸಭಾ ಕ್ಷೇತ್ರದಿಂದ ವಿಜಯ ಸಾಧಿಸುವ ಮೂಲಕ ರಾಜ್ಯ ಆಡಳಿತ ಶಕ್ತಿಕೇಂದ್ರವಾಗಿರುವ ವಿಧಾನಸೌಧವನ್ನು ಪ್ರವೇಶಿಸಿದರು. ಈ ಚುನಾವಣೆಯಲ್ಲಿ ಸುಮಾರು ಶೇ. 49 ರಷ್ಟು ಮತಗಳನ್ನು ಗಳಿಸಿದರು. ಮೊದಲ ಬಾರಿ ವಿಧಾನಸಭೆ ಪ್ರವೇಶಿಸುವಾಗ ಅವರ ವಯಸ್ಸು ಕೇವಲ 27 ವರ್ಷ. ತರುವಾಯ 1994ರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಗೆ ಅವರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ನಿರಾಕರಿಸಲಾಯಿತು. ಹೀಗಾಗಿ, ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ಸಾತನೂರು ಕ್ಷೇತ್ರದಿಂದ ಎರಡನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು. ಅವರ ಮತ ಹಂಚಿಕೆ ಶೇ. 46ರಷ್ಟಿತ್ತು. ಶಿವಕುಮಾರ್ ಅವರ ಈ ಗೆಲುವು ಕಾಂಗ್ರೆಸ್ ಹೈಕಮಾಂಡ್‌ಗೆ ಒಂದು ಪ್ರಮುಖ ವಿಷಯ ಮನವರಿಕೆ ಮಾಡಿತು. ಅದು ಬೇರ್‍ಯಾವುದೂ ಅಲ್ಲ, ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಮುನ್ನಡೆಗೆ ಪಕ್ಷದ ಹಣೆಪಟ್ಟಿಯ ಅಗತ್ಯವಿಲ್ಲ ಎಂಬುದಾಗಿತ್ತು.





ಟ್ರಬಲ್ ಶೂಟರ್

ಕಾಂಗ್ರೆಸ್ ಪಕ್ಷದಲ್ಲಿ ಡಿ.ಕೆ. ಶಿವಕುಮಾರ್ ತಮ್ಮನ್ನು ತಾವು ಟ್ರಬಲ್ ಶೂಟರ್ ಎಂಬುದನ್ನು ಸಾಬೀತು ಪಡಿಸುವ ಮೂಲಕ ಉನ್ನತ ಹುದ್ದೆಗೆ ಏರಿದರು. 2002ರಲ್ಲಿ, ಆಗಿನ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್ ಅವರ ಸರ್ಕಾರ ಬೀಳದಂತೆ ತಮ್ಮ ಶಾಸಕರ ಖರೀದಿ ಭಯದಿಂದ ಅವರನ್ನು ರಕ್ಷಿಸಲು ಆಗಿನ ಕರ್ನಾಟಕ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಹಾಯ ಕೋರಿದರು. ಆ ಸಮಯದಲ್ಲಿ, ಶಿವಕುಮಾರ್ ಅವರೇ ರಕ್ಷಣೆಗೆ ಬಂದು ಶಾಸಕರನ್ನು ಬಿಡದಿಯ ರೆಸಾರ್ಟ್‌ನಲ್ಲಿ ಇರಿಸಿದ್ದರು. ಅದೇ ರೀತಿ, 2017ರಲ್ಲಿ ಗುಜರಾತ್‌ನ 44 ಶಾಸಕರನ್ನು ಬಿಜೆಪಿ ಹೈಜಾಕ್ ಮಾಡಲು ಯತ್ನಿಸಿದಾಗ ಅವರನ್ನು ಕರ್ನಾಟಕಕ್ಕೆ ಕರೆ ತಂದು ರಕ್ಷಿಸಿದವರು ಇದೇ ಶಿವಕುಮಾರ್. ಅದಕ್ಕಾಗಿಯೇ ಅವರು ಈಗಲ್‌ಟನ್ ರೆಸಾರ್ಟ್‌ನಲ್ಲಿ ಇದ್ದಾಗಲೇ ಐಟಿ ದಾಳಿ ಎದುರಿಸಬೇಕಾಯಿತು.

ಮೂರನೇ ಬಾರಿಗೆ, 2018ರ ಕರ್ನಾಟಕ ವಿಧಾನಸಭಾ ಚುನಾವಣೆಯ ನಂತರ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ರಚನೆಗೆ ಶಾಸಕರನ್ನು ಕುದುರೆ ವ್ಯಾಪಾರದಿಂದ ರಕ್ಷಿಸುವ ಕಾರ್ಯವನ್ನು ಕೈಗೆತ್ತಿಕೊಂಡರು. ರಾಜ್ಯ ರಾಜಕಾರಣದಲ್ಲಿ ಅತಂತ್ರ ಸನ್ನಿವೇಶ ಎದುರಾದಾಗ ಹೈಕಮಾಂಡ್ ಸೂಚನೆಗೆ ತಲೆಬಾಗಿ ದೇವೇಗೌಡ ಕುಟುಂಬದೊಂದಿಗಿನ ರಾಜಕೀಯ ವೈಷಮ್ಯವನ್ನು ಬದಿಗಿರಿಸಿ, ಮೈತ್ರಿ ಸರ್ಕಾರದ ರಚನೆಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. 2024ರ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಹಿಮಾಚಲ ಪ್ರದೇಶದ ಕಾಂಗ್ರೆಸ್ ಪಕ್ಷದ ಆರು ಶಾಸಕರು ಬಿಜೆಪಿಗೆ ಮತ ಚಲಾಯಿಸುವುದರೊಂದಿಗೆ ಭಿನ್ನಮತ ಇನ್ನಷ್ಟು ಜೋರಾಯಿತು. ಆಗಲೂ ಈ ಸಮಸ್ಯೆಯನ್ನು ಬಗೆಹರಿಸಲು ಹೋಗಿದ್ದು ಇದೇ ಡಿ.ಕೆ. ಶಿವಕುಮಾರ್. 2004ರಲ್ಲಿ ಪ್ರಥಮ ಬಾರಿಗೆ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರೂಪುಗೊಂಡಾಗ ಎಸ್.ಎಂ. ಕೃಷ್ಣ ಅವರನ್ನು ಕಡೆಗಣಿಸಿ ಎಚ್.ಡಿ. ದೇವಗೌಡರ ಒಪ್ಪಿಗೆಯಂತೆ ಧರ್ಮಸಿಂಗ್ ಅವರನ್ನು ಮುಖ್ಯಮಂತ್ರಿ ಮಾಡಬೇಕಾಗಿ ಬಂದಾಗ ಎಸ್.ಎಂ. ಕೃಷ್ಣ ಅವರಿಗೆ ಬದಲಿಯಾಗಿ ಯಾವುದಾದರೊಂದು ಸ್ಥಾನ ಕೊಡಲೇಬೇಕೆಂದು ಪಕ್ಷದ ವರಿಷ್ಠರ ಮನವೊಲಿಸಿ ಕೃಷ್ಣ ಅವರು ಮಹಾರಾಷ್ಟ್ರದ ರಾಜ್ಯಪಾಲರಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಮತ್ತೆ ಅವರನ್ನು ರಾಜ್ಯ ರಾಜಕಾರಣಕ್ಕೆ ಕರೆತಂದು ರಾಜ್ಯಸಭಾ ಸದಸ್ಯರಾಗುವಂತೆ ನೋಡಿಕೊಂಡರು.











ಕಿಂಗ್‌ಮೇಕರ್ ಆದ ಶಿವಕುಮಾರ್

ಶಿವಕುಮಾರ್ 1999ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮರಳಿದರು. ಎಸ್.ಎಂ. ಕೃಷ್ಣ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು 139 ಸ್ಥಾನಗಳೊಂದಿಗೆ ಅಧಿಕಾರಕ್ಕೆ ತಂದ ಐತಿಹಾಸಿಕ ಪ್ರಚಾರ ಯಾತ್ರೆ ಆಯೋಜಿಸಲು ಡಿ.ಕೆ. ಶಿವಕುಮಾರ್ ಸಹಾಯ ಮಾಡಿದರು. ಆ ವರ್ಷ ಅವರು ಸಾತನೂರಿನಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸೋಲಿಸಿದರು. ಇದು 15 ವರ್ಷಗಳ ಹಿಂದೆ ತಮ್ಮನ್ನು ಸೋಲಿಸಿದ್ದ ಗೌಡ ಕುಟುಂಬದ ವಿರುದ್ಧ ಸಾಂಕೇತಿಕ ಗೆಲುವಾಗಿತ್ತು. ಕಾಂಗ್ರೆಸ್‌ನ ಅಭೂತಪೂರ್ವ ಗೆಲುವಿಗೆ ಕಾರಣರಾದ ಶಿವಕುಮಾರ್ ಅವರು ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಸಹಕಾರ ಖಾತೆಯನ್ನು ಮತ್ತು ನಂತರ ನಗರಾಭಿವೃದ್ಧಿ ಹಾಗೂ ರಾಜ್ಯ ಯೋಜನಾ ಮಂಡಳಿಯನ್ನು ನಿರ್ವಹಿಸಿದರು.

ಸಾತನೂರಿನಿಂದ ಕನಕಪುರಕ್ಕೆ ಸ್ಥಳಾಂತರ

ಸತತ ನಾಲ್ಕು ಬಾರಿ ಗೆದ್ದಿದ್ದ ಸಾತನೂರು ಕ್ಷೇತ್ರದಿಂದ ಡಿ.ಕೆ. ಶಿವಕುಮಾರ್ ಅವರು 2008ರಲ್ಲಿ ಕನಕಪುರಕ್ಕೆ ಸ್ಥಳಾಂತರಗೊಂಡರು. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಸಾತನೂರು ವಿಧಾನಸಭಾ ಕ್ಷೇತ್ರಗಳ ಪಟ್ಟಿಯಿಂದಲೇ ಹೊರಗುಳಿಯಿತು. ಈ ಲೆಕ್ಕಾಚಾರ ತಪ್ಪಾಗಲಿಲ್ಲ, ಅವರು ಅಲ್ಲಿಯೂ ಗೆದ್ದರು. ಆ ಚುನಾವಣೆಯಲ್ಲಿ ಶೇ.48 ರಷ್ಟು ಮತ ಹಂಚಿಕೆಯಾಗಿತ್ತು. ತರುವಾಯ 2013 ರಲ್ಲಿ ಶೇ. 57ಕ್ಕೆ ಏರಿಕೆಯಾಗಿತ್ತು. ನಂತರ 2018ರಲ್ಲಿ ಅದು ಶೇ. 69ರಷ್ಟು ಆಗಿತ್ತು. 2023ರಲ್ಲಿ ಅದು ಶೇ. 75ಕ್ಕೆ ಹೆಚ್ಚಳವಾಗಿತ್ತು. ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಅವರ ಮತ ಹಂಚಿಕೆ ನಿರಂತರವಾಗಿ ಬೆಳೆಯುತ್ತಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷದ ಸಂಘಟನೆ


ಡಿ.ಕೆ. ಶಿವಕುಮಾರ್ ಅವರನ್ನು 2020ರ ಮಾರ್ಚ್ 11ರಂದು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸೋನಿಯಾ ಗಾಂಧಿ ಅವರು ನೇಮಿಸಿದರು. ಈ ನೇಮಕವಾದ ಕೆಲವೇ ದಿನಗಳಲ್ಲಿ ಕೋವಿಡ್ ಮಹಾಮಾರಿ ದೇಶದೆಲ್ಲೆಡೆ ಆವರಿಸಿತು. ಈ ಸಂದರ್ಭದಲ್ಲಿ ಮನೆಯಲ್ಲಿ ಕೂರದ ಶಿವಕುಮಾರ್ ಅವರು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಗೆ ಉತ್ತೇಜನ ನೀಡಿ ಅವರು ಕೂಡ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಸಹಾಯ ಮಾಡಲು ಕರೆ ನೀಡಿದರು.



ನಂತರ ಮೂರು ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಶಿವಕುಮಾರ್ ಪಕ್ಷವನ್ನು ಸಂಘಟಿಸಿದ ರೀತಿ ಎಲ್ಲಾ ರಾಜಕೀಯ ನಾಯಕರಿಗೆ ಮಾದರಿಯಾಗಿ ಉಳಿದಿದೆ ಎಂದರೆ ತಪ್ಪಾಗುವುದಿಲ್ಲ. ಕೋವಿಡ್ ಸಮಯದಲ್ಲಿ ಹಗಲಿರುಳು ತಾವೂ ಕೆಲಸ ಮಾಡಿ, ತಮ್ಮ ಪಕ್ಷದ ಕಾರ್ಯಕರ್ತರು ಜನರ ಬಳಿ ಹೋಗಿ ಕೆಲಸ ಮಾಡಿ ಅವರ ವಿಶ್ವಾಸ ಗೆಲ್ಲುವಂತೆ ಸೂಚನೆ ನೀಡಿದರು. ಲಾಕ್ ಡೌನ್, ಆದಾಯವಿಲ್ಲದೆ, ಮಾರುಕಟ್ಟೆ ಇಲ್ಲದೆ ಕಂಗಾಲಾಗಿದ್ದ ರೈತರು, ಕಾರ್ಮಿಕರು, ಬಡವರು, ಅಸಂಘಟಿತ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸಿದರು.

ಅವರ ಪರವಾಗಿ ಧ್ವನಿಯಾಗಿ ಸರ್ಕಾರದ ಗಮನ ಸೆಳೆದರು. ಕೋವಿಡ್ ಸಮಯದಲ್ಲಿ ತಮ್ಮ ಊರುಗಳಿಗೆ ಮರಳಲು ಮುಂದಾದ ವಲಸೆ ಕಾರ್ಮಿಕರಿಂದ ಸರ್ಕಾರವೇ ಮೂರು ಪಟ್ಟು ಟಿಕೆಟ್ ದರ ವಸೂಲಿಗೆ ನಿಂತಾಗ ಅದರ ವಿರುದ್ಧ ಹೋರಾಡಿ ಪಕ್ಷದಿಂದ 1 ಕೋಟಿ ರೂ. ಚೆಕ್ ನೀಡಲು ಮುಂದಾದರು. ಆಗ ಸರ್ಕಾರ ಎಚ್ಚೆತ್ತು ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿತು. ನಂತರ ಇದು ಇಡೀ ದೇಶಕ್ಕೆ ಮಾದರಿಯಾಯಿತು.

ಇನ್ನು ರಾಷ್ಟ್ರೀಯ ಕಾಂಗ್ರೆಸ್ ವತಿಯಿಂದ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ಆರಂಭಿಸಿದಾಗ, ಮತ್ತೆ ತಮ್ಮ ಕಾರ್ಯಕರ್ತರನ್ನು ಜನರತ್ತ ಕಳುಹಿಸಿ ರಾಜ್ಯದಲ್ಲಿ ಯಶಸ್ವಿಯಾಗಿ ಸದಸ್ಯತ್ವ ನೋಂದಣಿ ಅಭಿಯಾನ ಮಾಡಿದರು. ಪಕ್ಷದ ಸದಸ್ಯತ್ವ ಅಭಿಯಾನ ಯಶಸ್ವಿ ಜಾರಿ ಹಾಗೂ ರಾಜ್ಯದಲ್ಲಿ 78 ಲಕ್ಷ ಸದಸ್ಯತ್ವ ನೋಂದಣಿ ಮೂಲಕ ದೇಶದಲ್ಲಿ ಪ್ರಥಮ ಸ್ಥಾನ ಪಡೆದು ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿದರು.




ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಉತ್ಪಾದನೆ ಸೇರಿದಂತೆ ಹಲವು ಪ್ರಯೋಜನಗಳನ್ನು ಹೊಂದಿರುವ ಮೇಕೆದಾಟು ಯೋಜನೆಗೆ ಸರ್ಕಾರ ನಿರ್ಲಕ್ಷ್ಯ ವಹಿಸಿದಾಗ ಈ ಯೋಜನೆ ಆಗ್ರಹಿಸಿ, ಈ ಭಾಗದಲ್ಲಿ 160 ಕಿ.ಮೀ. ಪಾದಯಾತ್ರೆ ಮಾಡಿದರು. ಈ ಹಂತದಲ್ಲಿ ಸರ್ಕಾರ ಸುಳ್ಳು ಕೇಸ್ ದಾಖಲಿಸಿ ಹೋರಾಟ ಹತ್ತಿಕ್ಕಲು ಪ್ರಯತ್ನಿಸಿತಾದರೂ ಕೆಚ್ಚೆದೆಯಿಂದ ತಾವು ಹಾಗೂ ಪಕ್ಷದ ನಾಯಕರು ಕಾರ್ಯಕರ್ತರನ್ನು ಸಂಘಟಿಸಿ ಪಾದಯಾತ್ರೆ ಯಶಸ್ವಿ ಮಾಡಿದರು.

ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಆರಂಭಿಸಿದ ನಂತರ ಕರ್ನಾಟಕದಲ್ಲಿ 21 ದಿನಗಳ ಕಾಲ 550 ಕಿ.ಮೀ ಉದ್ದದ ಭಾರತ ಜೋಡೋ ಯಾತ್ರೆ ಯಶಸ್ವಿ ಆಯೋಜನೆ ಮಾಡಿದರು. ಈ ಯೋಜನೆ ಹಾದುಹೋದ ಮಾರ್ಗದಲ್ಲಿ ಕಾಂಗ್ರೆಸ್ ಪಕ್ಷ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವಲ್ಲಿ ಪ್ರಮುಖ ಕಾರಣವಾಯಿತು. ಪ್ರಜಾಧ್ವನಿ ಯಾತ್ರೆ ಮೂಲಕ ರಾಜ್ಯದ ಮೂಲೆ ಮೂಲೆ ಪ್ರವಾಸ ಮಾಡಿ ಎಲ್ಲ ವರ್ಗಗಳ ಜನರ ಸಂಕಷ್ಟ ಆಲಿಸಿದರು. ಅವುಗಳಿಗೆ ಪರಿಹಾರ ಕಂಡುಕೊಳ್ಳು ಯೋಜನೆಗಳನ್ನು ರೂಪಿಸಲು ನೆರವಾದರು. ಮೀನುಗಾರರು, ನೇಕಾರರು, ತಿಗಲರು, ಮಡಿವಾಳ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳ ಕಷ್ಟ ಆಲಿಸಿದರು.

ಕಾಂಗ್ರೆಸ್ ಪಕ್ಷದ ಬಗ್ಗೆ ಜನರ ವಿಶ್ವಾಸ ಹೆಚ್ಚಿಸಿ, ಅನ್ಯ ಪಕ್ಷದ ನಾಯಕರನ್ನು ಪಕ್ಷಕ್ಕೆ ಕರೆ ತಂದರು. ಜೆಡಿಎಸ್ ಪಕ್ಷದ ಅನೇಕ ಶಾಸಕರು, ವಿಧಾನಸಭಾ ಸದಸ್ಯರು, ಬಿಜೆಪಿಯ ಶಾಸಕರು ಹಾಗೂ ಪರಿಷತ್ ಸದಸ್ಯರುಗಳನ್ನು ಪಕ್ಷಕ್ಕೆ ಸೇರಿಸಿಕೊಂಡು ಪಕ್ಷದ ಬಲವರ್ಧನೆ ಮಾಡಿದರು. ನಾ ನಾಯಕಿ ಕಾರ್ಯಕ್ರಮದ ಮೂಲಕ ಮಹಿಳೆಯರಿಗೆ ಉತ್ತೇಜನ ನೀಡಿ ಮಹಿಳೆಯರನ್ನು ಕಾಂಗ್ರೆಸ್ ಪಕ್ಷದ ಕಡೆ ಸೆಳೆಯುವಲ್ಲಿ ಯಶಸ್ವಿಯಾದರು. ಎಲ್ಲಾ ಸಮುದಾಯ, ಧರ್ಮಗಳ ಧರ್ಮಗುರುಗಳು, ಮಠಾಧೀಶರ ವಿಶ್ವಾಸ ಪಡೆದಿದ್ದು, ಅವರ ಬೆಂಬಲ ಪಡೆದು ಪಕ್ಷವನ್ನು ಸಂಘಟಿಸಿ ಶಕ್ತಿ ತುಂಬಿದರು. ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷ 2023ರ ವಿಧಾನಸಭೆ ಚುನಾವಣೆಯಲ್ಲಿ 136 ಕ್ಷೇತ್ರಗಳಲ್ಲಿ ಗೆದ್ದು ಭರ್ಜರಿ ಬಹುಮತದೊಂದಿಗೆ ಸರ್ಕಾರ ರಚನೆ ಮಾಡಿತು.





ಬಂದೀಖಾನೆ ಮಂತ್ರಿಯಿಂದ ಸಿಎಂವರೆಗೆ



1991ರಲ್ಲಿ ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಅನಾರೋಗ್ಯದ ಕಾರಣ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸಬೇಕಾಗಿ ಬಂದಾಗ ಅವರ ಉತ್ತರಾಧಿಕಾರಿಯನ್ನಾಗಿ ಸೋರೆಕೊಪ್ಪ ಬಂಗಾರಪ್ಪ ಅವರು ಸರ್ವಾನುಮತದಿಂದ ಆಯ್ಕೆಯಾಗುವಂತೆ ಮಾಡುವಲ್ಲಿ ಡಿ.ಕೆ. ಶಿವಕುಮಾರ್ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಇದಕ್ಕೆ ಬಹುಮಾನದ್ಯೋತಕವಾಗಿ ಬಂಗಾರಪ್ಪ ಅವರು ಈ ಯುವಕನನ್ನು ರಾಜ್ಯಮಟ್ಟದ ಸಚಿವರನ್ನಾಗಿ ಮಾಡಿ ಬಂದೀಖಾನೆ ಖಾತೆ ನೀಡಿದರು. 1999ರಲ್ಲಿ ಎಸ್.ಎಂ. ಕೃಷ್ಣ ಅವರ ಸರ್ಕಾರ ರಚನೆಯಾದಾಗ ಅವರು ಸಂಪುಟ ದರ್ಜೆ ಸಚಿವರನ್ನಾಗಿ ನೇಮಿಸಿ ಮಹತ್ವದ ಸಹಕಾರ ಖಾತೆ (1999–2002) ನೀಡುವ ಮೂಲಕ ಡಿ.ಕೆ. ಶಿವಕುಮಾರ್ ಅವರ ಶ್ರಮಕ್ಕೆತಕ್ಕ ಮನ್ನಣೆ ನೀಡಿದರು. 2002ರಲ್ಲಿ ನಗರಾಭಿವೃದ್ಧಿ ಖಾತೆ ಸಚಿವರಾಗಿ ರಾಜ್ಯ ನಗರಯೋಜನಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ ಯುವಕರನ್ನು ಸಂಘಟಿಸಿ ಜೀವನದಲ್ಲಿ ನೆಲೆಗೊಳಿಸುವ ರಾಜೀವ್ ಯುವ ಶಕ್ತಿ ಸಂಘಟನೆಗಳು ರಾಜ್ಯದಲ್ಲಿ ತಲೆಎತ್ತಲು ಕಾರಣೀಭೂತರಾದರು. ವಿಶ್ವದಲ್ಲಿಯೇ ಮೊದಲನೆಯದು ಎನ್ನಿಸಿದ ಸ್ತ್ರೀ ಶಕ್ತಿ ಸಂಘಟನೆಗಳನ್ನು ಆರಂಭಿಸುವಲ್ಲಿ ಶಿವಕುಮಾರ್ ಅವರ ಪಾಲು ಮಹತ್ವದ್ದು.

2013ರಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೇರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿ ಆಯ್ಕೆಯಾದಾಗ ಪಕ್ಷದಲ್ಲಿನ ವಿರೋಧಿಗಳು ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಅವರಿಗೆ ಸಚಿವ ಸ್ಥಾನ ತಪ್ಪುವಂತೆ ಮಾಡಿದರು. ಆದರೆ, ಈ ಸುಳ್ಳು ಆರೋಪದಿಂದ ಮುಕ್ತರಾದ ಶಿವಕುಮಾರ್ ಏಳು ತಿಂಗಳ ಬಳಿಕ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವ ಸ್ಥಾನ ಪಡೆದುಕೊಂಡರು. ಇಂಧನ ಖಾತೆಯಂತಹ ಪ್ರಮುಖ ಖಾತೆ ನಿಭಾಯಿಸಿದರು. ಇಂಧನ ಇಲಾಖೆಯನ್ನು ಅಮೂಲಾಗ್ರ ಸುಧಾರಣೆ ಮಾಡಿದರು. ರೈತ ಸೂರ್ಯ ಯೋಜನೆಯನ್ನು ರೂಪಿಸಿ ಭೂ ಮಾಲೀಕರಾದ ರೈತರು ಸ್ವಯಂ 1 ರಿಂದ 3 ಮೆ.ವ್ಯಾ. ಸೌರವಿದ್ಯುತ್ ಉತ್ಪಾದನೆ ಮಾಡುವಂತೆ ಅವಕಾಶ ಕಲ್ಪಿಸಿದರು.

2018ರಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಮೊದಲಿಗೆ ಜಲಸಂಪನ್ಮೂಲ ನಂತರ ಹೆಚ್ಚುವರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಖಾತೆಯನ್ನು ಪಡೆದ ಡಿ.ಕೆ.ಶಿವಕುಮಾರ್ ಅವರು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಮಹದಾಯಿ ಸಮಸ್ಯೆ ಪರಿಹಾರ, ಎತ್ತಿನಹೊಳೆ, ಮೇಕೆದಾಟು ಯೋಜನೆಗಳ ಪ್ರಗತಿಗೆ ತಮ್ಮದೇ ಆದ ಕೊಡುಗೆ ನೀಡಿದ ಅವರು ರಾಜ್ಯದಲ್ಲಿ ಅತೀ ಹೆಚ್ಚು ಪ್ರಮಾಣದ ಚೆಕ್ ಡ್ಯಾಮ್‌ಗಳ ನಿರ್ಮಾಣಕ್ಕೆ ಪ್ರೋತ್ಸಾಹ ಧನ ನೀಡಿಕೆ ಮೂಲಕ ಉತ್ತೇಜಿಸಿದರು.

2023ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಪೀಠಕ್ಕೇರಿದಾಗ ಉಪ ಮುಖ್ಯಮಂತ್ರಿಯಾಗಿ, ಜಲಸಂಪನ್ಮೂಲ ಇಲಾಖೆ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ನಡೆಸಿದರು. ಜಲಸಂಪನ್ಮೂಲ ಸಚಿವರಾಗಿ ಎತ್ತಿನ ಹೊಳೆ ಯೋಜನೆಗೆ ಇದ್ದ ಅಡೆತಡೆಗಳನ್ನು ನಿವಾರಿಸಿ ನೀರನ್ನು ಆ ಭಾಗದಿಂದ ಹೊರಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬೆಂಗಳೂರಿನ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸಿದ ಹೆಗ್ಗಳಿಕೆ ಇವರದ್ದಾಗಿದೆ. ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಕಾರ್ಯಕ್ರಮ, ಬೆಂಗಳೂರಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಿದರು. ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ಮಾಡಲು ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯನ್ನು ಪರಿಚಯಿಸಿದರು. ಟನಲ್ ರಸ್ತೆ, ಡಬಲ್ ಡೆಕ್ಕರ್ ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, 300 ಕಿ.ಮೀ ಬಫರ್ ರಸ್ತೆಗಳ ನಿರ್ಮಾಣ, ಮೆಟ್ರೋ 3ನೇ ಹಂತದ ಯೋಜನೆ ಡಿಪಿಆರ್, ಬೆಂಗಳೂರಿನ ನಾಲ್ಕು ದಿಕ್ಕಿನಲ್ಲಿ ಹೊರ ವಲಯಗಳಲ್ಲಿ ಕಸ ವಿಲೇವಾರಿ ಘಟಕ ಸ್ಥಾಪನೆ, ಪ್ರವಾಸಿಗರ ಆಕರ್ಷಣೆಗೆ ಸ್ಕೈ ಡೆಕ್ ನಿರ್ಮಾಣದಂತಹ ಯೋಜನೆಗಳನ್ನು ರೂಪಿಸಿದರು. ಇನ್ನು ಪಾಲಿಕೆ ಪರಿಣಾಮಕಾರಿ ಆಡಳಿತಕ್ಕೆ ಗ್ರೇಡರ್ ಬೆಂಗಳೂರು ಪ್ರಾಧಿಕಾರ ರಚಿಸಿದ್ದಾರೆ.

AFFIDAVIT

I Smt. Jayashree B.R. W/o Sridhara H.N., aged about 63 years, R/at Kempanapura Village, Chamarajanagar Taluk and District, Karnataka 571115, Aadhar No. 3642 8384 0860 here by notify the public.

I submit that in the Aadhar Card my name is mentioned as Jayashree B.R. and in the PAN card having number AOXPJ2020C my name is also mentioned as JAYASHREE BYLAHALLI RAJAGOPAL D/o BYLAHALLI RAJAGOPAL .

I submit that in the Pass Port bearing no. N5041000 issued by the Pass Port office on 08.12.2015 which is valid upto 07.12.2025 my name is mentioned as "BYLAHALLI RAJAGOPAL JAYASREE".

I submit that I have applied for renewal of the Pass Port with the Pass Port office and my correct name "BYLAHALLI RAJAGOPAL JAYASHREE" may be continued as my correct name in the fresh Pass Port issued by the Pass Port Authority and it will tally with the current Aadhar Card issued by the Government of Indian and for all the correspondences the above correct name may be mentioned in the fresh Pass Port Records by the Pass Port Authority.

I do swear in the name of god that the contents of this affidavit all are true and correct to the best of my knowledge, belief and information and I have affixed my signature this day at Chamarajanagar.

Smt. Jayashree B.R.
W/o Sridhara H.N.,
R/at Kempanapura Village,
Chamarajanagar Taluk and District, Karnataka 571115

AFFIDAVIT

I, NALINI.V. D/o Venkatesh, aged about 25 years, rsidign at # 580, Nehruji Colony, Gowribidanur Town, Chikkaballapur District.

In all the proceedings records deeds bonds and acts my name has been called as **MAHITHA.V.,** I changed my name as **NALINI. V.** in my present. I.D. cards my names continuing as **NALINI.V.** I am now abandoning the use of **NALINI.V.** Now I am intending to change my name as **NALINI.V.** for the reasons of my own accord and it is the correct name of mine.

I hereby declare that, in future on this day onwards in all my record title deed, acts, or this or in any dealings whatsoever etc. including Aadhaar Card, I wish to change my name as **NALINI.V.** herein afterwards. Sworn before Advocate & Notary **H.M. Adi Narayana Gowda** Dated 22.05.2026

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

IN THE COURT OF THE DEPUTY COMMISSIONER AT KOLAR. RAP.83/2025.

Appellant: P Muniswamy,
-V/S-
Respondent: Asst. Commissioner And Others.

Appeal Notice to L.R. of Respondent No.5(a) under order 5 Rule 20 of CPC Read With Section 25 of KLR Act

To, Respondent No. 5(a) A. Rathanamma W/o Late Anjinappa, Major, #450, 1st Main, Anjaneya Temple Road, Ramagondahalli, White fields, Bangalore - 560 066.

Whereas the appellant herein above have filed this appeal under section 50 of Karnataka land revenue Act to setaside R.A.389/2017, dated: 16-10-2024, in respect of Sy.No.114/1A, New Sy.No.114/4, Measuring 0-33 guntas, with 0-02 guntas, of Kharab, of Jagadenahalli Village, Lakkur Hobli, Malur Taluk and for other reliefs. You are hereby summoned to appear in this court in person or by advocate on 2/6/2026 at 3 P.M. before this court to answer the same, failing which the petition will be dispose off exparte.

Given under my hand and seal of the court this 25th day of May 2026.

By order of the court,
Deputy commissioner, Kolar.
S.R.Nagesh , Advocate, Kolar.

IN THE COURT OF II ADDL. DISTRICT & SESSIONS JUDGE AT KOLAR, P & SC: 68/2026.

Petitioners: Smt.Sunandamma,W/o Narayanaswamy, Aged 53 years R/at Doddahasala Village, K.N.Sanitorium Post, Kolar.
-V/S-
Respondents: Nil

NOTICE

Whereas, the Petitioner herein above have filed this petition for grant of probate of the registered will annexed dated: 15-10-2018 Under section 276 of Indian Succession Act 1925, executed by deceased Muniyamma in favour of the petitioner, in respect of the below schedule property. Anybody, who have any claim in the schedule properties or interest may appear in this court in person or through by advocate on 03/07/2026 at 11 A.M. before this court to answer the same, failing which the petition will dispose off as exparte.

SCHEDULE

The landed property Situated at Ekamballi Village, Kasaba Hobli, Kolar Taluk, land bearing Sy.No.111/1, Measuring 0-34 guntas, bounded on east by Land of Narayanaswamy, west by: 10 feet Cart Road, North by: Land of Venkataramanappa, South by: Government Road.

Given under my hand and seal of the court on 04-05-26.

By order of the court,
Chief Administrative Officer,
Prl. District & Sessions Court, Kolar.
S.R.Nagesh, Advocate, Kolar.

ಫಾರ್ಮೈಡ್ಸ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್

ಸಿಐಎನ್- ಎಲ್52520ಕೆಎ1989ಪಿಎಲ್‌ಸಿ173979 ನೋಂದಾಯಿತ ಕಚೇರಿ: ಯುನಿಟ್ #201, ಬ್ರಿಗೇಡ್ ರುಬಿಕ್ಸ್, 20/14, ಎಚ್‌ಎಂಟಿ ಫ್ಯಾಕ್ಟರಿ ರಸ್ತೆ, ಪೀಣ್ಯ ಪ್ಲಾಂಟೇಷನ್, ಬೆಂಗಳೂರು – 560013, ಭಾರತ. ಫೋನ್: 080-49784319,
ಇ-ಮೇಲ್: compliance@pharmaids.com. ವೆಬ್‌ಸೈಟ್: www.pharmaids.com

ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ ಹಣಕಾಸು ಫಲಿತಾಂಶಗಳು.

ಫಾರ್ಮೈಡ್ಸ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ('ಕಂಪನಿ') ಮಂಡಳಿಯು, ಶುಕ್ರವಾರ, ಮೇ 29, 2026 ರಂದು ನಡೆದ ಸಭೆಯಲ್ಲಿ, ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಕಂಪನಿಯ ಲೆಕ್ಕಪರಿಶೋಧಿತ ಹಣಕಾಸು ಫಲಿತಾಂಶಗಳನ್ನು (ಸ್ವತಂತ್ರ ಮತ್ತು ಕ್ರೋಢೀಕೃತ) ಅನುಮೋದಿಸಿದೆ. ಸ್ವತಂತ್ರ ಲೆಕ್ಕಪರಿಶೋಧಕರ ವರದಿಗಳೊಂದಿಗೆ ಸದರಿ ಹಣಕಾಸು ಫಲಿತಾಂಶಗಳು ಸ್ಟಾಕ್ ಎಕ್ಸ್ಚೇಂಜ್ ವೆಬ್‌ಸೈಟ್ **(www.bseindia.com)** ಮತ್ತು ಕಂಪನಿಯ ವೆಬ್‌ಸೈಟ್ **(https://www.pharmaids.com/financial-results.html)** ನಲ್ಲಿ ಲಭ್ಯವಿದೆ. ಕೆಳಗೆ ನೀಡಲಾದ ಕ್ವಿಕ್ ರೆಸ್ಪಾನ್ಸ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಇದನ್ನು ಪರಿಶೀಲಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದಂತೆ
ಫಾರ್ಮೈಡ್ಸ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್‌ಗಾಗಿ
ಸಹಿ /-
ವೇಣು ಮಾಧವ ಕಪರ್ತಿ
ಪೂರ್ಣಾವಧಿ ನಿರ್ದೇಶಕ
(ಡಿನ್:00021699)

ದಿನಾಂಕ: ಮೇ 30, 2026
ಸ್ಥಳ: ಬೆಂಗಳೂರು

ಗಮನಿಸಿ– ಮೇಲಿನ ಸೂಚನೆಯು ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ನಿಯಮ 47(1) ರೊಂದಿಗೆ ಓದಲಾದ ನಿಯಮ 33 ರ ಪ್ರಕಾರವಾಗಿದೆ.

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ ಯಶವಂತಪುರ, ಬೆಂಗಳೂರು–22

ನಂ: ಕೃಉಮಾಸ(ಬೆಂ)ಮಳಿಗೆ–455/2026–27 ದಿ: 30.05.2026

ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಂಸ್ಥೆ, ರೈತಬಾಂಧವರು, ಪೇಟೆ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೆ: ಸುದರ್ಶನ್ ತರಕಾರಿ ಮಂಡಿ, ಸಂಸ್ಥೆಯು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಇ-ಬ್ಲಾಕ್‌ನ, ತರಕಾರಿ ಮಾರುಕಟ್ಟೆಯಲ್ಲಿ ಮಳಿಗೆ ಸಂಖ್ಯೆ:77ನ್ನು ಲೀವ್–ಅಂಡ್–ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಪಡೆದು ವ್ಯವಹರಿಸುತ್ತಿದ್ದು, ಪ್ರಸ್ತುತ ಸದರಿ ಸಂಸ್ಥೆಯ ಮಾಲೀಕರಾದ ಶ್ರೀ ಎನ್.ಲಕ್ಷ್ಮಣ್ ರೆಡ್ಡಿ, ಇವರು ತಮ್ಮ ಜೊತೆಯಲ್ಲಿ ಸಂಸ್ಥೆಯ ವ್ಯಾಪಾರಾಭಿವೃದ್ಧಿಗಾಗಿ, ವ್ಯಾಪಾರ ವ್ಯವಹಾರ ನೋಡಿಕೊಳ್ಳುವ ಹಿತದೃಷ್ಟಿಯಿಂದ ಶ್ರೀ ಮೋಹನ್ ಕುಮಾರ್. ಆರ್. ನಂ.57. 4ನೇ ಮುಖ್ಯ ರಸ್ತೆ, 1ನೇ ಅಡ್ಡರಸ್ತೆ, ಸೋಮೇಶ್ವರ ನಗರ, ಬೆಂಗಳೂರು ಇವರನ್ನು ಪಾಲುದಾರರನ್ನಾಗಿ ಸೇರ್ಪಡೆಗೊಳಿಸಿಕೊಳ್ಳಲು ಅನುಮತಿ ನೀಡಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಆದುದರಿಂದ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಯಾರಿಂದಲಾದರೂ ಆಕ್ಷೇಪಣೆ/ತಕರಾರುಗಳಿದ್ದಲ್ಲಿ ಈ ಪ್ರಕಟಣೆಯು ದಿನ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ದಾಖಲೆ ಸಹಿತ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ನಿಗಧಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಕಾರ್ಯದರ್ಶಿ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ಕಿ.ವಿ) ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ ಶ್ರೀರಂಗಪಟ್ಟಣ

ಸಿ.ಮಿಸ್. ನಂ: 12/2026

ಅರ್ಜಿದಾರರು: 1) ಮಹದೇವ ಬಿನ್ ಲೇಟ್. ಸುಬ್ಬೇಗೌಡ, ಸುಮಾರು 72 ವರ್ಷ, 2) ಲಕ್ಷ್ಮಮ್ಮ ಕೋಂ ಮಹದೇವ, ಸುಮಾರು 61 ವರ್ಷ, 3) ನರಸಿಂಹ ಬಿನ್ ಲೇಟ್. ಸುಬ್ಬೇಗೌಡ, ಸುಮಾರು 66 ವರ್ಷ, ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, 4) ಲಕ್ಷ್ಮಮ್ಮ ಕೋಂ ಲೇಟ್.ಲಕ್ಷೇಗೌಡ ಬಿನ್ ಲೇಟ್. ಸುಬ್ಬೇಗೌಡ, ಸುಮಾರು 60 ವರ್ಷ, ಕೆಂಪೇಗೌಡರ ವಠಾರ, ಭೈರವೇಶ್ವರ ನಗರ ಹೆಬ್ಬಾಳು, 1ನೇ ಹಂತ, ಮೇಟಗಹಳ್ಳಿ ಪೋಸ್ಟ್ ಮೈಸೂರು, 5) ಜಯಲಕ್ಷ್ಮಿ ಕೋಂ ವೈ.ಸಿ. ಸ್ವಾಮಿ ಬಿನ್ ಮಹದೇವ, ಸುಮಾರು 45 ವರ್ಷ ನಂ. 444, ಐಯಂಗಾರ್ ಬೀದಿ, ಕೆನರಾ ಬ್ಯಾಂಕ್ ರಸ್ತೆ, ಇಲವಾಲ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ, 6) ಸೌಮ್ಯ ಕೋಂ ಕುಮಾರ್. ಎಂ, ಸುಮಾರು 43 ವರ್ಷ, ನಂ. 362, ಹೆಬ್ಬಾಳ್ ಮೈನ್ ರೋಡ್, ಲೋಕನಾಯಕ ನಗರ, ಮೈಸೂರು, 7) ರಮ್ಯ ಬಿನ್ ಮಹದೇವ. ಎಂ, ಸುಮಾರು 41 ವರ್ಷ, ನಂ.223/1, ಕೆ.ಆರ್. ಎಸ್.ರಸ್ತೆ, ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ ಶ್ರೀರಂಗಪಟ್ಟಣ ತಾಲ್ಲೂಕು, 8) ರಶ್ಮಿ ಕೋಂ ಮಂಜು, ಸುಮಾರು 39 ವರ್ಷ, ನಂ. 308/1, 1ನೇ ಬ್ಲಾಕ್, ಹಳೇ ಬೀದಿ, ಬೆಳವಾಡಿ, ಮೈಸೂರು, 9) ದೇವಮ್ಮ ಕೋಂ ನರಸಿಂಹ, ಸುಮಾರು 52 ವರ್ಷ, ನಂ. 378, ಬಿ.ಬ್ಲಾಕ್, ಮಾನಂದವಾಡಿ ರಸ್ತೆ, ಮಹದೇವಪುರ, ಮೈಸೂರು, 10) ನಾಗಮಣಿ ಕೋಂ ಪ್ರಸನ್ನ, ನಂ 212, ದೊಡ್ಡಬೀದಿ, ಬೆಳಗೊಳ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, 11) ಚಲುವರಾಜು. ಹೆಚ್.ಎನ್. ಬಿನ್ ನರಸಿಂಹೇಗೌಡ, ಸುಮಾರು 43 ವರ್ಷ, ನಂ. 378, 9.ಬ್ಲಾಕ್, ಮಾನಂದವಾಡಿ ರಸ್ತೆ, ಮಹದೇವಪುರ , ಮೈಸೂರು. :ವಿರುದ್ಧ:

ಎದುರುದಾರರು : ತಹಸಿಲ್ದಾರ್‌ರವರು, ಜನನ ಮತ್ತು ಮರಣ ನೋಂದಣಾಕಾರಿಗಳು, ಶ್ರೀರಂಗಪಟ್ಟಣ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದ 1, 3 ಮತ್ತು 4ನೇ ಅರ್ಜಿದಾರರ ತಾತ (ತಂದೆಯ ತಂದೆ), 2ನೇ ಅರ್ಜಿದಾರರ ಗಂಡನ ತಾತ, 5 ರಿಂದ 8 ರವರ ತಂದೆಯ ತಾತ (ಮುತ್ತಾತ), 9ನೇ ಅರ್ಜಿದಾರರ ಗಂಡನ ತಾತ, 10 ಮತ್ತು 11 ತಂದೆಯ ತಾತ (ಮುತ್ತಾತ) ಕೆಂಪಸಿಂಗೇಗೌಡ ಬಿನ್ ಲೇಟ್. ಸಿಂಗೇಗೌಡರವರು ದಿನಾಂಕ 12-06-1960ರಂದು, ತಮ್ಮ ಸ್ವಗ್ರಾಮವಾದ ಶ್ರೀರಂಗಪಟ್ಟಣ ತಾಲ್ಲೂಕು, ಹುಲಿಕೆರೆ ಗ್ರಾಮದಲ್ಲಿ ಮೃತರಾಗಿದ್ದು, ಅರ್ಜಿದಾರರುಗಳು ಕೆಂಪಸಿಂಗೇಗೌಡ ಬಿನ್ ಲೇಟ್. ಸಿಂಗೇಗೌಡರವರ ಮರಣ ಪ್ರಮಾಣಪತ್ರ ಕೋರಿ ಈ ಮೇಲ್ಕಂಡ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ. ಸದರಿ ಅರ್ಜಿಯ ಸುನಾವಣೆಯು ದಿನಾಂಕ: 04-07-2026 ರಂದು ಇದ್ದು, ಅಂದು ಈ ಬಗ್ಗೆ ಯಾರಾದರು ತಕರಾರು ಸಲ್ಲಿಸುವವರಿದ್ದರೆ ಬೆಳಿಗ್ಗೆ 11-00 ಗಂಟೆಗೆ ಮೇಲ್ಕಂಡ ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ಈ ಪ್ರಕಟಣೆಯನ್ನು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 30-05-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ : ಶಿರಸ್ತೇದಾರರು, ಪ್ರಧಾನ ಸಿವಿಲ್ ಜಡ್ಜ್(ಕಿ.ವಿ) ರವರ ನ್ಯಾಯಾಲಯ ಶ್ರೀರಂಗಪಟ್ಟಣ

ಅರ್ಜಿದಾರರ ಪರ ವಕೀಲರು : ಸಿ.ಎಸ್.ಸುಬ್ರಮಣ್ಯ

ಶ್ರೀರಂಗಪಟ್ಟಣ ದಿನಾಂಕ : 30-05-2026

ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಸೊಸೈಟಿ, ತುಮಕೂರು

ಜಿಲ್ಲಾ ಯೋಜನಾ ನಿರ್ವಹಣಾ ಘಟಕ,
ಎನ್.ಆರ್.ಹೆಚ್.ಎಂ. ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ ಆವರಣ,
ತುಮಕೂರು, ಇ–ಮೇಲ್ : dpmotumkur@gmail.com, dhotumkur@gmail.com

ಸಂಖ್ಯೆ : ಡಿ.ಪಿ.ಎಂ.ಯು./ಎನ್.ಹೆಚ್.ಎಂ./05/2010–11
ದಿನಾಂಕ : 29–05–2026

ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ಎಲ್ಲಾ Non 24X7 PHC, UPHC, 4X7 PHC, CHC, MCH, FRU, DH, NAMMA Clinic, TB, Centre & SC-AAM ಗಳ ಜೈವಿಕ ವೈದ್ಯಕೀಯ ತ್ಯಾಜ್ಯ ಕೆ.ಎಸ್.ಪಿ.ಸಿ.ಬಿ. ನಿಯಮದನ್ವಯ ನಿರ್ವಹಣೆ ಮಾಡಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

ಇ–ಪ್ರೋಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ.

ವಿವರ : 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಜಾಲ್ತಿಯಲ್ಲಿರುತ್ತದೆ ದಿನಾಂಕ : 26–05–2026, 2) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 12–06–2026 ರ ಸಂಜೆ 4.00 ಗಂಟೆಗೆ, 3) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 15–06–2026 ರ ಬೆಳಿಗ್ಗೆ 11.00 ಗಂಟೆಗೆ, 4) ಟೆಂಡರ್ ತೆರೆಯುವ ಸ್ಥಳ ಮತ್ತು ಪ್ರಾಧಿಕಾರ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು, 5) ಜೈವಿಕ ವೈದ್ಯಕೀಯ ತ್ಯಾಜ್ಯ ಕೆ.ಎಸ್.ಪಿ.ಸಿ.ಬಿ. ನಿಯಮದನ್ವಯ ನಿರ್ವಹಣೆ ಟೆಂಡರ್ ಮೊತ್ತ ಮತ್ತು ಇ.ಎಂ.ಡಿ. ಮೊತ್ತ : ರೂ. 84,68,400/–, ಇ.ಎಂ.ಡಿ. ಮೊತ್ತ : ರೂ. 2,12,000/– ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ನಮೂದಿಸುವುದು.

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ತುಮಕೂರು ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ. ಮೊಬೈಲ್ ಸಂಖ್ಯೆ : 94498 43123.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

ಡಿಐಪಿಆರ್/ತುಮಕೂರು/20/ಮಣಿಪಾಲ್/2026–27

ಪೊಲೀಸ್ ಉಪ ಮಹಾನಿರೀಕ್ಷಕರು, ಈಶಾನ್ಯ ವಲಯ ಕಲಬುರಗಿ

ಜಿಲ್ಲಾ ಪೊಲೀಸ್ ಭವನ, ಜಿ.ಜಿ.ಹೆಚ್. ರೋಡ್, ಕಲಬುರಗಿ. ದೂ.08472–263605, Email: estnergba@ksp.gov.in

ಸಂ. STS/01/ NER/DRONE/2026–27 ದಿನಾಂಕ:29/05/2026.

ಟೆಂಡರ ಪ್ರಕಟಣೆ

ಪೊಲೀಸ್ ಇಲಾಖೆಗೆ ಅವಶ್ಯಕತೆವಿರುವ **SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES** ಗಳನ್ನು ಅವಶ್ಯಕವಿರುವ ಡ್ರೋಣ್ ಮತ್ತು ಅದರ ಸಾಧನ ಸಾಮಾಗ್ರಿಗಳನ್ನು ಖರೀದಿಸಲು ಆಳವಡಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು **https://kppp.karnataka.gov.in** ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ ಪ್ರಕಟಣೆ ಸಂಖ್ಯೆ ಟೆಂಡರ **No:KSP/2025-26/IND0535/CALL-2**, 2) ಟೆಂಡರ ಪ್ರಕಟಣೆ ದಿನಾಂಕ : 26.05.2026, 3) ಟೆಂಡರಗೆ ಸಂಬಧಿಸಿದ ಯಾವುದೇ ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ : 01.06.2026 at 17.00 hrs, 4) ಪ್ರಿ–ಬಿಡ್ ಮಿಟಿಂಗ್ ದಿನಾಂಕ : 02.06.2026 at 11.30 hrs, ಸ್ಥಳ ಪೋಲಿಸ್ ಭವನ ಕಲಬುರಗಿ 5) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು ಇ–Procurment portal ಮುಖಾಂತರ ಸಲ್ಲಿಸಲು **ಕೊನೆಯ ದಿನಾಂಕ :** 09.06.2026 at 17–30 hrs, 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 11–06–2026 at 11–00 hrs 7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : 15.06.2026 at 11–00 hrs, 8) ಟೆಂಡರನ ಅಂದಾಜು ಮೊತ್ತ ರೂ. **Rs. 100 Lakhs,** 9 ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ. **Rs.** 1.50,000/– 10) ವ್ಯವಹರಿಸ ಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ ಪೋಲೀಸ್ ಉಪ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ **Ph: 08472–263605.**

ಸಹಿ/– ಪೊಲೀಸ್ ಉಪ ಮಹಾನಿರೀಕ್ಷಕರು
ಈಶಾನ್ಯ ವಲಯ ಕಲಬುರಗಿ ರವರ ಪರವಾಗಿ

ವಾ.ಸಾ.ಸಂ.ಇ.ಕಲಬುರಗಿ/172/ದೇಶಪಾಂಡೆ ಪಬ್ಲಿಸಿಟಿ/2026–27

PUBLIC NOTICE

Under the instructions of my client Chandru R son of Late.Rajashekar, resident of # 37, 4th Main E & F Block, Ramakrishnanagara, Chamaraja Mohalla, Mysuru, intends to purchase the below mentioned properties from Sri.M.V.Subbaiah, son of Late.Mada Venkatasubbaiah, Aged about 70 years, residing at # 2702, Sri Balaji Nilayam, 17th Main, 3rd Cross, Vijayanagara II stage, Mysuru 570017, which is morefully described in the schedule for valuable consideration from one Smt. Sulochana i.e., Item No.1 through a registered sale deed dated 30.01.2023 and the same was registered as document No.MYN-1-10591-2022-23 in CD No.MYND-1431 of Book-I before the Sub-Registrar, Mysuru North, Mysuru and item No.2 through a registered sale deed dated 30.01.2023 and the same was registered as document No.MYN-1-10590-2022-23 in CD No.MYND-1431 of Book-I before the Sub-Registrar, Mysuru North, Mysuru.

Therefore, if there be any person/s who has/have any specific interest or vested interest or acquired or ascribed interest, title or otherwise any kind of right of any nature whatsoever and anyone who knows that this sale should not occur for any reason within the frame of law, or those who know that this sale should not materialize as it may affect any other person may write to the under signed, intimating in detail, the right to claimed or the objections that may be in existence, along with supporting documents within seven days from the date of this publication. Any false information or subversive objections if raised with malafide, they shall be attracting action under law. This is for the information of the public in general.

SCHEDULE

Item No.: 1. All the piece and parcel of the residential vacant site bearing site No.**10A-A measuring East to West (21.40 + 16.42)2 meters and North to South 9.14 meters totally measuring 172.83 square meters,** carved out in the residential layout formed and developed in alienated survey No.118/2 measuring 1 acre 21 guntas out of 2 acres 01 guntas situated at Dattagalli village, Kasaba Hob li, Mysuru Taluk and District, bounded on:- East by: Site No.10. West by: 9.00 meter Road. North by: Site Nos 2 & 1. South by: Site No.10A-B

Item No.2:- All the piece and parcel of the residential vacant site bearing site No. **10A-B measuring East to West (16.42 + 11.43)2 meters and North to South 9.14 meters totally measuring 127.27 square meters,** carved out in the residential layout formed and developed in alienated survey No.118/2 measuring 1 acre 21 guntas our of 2 acres 01 guntas situated at Dattagalli village, Kasaba Hob li, Mysuru Taluk and District, bounded on:- East by: Site No.10. West by: 9.00 meter Road. North by: Site Nos 10A-A. South by: 9.00 meter Road

In total both item No.1 and 2 measures 300.06 square meters i.e., **3229.91 square feet.**

MANJUKUMAR.Y.N., B.A.L.LL.B.,
ANUPAMA.H.S., B.A., LL.B
ADVOCATES
693/D, B.B.Garden Road,
Near Padma Talikes Agrahara
K.R.Mohalla, Mysuru
Ph No.94485-54271

Place: Mysore
Date: 30.05.2026

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾ.ಕು.ನೀ.&ನೈ. ವಿಭಾಗ,
ಪಂಚಾಯತ್ ಭವನ, 3ನೇ ಮಹಡಿ, ರಾಮನಗರ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ – 562 159,
ಇಮೇಲ್ : eerdwsdrmgr2017@gmail.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 02/ಕಾ.ಅ./ಗ್ರಾ.ಕು.ನೀ.&ನೈ.ವಿ./ ರಾ/ಸ.ಇಂ./1&3. ಜೆಇ/ಜೆಜೆಎಂ/364/2026–27 ದಿನಾಂಕ : 30–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 97.55 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 1,95,100/–, 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 09.01 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 11,300/–, 3) ಕಾಲಾವಧಿ : 06 ತಿಂಗಳು, 4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ : 15–06–2026 ರ ಸಂಜೆ 5.30 ಗಂಟೆಯವರೆಗೆ, 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ, 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ : https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ರಾಮನಗರ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ ರಾಮನಗರ/72/ಮಣಿಪಾಲ್/2026–27

ಪಟ್ಟಣ ಪಂಚಾಯತ ಕಾರ್ಯಾಲಯ ಶೇಡಬಾಳ

ಸಂಖ್ಯೆ:ಪಪಂಶೇ/ಲೋ.ಶಾ/ಇಪ್ರೋ–14/2026–27 ದಿನಾಂಕ: 01–06–2026

ಇ–ಪ್ರೋಕ್ಯುರಮೆಂಟ ಟೆಂಡರ ಪ್ರಕಟಣೆ

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಶೇಡಬಾಳ ಇವರಿಂದ ರೂ. 146.00 ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿಯಲ್ಲಿ ಅಭಿವೃದ್ಧಿ ಮಾಡುವ 01 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.kppp.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು. 1. ಟೆಂಡರ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ 11–06–2026 5.00 ಘಂಟೆವರೆಗೆ. 2. ಟೆಂಡರಿನ ಮೊದಲನೆ ಸಭೆಯ (Pre-bid meeting) ದಿನಾಂಕ: 12–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ. 3. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 18–06–2026 ಅಪರಾಹ್ನ 4.00 ಘಂಟೆವರೆಗೆ. 4. ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ. 5. ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 23–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ.

ಸಹಿ/–(ಶ್ರೀ ಕೆ. ಕೆ. ಗಾವಡೆ) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ
ಸಹಿ/–ಶ್ರೀ. ಉತ್ಕರ್ಷ ಭರತೇಶ ಪಾಟೀಲ ಅಧ್ಯಕ್ಷರು ಪಟ್ಟಣ ಪಂಚಾಯತ ಶೇಡಬಾಳ

DIPR/BGM/RO-NO-345/KSMCA/2025-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ : 0836– 2747944(ಕ) Fax No.: 0836-2741209 E-mail: eepwddha@gmail.com

ಕ್ರಸಂಃಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,4/2026–27/1004 ದಿನಾಂಕ: 30–05–2026

ಟೆಂಡರ್ ಪ್ರಕಟಣೆ I.F.T – KW – 3 & 4
ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ–1, 3 & 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. **(kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕನಿಷ್ಠ **ರೂ.12.50 ಲಕ್ಷಗಳಿಂದ ಗರಿಷ್ಠ ರೂ.200.00 ಲಕ್ಷಗಳ ವರೆಗೆ, 4059–80–051–0–60–132,** ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, **8443 Deposit construction, 5054–04–337–0–01–154 ಜಿಲ್ಲಾ ರಸ್ತೆಗಳು ಸುಧಾರಣೆ ಅಡಿ, 2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿ** ಬರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calander of Events: - ಸಾಮಾನ್ಯ :– 1) PWD/2025-26/RD/WORK_INDENT30736/CALL-4, 2) PWD/2025-26/SE1161 (Extension), 3) PWD/2025-26/BD/WORK_INDENT 34990/CALL-2 (Extension) 1) ಪ್ರೀಬಿಡ್/ಆಕ್ಷೇಪಣೆ–ಸಂದೇಹ **ದಿನಾಂಕ: 08.06.2026 (ಬೆಳಿಗ್ಗೆ 12:30 ಗಂಟೆಯವರೆಗೆ).** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 09.06.2026 (ಸಾಯಂಕಾಲ 16:00 ಗಂಟೆಯವರೆಗೆ).** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.06.2026 (ಸಾಯಂಕಾಲ 16:30 ಗಂಟೆಯ ನಂತರ).** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11.06.2026 (ಸಾಯಂಕಾಲ 16:30 ಗಂಟೆಯ ನಂತರ).**

2. Calander of Events: - ಸಾಮಾನ್ಯ :– 1) PWD/2026-27/RD/WORK_INDENT35914.

1) ಪ್ರೀಬಿಡ್/ಆಕ್ಷೇಪಣೆ–ಸಂದೇಹ **ದಿನಾಂಕ: 18.06.2026 (ಬೆಳಿಗ್ಗೆ 12:30 ಗಂಟೆಯವರೆಗೆ).** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 19.06.2026 (ಸಾಯಂಕಾಲ 16:00 ಗಂಟೆಯವರೆಗೆ).** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20.06.2026 (ಸಾಯಂಕಾಲ 16:30 ಗಂಟೆಯ ನಂತರ).** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.06.2026 (ಸಾಯಂಕಾಲ 16:30 ಗಂಟೆಯ ನಂತರ).**

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳು ಬಂದಲ್ಲಿ ಕಚೇರಿಯ ಕೆಲಸದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/247/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ
ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ 582101

ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂರವಾಣಿ: 08372–259932 ಇ–ಮೇಲ್: ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/ನಗರಸಭೆ ನಿಧಿ/ವಹಿ/ಟೆಂಡರ್/2026–27 ದಿನಾಂಕ: 29–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999–2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ–ಬೆಟಗೇರಿ ನಗರಸಭೆಯಯ ಸನ್ 2026–27ನೇ ಸಾಲಿನ ನಗರಸಭೆ ಅನುದಾನದಲ್ಲಿ ಒಟ್ಟು **04** ಕಾಮಗಾರಿಯ ಅಂದಾಜು **ಮೊತ್ತ ರೂ. 44.99** ಲಕ್ಷಗಳಿಗೆ ಇಂಡೆಂಟ್ ನಂ: **1) DMA/2025-26/OW/WORK_INDENT-51795, 3) DMA/2025-26/MT/WORK_ INDENT-51797, 4) DMA/2025-26/BD/WORK_INDENT-51796,** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ–ಸಂಗ್ರಹಣಾ ವೇದಿಕೆಯಡಿ, **http://kppp.karnataka.gov.in** ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆದು ಟೆಂಡರ್ ಸಲ್ಲಿಸಬಹುದಾಗಿದೆ.

ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ನಲ್ಲಿ ಪಡೆದು ಸಂಬಂಧಿಸಿದ ಇಎಮ್‌ಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗದಿಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	11-06-2026 Upto 16.00 hours
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	12-06-2026 Upto 16.30 hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಪೌರಾಯುಕ್ತರು
ಗದಗ–ಬೆಟಗೇರಿ ನಗರಸಭೆ

ವಾ.ಸಾ.ಇ./ಗದಗ/95/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/ಕೆಕೆಆರ್‌ಡಿಬಿ/2026–27/1084 ದಿನಾಂಕ:25.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/RD/WORK_INDENT36171 (General Category)	100.00
2)	PWD/2026-27/RD/WORK_INDENT36085 (General Category)	100.00
3)	PWD/2026-27/RD/WORK_INDENT36082 (General Category)	100.00
4)	PWD/2026-27/BR/WORK_INDENT35848 (General Category)	20.25
5)	PWD/2026-27/BD/WORK_INDENT36378	345.40
6)	PWD/2026-27/RD/WORK_INDENT35843	108.69
7)	PWD/2026-27/BD/WORK_INDENT36126	500.00
8)	PWD/2026-27/BD/WORK_INDENT36098	600.00
9)	PWD/2026-27/RD/WORK_INDENT35911	200.00
10)	PWD/2026-27/RD/WORK_INDENT35912	200.00
11)	PWD/2026-27/RD/WORK_INDENT35913	219.00
12)	PWD/2026-27/RD/WORK_INDENT36135	128.50
13)	PWD/2026-27/RD/WORK_INDENT36136	114.20
14)	PWD/2026-27/RD/WORK_INDENT35910	175.00
15)	PWD/2026-27/RD/WORK_INDENT35909	180.00
16)	PWD/2026-27/RD/WORK_INDENT35908	291.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **30.05.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **02.06.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **08.06.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **09.06.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ,** ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/193

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂರವಾಣಿ/ಫ್ಯಾಕ್ಸ್: 080–27934470 / 27935412
Email: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/14/2026–27 ದಿನಾಂಕ: 30.05.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದಿಸಲಾದ ಮಾಹಯೋಜನೆಯಂತೆ **"ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ"** ಮಾಡಲು ಕೋರಿರುತ್ತಾರೆ. ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ಇತರರಿಗೆ/ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ /ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಯಳಚಾಮನಹಳ್ಳಿ ಗ್ರಾಮದ ಸ.ನಂ.ಗಳ ವಿವರ

ಕ್ರ ಸಂ.	ಮಾಲೀಕರ ಹೆಸರು	ಸ.ನಂ	ವಿಸ್ತೀರ್ಣ ಎ–ಗುಂ	'ಎ' ಖರಾಬು ಗುಂ
1	ಶ್ರೀ ಹರೀಶ ವಿ ಬಿನ್ ಲೇಟ್. ಎನ್. ವೆಂಕಟೇಶ ರೆಡ್ಡಿ; ಶ್ರೀ ವಿ. ಅರವಿಂದ ಕುಮಾರ್ ಬಿನ್ ಲೇಟ್. ವೆಂಕಟೇಶ ರೆಡ್ಡಿ ಮತ್ತು ಇತರರು	12	01–18	–
2	ಶ್ರೀ ಹರೀಶ ವಿ ಬಿನ್ ಲೇಟ್. ಎನ್. ವೆಂಕಟೇಶ ರೆಡ್ಡಿ; ಶ್ರೀಮತಿ ದಿವ್ಯಾ ಕೋಂ ವಿ. ಅರವಿಂದ ಕುಮಾರ್ ಮತ್ತು ಇತರರು	13/1ಬಿ	02–19	–
3	ಶ್ರೀ ಹರೀಶ ವಿ ಬಿನ್ ಲೇಟ್. ಎನ್. ವೆಂಕಟೇಶ ರೆಡ್ಡಿ; ಶ್ರೀ ವಿ. ಅರವಿಂದ ಕುಮಾರ್ ಬಿನ್ ಲೇಟ್. ವೆಂಕಟೇಶ ರೆಡ್ಡಿ ಮತ್ತು ಇತರರು	16	02–19	–
4	ಶ್ರೀಮತಿ ಸಂಪಂಗಮ್ಮ ಬಿನ್ ಲೇಟ್ ಚಿಕ್ಕಮುನಿವೆಂಕಟಪ್ಪ ಮತ್ತು ಇತರರು	17	02–01	–
5	ಶ್ರೀ ದೊಡ್ಡಮುನಿವೆಂಕಟಪ್ಪ ಬಿನ್ ಹನುಮಂತಪ್ಪ ಮತ್ತು ಇತರರು	18	02–00	–
6	ಶ್ರೀ ಹರೀಶ ವಿ ಬಿನ್ ಲೇಟ್. ಎನ್. ವೆಂಕಟೇಶ ರೆಡ್ಡಿ; ಶ್ರೀಮತಿ ದಿವ್ಯಾ ಕೋಂ ವಿ. ಅರವಿಂದ ಕುಮಾರ್ ಮತ್ತು ಇತರರು	19	02–02	–
7		20	02–00	–
8		21	02–00	–
9	ಶ್ರೀ ಬಿ.ಸಿ. ಮಂಜುನಾಥ ರೆಡ್ಡಿ ಬಿನ್ ಲೇಟ್ ಚಿನ್ನಸ್ವಾಮಿರೆಡ್ಡಿ	25	02–00	–

ಷರಾ: ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕಾ ಬೆಳವಣಿಗೆಗಳು ಬಂದಿದ್ದು/ಬರುತ್ತಲಿದ್ದು, "ಉದ್ದೇಶಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ

ವಾಸಾಸಂಇ/ವಾಪ್ರ/ಎಲ್‌ಸಿ/900/2026–27

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪಾಠ ಉಲ್ಲೇಖಿಸಿದ ತ್ರಿಪಾಠಿ

ಸಾಗರ ಭದ್ರತೆಗೆ ನೌಕಾ ಥಿಯೇಟರ್ ಕಮಾಂಡ್

» ಆರ್ಥಿಕತೆ, ಇಂಧನ ಸುರಕ್ಷತೆಗೆ ಸಮುದ್ರ ಮಾರ್ಗಗಳ ರಕ್ಷಣೆ ಅನಿವಾರ್ಯ: ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ

ಹೊಸದಿಲ್ಲಿ: ದೇಶದ ಸಾಗರ ಭದ್ರತೆ, ಆರ್ಥಿಕ ಸ್ಥಿರತೆ ಹಾಗೂ ಇಂಧನ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸಲು ಸೇನೆಯ ಮೂರು ಅಂಗಗಳು ಹಾಗೂ ಕರಾವಳಿ ಭದ್ರತಾ ಪಡೆಯ ಸಾಮರ್ಥ್ಯಗಳನ್ನು ಒಗ್ಗೂಡಿಸುವ ಪ್ರತ್ಯೇಕ ನೌಕಾ ಥಿಯೇಟರ್ ಕಮಾಂಡ್ ರಚನೆ ಅಗತ್ಯ ಎಂದು ಭಾರತೀಯ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಪ್ರತಿಪಾದಿಸಿದ್ದಾರೆ.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಥಿಯೇಟರೈಸೇಶನ್ ಕೇವಲ ಆಡಳಿತಾತ್ಮಕ ಪುನರ್‌ರಚನೆಯಾಗಿರದೆ, ರಾಷ್ಟ್ರೀಯ ಸೇನಾ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ವೃದ್ಧಿಸುವ ಉದ್ದೇಶದಿಂದ ರೂಪುಗೊಳ್ಳಬೇಕು ಎಂದು ಹೇಳಿದ್ದಾರೆ.



ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡಿರುವ ಸಂಘರ್ಷದ ಹಿನ್ನೆಲೆಯಲ್ಲಿ ಸಾಗರ ಭದ್ರತೆ, ಇಂಧನ ಪೂರೈಕೆ ಮತ್ತು ಆರ್ಥಿಕ ಸ್ಥಿರತೆ ಪರಸ್ಪರ ನೇರವಾಗಿ ಸಂಬಂಧ ಹೊಂದಿವೆ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ ಎಂದು ಅವರು ಹೇಳಿದರು. ಸಾಗರ ಮಾರ್ಗಗಳು, ಇಂಧನ ಸಾಗಣೆ ಹಾಗೂ ಲಾಜಿಸ್ಟಿಕ್ಸ್ ವ್ಯವಸ್ಥೆಯಲ್ಲಿ ಉಂಟಾಗುವ ಅಡಚಣೆಗಳು ವಿಮಾ ವೆಚ್ಚ, ಸಾಗಣೆ ಮಾದರಿ ಹಾಗೂ ಪ್ರಾದೇಶಿಕ ಕಾರ್ಯತಂತ್ರದ ಸಮತೋಲನದ ಮೇಲೆ ತಕ್ಷಣದ ಪರಿಣಾಮ ಬೀರುತ್ತವೆ ಎಂದು ವಿವರಿಸಿದರು.

ಇದೇ ವೇಳೆ, ರಷ್ಯಾ-ಉಕ್ರೇನ್ ಯುದ್ಧ ಹಾಗೂ ಪಶ್ಚಿಮ ಏಷ್ಯಾ ಬಿಕ್ಕಟ್ಟುಗಳು ಜಾಗತಿಕ ಭದ್ರತೆಯ ಪರಸ್ಪರ ಅವಲಂಬನೆಯನ್ನು ನೆನಪಿಸುತ್ತಿವೆ. ಸಂಘರ್ಷದಿಂದ ಭೌಗೋಳಿಕವಾಗಿ ದೂರದಲ್ಲಿರುವುದು ಅದರ ಪರಿಣಾಮಗಳಿಂದ ದೂರವಿರುವುದಲ್ಲ ಎಂಬುದನ್ನು ಈ ಬೆಳವಣಿಗೆಗಳು ತೋರಿಸಿವೆ ಎಂದು ಅವರು ಅಭಿಪ್ರಾಯಪಟ್ಟರು.

ಯುದ್ಧದ ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳಾಗುತ್ತಿದ್ದು, ಸಮುದ್ರದ ತಳದಿಂದ ಬಾಹ್ಯಾಕಾಶದವರೆಗೆ ಯುದ್ಧರಂಗ ವಿಸ್ತರಿಸಿದೆ. ಸೈಬರ್, ಮಾಹಿತಿ, ವಿದ್ಯುತ್ಕಾಂತೀಯ ಹಾಗೂ ಜ್ಞಾನಾತ್ಮಕ ಕ್ಷೇತ್ರಗಳೂ ಸಮಾನವಾಗಿ ಮಹತ್ವ ಪಡೆದಿವೆ. ವೇಗ, ವ್ಯಾಪ್ತಿ ಮತ್ತು ಏಕಕಾಲಿಕ ಕಾರ್ಯಾಚರಣೆಗಳು ಆಧುನಿಕ ಯುದ್ಧಗಳ ಪ್ರಮುಖ ಲಕ್ಷಣಗಳಾಗಿವೆ ಎಂದು ತ್ರಿಪಾಠಿ ಹೇಳಿದರು.

ಕೃತಕ ಬುದ್ಧಿಮತ್ತೆ(ಎಐ), ಕ್ವಾಂಟಮ್ ತಂತ್ರಜ್ಞಾನ ಹಾಗೂ ಸ್ವಾಯತ್ತ ವ್ಯವಸ್ಥೆಗಳನ್ನು ಭಾರತೀಯ ನೌಕಾಪಡೆ ವೇಗವಾಗಿ ಅಳವಡಿಸಿಕೊಳ್ಳುತ್ತಿದೆ. ಭವಿಷ್ಯದ ನೌಕಾಪಡೆ ಕೇವಲ ಯುದ್ಧನೌಕೆಗಳ ಮೇಲೆ ಅವಲಂಬಿತವಾಗಿರದೆ, ಮಾನವರಹಿತ ಹಾಗೂ ಉನ್ನತ ಸಾಮರ್ಥ್ಯದ ವೇದಿಕೆಗಳ ಸಮನ್ವಯದ ಮೂಲಕ ಪರಿಣಾಮಕಾರಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿರಲಿದೆ ಎಂದು ಅವರು ತಿಳಿಸಿದರು.

ಆಪರೇಷನ್ ಸಿಂದೂರ್ ವೇಳೆ ಭಾರತೀಯ ನೌಕಾಪಡೆಯು ತೋರಿದ ಸಿದ್ಧತೆ ಮತ್ತು ಕಾರ್ಯತಂತ್ರದ ಸಾಮರ್ಥ್ಯವನ್ನು ಉಲ್ಲೇಖಿಸಿದ ಅವರು, ವಾಹಕ ಯುದ್ಧ ಸಮೂಹ ಹಾಗೂ ಉತ್ತರ ಅರಬ್ಬೀ ಸಮುದ್ರದಲ್ಲಿನ ಮುಂಚೂಣಿ ನಿಯೋಜನೆಯು ಪಾಕಿಸ್ತಾನ ನೌಕಾಪಡೆಯನ್ನು ಬಂದರುಗಳ ಸುತ್ತಮುತ್ತಲೇ ಸೀಮಿತಗೊಳಿಸಿತು ಎಂದು ಹೇಳಿದರು. ಈ ಕಾರ್ಯಾಚರಣೆಯಲ್ಲಿ ಮೂರು ಸೇನಾ ಪಡೆಗಳ ನಡುವಿನ ಸಮನ್ವಯವು ಜಂಟಿ ಕಾರ್ಯಾಚರಣೆಯ ಮಹತ್ವವನ್ನು ಮತ್ತಷ್ಟು ಸಾಬೀತುಪಡಿಸಿದೆ ಎಂದರು.

ಭಾರತದ ಸಾಗರ ಹಿತಾಸಕ್ತಿಗಳ ರಕ್ಷಣೆ ಹಾಗೂ ಮುಕ್ತ, ಸುರಕ್ಷಿತ ಮತ್ತು ಸಮಗ್ರ ಇಂಡೋ-ಪೆಸಿಫಿಕ್ ಪ್ರದೇಶದ ನಿರ್ಮಾಣವೇ ಭಾರತದ ಗುರಿಯಾಗಿದೆ ಎಂದು ಸ್ಪಷ್ಟಪಡಿಸಿದರು.



ರಕ್ಷಣಾ ಸ್ವಾವಲಂಬನೆ

ಭಾರತದ ದೇಶೀಯ ರಕ್ಷಣಾ ಉತ್ಪಾದನಾ ವಲಯದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಪುಣೆ ಮೂಲದ ಖಾಸಗಿ ರಕ್ಷಣಾ ಸಂಸ್ಥೆ ನಿಬೆ ಲಿಮಿಟೆಡ್ ಅಭಿವೃದ್ಧಿಪಡಿಸಿರುವ 'ಸೂರ್ಯಾಸ್ತ್ರ ಯೂನಿವರ್ಸಲ್ ರಾಕೆಟ್ ಲಾಂಚರ್' ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಒಡಿಶಾದ ಚಂಡೀಪುರದಲ್ಲಿರುವ ಇಂಟರಿಮ್ ಟೆಸ್ಟ್ ರೇಂಜ್‌ನಲ್ಲಿ(ಐಟಿಆರ್) ಇತ್ತೀಚೆಗೆ ಸರಣಿ ಪ್ರಯೋಗಗಳನ್ನು ನಡೆಸಲಾಗಿದ್ದು, ಮಿಷನ್ ಉದ್ದೇಶಗಳನ್ನು ಅತ್ಯಂತ ನಿಖರವಾಗಿ ಸಾಧಿಸಲಾಗಿದೆ. ಈ ಹೊಸ ತಂತ್ರಜ್ಞಾನವು ಸಾಂಪ್ರದಾಯಿಕ ಫಿರಂಗಿ ಪಡೆ ಮತ್ತು ಬೃಹತ್ ಬ್ಯಾಲಿಸ್ಟಿಕ್ ಕ್ಷಿಪಣಿಗಳ ನಡುವಿನ ಅಂತರವನ್ನು ಕಡಿಮೆ ಮಾಡಲಿದ್ದು, ಭಾರತೀಯ ಸೇನೆಗೆ ಯುದ್ಧಭೂಮಿಯಲ್ಲಿ ಹೊಸ ಶಕ್ತಿ ನೀಡಲಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ಸುದ್ದಿ ಸಮಗ್ರ

ಏನಿದು ಸೂರ್ಯಾಸ್ತ್ರ ರಾಕೆಟ್ ವ್ಯವಸ್ಥೆ

ಸೂರ್ಯಾಸ್ತ್ರ ಎಂಬುದು ಭಾರತದ ಮೊದಲ ದೇಶೀಯ ಯೂನಿವರ್ಸಲ್ ಮಲ್ಟಿ-ಕ್ಯಾಲಿಬರ್ ರಾಕೆಟ್ ಲಾಂಚರ್ ವ್ಯವಸ್ಥೆಯಾಗಿದೆ.

ಅಭಿವೃದ್ಧಿ: ಇದನ್ನು ಪುಣೆಯ ನಿಬೆ ಲಿಮಿಟೆಡ್ ಸಂಸ್ಥೆಯು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.

ಉದ್ದೇಶ: ಶತ್ರು ಪ್ರದೇಶದ ಆಳದಲ್ಲಿರುವ ಕಮಾಂಡ್ ಸೆಂಟರ್‌ಗಳು, ರಡಾರ್ ಕೇಂದ್ರಗಳು ಮತ್ತು ಶಸ್ತ್ರಾಸ್ತ್ರ ಸರಬರಾಜು ಮಾರ್ಗಗಳನ್ನು ನಿಖರವಾಗಿ ಧ್ವಂಸಗೊಳಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ತಂತ್ರಜ್ಞಾನ: ಇಸ್ರೇಲ್‌ನ ನಿಖರ ಮತ್ತು ಸಾರ್ವತ್ರಿಕ ಉಡಾವಣಾ ವ್ಯವಸ್ಥೆ ತಂತ್ರಜ್ಞಾನವನ್ನು ಆಧರಿಸಿ ಇದನ್ನು ಸಿದ್ಧಪಡಿಸಲಾಗಿದ್ದು, ಇನ್ನುಂದೆ ಸಂಪೂರ್ಣವಾಗಿ ಭಾರತದಲ್ಲೇ ಉತ್ಪಾದನೆಯಾಗಲಿದೆ.

ರಕ್ಷಣಾ ವಲಯದಲ್ಲಿ ಖಾಸಗಿ ರಂಗದ ಕ್ರಾಂತಿ

ಕಳೆದ ಒಂದು ದಶಕದಲ್ಲಿ ಭಾರತದ ರಕ್ಷಣಾ ವಲಯದಲ್ಲಿ ಖಾಸಗಿ ರಂಗದ ಪಾತ್ರ ಶೇ.25 ರಿಂದ 30ರಷ್ಟಕ್ಕೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಶೇ.50ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ರಾಜನಾಥ್ ಸಿಂಗ್ ತಿಳಿಸಿದರು.

300
ಕಿಮೀ ಗುರಿ, ನಿಖರ ದಾಳಿ: ಭಾರತದ ಸೇನಾ ಬಲ ಹೆಚ್ಚಿಸಿದ
ಸೂರ್ಯಾಸ್ತ್ರ



ಹೊಸ ತಂತ್ರಜ್ಞಾನಗಳ ಅನಾವರಣ

ಸೂರ್ಯಾಸ್ತ್ರ ಪರೀಕ್ಷೆಯೊಂದಿಗೆ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಟಿಎನ್‌ಟಿ ಪ್ಲಾಂಟ್ ತಂತ್ರಜ್ಞಾನ, ಆರ್‌ಡಿಎಕ್ಸ್ ಪ್ಲಾಂಟ್ ತಂತ್ರಜ್ಞಾನ ಮತ್ತು ನವೀಕರಿಸಬಹುದಾದ ಜೈವಿಕ ಇಂಧನ ಸಂಕುಚಿತ ಬಯೋಗ್ಯಾಸ್ ಪ್ಲಾಂಟ್ ಅನ್ನು ಉದ್ಘಾಟಿಸಲಾಯಿತು. ಹಾಗೆಯೇ ಉಪಗ್ರಹ ಜೋಡಣೆ ತಂತ್ರಜ್ಞಾನಕ್ಕಾಗಿ ನಿಬೆ ಗ್ರೂಪ್ ಮತ್ತು ಬ್ಲಾಕ್ ಸ್ಕೈ ಸಂಸ್ಥೆಗಳ ನಡುವೆ ಒಪ್ಪಂದ ಏರ್ಪಟ್ಟಿದೆ. ಈ ಹೊಸ ಪ್ರಯತ್ನಗಳು ಸ್ಥಳೀಯ ಸಣ್ಣ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಉದ್ಯೋಗಾವಕಾಶ ಸೃಷ್ಟಿಸಲಿದ್ದು, ಯುವಕರಿಗೆ ಅತ್ಯಾಧುನಿಕ ತಂತ್ರಜ್ಞಾನದ ಕೌಶಲಗಳನ್ನು ಒದಗಿಸಲಿವೆ.

ಪಿನಾಕಾ ಸಾಮರ್ಥ್ಯ ಮೀರಿದ ಸೂರ್ಯಾಸ್ತ್ರ

ದೀರ್ಘ ವ್ಯಾಪ್ತಿ ಅಂದರೆ 300 ಕಿಮೀ ದೂರದವರೆಗೂ ಶತ್ರುಗಳ ವಿರುದ್ಧ ನಿಖರ ದಾಳಿ ನಡೆಸಲು ಸಮರ್ಥವಾಗಿ ಸೂರ್ಯಾಸ್ತ್ರ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಮೊಬೈಲ್ ಉಡಾವಕಗಳು, ಬ್ಯಾಟರಿ ಕಮಾಂಡ್ ಪೋಸ್ಟ್‌ಗಳು, ಲೋಡರ್ ವಾಹನಗಳಿಂದ ಸಜ್ಜಿತ ಸೂರ್ಯಾಸ್ತ್ರವನ್ನು, ಪ್ರಸಕ್ತ ಅಸ್ತಿತ್ವದಲ್ಲಿರೋ ಪಿನಾಕಾ ಮಲ್ಟಿ ಬ್ಯಾರಲ್ ರಾಕೆಟ್ ಉಡಾವಕದ ದಾಳಿ ಸಾಮರ್ಥ್ಯವನ್ನೂ ಮೀರಿದ ಟಾರ್ಗೆಟ್‌ಗಳ ವಿರುದ್ಧವೂ ದಾಳಿ ನಡೆಸಲು ಅಭಿವೃದ್ಧಿಪಡಿಸಲಾಗಿದೆ.

ಪ್ರಮುಖ ವೈಶಿಷ್ಟ್ಯ

- ಅತ್ಯಂತ ವೇಗವಾಗಿ ಚಲಿಸುವ 6★6 ಟಾಟಾ ಟ್ರಕ್ ಮೇಲೆ ಈ ಸೂರ್ಯಾಸ್ತ್ರ ಲಾಂಚರ್ ಅನ್ನು ಅಳವಡಿಸಲಾಗಿದ್ದು ಆಧುನಿಕ ಯುದ್ಧತಂತ್ರಗಳಿಗೆ ಪೂರಕವಾಗಿ ವಿನ್ಯಾಸಗೊಳಿಸಲಾಗಿದೆ.
- ಮಲ್ಟಿ-ಕ್ಯಾಲಿಬರ್ ಮಾಡ್ಯುಲರ್ ಪಾಡ್ಸ್: ಒಂದೇ ರೀತಿಯ ರಾಕೆಟ್ ಉಡಾವಣೆಗಷ್ಟೇ ಸೀಮಿತವಾಗದೆ, ಬೇರೆ ಬೇರೆ ಗಾತ್ರದ ರಾಕೆಟ್‌ಗಳನ್ನು ಒಂದೇ ಲಾಂಚರ್ ಬಳಸಿ ಉಡಾಯಿಸಬಹುದು.
- 122 ಎಂಎಂ ರಾಕೆಟ್: ಹತ್ತಿರದ ಗುರಿಗಳ ಮೇಲೆ ದಾಳಿ ಮಾಡಲು.
- 306 ಎಂಎಂ ಎಕ್ಸ್‌ಟ್ರಾ ಕ್ಷಿಪಣಿ: 150 ಕಿ.ಮೀ ದೂರದ ಗುರಿಗಳಿಗೆ
- 370 ಎಂಎಂ ಪ್ರೆಡೇಟರ್ ಹಾಕ್ ಕ್ಷಿಪಣಿ: 300 ಕಿ.ಮೀ ದೂರದ ಗುರಿಗಳಿಗೆ.
- ಸ್ಕೈಸ್ಟ್ರೈಕರ್ ಲೋಯಿಟರಿಂಗ್ ಮ್ಯೂನಿಷನ್: ಇದನ್ನು ಆತ್ಮಹತ್ಯಾ ಡ್ರೋನ್' (ಸುಸೈಡ್ ಡ್ರೋನ್) ಎಂದೂ ಕರೆಯಲಾಗುತ್ತಿದ್ದು, 100 ಕಿಮೀ ದೂರ ಕ್ರಮಿಸಿ ಶತ್ರುಗಳ ಮೇಲೆ ದಾಳಿ ಮಾಡಬಲ್ಲದು.
- ಶೂಟ್ ಆ್ಯಂಡ್ ಸ್ಕೂಟ್: ರಾಕೆಟ್ ಉಡಾಯಿಸಿದ ತಕ್ಷಣ ಶತ್ರುಗಳ ರಡಾರ್‌ಗಳು ನಮ್ಮನ್ನು ಪತ್ತೆ ಹಚ್ಚುವ ಮುನ್ನವೇ ಲಾಂಚರ್ ವಾಹನವು ಅಲ್ಲಿಂದ ಸುರಕ್ಷಿತವಾಗಿ ಬೇರೆಡೆಗೆ ಚಲಿಸುವ ತಂತ್ರಜ್ಞಾನ ಹೊಂದಿದೆ.
- ಸುಧಾರಿತ ನ್ಯಾವಿಗೇಷನ್: ಇದು ಜಿಪಿಎಸ್, ಇನರ್ಶಿಯಲ್ ನ್ಯಾವಿಗೇಷನ್ ಹಾಗೂ ಡಿಜಿಟಲ್ ಬ್ಯಾಲಿಸ್ಟಿಕ್ ಕಂಪ್ಯೂಟೇಶನ್ ವ್ಯವಸ್ಥೆಗಳನ್ನು ಒಳಗೊಂಡಿದೆ.

ಅತ್ಯಂತ ನಿಖರ ದಾಳಿ

ಚಂಡೀಪುರದಲ್ಲಿ ನಡೆದ ಪರೀಕ್ಷೆಗಳ ವೇಳೆ ಸೂರ್ಯಾಸ್ತ್ರ ವ್ಯವಸ್ಥೆಯ ಎರಡು ಮಾದರಿಗಳನ್ನು ಪರೀಕ್ಷಿಸಲಾಯಿತು. ಇವುಗಳ 'ಸರ್ಕ್ಯುಲರ್ ಎರರ್ ಪ್ರೊಬಬಲ್'(ಸಿಇಪಿ- ಗುರಿಯಿಂದ ತಪ್ಪಿಹೋಗುವ ಗರಿಷ್ಠ ಅಂತರ) ಜಾಗತಿಕ ಮಟ್ಟದಲ್ಲೇ ಅತ್ಯುತ್ತಮವಾಗಿದೆ:

- 150 ಕಿ.ಮೀ ದೂರದ ಮಾದರಿ: ಇದರ ಸಿಇಪಿ ಕೇವಲ 1.5 ಮೀಟರ್ ಆಗಿತ್ತು.
- 300 ಕಿ.ಮೀ ದೂರದ ಮಾದರಿ: ಇದರ ಸಿಇಪಿ ಕೇವಲ 2 ಮೀಟರ್ ಆಗಿತ್ತು.

ಆಧುನಿಕ ಯುದ್ಧ ನಿರ್ಧರಿಸುವ ತಂತ್ರಜ್ಞಾನ

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆಧುನಿಕ ಯುದ್ಧಗಳು ಕೇವಲ ಸೈನಿಕರ ಸಂಖ್ಯೆಯ ಮೇಲೆ ನಿರ್ಧಾರವಾಗುವುದಿಲ್ಲ, ಬದಲಿಗೆ ಆಟೋಮೇಷನ್ ಮತ್ತು ನಿಖರ ಆಯುಧಗಳ ತಂತ್ರಜ್ಞಾನದ ಮೇಲೆ ನಿರ್ಧಾರವಾಗುತ್ತವೆ ಎಂದಿದ್ದಾರೆ. ರಷ್ಯಾ-ಉಕ್ರೇನ್ ಸಂಘರ್ಷ ಹಾಗೂ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಗಳೇ ಇದಕ್ಕೆ ಸಾಕ್ಷಿ ಎಂದಿರುವ ಅವರು, ಭಾರತವು ಈ ಹಿಂದೆಯೇ ಆಪರೇಷನ್ ಸಿಂದೂರ್ ಮೂಲಕ ಇಂತಹ ತಂತ್ರಜ್ಞಾನ ಆಧಾರಿತ ಯುದ್ಧ ಸಾಮರ್ಥ್ಯವನ್ನು ಪ್ರದರ್ಶಿಸಿದೆ ಎಂದು ನೆನಪಿಸಿಕೊಂಡರು.

ತಿರುವಾಂಕೂರು ರಾಜಮನೆತನದಿಂದ ಸ್ಪಷ್ಟನೆ

ದೇಗುಲದ ಚಿನ್ನ ನಾಪತ್ತೆಯಾಗಿಲ್ಲ

ತಿರುವನಂತಪುರಂ: ಕೇರಳದ ಪ್ರಸಿದ್ಧ ಶ್ರೀ ಪದ್ಮನಾಭಸ್ವಾಮಿ ದೇವಾಲಯದಿಂದ ಅಮೂಲ್ಯ ವಸ್ತುಗಳು ನಾಪತ್ತೆಯಾಗಿವೆ ಎಂಬ ಆರೋಪಗಳನ್ನು ತಿರುವಾಂಕೂರು ರಾಜಮನೆತನ ತಳ್ಳಿಹಾಕಿದೆ.

ತಿರುವಾಂಕೂರು ರಾಜಮನೆತನದ ಮಾಜಿ ಸದಸ್ಯ ಆದಿತ್ಯ ವರ್ಮಾ ಅವರು, ನಾಪತ್ತೆಯಾಗಿವೆ ಎಂದು ಹೇಳಲಾಗಿರುವ ಎಲ್ಲ ಅಮೂಲ್ಯ ವಸ್ತುಗಳೂ ದೇವಾಲಯದ ಮುಖ್ಯ ದೇವರಾದ ಅನಂತ ಪದ್ಮನಾಭಸ್ವಾಮಿಯ ಸನ್ನಿಧಿಯಲ್ಲೇ ಸುರಕ್ಷಿತವಾಗಿವೆ ಎಂದು ಸ್ಪಷ್ಟಪಡಿಸಿದರು.

ದೇವಾಲಯದಅಮೂಲ್ಯವಸ್ತುಗಳುಕಣ್ಮರೆಯಾಗಿವೆ ಎಂಬ ಪೊಲೀಸ್ ವರದಿಯ ವಿಶ್ವಾಸಾರ್ಹತೆಯನ್ನೂ ಅವರು ಪ್ರಶ್ನಿಸಿದರು. ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರು, ಆಡಳಿತ ಸಮಿತಿಯ ಅಧ್ಯಕ್ಷರಾಗಿರುವ ಜಿಲ್ಲಾ ನ್ಯಾಯಾಧೀಶರು ಹಾಗೂ ಇತರೆ ಸದಸ್ಯರಿಗೆ ಯಾವುದೇ ವಸ್ತು ನಾಪತ್ತೆಯಾಗಿರುವ ಮಾಹಿತಿ ಇಲ್ಲದಿರುವಾಗ ಏಕಪಕ್ಷೀಯ ಪೊಲೀಸ್ ವರದಿ ಹೇಗೆ ಸಿದ್ಧವಾಯಿತು ಎಂಬುದು ಆಶ್ಚರ್ಯಕರ ಎಂದು ಅವರು ಹೇಳಿದರು.ಈ ಕುರಿತು ವೈಯಕ್ತಿಕವಾಗಿ ಪರಿಶೀಲನೆ ನಡೆಸಲಾಗಿದ್ದು, ನಾಪತ್ತೆಯಾಗಿವೆ ಎಂದು ಹೇಳಲಾಗಿದ್ದ ವಸ್ತುಗಳು ತಮ್ಮ ಎಂದಿನ ಸ್ಥಳದಲ್ಲೇ ಇವೆ ಎಂಬುದು ದೃಢಪಟ್ಟಿದೆ ಎಂದು ಆದಿತ್ಯ ವರ್ಮಾ ತಿಳಿಸಿದರು. ಈ ಪ್ರಕರಣದ ಸತ್ಯಾಸತ್ಯತೆ ತಿಳಿದುಕೊಳ್ಳಲು ರಾಜ್ಯ ಪೊಲೀಸ್ ಮಹಾನಿರ್ದೇಶಕ, ಮುಖ್ಯಮಂತ್ರಿ, ಗೃಹ ಸಚಿವ ಹಾಗೂ ದೇವಸ್ವಂ ಸಚಿವರಿಗೆ ಪತ್ರ ಬರೆಯಲಾಗುವುದು ಎಂದರು.

ಕಿರುಸುದ್ದಿ

ಉ.ಪ್ರದೇಶದಲ್ಲಿ ಭಾರೀ ಮಳೆಗೆ 28 ಜನ ಸಾವು

ಲಖನೌ: ಕಳೆದೆರಡು ದಿನಗಳಿಂದ ಉತ್ತರ ಪ್ರದೇಶದ ಕೆಲ ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ ಸುರಿದಿದ್ದು, 28 ಮಂದಿ ಮೃತಪಟ್ಟಿದ್ದಾರೆ. ಜನಜೀವನ ಅಸ್ತವ್ಯಸ್ತಗೊಂಡಿದ್ದು, ನೂರಾರು ಮರಗಳು ನೆಲಕ್ಕುರುಳಿದೆ. 12ಕ್ಕೂ ಹೆಚ್ಚು ಮನೆಗಳು ಕುಸಿದಿದೆ. ಇದರಿಂದಾಗಿ ಮನೆಯೊಳಗಿದ್ದ ಹಲವರು ಜೀವ ಕಳೆದುಕೊಂಡಿದ್ದಾರೆ. ಬೆಳೆ ಹಾನಿ ಅಂದಾಜು ಮಾಡಲು ಮತ್ತು ರೈತರು, ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಡಿಸಿಎಗಳಿಗೆ ಸಿಎಂ ಯೋಗಿ ಆದಿತ್ಯನಾಥ್ ನಿರ್ದೇಶಿಸಿದ್ದಾರೆ.

ಅಭಿಷೇಕ್ ಮೇಲೆ ಚಪ್ಪಲಿ, ಕಲ್ಲು ತೂರಿ ಪ್ರತಿಭಟನೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಸೋನಾಪುರದಲ್ಲಿ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಮೇಲೆ ಸ್ಥಳೀಯರು ಕಲ್ಲು, ಮೊಟ್ಟೆ ಮತ್ತು ಚಪ್ಪಲಿಗಳನ್ನು ಎಸೆದು ಪ್ರತಿಭಟನೆ ನಡೆಸಿದ್ದಾರೆ. ಚುನಾವಣೋತ್ತರ ಹಿಂಸಾಚಾರ ಪೀಡಿತರ ಕುಟುಂಬಗಳನ್ನು ಭೇಟಿ ಮಾಡಲು ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ತನ್ನನ್ನು ಕೊಲ್ಲಲು ಯತ್ನಿಸಿದ್ದಾರೆ ಎಂದು ಅಭಿಷೇಕ್ ಆರೋಪಿಸಿದರೆ, ಸ್ಥಳೀಯರ ಆಕ್ರೋಶದ ಪರಿಣಾಮ ಇದಾಗಿದೆ ಎಂದು ಬಿಜೆಪಿ ಹೇಳಿದೆ.

ಪಂಜಾಬ್ ಸ್ಥಳೀಯ ಕದನ; ಬಲ ವೃದ್ಧಿಸಿಕೊಂಡ ಬಿಜೆಪಿ

ಚಂಡೀಗಢ: ಪಂಜಾಬ್‌ನಲ್ಲಿನಡೆದಸ್ಥಳೀಯನಗರಾಡಳಿತ ಚುನಾವಣೆಗಳಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಸ್ವಂತ ನೆಲೆಯಲ್ಲಿ ಪ್ರಬಲ ಪಕ್ಷವಾಗಿ ಗುರುತಿಸಿಕೊಂಡಿದೆ. 2021ರ ಚುನಾವಣೆಯಲ್ಲಿ ಕೇವಲ 20 ವಾರ್ಡ್‌ಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಯಾವುದೇ ಪಕ್ಷದ ಮೈತ್ರಿಯಿಲ್ಲದೆಯೇ 170 ಸ್ಥಾನಗಳನ್ನು ಗೆದ್ದು, ಪಂಜಾಬ್‌ನಲ್ಲೂ ದೃಢವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ.

''ಪಂಜಾಬ್‌ನ ಕ್ಯಾಲಿಫೋರ್ನಿಯಾ'' ಎಂದೇ ಖ್ಯಾತಿ ಪಡೆದ ಅಬೋಹಾರ್ ನಗರಪಾಲಿಕೆ ಚುನಾವಣೆಯಲ್ಲಿ ಬಿಜೆಪಿ 50 ಸ್ಥಾನಗಳ ಪೈಕಿ 28 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದೆ. ಈ ಮೂಲಕ ಅಬೋಹಾರ್‌ನಲ್ಲಿ ಮೊದಲ ಬಿಜೆಪಿ ಮೇಯರ್ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. 2027ರ ಪಂಜಾಬ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಬಲವನ್ನು ದೃಢವಾಗಿ ಹೆಚ್ಚಿಸಿಕೊಳ್ಳುತ್ತಿರುವುದನ್ನು ಇದು ತೋರಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ. ಇಲ್ಲಿ ಆಳುವ ಆಪ್ 20 ಸ್ಥಾನಗಳನ್ನು ಪಡೆದರೆ, ಕಾಂಗ್ರೆಸ್ ಕೇವಲ 1 ಸ್ಥಾನ ಪಡೆದಿದ್ದು, ಪಕ್ಷೇತರರೊಬ್ಬರು ಗೆದ್ದಿದ್ದಾರೆ.

ಮೇ 26ರಂದು ಪಂಜಾಬ್‌ನ ಒಟ್ಟು 8 ಮಹಾನಗರ ಪಾಲಿಕೆ, 75 ಮುನ್ಸಿಪಲ್ ಕೌನ್ಸಿಲ್, 20 ನಗರ ಪಂಚಾಯತ್‌ಗಳಿಗೆ ಚುನಾವಣೆ ನಡೆದಿತ್ತು. ಆಳುವ ಆಪ್ ಆಪ್ 954 ಸ್ಥಾನಗಳನ್ನು ಪಡೆದು ಮೇಲುಗೈ ಸಾಧಿಸಿದೆ. ಕಾಂಗ್ರೆಸ್ 390, ಸ್ವತಂತ್ರರು 251, ಅಕಾಲಿದಳ 191, ಬಿಜೆಪಿ 170 ಹಾಗೂ ಬಿಎಸ್‌ಪಿ 7 ಸ್ಥಾನಗಳನ್ನು ಗಳಿಸಿವೆ.

ಗಡಿ ಜಿಲ್ಲೆಗಳ ಜನಸಂಖ್ಯೆ ಬದಲು ದೇಶಕ್ಕೆ ಸವಾಲು

ಹೊಸದಿಲ್ಲಿ: ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯೆ ಬದಲಾವಣೆ ದೇಶದ ಮುಂದಿರುವ ಅತ್ಯಂತ ಗಂಭೀರ ಸವಾಲು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈ ಬೆಳವಣಿಗೆಗಳ ಬಗ್ಗೆ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ವರದಿ ಮಾಡಲು ಕರೆ ನೀಡಿದ್ದಾರೆ. ಭಾರತ-ಪಾಕಿಸ್ತಾನ ಗಡಿಯಲ್ಲಿರುವ ಗುಜರಾತಿನ ಕಚ್ ಜಿಲ್ಲೆಯ ಭುಜ್‌ನಲ್ಲಿ ನಡೆದ ಭದ್ರತಾ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶಾ, ಅಸ್ತಿತ್ವದಲ್ಲಿರುವ ನುಸುಳುಕೋರರನ್ನು ಗುರುತಿಸಲು ಮತ್ತು ಡ್ರೋನ್, ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಬೆದರಿಕೆಗಳ ಜಾಡು ಪತ್ತೆ ಗಡಿ ಜಿಲ್ಲೆಗಳ ಆಡಳಿತಗಳು ಎಸ್‌ಒಪಿ ರೂಪಿಸಬೇಕು ಎಂದರು. ಅಂತಾರಾಷ್ಟ್ರೀಯ ಗಡಿಯ 15 ಕಿಮೀ ವ್ಯಾಪ್ತಿಯೊಳಗೆ ಅತಿಕ್ರಮಣದ ಬಗ್ಗೆ ಶೂನ್ಯ ಸಹಿಷ್ಣುತೆಯ ವಿಧಾನವನ್ನು ಅಳವಡಿಸಿಕೊಳ್ಳುವ ಮತ್ತು ಗಡಿ ಪ್ರದೇಶಗಳಲ್ಲಿನ ತೀವ್ರಗಾಮಿತ್ವದ ಕೇಂದ್ರಗಳ ಮೇಲೆ ನಿಗಾ ವಹಿಸುವ ಅಗತ್ಯವನ್ನು ಒತ್ತಿ ಹೇಳಿದರು. ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯಾ ಬದಲಾವಣೆಗಳು ಅತ್ಯಂತ ಗಂಭೀರವಾದ ಸವಾಲನ್ನು ಒಡ್ಡುತ್ತವೆ. ಜಿಲ್ಲಾಧಿಕಾರಿಗಳು ಅಂತಹ ಬೆಳವಣಿಗೆಗಳ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ನಿಯಮಿತ ವರದಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಶಾ ಸೂಚಿಸಿದ್ದಾರೆ. ಈಗಾಗಲೇ ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದಾಗಿ ಭಾರತದಾದ್ಯಂತ ಜನಸಂಖ್ಯಾ ಬದಲಾವಣೆಗಳನ್ನು ನಿರ್ಣಯಿಸಲು ಹಾಗೂ ಈ ಸಮಸ್ಯೆಯನ್ನು ಎದುರಿಸಲು ಕ್ರಮಗಳನ್ನು ಸೂಚಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ.



ಮಲಪ್ಪುರಂ ಸ್ಫೋಟಕ ವಶ ಪ್ರಕರಣ: ಎನ್‌ಐಎ ದಾಳಿ

ಕಣ್ಣೂರು: ಮಲಪ್ಪುರಂ ಜಿಲ್ಲೆಯ ತಿರುರಂಗಡಿ ಬಳಿಯ ಚೆಮ್ಮಾಡ್‌ನಿಂದ ಮೂರು ತಿಂಗಳ ಹಿಂದೆ ಭಾರೀ ಪ್ರಮಾಣದಲ್ಲಿ ವಶಪಡಿಸಿಕೊಳ್ಳಲಾದಸ್ಫೋಟಕಗಳಿಗೆಸಂಬಂಧಿಸಿರಾಷ್ಟ್ರೀಯತನಿಖಾ ಸಂಸ್ಥೆ(ಎನ್‌ಐಎ) ಕಾಸರಗೋಡು, ಕಣ್ಣೂರು, ಕೋಯಿಕ್ಕೋಡು, ಮಲಪ್ಪುರಂ ಸೇರಿದಂತೆ ಉತ್ತರ ಕೇರಳದ ಹಲವೆಡೆಗಳಲ್ಲಿ ಶನಿವಾರ ದಾಳಿ ನಡೆಸಿದೆ. ಪ್ರಕರಣದಲ್ಲಿ ನಂಟು ಹೊಂದಿರುವ ಆರೋಪಿಗಳ ನಿವಾಸಗಳು, ಉದ್ಯಮ ಕೇಂದ್ರಗಳು, ಸಂಸ್ಥೆಗಳು ಸೇರಿದಂತೆ ಹಲವೆಡೆಗಳಲ್ಲಿ ಶನಿವಾರ ನಸುಕಿನಲ್ಲಿ ಎನ್‌ಐಎ ವ್ಯಾಪಕ ದಾಳಿ-ಶೋಧ ಕಾರ್ಯಾಚರಣೆ ನಡೆಸಿತು. ಮಲಪ್ಪುರಂ ಜಿಲ್ಲೆಯ ತಿರುರಂಗಡಿ ಮತ್ತು ವಂಡೂರ್, ಕೋಯಿಕ್ಕೋಡು ಜಿಲ್ಲೆಯ ಎರಂಜಿಮಾವು, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳ ಅನೇಕ ಕಡೆಗಳಲ್ಲಿ ದಾಳಿ ನಡೆದಿದೆ. ಘಟನೆಗೆ ಸಂಬಂಧಿಸಿ ಸ್ಫೋಟಕ ವಸ್ತುಗಳ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆಯ ಮುಂದುವರಿದ ಭಾಗವಾಗಿ ಈ ಕಾರ್ಯಾಚರಣೆ ನಡೆಸಿದ್ದೇವೆ. ಆರೋಪಿಗಳ ಒಡೆತನದ ಸಂಸ್ಥೆಗಳಲ್ಲದೆ, ಶಂಕಿತ ವ್ಯಕ್ತಿಗಳ ಸಂಸ್ಥೆಗಳಲ್ಲೂ ತಪಾಸಣೆ ನಡೆಸಲಾಗುತ್ತಿದೆ ಎಂದು ಎನ್‌ಐಎ ಕೇರಳ ಘಟಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಪೊಲೀಸರು ಚೆಮ್ಮಾಡ್‌ನಲ್ಲಿ ಲಾರಿಯೊಂದರಿಂದ ಭಾರೀ ಪ್ರಮಾಣದ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದರು. ಇದರಲ್ಲಿ 10,500ಕ್ಕೂ ಅಧಿಕ ಜಿಲೆಟಿನ್ ಕಡ್ಡಿಗಳು, ಡಿಟೋನೇಟರ್‌ಗಳು, ತಂತಿಗಳು ಸೇರಿವೆ. ಈ ಸಂಬಂಧಿಸಿ ಲಾರಿ ಮಾಲೀಕತ್ವ ಹೊಂದಿರುವ ಮಹಿಳೆಯೊಬ್ಬಳನ್ನು ವಶಕ್ಕೆ ತೆಗೆದುಕೊಂಡು ತನಿಖೆ ನಡೆಸಲಾಗುತ್ತಿದೆ.

ನಾಳೆ ಮ್ಯಾನ್ಮಾರ್ ಅಧ್ಯಕ್ಷ ಯು ಜತೆ ಮೋದಿ ಮಾತುಕತೆ

ಹೊಸದಿಲ್ಲಿ: ಮ್ಯಾನ್ಮಾರ್ ಅಧ್ಯಕ್ಷ ಯು ಮಿನ್ ಆಂಗ್ ಹ್ಲೈಂಗ್ ಅವರು ಶನಿವಾರ ಬೋಧ್ ಗಯಾದಲ್ಲಿರುವ ಮಹಾಬೋಧಿ ದೇವಾಲಯಕ್ಕೆ ಭೇಟಿ ನೀಡುವ ಮೂಲಕ ತಮ್ಮ ಐದು ದಿನಗಳ ಭಾರತ ಭೇಟಿಯನ್ನು ಪ್ರಾರಂಭಿಸಿದ್ದಾರೆ. ಈಶಾನ್ಯ ರಾಜ್ಯಗಳಾದ ಮಣಿಪುರ ಮತ್ತು ನಾಗಾಲ್ಯಾಂಡ್ ಸೇರಿದಂತೆ ಭಾರತದೊಂದಿಗೆ ಮ್ಯಾನ್ಮಾರ್ 1,640 ಕಿಮೀ ಗಡಿಯನ್ನು ಹಂಚಿಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಮ್ಯಾನ್ಮಾರ್ ಅಧ್ಯಕ್ಷ ಹ್ಲೈಂಗ್ ಜೂ.1ರಂದು ಮಾತುಕತೆ ನಡೆಸಲಿದ್ದಾರೆ. ಉಭಯ ದೇಶಗಳ ನಡುವಿನ ಐತಿಹಾಸಿಕ ಮತ್ತು ನಾಗರಿಕ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಕುರಿತು ಅಧ್ಯಕ್ಷ ಹ್ಲೈಂಗ್ ಅವರು ಪ್ರಧಾನಿ ಮೋದಿ ಜತೆ ಚರ್ಚಿಸಲಿದ್ದಾರೆ. ಅವರು ವ್ಯಾಪಾರ ವೇದಿಕೆಯಲ್ಲೂ ಭಾಗವಹಿಸಲಿದ್ದಾರೆ ಎಂದು ಎಂಇಎ ಹೇಳಿದೆ. ದಿಲ್ಲಿಯಲ್ಲಿ ಮಾತುಕತೆ ಬಳಿಕ ಹ್ಲೈಂಗ್ ಅವರು ಉದ್ಯಮದ ನಾಯಕರೊಂದಿಗಿನ ಸಭೆ, ವ್ಯಾಪಾರ ಸಂವಾದ ಮತ್ತು ಬೃಹತ್ ಉದ್ಯಮ ಮತ್ತು ಹೂಡಿಕೆ ಅವಕಾಶಗಳ ಮೇಲೆ ಕೇಂದ್ರೀಕರಿಸಿದ ತಾಣಗಳಿಗೆ ಭೇಟಿ ನೀಡಲು ಜೂ.2ರಂದು ಮುಂಬೈಗೆ ಪ್ರಯಾಣಿಸುತ್ತಾರೆ.

ವಾಷಿಂಗ್ಟನ್‌ನಲ್ಲಿ ಲಾಬಿ ಮಾಡಲು ಸಂಸ್ಥೆ ನೇಮಕ | ತಿಂಗಳಿಗೆ 50 ಸಾವಿರ ಡಾಲರ್ ಪಾವತಿ

ವರ್ಚಸ್ಸು ಹೆಚ್ಚಿಸಿಕೊಳ್ಳಲು ಉಗ್ರ ಪಾಕಿಸ್ತಾನದ ಕಸರತ್ತು

ವಾಷಿಂಗ್ಟನ್: ಉಗ್ರ ಪೋಷಕರ ದೇಶ, ಭಿಕಾರಿ ದೇಶವೆಂಬ ಪಟ್ಟ ಕಳಚಿಕೊಳ್ಳಲು ಮುಂದಾಗಿರುವ ಪಾಕಿಸ್ತಾನ, ಅಮೆರಿಕದಲ್ಲಿ ಲಾಬಿ ನಡೆಸುವ ಸಲುವಾಗಿಯೇ ಸಂಸ್ಥೆಯೊಂದನ್ನು ನೇಮಕ ಮಾಡಿದೆ.

ಮಾಜಿ ರಿಪಬ್ಲಿಕನ್ ಸಂಸದ ಟಾಮ್ ಗ್ರೇವ್ಸ್ ನೇತೃತ್ವದ ಎರ್ವಿನ್ ಗ್ರೇವ್ಸ್ ಸ್ಟ್ರಾಟೆಜಿ ಗ್ರೂಪ್ ಎಂಬ ಲಾಬಿಯಿಂಗ್ ಸಂಸ್ಥೆಯನ್ನು ಪಾಕಿಸ್ತಾನ ಸರ್ಕಾರ ನೇಮಿಸಿಕೊಂಡಿದ್ದು, ಈ ಸಂಬಂಧ ಎರಡು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಸಂಸ್ಥೆಗೆ ಮಾಸಿಕ 50 ಸಾವಿರ ಡಾಲರ್ ನೀಡಲಿದೆಯಂತೆ.

ಅಮೆರಿಕ ನ್ಯಾಯಾಂಗ ಇಲಾಖೆಗೆ ಸಲ್ಲಿಸಲಾದ ದಾಖಲೆಗಳ ಪ್ರಕಾರ, ವಾಷಿಂಗ್ಟನ್‌ನಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿ ಈ ಒಪ್ಪಂದ ಮಾಡಿಕೊಂಡಿದ್ದು, ಅಮೆರಿಕ ಕಾಂಗ್ರೆಸ್, ಆಡಳಿತ ವಿಭಾಗ, ನೀತಿ ಸಂಶೋಧನಾ ಸಂಸ್ಥೆಗಳು ಹಾಗೂ ಕೈಗಾರಿಕಾ ವಲಯಗಳಲ್ಲಿ ಪಾಕಿಸ್ತಾನದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಸಂಸ್ಥೆಗೆ ನೀಡಲಾಗಿದೆ.

ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕ-ಇರಾನ್ ಸಂಘರ್ಷ ಶಮನಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆಯ ಪ್ರಯತ್ನಗಳನ್ನು ನಡೆಸಿದ್ದರೆ, ಪ್ರಧಾನಿ ಶೆಹಬಾಜ್ ಷರೀಫ್ ಹಾಗೂ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ವಾಷಿಂಗ್ಟನ್ ಭೇಟಿ ನೀಡಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಿದ್ದರು. ಈ ಬೆಳವಣಿಗೆಗಳ ನಂತರ ಅಮೆರಿಕದಲ್ಲಿ ತನ್ನ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪಾಕಿಸ್ತಾನ ಈ ಕ್ರಮ ಕೈಗೊಂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ, ಮತ್ತೊಂದೆಡೆ 2026ರ ಮಾರ್ಚ್‌ನಲ್ಲಿ ಪ್ರಕಟವಾದ ಅಮೆರಿಕ ಕಾಂಗ್ರೆಸ್ ವರದಿ ಪಾಕಿಸ್ತಾನದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿತ್ತು. ಹಲವು ಉಗ್ರ ಸಂಘಟನೆಗಳು ಇನ್ನೂ ಪಾಕಿಸ್ತಾನದಲ್ಲಿ ಸಕ್ರಿಯವಾಗಿದ್ದು, ಅವುಗಳನ್ನು ನಿಯಂತ್ರಿಸುವಲ್ಲಿ ಸರ್ಕಾರದ ಪ್ರಯತ್ನಗಳು ನಿರೀಕ್ಷಿತ ಯಶಸ್ಸು ಕಾಣಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಲಾಬಿ ಸಂಸ್ಥೆ ಜವಾಬ್ದಾರಿ?

- ಅಮೆರಿಕ ಕಾಂಗ್ರೆಸ್ ಹಾಗೂ ಆಡಳಿತ ವಿಭಾಗದೊಂದಿಗೆ ಸಂಪರ್ಕ ಸಾಧಿಸುವುದು
- ಪಾಕಿಸ್ತಾನದ ವಿರುದ್ಧ ಪರಿಣಾಮ ಬೀರುವ ನೀತಿ ಮತ್ತು ಶಾಸನಾತ್ಮಕ ಕ್ರಮಗಳ ಮೇಲೆ ನಿಗಾ ಇಡುವುದು
- ಮಾನವ ಹಕ್ಕುಗಳು, ನಿರ್ಬಂಧಗಳು ಹಾಗೂ ಭದ್ರತಾ ನೆರವಿಗೆ ಸಂಬಂಧಿಸಿದ ಬೆಳವಣಿಗೆಗಳ ವಿಶ್ಲೇಷಣೆ
- ನೀತಿ ತಜ್ಞರು, ಚಿಂತಕರ ವೇದಿಕೆಗಳು ಹಾಗೂ ಶೈಕ್ಷಣಿಕ ವಲಯಗಳಲ್ಲಿ ಪಾಕಿಸ್ತಾನದ ಪರ ಅಭಿಪ್ರಾಯ ನಿರ್ಮಾಣ

ಕಾಂಗ್ರೆಸ್ ಸದಸ್ಯರೊಂದಿಗೆ ನೇರ ಸಂಪರ್ಕಕ್ಕೆ ಒತ್ತು: ಒಪ್ಪಂದದ ಪ್ರಕಾರ, ಅಮೆರಿಕ ಕಾಂಗ್ರೆಸ್ ಸದಸ್ಯರು, ಅವರ ಸಿಬ್ಬಂದಿ ಹಾಗೂ ಪ್ರಮುಖ ಸರ್ಕಾರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಪಾಕಿಸ್ತಾನಿ ಪ್ರತಿನಿಧಿಗಳ ಸಭೆಗಳನ್ನು ಆಯೋಜಿಸಲಾಗುತ್ತದೆ. ಜತೆಗೆ ಪಾಕಿಸ್ತಾನಕ್ಕೆ ಅಮೆರಿಕ ಶಾಸಕರ ಭೇಟಿಗಳನ್ನು ಸಂಯೋಜಿಸುವುದು, ಭೇಟಿಗೂ ಮುನ್ನ ಮಾಹಿತಿ ನೀಡುವುದು ಹಾಗೂ ರಾಯಭಾರ ಕಚೇರಿಯಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಕೆಲಸವೂ ಸಂಸ್ಥೆಯದ್ದಾಗಿರುತ್ತದೆ.

ನಾನ್ ನ್ಯಾಟೋ ಸ್ಥಾನಮಾನವಂತೆ: ಅಮೆರಿಕ ನೀಡಿರುವ ಮೇಜರ್ ನಾನ್-ನ್ಯಾಟೋ ಅಲೈ ಸ್ಥಾನಮಾನ ಪಾಕಿಸ್ತಾನಕ್ಕೆ ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಸ್ಥಾನಮಾನಕ್ಕೆ ಧಕ್ಕೆಯಾಗುವ ಯಾವುದೇ ಕಾಂಗ್ರೆಸ್ ಅಥವಾ ಆಡಳಿತಾತ್ಮಕ ಕ್ರಮಗಳ ವಿರುದ್ಧ ರಾಜತಾಂತ್ರಿಕ ಮಟ್ಟದಲ್ಲಿ ಸ್ಪಂದಿಸುವುದು ಹಾಗೂ ಪಾಕಿಸ್ತಾನದ ಪರವಾಗಿ ವಾದ ಮಂಡಿಸುವುದು ಲಾಬಿಯಿಂಗ್ ಸಂಸ್ಥೆಯ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ.

ಇಂದು ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ 301ನೇ ಜಯಂತಿ

ವಿವಿಧೆಡೆ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮ

ಇಂದೋರ್/ಪುಣೆ: 18ನೇ ಶತಮಾನದಲ್ಲಿ ತಮ್ಮ ಸಮರ್ಥ ಆಡಳಿತ ಮತ್ತು ನ್ಯಾಯಪ್ರಿಯತೆಯಿಂದ ಪ್ರಜೆಗಳ ಮನದಲ್ಲಿ ಅಚಲ ಸ್ಥಾನ ಗಳಿಸಿದ ರಾಜಮಾತೆ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರ 301ನೇ ಜಯಂತಿಯನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. 1725 ಮೇ 31ರಂದು ಅಹಲ್ಯಾಬಾಯಿ ಅವರು ಜನಿಸಿದ್ದಾರೆ. ಈ ಹಿನ್ನೆಲೆ ಶನಿವಾರದಿಂದಲೇ ಅವರ ಜನ್ಮಸ್ಥಳವಾದ ಚೌಂಡಿ(ಅಹಲ್ಯಾನಗರ) ಸೇರಿದಂತೆ ಇಂದೋರ್, ಪುಣೆ ಹಾಗೂ ಮಹಾರಾಷ್ಟ್ರದಾದ್ಯಂತ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅಹಲ್ಯಾಬಾಯಿ ಅವರ ಜನ್ಮಸ್ಥಳವಾದ ಅಹಮದ್‌ನಗರ ಜಿಲ್ಲೆಯ ಚೌಂಡಿಯಲ್ಲಿ ಶನಿವಾರ ಭಕ್ತರು ಮತ್ತು ರಾಜಕೀಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗೌರವ ಸಲ್ಲಿಸಿದ್ದಾರೆ.

ಇನ್ನು ಹೋಳ್ಕರ್ ಸಂಸ್ಥಾನದ ರಾಜಧಾನಿಯಾಗಿದ್ದ ಇಂದೋರ್‌ನ ರಾಜವಾಡಾ ಪ್ರದೇಶದಲ್ಲಿ ಭವ್ಯವಾದ ದೇವಿ ಅಹಲ್ಯಾ ಜಯಂತಿ ಪರ್ವ ಆಚರಿಸಲಾಗುತ್ತಿದ್ದು, ಶನಿವಾರ ಸಂಜೆ ಸಾಂಪ್ರದಾಯಿಕ ಪಾಲ್ಕಿ ಉತ್ಸವ ಮತ್ತು ಭವ್ಯ ಶೋಭಾಯಾತ್ರೆ ನಡೆದಿದೆ.

ಮೋದಿ, ಫಡ್ನವೀಸ್ ನಮನ: ಪ್ರಧಾನಿ ನರೇಂದ್ರ ಮೋದಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವೀಸ್ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಸಾಮಾಜಿಕ ಮಾಧ್ಯಮಗಳ ಮೂಲಕ ಲೋಕಮಾತೆ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರಿಗೆ ವಿನಮ್ರ ನಮನ ಸಲ್ಲಿಸಿದ್ದಾರೆ.



ಶ್ರೇಷ್ಠ ಆಡಳಿತಗಾರ್ತಿ

ಪುಣ್ಯಶ್ಲೋಕ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಅವರು ಭಾರತದ ಹಾಗೂ ವಿಶೇಷವಾಗಿ ಮರಾಠಾ ಸಾಮ್ರಾಜ್ಯದ ಇತಿಹಾಸದಲ್ಲಿನ ಅತ್ಯಂತ ಶ್ರೇಷ್ಠ, ದೂರದೃಷ್ಟಿಯುಳ್ಳ ಮತ್ತು ದಕ್ಷ ಆಡಳಿತಗಾರ್ತಿಯರಲ್ಲಿ ಒಬ್ಬರಾಗಿದ್ದರು. ಅವರು ಮಧ್ಯ ಭಾರತದ ಮಾಳ್ವಾ ಪ್ರದೇಶವನ್ನು ಸುಮಾರು 30 ವರ್ಷ ಅತ್ಯಂತ ಸಮರ್ಥವಾಗಿ ಆಳಿದರು. ಜನರು ಅವರಿಗೆ ಗೌರವದಿಂದ ಲೋಕಮಾತೆ ಮತ್ತು ದೇವಿ ಎಂಬ ಬಿರುದುಗಳನ್ನು ನೀಡಿದ್ದರು



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಯಾವ ದೇಶವನ್ನು ತ್ಯಾಗ ಮಾಡಬೇಕು?

ಚಾಡಿಕೋರ ಮತ್ತು ಜಿಪುಣನಾದ ರಾಜನಿದ್ದ ದೇಶವನ್ನು.

ಒಂದು ದೇಶ ಸುಭಿಕ್ಷವಾಗಿದ್ದರೆ ಆ ದೇಶದಲ್ಲಿ ವಾಸಮಾಡುವ ಜನರು ಕೂಡ ಸಂತೋಷದಿಂದ ಇರುತ್ತಾರೆ. ಇದಕ್ಕೆ ಮುಖ್ಯವಾದ ಕಾರಣ ಆ ವ್ಯವಸ್ಥೆ. ಆ ವ್ಯವಸ್ಥೆಗೆ ಒಬ್ಬ ಮುಖ್ಯಸ್ಥ ಎಂಬುವವನು ಇರುತ್ತಾನೆ. ಸುವ್ಯವಸ್ಥಿತವಾಗಿ ನಡೆಸಲು ಬೇಕಾದ ಎಲ್ಲ ರೀತಿಯ ಅನುಕೂಲತೆಗಳು ಇರುತ್ತವೆ. ಹೀಗಿದ್ದಾಗ ಆ ದೇಶದಲ್ಲಿ ವಾಸ ಮಾಡಬೇಕು. ಆದರೆ ಇಲ್ಲಿ ಕೇಳುವ ಪ್ರಶ್ನೆ ಇದಕ್ಕೆ ವಿಪರೀತವಾಗಿತ್ತು. ಇಂತಹ ವ್ಯವಸ್ಥೆಯನ್ನು ಹಾಳುಮಾಡುವ ವ್ಯಕ್ತಿ ಇದ್ದರೆ, ಅಂತಹ ದೇಶದಲ್ಲಿ ವಾಸಮಾಡಬಾರದು ಎಂಬುದಾಗಿ ಹೇಳುತ್ತದೆ. ಅಂದರೆ ಒಬ್ಬ ಚಾಡಿಕೋರ ಅಥವಾ ಜಿಪುಣನಾದ ವ್ಯಕ್ತಿ ಈ ವ್ಯವಸ್ಥೆಯ ಮಧ್ಯದಲ್ಲಿದ್ದರೆ, ಆಗ ಆ ವ್ಯವಸ್ಥೆಯು ಹಾಳಾಗುತ್ತದೆ. ದೇಶ ಎಷ್ಟು ಸುಭಿಕ್ಷವಾಗಿದ್ದರೂ ಅದು ಮುಂದೆ ಯಾವುದೋ ಕಾಲದಲ್ಲಿ ದುರ್ಭಿಕ್ಷೆಗೆ ಈಡಾಗುತ್ತದೆ. ಹಾಗಾಗಿ ಇಂಥವನು ಇರುವ ದೇಶದಲ್ಲಿ ಇರಬಾರದು; ಅದನ್ನು ತೊರೆಯಬೇಕು ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ.

ಹಾಗಾದರೆ ಚಾಡಿಕೋರ ಮತ್ತು ಜಿಪುಣ ಎಂದರೇನು? ಇವರಿಂದ ವ್ಯವಸ್ಥೆ ಹೇಗೆ ಹಾಳಾಗುತ್ತದೆ? ಚಾಡಿಕೋರನು ಒಬ್ಬರ ಮಾತನ್ನು ಇನ್ನೊಬ್ಬರಿಗೆ ಹೇಳುತ್ತಾನೆ ಮತ್ತು ಹೀಗೇ ಮಾಡುವುದರ ಮೂಲಕ ಜಗಳ ತಂದು ಇಡುತ್ತಾನೆ. ಆಗ ಅವರಿಬ್ಬರ ಮಧ್ಯದಲ್ಲಿರುವ ಬಾಂಧವ್ಯ ಕೆಡುತ್ತದೆ. ಈ ಚಾಡಿಕೋರನಿಗೆ ಕದ್ದು ಕೇಳುವ ಹಾಗು ಸುಳ್ಳನ್ನು ಸೃಷ್ಟಿಸಿ ಹೇಳುವ ಸ್ವಭಾವವಿರುತ್ತದೆ. ಹೇಳುವ ವಿಷಯಕ್ಕೆ ಸ್ವಲ್ಪ ಖಾರ ಮಸಾಲೆ ಹಾಕಿ ಕೇಳುವವರಿಗೆ ತನ್ನ ಬಗ್ಗೆ ವಿಶೇಷವಾದ ಇನ್ನಷ್ಟು ಕಾಳಜಿ, ಪ್ರೀತಿ ಬರಲಿ ಎಂಬ ರೀತಿಯಲ್ಲಿ ಅವನ ಮಾತುಕತೆಗಳು ಇರುತ್ತವೆ. ಇದರ ಬಗ್ಗೆ ಒಂದು ಸುಭಾಷಿತ ಹೇಗಿದೆ ''ಪರೋಕ್ಷಂ ಗುಣಹಂತಾರಂ ಪ್ರತ್ಯಕ್ಷಂ ಪ್ರಿಯವಾದಿನಮ್। ವರ್ಜಯೇತ್ ತಾದೃಶಂ ಮಿತ್ರಂ ವಿಷಕುಂಭಂ ಪಯೋಮುಖಮ್॥'' ಒಳ್ಳೆಯದು ಆಗದಂತೆ ವ್ಯವಸ್ಥೆಯ ಹಿಂದುಗಡೆ ಕೆಲಸ ಮಾಡುತ್ತಾನೆ; ಎದುರುಗಡೆ ಪ್ರಿಯವಾಗಿ ಮಾತನಾಡುತ್ತಾನೆ. ಅಂದರೆ 'ಹಾಲಿನ ಮುಖವುಳ್ಳ ಗಡಿಗೆಯಂತೆ' ಈ ವ್ಯಕ್ತಿಯನ್ನು ಹೋಲಿಸಿ ಹೇಳಿದ್ದುಂಟು.

ಇನ್ನೊಬ್ಬ ವ್ಯಕ್ತಿ ಜಿಪುಣ. ಹಣ ಎಷ್ಟೇ ಇದ್ದರೂ ತನಗಾಗಲಿ ಅಥವಾ ಬೇರೆಯವರಿಗಾಗಲಿ ಒಂದು ಕಾಸನ್ನು ತನ್ನಿಂದ ಬಿಚ್ಚಲು ಇಷ್ಟಪಡುವುದಿಲ್ಲ. ಅಂದರೆ ಒಂದಷ್ಟನ್ನು ಕೂಡಿಟ್ಟುಕೊಂಡೇ ಖುಷಿಪಡುವಂತಹ ಸ್ವಭಾವ ಈತನದ್ದು. ಇದರಿಂದ ಹಣವನ್ನು ಹೇಗೆ ಸದ್ವಿನಿಯೋಗ ಮಾಡಬೇಕು ಎಂಬ ಬಗ್ಗೆ ಇವನಿಗೆ ಸ್ವಲ್ಪವೂ ಆಸಕ್ತಿಯೂ ಇಲ್ಲ. ಹೀಗಾಗಿ ವ್ಯವಸ್ಥೆಯಲ್ಲಿ ಈ ಬಗೆಯ ವ್ಯಕ್ತಿ ಇದ್ದರೆ ವ್ಯವಸ್ಥೆಗೆ ಬೇಕಾದ ಯಾವ ಹಣವೂ ಅಥವಾ ಪದಾರ್ಥವೂ ಅಲ್ಲಿ ಬಳಕೆಯಾಗುವುದಿಲ್ಲ. ಆದ್ದರಿಂದ ಜಿಪುಣ ಮತ್ತು ಚಾಡಿಕೋರ ಎಂಬ ಎರಡು ವಿಧವಾದ ವ್ಯಕ್ತಿಗಳು ಇದ್ದಲ್ಲಿ ಆ ದೇಶ ಹಾಳಾದಂತೇ ಎಂಬ ಅರ್ಥ. ಹಾಗಾಗಿ ಅಲ್ಲಿ ವಾಸವಾಗಿದ್ದರೂ ಸುಭಿಕ್ಷ ಇರುವುದಿಲ್ಲ. ಅದನ್ನು ತ್ಯಾಗ ಮಾಡಿ ಬೇರೆ ಕಡೆಗೆ ವಾಸ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನು ಈ ಉತ್ತರ ನೀಡುತ್ತದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಉತ್ತರದತ್ತ ಅರ್ಜುನ: ಭಗದತ್ತನಿತ್ತ ಸಂಗರ

ಧನಪತಿಯಾದ ಕುಬೇರನ ದಿಕ್ಕೆಂದು ಪ್ರಸಿದ್ಧವಾದದ್ದು ಉತ್ತರದಿಕ್ಕು. ಅರ್ಜುನನು ಆ ದಿಕ್ಕನ್ನು, ಹಾಗೆಯೇ ಭೀಮಸೇನನು ಪೂರ್ವದಿಕ್ಕನ್ನು, ಜಯಿಸಿದನು. ಸಹದೇವನು ದಕ್ಷಿಣವನ್ನು ಮತ್ತು ಅಸ್ತ್ರಜ್ಞನಾದ ನಕುಲನು ಪಶ್ಚಿಮದಿಕ್ಕನ್ನು ಜಯಿಸಿದನು. ಇತ್ತ ಧರ್ಮರಾಜನಾದ ಯುಧಿಷ್ಠಿರನು ಮಾತ್ರ ಖಾಂಡವಪ್ರಸ್ಥದ ಮಧ್ಯದಲ್ಲಿಯೇ ಇದ್ದುಕೊಂಡು, ಮಿತ್ರರಿಂದ ಸುತ್ತುವರಿಯಲ್ಪಟ್ಟವನಾಗಿ, ಉತ್ತಮವಾದ ರಾಜಲಕ್ಷ್ಮಿಯಿಂದ ಕಂಗೊಳಿಸಿದನು. ಹಾಗೆಂದು ಸಂಕ್ಷೇಪವಾಗಿ ಹೇಳಿದರೇನು ಬಂತು? ವಿಸ್ತೃತವಾಗಿಯೂ ಹೇಳಬೇಕಲ್ಲವೇ?

ಮೊದಲು ಕುಲಿಂದ ದೇಶದ ಅರಸರನ್ನು ಅರ್ಜುನನು ಮೊಟ್ಟಮೊದಲು ಜಯಿಸಿದನು. ಅದಕ್ಕಾಗಿ ತೀವ್ರವಾದ ಶ್ರಮವೇನೂ ಆತನಿಗೆ ಬೇಕಾಗಲಿಲ್ಲ. ಅವರೊಂದಿಗೆ ಆನರ್ತ, ಕಾಲಕೂಟ ಎಂಬ ರಾಜ್ಯಗಳನ್ನು ಗೆದ್ದನು. ಬಳಿಕ ಸುಮಂಡಲನೆಂಬ ರಾಜನನ್ನು ಗೆದ್ದನು. ಆಮೇಲೆ ಶಾಕಲದ್ವೀಪ ಹಾಗೂ ಸಪ್ತದ್ವೀಪಗಳ ಅರಸರೊಂದಿಗೆ ತುಮುಲವಾದ ಯುದ್ಧವೇ ಆಯಿತು. ಅಲ್ಲೆಲ್ಲಾ ಉತ್ತಮ ಧನುರ್ಧಾರಿಗಳೇ ಇದ್ದರು. ಅವರನ್ನು ಸೋಲಿಸಿದ ಬಳಿಗೆ ಪ್ರಾಗ್ಜ್ಯೋತಿಷಪುರದತ್ತ ಧಾವಿಸಿದನು. ಅಲ್ಲಿನ ರಾಜ ಭಗದತ್ತ. ಆತನಿಗೆ ಕಿರಾತರ ಹಾಗೂ ಚೀನದೇಶದವರ ಸಹಕಾರವಿತ್ತು. ಸಾಗರ ಹಾಗೂ ಅದರ ಬಳಿಯ ಅನೂಪ(ಜೌಗು ಪ್ರದೇಶ)ಗಳ ಮಂದಿಯ ಸಹಕಾರವೂ ಇತ್ತು. ಎಂಟು ದಿನಗಳ ಯುದ್ಧವದು. ಅಷ್ಟು ದಿನ ಸೆಣಸಿದ ಭಗದತ್ತನು ನಗುತ್ತಾ ದಣಿವರಿಯದ ಅರ್ಜುನನಿಗೆ ಹೇಳಿದನು: ಮಹಾಬಾಹೋ ಅರ್ಜುನ, ಸಂಗ್ರಾಮಕ್ಕೆ ಶೋಭೆ ನಿನ್ನ ಪರಾಕ್ರಮ. ಇಂದ್ರಪುತ್ರನೆನಿಸಿದ ನಿನಗೆ ಇದು ಒಪ್ಪುತ್ತದೆ ಬಿಡು! ನಾನು ಸಹ ಇಂದ್ರನ ಮಿತ್ರನೇ. ರಣದಲ್ಲಿ ಶಕ್ರನಿಗೆ ಏನೂ ಕಡಿಮೆಯಿಲ್ಲದವನು. ಆದರೂ ನಿನ್ನ ಮುಂದೆ ನಾ ನಿಲ್ಲಲಾರೆ. ಪಾಂಡುಪುತ್ರನೇ, ನಿನಗೇನು ಬೇಕು ಹೇಳು, ನಿನಗಾಗಿ ನಾನೇನನ್ನು ಮಾಡಲಿ ವತ್ಸನೇ? ನೀನೇನನ್ನು ಹೇಳುವೆಯೋ ಅದನ್ನು ಮಾಡುವೆ ಎಂದನು.

ಆಗ ಅರ್ಜುನನು ಹೇಳಿದನು, ಕುರುವಂಶದ ಅರಸರಲ್ಲಿ ಶ್ರೇಷ್ಠನಾದವನು ಧರ್ಮರಾಜನಾದ ಯುಧಿಷ್ಠಿರ. ಆತನು ಧರ್ಮಜ್ಞ, ಸತ್ಯಸಂಧ. ಆತನು ದೊಡ್ಡಯಜ್ಞವನ್ನು ಮಾಡಿ ವಿಪುಲವಾದ ದಕ್ಷಿಣೆಯನ್ನು ಕೊಡಲಿರುವನು. ಆತನು ಚಕ್ರವರ್ತಿಯಾಗಬೇಕೆಂಬುದು ನನ್ನ ಬಯಕೆ. ಆತನಿಗೆ ನೀನು ಕರವನ್ನೀಯಬೇಕೆಂಬುದೇ ನನ್ನ ಅಪೇಕ್ಷೆ. ನೀನು ನನ್ನ ತಂದೆಯ ಸಖ. ನನ್ನ ವಿಷಯದಲ್ಲೂ ಪ್ರೀತಿಯುಳ್ಳವನು. ಆದ್ದರಿಂದ ನಾನು ನಿನಗೆ ಅಪ್ಪಣೆ ಮಾಡಲಾರೆ. ಆದುದರಿಂದ ಪ್ರೀತಿಪೂರ್ವಕವಾಗಿಯೇ ಕರವನ್ನು ಕೊಡೋಣವಾಗಲಿ ಎಂದನು. ಅದಕ್ಕೆ ಭಗದತ್ತನು, ಕುಂತಿಪುತ್ರನೇ ನನಗೆ ನೀನೆಂತೊ ಅಂತೆಯೇ ಯುಧಿಷ್ಠಿರನೂ. ಅದೆಲ್ಲವನ್ನೂ ಮಾಡುತ್ತೇನೆ, ಹೇಳು ಎಂದನು. ಆತನು ಹಾಗೆ ಹೇಳಲು ಅರ್ಜುನನು, ಇಷ್ಟರಿಂದಲೇ ನನಗೆಲ್ಲವನ್ನೂ ನೀ ಮಾಡಿದಂತೆ. ನನಗೆ ಅನುಮತಿಯನ್ನು ಕೊಡು, ನಾನಿನ್ನು ಹೊರಡಬೇಕು ಎಂದನು.

ಹೀಗೆ ಅವನನ್ನು ಜಯಿಸಿ ಅರ್ಜುನನು ಉತ್ತರದಿಕ್ಕಿನಲ್ಲಿ ಮತ್ತೂ ಮುಂದುವರೆದನು. ಅಂತರ್ಗಿರಿ, ಬಹಿರ್ಗಿರಿ, ಉಪಗಿರಿ ಎಂಬ ಭೂಪ್ರದೇಶಗಳನ್ನು ಜಯಿಸಿದನು. ಅಲ್ಲಿದ್ದ ಪರ್ವತಗಳನ್ನೂ, ಪರ್ವತವಾಸಿಗಳನ್ನೂ ತನಗೆ ಅಧೀನರನ್ನಾಗಿ ಮಾಡಿಕೊಂಡು ಅವರಿಂದ ಮಾಡಬೇಕಾದ ವಸೂಲಿಯನ್ನು ಮಾಡಿದನು. ಹಾಗೆ ಮಾಡಿಯೂ ಅವರನ್ನು ಪ್ರಸನ್ನಗೊಳಿಸಿ, ಅವರೆಲ್ಲರೊಂದಿಗೆ ಮುಂದಿನ ರಾಜ್ಯವಾದ ಉಲೂಕದ ರಾಜನಾದ ಬೃಹಂತನ ಮೇಲೇರಿಹೋದನು. ಆತನು ಹೋಗುವಾಗ ಮೃದಂಗದ ನಾದವೇನು, ರಥನೇಮಿಯ ನಾದವೇನು, ಗಜಗಳ ಗದ್ದಲಗಳೇನು! ಇವೆಲ್ಲವುಗಳಿಂದ ಭೂಮಿಯೇ ನಡುಗಿತು.

ಹೀಗೊಂದು ಮಸಾಲೆಪುರಿ ಆರ್ಡರ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com



ನಿಮ್ಮಂತೆಯೇ ನಾನೂ 'ಒಂದು ಪ್ಲೇಟ್ ಮಸಾಲಾ ಪುರಿ' ಎಂದೆ ಅಷ್ಟೆ.

'ಸ್ವೀಟಾ, ಖಾರಾನಾ?'

'ಖಾರ ಇರಲಿ.'

'ಮೆಣಸಿನ ಖಾರವೋ, ಮೆಣಸಿನಕಾಯಿಯ ಖಾರವೋ?'

'ಮೆಣಸಿನಕಾಯಿಯದು.'

'ಹಸಿಮೆಣಸಿನಕಾಯಿಯದೋ, ಒಣಮೆಣಸಿನಕಾಯಿಯದೋ?'

ಒಂದು ಬದಲಾವಣೆ ಇರಲೆಂದು 'ಒಣಮೆಣಸಿನಕಾಯಿಯದು' ಎಂದೆ.

'ಗುಂಟೂರಿನದೋ, ಬ್ಯಾಡಗಿಯದೋ?'

'ಬ್ಯಾಡಗಿ.'

'ತೊಟ್ಟು ಬಿಡಿಸಿರುವುದೋ, ತೊಟ್ಟು ಇರುವುದೋ?'

'ಏನು ವ್ಯತ್ಯಾಸ?'

'ತೊಟ್ಟಿನ ಸಮೇತ ಇದ್ದರೆ ತಿನ್ನುವಾಗ ಗಂಟಲಿನಲ್ಲಿ ಸಿಕ್ಕಿಕೊಳ್ಳಬಹುದು.'

'ತೊಟ್ಟಿಲ್ಲದ್ದು.'

'ಜಜ್ಜಿದ್ದೋ, ಹೆಚ್ಚಿದ್ದೋ?'

'ಏನು ವ್ಯತ್ಯಾಸ?'

'ಹೆಚ್ಚಿದ್ದು ಹೆಚ್ಚಾದರೆ ಪಕ್ಕ ಇಡಬಹುದು. ಜಜ್ಜಿದ್ದು ತಿಂದೇ ಅನುಭವಿಸಬೇಕಾದದ್ದು.'

'ಹೆಚ್ಚಿದ್ದು.'

'ಹೆಚ್ಚಿದ್ದನ್ನು ಹುರಿದು ಕೊಡಲೋ, ಹಸಿಯಾಗಿ ಕೊಡಲೋ?'

ನನಗೆ ಆ ಮಾಣಿಯನ್ನು ಹುರಿದುಬಿಡುವಷ್ಟು ಕೋಪ ಉಕ್ಕಿತು. 'ಸ್ವಂತ ತೀರ್ಮಾನ ತೆಗೆದುಕೊಳ್ಳಲು ಆಗದೇನು?' ಎಂದು ಗುಡುಗಿದೆ.

'ನಮ್ಮಿಷ್ಟದಂತೆ ಕೊಡಲು ಇದು ರೋಡ್ ಸೈಡ್ ಚ್ಯಾಟ್ ಸ್ಟಾಲ್ ಅಲ್ಲ ಸಾರ್. ಫೈವ್ ಸ್ಟಾರ್ ಹೊಟೇಲ್' ಎಂದು ಎದೆಯುಬ್ಬಿಸಿದ. ಅವನು ತೊಟ್ಟಿದ್ದ ಸೂಟ್ ನನ್ನ ಮದುವೆಯ ಸೂಟ್‌ಗಿಂತ ಸುಪೀರಿಯರ್ ಕ್ವಾಲಿಟಿಯದಾಗಿತ್ತು. ಅವನ ಅಂಗಿಯ ಬಿಳುಪು ನಿರ್ಮಾ ಜಾಹೀರಾತಿನಿಂದ ಎತ್ತಿ ತಂದಂತಿತ್ತು. ಬಂದ ಗಿರಾಕಿಗಳೆಡೆಗೆ ಅವನು ಹರಿಸುತ್ತಿದ್ದ ನೋಟವು ಮೈಲಿಗೆಯನ್ನು ಕಂಡ ಮಡಿವಂತರ ನೋಟದಷ್ಟೇ ತೀವ್ರವಾಗಿತ್ತು.

'ಒಣಮೆಣಸಿನ ಬಾಬ್ತೇ ಬೇಡ. ಹಸಿಮೆಣಸಿನಕಾಯಿ ಹಾಕು' ಎಂದೆ.

'ಚಿಕ್ಕಬಳ್ಳಾಪುರದ್ದೋ, ವಿಯಟ್ನಾಂದೋ?'

ವಿಯಟ್ನಾಂ ಮೆಣಸಿನಕಾಯಿಯನ್ನು ಒಮ್ಮೆ ಆರಿಸಿಕೊಂಡಿದ್ದೆ. ಒಂದು ಪಾವು ರವೆಯ ಉಪ್ಪಿಟ್ಟಿಗೆ ಹದಿನೈದು ಮೆಣಸಿನಕಾಯಿಗಳೆಂದು ಬಾಲ್ಯದಲ್ಲಿ ನನ್ನ ಅಮ್ಮ ಹೇಳಿಕೊಟ್ಟಿದ್ದುದನ್ನು ಅನ್ವಯಿಸಿದ್ದೆ. ಕರುನಾಡಿನ ಮಾಮೂಲಿ 'ಅಹಿಂಸಾವಾದಿ' ಅಲ್ಪಖಾರಿಯ ಲೆಕ್ಕದಲ್ಲಿ ವಿಯಟ್ನಾಮಿಯನ್ನು ಹಾಕಿದ್ದು ತಪ್ಪಾಯಿತೆಂದು ಮೊದಲ ತುತ್ತಿನಲ್ಲೇ ತಿಳಿಯಿತು. ಆ ಖಾರದ ಉಗ್ರತೆಗೆ 'ಕಿವಿ ಮೂಗುಗಳಿಂದ ಹೊಗೆ ಹೊರಟಿತು' ಎಂದು ಕಂಡ ಮೂಲಗಳು ತಿಳಿಸಿದವು. ವಿದೇಶದಲ್ಲಿ ಅಷ್ಟು ಮೆಣಸಿನಕಾಯಿಗಳನ್ನು ಬಳಸಿ ಅಡುಗೆ ಮಾಡಿ, ಹಾಗೆ ದೇಹದಿಂದ ಹೊಗೆ ಹೊರಟರೆ ಫೈರ್ ಅಲಾರ್ಮ್ ಮೊಳಗುವುದೋ ಏನೋ.

'ಸ್ವದೇಶಿ ಮೆಣಸಿನಕಾಯಿಗೆ ಜೈ. ಸ್ಥಳೀಯರ ರೈತರಿಗೆ ಜಯವಾಗಲಿ' ಎಂದೆ. ಮಿರುಗುಸೂಟಿನವ ಸಮ್ಮತಿಸೂಚಕ ತಲೆಯಾಡಿಸಿ, 'ಉದ್ದದ್ದೋ, ಗಿಡ್ಡದ್ದೋ?' ಎಂದ.

'ಉದ್ದ ಮೆಣಸಿನಕಾಯಿಯನ್ನು ಸಕ್ಕರೆಯ ಬದಲಿಗೆ ಬಳಸಬಹುದು ಎನಿಸುತ್ತದೆ' ಎಂದಿದ್ದ ನನ್ನ ಆಂಧ್ರದ ಗೆಳೆಯ. ಚೋಟುದ್ದ ಮೆಣಸಿನಕಾಯಿಯ ಖಾರದ ಮುಂದೆ ಉದ್ದಮೆಣಸಿನಕಾಯಿಯದು ವೈಭವ್ ಸೂರ್ಯವಂಶಿಯ ಬ್ಯಾಟಿಂಗಿನ ಮುಂದೆ ಮಹಮದ್ ಸಿರಾಜನ ಬ್ಯಾಟಿಂಗಿನಷ್ಟೇ ಸಪ್ಪೆ.

'ಚೋಟ್ಮೆಣ್ಸಿನ್ಕಾಯಿ' ಎಂದೆ.

'ಗುಡ್ ಚಾಯ್ಸ್' ಎಂದ ನಿರ್ಮಾಂಗಿ, 'ಹೆಚ್ಚಿದ್ದೋ, ಚಚ್ಚಿದ್ದೋ?'

ನನಗೆ ಅವನ ಪ್ರಶ್ನೆಯ ವಿಧ ಇಷ್ಟವಾಯಿತು. ಬೇರೆಯವರಾದರೆ 'ಕಟ್ ಮಾಡಿದ್ದೋ, smash ಮಾಡಿದ್ದೋ?' ಎನ್ನುತ್ತಿದ್ದರು. ಬಡಪಾಯಿಗಳಿಗೆ Mash ಮತ್ತು Smash ಪದಗಳ ಅರ್ಥವ್ಯತ್ಯಾಸವೂ ತಿಳಿದಿರುವುದಿಲ್ಲ. 'ಆಲೂಗಡ್ಡೆಯನ್ನು smash ಮಾಡಿ' ಎನ್ನುವ ಟಿವಿ ರಸಪ್ರವೀಣೆಯರ ನುಡಿಯನ್ನು ಕೇಳಿದಾಗಲೆಲ್ಲ ಆಲೂಗಡ್ಡೆಯನ್ನು ತೆಗೆದುಕೊಂಡು ಅವರ ತಲೆಯ ಮೇಲೆಯೇ ಅಪ್ಪಳಿಸಬೇಕೆನಿಸಿದೆ. ಮ್ಯಾಷ್ ಮಾಡುವುದು ಎಂದರೆ ಗೆಡ್ಡೆಗಳನ್ನು ಒತ್ತಿ, ಹಿಸುಕಿ ಪೇಸ್ಟ್ ಮಟ್ಟಕ್ಕೆ ಮಾಡಿಕೊಳ್ಳುವುದು, ಸ್ಮ್ಯಾಷ್ ಮಾಡುವುದು ಎಂದರೆ ಭಾರವಾದ ವಸ್ತುವಿನಿಂದ ಜಜ್ಜಿ ಪುಡಿಪುಡಿ ಮಾಡುವುದು ಎಂದು ಈ ಮೊದ್ದುಗಿಣಿಗಳಿಗೆ ಅರ್ಥ ಮಾಡಿಸುವುದೂ ಕಷ್ಟವೇ.

'ಮಸಾಲೆಪುರಿಗೆ ಹಸಿರು ಬಟಾಣಿಯೋ, ಬಿಳಿ ಬಟಾಣಿಯೋ?'

ಬಿಳಿ ಬಟಾಣಿ ಎಂದರೆ ಕಾಬೂಲ್ ಕಡಲೆ ಅಥವಾ ಚೆನ್ನಾ. ಚೆನ್ನಾ ನನ್ನ ನಾಲಿಗೆಗೆ ಚೆನ್ನ ಎನಿಸಿಲ್ಲ. 'ಹಸಿರು ಕಡಲೆ' ಎಂದೆ.

'ಪೌಡರ್ ಕಟ್ಟಿದ ಹಸಿರು ಬಟಾಣಿಯೋ, ಸಹಜವಾಗಿ ಹಸಿರಾಗಿರುವುದೋ?'

'ಫೈವ್ ಸ್ಟಾರ್ ಹೊಟೇಲಿನಲ್ಲಿ ಒಣಗಿದ ಬಟಾಣಿಗೆ ಬಣ್ಣ ಕಟ್ಟಿ ಬಳಸುವರೇನು? ನಿಮ್ಮಲ್ಲೂ ಕಲಬೆರಕೆಯೆ?'

'ಇಲ್ಲ. ಆಪ್ಷನ್ ಕೊಟ್ಟೆನಷ್ಟೆ. ಪೌಡರ್ ಕಟ್ಟಿದ್ದನ್ನು ನೀವು ಕೇಳಿದ್ದಿದ್ದರೆ 'ವಿ ಆರ್ ಸಾರಿ ಸರ್. ವಿ ಡು ನಾಟ್ ಪ್ರೊವೈಡ್ ಸಚ್ ಲೋ ಕ್ವಾಲಿಟಿ ಸ್ಟಫ್' ಎನ್ನುತ್ತಿದ್ದೆ. ನಿಮ್ಮ ಆಯ್ಕೆ ಸೂಕ್ತವಾಗಿದೆ. ಅಭಿನಂದನೆಗಳು. ಬಟಾಣಿ ಪೂರ್ಣವಾಗಿ ಬೇಯಲೋ, ಅರ್ಧ ಬೇಯಲೋ?'

'ಹಾಫ್ ಬೇಕ್ಡ್' ಎಂದೆ. ಪೂರ್ಣವಾಗಿ ಬೆಂದರೆ ಸತ್ವಹೀನವಾಗುವುದೆಂಬ ಅಭಿಪ್ರಾಯವು ವೈರಲ್ ಆಗಿದೆಯಲ್ಲ!

'ಮೆಣಸಿನಕಾಯಿ ಆಯಿತು, ಬಟಾಣಿ ಆಯಿತು. ಈರುಳ್ಳಿ ಬೇಕೋ ಅಥವಾ ಜೈನ್ ಮಸಾಲೆಪುರಿಯೋ?'

ಈರುಳ್ಳಿಯನ್ನು ಹೆಚ್ಚುವಾಗ ಕಂಡಾಗ ನನಗೆ ಕಣ್ಣಲ್ಲಿ ನೀರು; ಅದರ ರುಚಿಯನ್ನು ನೆನೆದಾಗ ನಾಲಿಗೆಯಲ್ಲಿ ನೀರು. ಈರುಳ್ಳಿಯ ಮಧ್ಯಭಾಗದ 'ಫಾಟ್ ಸೆಕ್ಷನ್' ನನಗೆ ಬಹಳ ಇಷ್ಟ. ಆ ಫಾಟು ಕಣ್ಣಲ್ಲಿ ನೀರು ಬರಿಸುವಷ್ಟಿದ್ದರೆ ಮತ್ತೂ ಇಷ್ಟ.

'ಸೆಮಿ ಜೈನ್. ಬೆಳ್ಳುಳ್ಳಿ ಬೇಡ, ಈರುಳ್ಳಿ ಇರಲಿ.'

'ನಾವು ಬಳಸುವ ಪೇಸ್ಟಿನಲ್ಲಿ ಬೆಳ್ಳುಳ್ಳಿ ಇರತ್ತೆ.'

'ಪೇಸ್ಟ್ ಬಳಸುವುದನ್ನು ಹೇಳಬೇಡಿ. ತಿಳಿಯದೆ ಮಾಡಿದ ಪಾಪ ಪಾಪವಲ್ಲ' ಎಂದೆ.

'ಬೆಳ್ಳುಳ್ಳಿ ತಿನ್ನುವುದು ಪಾಪವೇನು?'

'ತಿಂದವರು ಬಾಯಿಬಿಟ್ಟಾಗ ಅವರಿಂದ ಹೊರಡುವ ಬಾಯ್ವಾಸನೆಗೆ ಹತ್ತಿರ ಸುಳಿದವರನ್ನು ಕಂಡು 'ಅಯ್ಯೋ ಪಾಪ!' ಎನಿಸುವುದಲ್ಲ, ಆ ವಿಧದಲ್ಲಿ ಪಾಪ!'

'ಈರುಳ್ಳಿಯ ವಾಸನೆ ಶ್ರೀಗಂಧದಂತಿರುವುದೇ? ಓಹ್! ಕ್ಷಮಿಸಿ. ಮಾಣಿಗಳು ಗಿರಾಕಿಗಳೊಡನೆ ವಾದ ಮಾಡುವಂತಿಲ್ಲ. ಮ್ಯಾನೇಜರ್‌ಗೆ ಹೇಳಬೇಡಿ ಪ್ಲೀಸ್!' ಗೋಗರೆದ ಗರಿಸೂಟಿನವ. ಮಾಣಿಯಾದರೇನು, ಸಾಫ್ಟ್‌ವೇರಿಯಾದರೇನು, ಜಾಬ್ ಇನ್‌ಸೆಕ್ಯುರಿಟಿ ಜಾತ್ಯತೀತ, ಉದ್ಯೋಗಾತೀತ.

'ಈರುಳ್ಳಿ ಯಾವುದಿರಲಿ? ಬಿಳಿಯದೋ, ಕೆಂಪಾದುದೋ?'

'ಬಿಳಿ ಈರುಳ್ಳಿ?'

'ಹೂಂ. ಫಾರಿನ್ ಪ್ರಾಡಕ್ಟ್.'

ನೆನಪಾಯಿತು. ಮೆಲ್ಬೋರ್ನಿನ ತರಕಾರಿ ಅಂಗಡಿಯಲ್ಲಿ ಬಿಳಿ, ಅರೆಬಿಳಿ, ಒರಟುಕೆಂಪು, ನುಣುಪುಕೆಂಪು ವಿಧದ ಈರುಳ್ಳಿಗಳನ್ನು ಕಂಡಿದ್ದೆ. ನಮ್ಮ ಕರ್ನಾಟಕದ ಈರುಳ್ಳಿಗಳ ರುಚಿಯ ಮುಂದೆ ಆ ನಾಲ್ಕನ್ನೂ ನಿವಾಳಿಸಿ ಎಸೆಯಬೇಕಾಗಿತ್ತು.

'ನಮ್ಮದೇ, ಅಸಲಿ ಕರ್ನಾಟಕದ್ದೇ, ಈರುಳ್ಳಿಯನ್ನು ಬಳಸಿರಿ. ರೆಡ್ ಈಸ್ ಬ್ಯೂಟಿಫುಲ್' ಎಂದೆ.

'ವೆರಿ ಟ್ರೂ ಸರ್' ಎಂದ ಅವನು ಹೊಟೇಲ್ ಲೇಬರ್ ಯೂನಿಯನ್ನಿನ ಸದಸ್ಯನೆಂದು ನಂತರ ತಿಳಿಯಿತು. ಕಮ್ಯುನಿಷ್ಟರಿಗೆ ಕೆಂಪು ಪ್ರಿಯವೇ.

'ಈರುಳ್ಳಿ ದೊಡ್ಡ ಗಾತ್ರದ್ದೋ, ಬಳ್ಳಾರಿ ಈರುಳ್ಳಿಯೋ?'

'ಹೆಚ್ಚಿಕೊಡುವಿರಲ್ಲ, ತರಿದ ಈರುಳ್ಳಿಯ ಒರಿಜಿನಲ್ ಗಾತ್ರ ಯಾವುದಿದ್ದರೂ ಒಂದೇ!'

'ಫೈವ್ ಸ್ಟಾರ್ ಹೊಟೇಲ್ಸ್ ಆರ್ ಸ್ಪೆಸಿಫಿಕ್ ಸರ್. ಪ್ರತಿಯೊಂದನ್ನೂ ವಿವರಿಸಿ, ಅರ್ಥಗೊಳಿಸಿಯೇ ಆರ್ಡರ್ ಪಡೆಯಬೇಕೆಂದು ಆರ್ಡರ್ ಆಗಿದೆ.'

'ಬಳ್ಳಾರಿ ಬೇಡ. ಮಾಮೂಲಿ ಸೈಜಿನದು.'

'ನಿಮಗೆ ಮಸಾಲೆಪುರಿಯನ್ನು ಕೊಡುವುದಕ್ಕೆ ಮುಂಚೆಯೂ ಒಂದು ಪ್ಲೇಟಿನಲ್ಲಿ ಈರುಳ್ಳಿ, ಸೌತೆಕಾಯಿಗಳನ್ನು ಕೊಡುತ್ತೇವೆ. ಅದು ನಮ್ಮ ಹೊಟೇಲಿನ ಪದ್ಧತಿ. ಆ ಈರುಳ್ಳಿಯನ್ನು ಶಂಖದಂತೆ ಹೆಚ್ಚಬೇಕೋ, ಚಕ್ರದಂತೆ ಹೆಚ್ಚಬೇಕೋ?'

'ಏನು ವ್ಯತ್ಯಾಸ?'

'ನೀವು ಪ್ರಗತಿಶೀಲರಾದರೆ ಚಕ್ರವನ್ನು ಆಯ್ಕೆ ಮಾಡಿ. ಯಾರು ಏನೇ ಮಾಡಿದರೂ ವಿರೋಧ ವ್ಯಕ್ತಪಡಿಸುವ ವ್ಯಕ್ತಿತ್ವದವರಾದರೆ ಶಂಖ ಹೊಡೆದುಕೊಳ್ಳುವುದನ್ನು ಪ್ರತಿಪಾದಿಸಲು ಶಂಖವನ್ನು ಆಯ್ಕೆ ಮಾಡಿ.'

ಮಿರುಗುಬೂಟಿನವ ಹೀಗೆಯೇ ಕೊತ್ತಂಬರಿ (ನಾಟಿಯೋ, ಫಾರಮ್ಮೋ), ಉಪ್ಪು(ರಾಕ್‌ಸಾಲ್ಟೋ, ಸೀಸಾಲ್ಟೋ; ಕಲ್ಲುಪ್ಪೋ, ಪುಡಿಯುಪ್ಪೋ), ಹುಳಿ(ನಿಂಬೆಯದೋ, ಹುಣಸೆಯದೋ; ಗಜನಿಂಬೆಯದೋ, ಪುಟ್ಟನಿಂಬೆಯದೋ) ಮೊದಲಾದ ವಿವರಗಳನ್ನು ಪಡೆಯುವ ಹೊತ್ತಿಗೆ ನನಗೆ ಸಾಕುಸಾಕಾಗಿತ್ತು.

ಕಡೆಗೂ ಆರ್ಡರ್ ಪಡೆದ ಮಾಣಿ 'ಷೆಫ್ಸ್ ಪ್ಯಾಲೇಸ್'ನತ್ತ ನಡೆದ. ರುಚಿರುಚಿಯಾದ ಮಸಾಲೆಪುರಿಯ ಕನಸು ಕಾಣುತ್ತಾ ನಾನು ಮೆತ್ತನೆಯ ಸೀಟಿಗೆ ಒರಗಿದೆ.

ಅರ್ಧಗಂಟೆಯ ನಂತರ ಮಾಣಿ ಅನೇಕ ಪುಟ್ಟ ಪ್ಲೇಟುಗಳನ್ನು ದೊಡ್ಡ ತಟ್ಟೆಯಲ್ಲಿ ಹಿಡಿದು ತಂದ. ಚೋಟ್ಮೆಣ್ಸಿನ್ಕಾಯಿ, ಪುಟ್ಟನಿಂಬೆ, ನಾಟಿಕೊತ್ತಂಬರಿ, ಬೆಂದ ಬಟಾಣಿ ಮೊದಲಾದ ಐಟಂಗಳನ್ನು ಹೊತ್ತ ಪ್ಲೇಟುಗಳು ನನ್ನ ಮೇಜಿನಷ್ಟು ಉದ್ದಗಲಕ್ಕೂ ಹರಡಿ ಕುಳಿತವು.

'ನಿಮಗೆ ಬೇಕಾದ ಪ್ರಮಾಣದಲ್ಲಿ ಮಿಕ್ಸ್ ಮಾಡಿಕೊಳ್ಳಿ ಸಾರ್. ಹ್ಯಾಪಿ ಈಟಿಂಗ್' ಎನ್ನುತ್ತಾ ಮರೆಯಾದ ಮಾಣಿ.

ನಾಯಿಗೊಂದು ಕಾಲ, ಜಿರಳೆಗೊಂದು ಕಾಲ

ವರ್ತಮಾನಕ್ಕಿಂತ ಹಳೆಯ ಇತಿಹಾಸ ತೆಗೆದು ಅದರ ಬಗ್ಗೆ ಹುಚ್ಚರಂತೆ ಪ್ರಶ್ನಿಸುವುದು, ನಮ್ಮವರ ಬಗ್ಗೆಯೇ ನಮಗೆ ನಕಾರಾತ್ಮಕತೆ ಭಾವನೆ ಮೂಡಿಸುವುದು ಹಲವರ ಉದ್ದೇಶ.

• ಪೃಥ್ವಿರಾಜ್ ಕುಲಕರ್ಣಿ



ಖ್ಯಾತ ಕವಿ ವಿಲಿಯಂ ಶೇಕ್‌ಪಿಯರ್ ತನ್ನ ಹಾಮ್ಲೆಟ್ ನಾಟಕದಲ್ಲಿ 'Every dog has its day' ಎಂಬ ಹೇಳಿಕೆಯಿಟ್ಟ. ನಂದೂ ಒಂದು ಸಮಯ ಬರುತ್ತೆ ಎಂಬ ಆತ್ಮವಿಶ್ವಾಸದಲ್ಲಿದ್ದ ಜನರ ಹೃದಯಕ್ಕೆ ಈ ಹೇಳಿಕೆ ಗಾಢವಾಗಿ ಅಂಟಿಕೊಂಡಿತು. ಜಗತ್ತಿನ ಯಾವುದೇ ಪ್ರಾಣಿಯಾಗಿರಲಿ, ಅದರದ್ದೂ ಒಂದು ಸಮಯ ಬರುತ್ತೆ. ಆಗ ಅದೂ ಮಿಂಚುತ್ತೆ ಎಂಬುದು ಇದರ ಅರ್ಥ. ಭಾರತದಲ್ಲಿ ಆಧುನಿಕ ಸಿನಿಮಾ ಬರಹಗಾರರು ಇದೇ ಹೇಳಿಕೆಯನ್ನು ಬದಲಾಯಿಸಿ 'ಹರ್ ಕುತ್ತೆ ಕಾ ದಿನ್ ಆತಾ ಹೆ' ಎಂಬ ಡೈಲಾಗ್ ಚಾಲ್ತಿಗೆ ತಂದರು. ಈಗಲೂ ನಾವು ನಮ್ಮ ಜೀವನದಲ್ಲಿ ಯಾರಾದರೂ ಅಪಮಾನ ಮಾಡಿದರೆ, ಅವರಿಗೆ 'ನಂದೂ ಸಮಯ ಬರುತ್ತೆ ಆಗಲೇ ಉತ್ತರಿಸುತ್ತೇನೆ' ಎಂದು ಹೇಳಿ ಬರುವ ವಾಡಿಕೆ ಇಟ್ಟುಕೊಂಡಿದ್ದೇವೆ.

ದೇಶದ ರಾಜಕಾರಣ ನೋಡಿದರೆ, ಇದೇ ಹೇಳಿಕೆ ನೆನಪಿಗೆ ಬರುತ್ತದೆ. ಎಲ್ಲರಿಗೂ ಒಂದು ಕಾಲವೆಂಬಂತೆ ಇಲ್ಲದ ಜನರ ಕಾಲ ಕೂಡಿ ಬರುತ್ತಿದೆ. ಒಂದು ಕಾಲದಲ್ಲಿ ರಾಜಕೀಯ ವಿಶ್ಲೇಷಣೆಗಾಗಿ ಜನರು ಖ್ಯಾತ ಪತ್ರಕರ್ತರ ಅಂಕಣಗಳಿಗಾಗಿ ಕಾಯುತ್ತಿದ್ದರು. ಆದರೆ ದುರದೃಷ್ಟವಶಾತ್ ಈಗಂತೂ ವಿದೇಶಿ ಯೂಟ್ಯೂಬರ್‌ಗಳು ಸೇರಿದಂತೆ ಖಾಲಿ ಕೂತ ಜನರಿಂದ ರಾಜಕೀಯ ವಿಶ್ಲೇಷಣೆ ಕೇಳುವ ಪರಿಸ್ಥಿತಿ ಭಾರತಕ್ಕೆ ಬಂದಿದೆ.

ಆಮ್ ಆದ್ಮಿ ಪಕ್ಷದಲ್ಲಿದ್ದು ವಿಫಲಗೊಂಡ ಅಭಿಜಿತ್ ದಿಪ್ಕೆ ಎಂಬ ಯುವಕ ದೇಶದಲ್ಲಿ ಸಂಚಲನ ಹುಟ್ಟುಹಾಕಿದ್ದು, ಜಿರಳೆ ಪಕ್ಷವೆಂಬ ನಾಟಕ ಕಂಪನಿ ಶುರು ಮಾಡಿದ್ದಾರೆ. ಪಕ್ಷ ಬಂದಿದ್ದೇ ತಡ ಸಾಮಾಜಿಕ ಜಾಲತಾಣದಲ್ಲಿ ಟ್ರೆಂಡಿಂಗ್. ಮಿಲಿಯನ್‌ಗಟ್ಟಲೇ ಹಿಂಬಾಲಕರು!

ವಾಸ್ತವವಾಗಿ ಸಾಮಾಜಿಕ ಜಾಲತಾಣದಿಂದ ಸಿಗುವ ಹಣದಿಂದ ಜೀವನ ನಡೆಸುವ ಜನರ ಸಂಖ್ಯೆ ನಮ್ಮ ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಹೆಚ್ಚಾಗುತ್ತಿರುವ ಸಂಖ್ಯೆ ಜಾಲತಾಣ ಮಾರುಕಟ್ಟೆಯಲ್ಲಿ ಬಾರೀ ಸ್ಪರ್ಧೆ ಹುಟ್ಟುಹಾಕುತ್ತಿದೆ. ಕಾಳಸಂತೆಯಂತೆ ಜಾಲತಾಣ ಮಾರುಕಟ್ಟೆಯಲ್ಲಿ ಎದ್ದು ಬರುವುದು ಸುಲಭದ ಕೆಲಸವೇನಲ್ಲ. ಅಲ್ಲಿ ಎದ್ದು ಬಂದರೆ ಸಾಕು ಬಂದವನಿಗೆ ಕಿಸೆತುಂಬ ದುಡ್ಡು, ಕಂಟೆಂಟ್ ತುಂಬ ಜಾಹೀರಾತುಗಳು ಸಿಗುತ್ತವೆ. ಕೆರಿಯರ್ ವಿಚಾರಕ್ಕೆ ಬಂದರೆ ಜೆನ್-ಝಿಗಳ ಜಾಲತಾಣ ಪ್ರೀತಿ ಅವರಿಗೆ ಜೀವನಕ್ಕೆ ಬೇಕಾದಷ್ಟು ದುಡ್ಡು ನೀಡುತ್ತದೆ. ಯೂಟ್ಯೂಬ್‌ನಂತಹ ಮಾಧ್ಯಮಗಳು ಗೋಲ್ಡನ್ ಪ್ಲೇಟ್, ಸಿಲ್ವರ್ ಪ್ಲೇಟ್ ಮತ್ತು ಡೈಮಂಡ್ ಪ್ಲೇಟ್ ಎಂಬ ದೊಡ್ಡ ಗೌರವಗಳನ್ನೂ ನೀಡುತ್ತವೆ. ಜಾಲತಾಣ ನೀಡುವ ಹತ್ತಾರು ಸೌಲಭ್ಯಗಳು ಇನ್‌ಫ್ಲುಯೆನ್ಸರ್‌ಗಳ ರಂಗೇರಿಸಿವೆ. ಪರಿಣಾಮ ನಮ್ಮ ದೇಶದ ಯುವಕರಿಗೆ ಇನ್‌ಫ್ಲುಯೆನ್ಸರ್ ಆಗುವ ಮದವೇರಿದೆ. ಯಾವ ಮಟ್ಟದಲ್ಲೆಂದರೆ ಸ್ವಂತ ದೇಶ, ಸ್ವಂತ ಧರ್ಮ ವಿರುದ್ಧ ಮಾತನಾಡುವಷ್ಟು, ಸುಳ್ಳುಗಳನ್ನು ಬೊಗಳುವಷ್ಟು, ಮತ್ತೊಬ್ಬರ ಪ್ರಯತ್ನಗಳಿಗೆ ಹೆಸರಿಡುವಷ್ಟು ಮತ್ತು ತಪ್ಪೆಂದು ಗೊತ್ತಿದ್ದರೂ ಮಾತನಾಡಿ ಬಳಿಕ ಕ್ಷಮೆ ಕೇಳುವಷ್ಟು!

ಜಿರಳೆ ಪಕ್ಷದಿಂದ ಆಗುತ್ತಿರುವ ಪಿತೂರಿಯೂ ಇದೆ. ಜಿರಳೆ ಪಕ್ಷ ಯಾವುದೋ ಹೋರಾಟಕ್ಕಾಗಿ ಹುಟ್ಟಿದ ಸಂಘಟನೆಯಲ್ಲ, ಅಥವಾ ಯುವಕರ ಏಳಿಗೆಗಾಗಿ ಹುಟ್ಟಿರುವ ಸಂಘಟನೆಯೂ ಅಲ್ಲ. ಬಾಯಿ ಚಟಕ್ಕೆ ಮಾತನಾಡಿ, ಜನರ ಗಮನ ಸೆಳೆಯಲು ಮಾಡಲಾಗಿರುವ ಒಂದು ಪ್ರಯೋಗ. ಒಬ್ಬ ವ್ಯಕ್ತಿ ಬಂದು ನಮ್ಮ ದೇಶದ ವ್ಯವಸ್ಥೆ ಬಗ್ಗೆ ಮಾತನಾಡುತ್ತಾನೆಂದರೆ ನಮ್ಮ ಜನರು ಸುಮ್ಮನೆ ಕೇಳುವುದಿಲ್ಲ. ಇಂತವರು ಮನೆಗೊಬ್ಬರು ಇರುತ್ತಾರೆ, ಜನರ ಚಿತ್ತ ಕದಿಯಬೇಕಾದಲ್ಲಿ ಒಂದೆರಡು ವಿವಾದಗಳನ್ನು ಮೈಗೆತ್ತಿಕೊಳ್ಳಬೇಕಾಗುತ್ತದೆ. ಒಂದಿಷ್ಟು ಕೇಸುಗಳನ್ನೂ ಜಡಿಸಿಕೊಳ್ಳಬೇಕಾಗುತ್ತದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಸನಾತನ ಧರ್ಮದ ವಿರುದ್ಧ ಹೋಗುವವರಿಗೆ ಮತ್ತು ಪ್ರಧಾನಿ ಮೋದಿ ವಿರುದ್ಧ ಮಾತನಾಡಿಬಿಟ್ಟರೆ ಅವರಿಗೆ ಎಲ್ಲಿಲ್ಲದ ಜನಪ್ರಿಯತೆ ಸಿಗುತ್ತದೆ. ಇದರ ಲಾಭ ಪಡೆಯಲು ಅದೊಂದು ಪಕ್ಷ ಯಶಸ್ವಿಯಾಗಿದ್ದು ಸುಳ್ಳೇನಲ್ಲ.

ಈ ಹಿಂದಿನಿಂದ ಇಂಥದ್ದೇ ವ್ಯಾಪಾರವೊಂದನ್ನು ಜರ್ಮನಿಯ ಧ್ರುವ್ ರಾಥಿ ಎಂಬ ಮೂರ್ಖ ಯೂಟ್ಯೂಬರ್ ಒಬ್ಬ ಮಾಡುತ್ತಿದ್ದಾನೆ. ಭಾರತ ಸರ್ಕಾರದ ವಿರುದ್ಧ ವಿಡಿಯೋಗಳನ್ನು ಮಾಡುವುದು, ಹಿಂದು ಧರ್ಮದ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವುದು, ಸೆಕ್ಯುಲರಿಸಂ ಹೆಸರಿನಲ್ಲಿ ಧರ್ಮಗಳ ನಡುವೆ ಜಗಳ ಹಚ್ಚುವುದು, ಭಾರತದ ಇತಿಹಾಸದ ಬಗ್ಗೆ ದೂರದ ಜರ್ಮನಿಯಲ್ಲಿ ಕೂತು ಪ್ರಶ್ನೆಗಳನ್ನು ಕೇಳುವುದು ಈತನ ವ್ಯಾಪಾರದ ಮೂಲ. ಬೇಕಂತಲೆ ವಿವಾದ ಜಾಡಿಸಿಕೊಂಡು ಜನರ ಬಾಯಲ್ಲಿದ್ದು ದುಡ್ಡು ಮಾಡಿಕೊಳ್ಳುವುದು ಈತನ ಮಾರ್ಕೆಟಿಂಗ್ ಸ್ಟ್ರ್ಯಾಟರ್ಜಿ. ಅದೇ ಸ್ಟ್ರ್ಯಾಟರ್ಜಿ ಅಭಿಷೇಕ್ ಬ್ಯಾನರ್ಜಿ ಎಂಬಾತ ಬಳಸಿ ಯಶಸ್ವಿಯಾದ.

ನಮ್ಮ ದೇಶದಲ್ಲಿ ಏನಾದರೂ ಒಂದು ಘಟನೆ ನಡೆದರೆ ಸಾಕು, ಅದು ಇಲ್ಲಿನ ಜೆನ್-ಝಿಗಳಿಗೆ ಕಿವಿಗೆ ಮುಟ್ಟಿ ಅದರ ಬಗ್ಗೆ ಅಭಿಪ್ರಾಯಗಳು ಹುಟ್ಟುವ ಮೊದಲೇ ಈತ ಅದರ ಮೇಲೆ ಇಲ್ಲದ್ದನ್ನೆಲ್ಲ ಸೇರಿಸಿ ವಿಡಿಯೋ ಮಾಡುತ್ತಾನೆ. ವರ್ತಮಾನದ ಬಗ್ಗೆ ಮಾತನಾಡುವುದಕ್ಕಿಂತ ಹಳೆಯ ಇತಿಹಾಸ ತೆಗೆದು ಅದರ ಬಗ್ಗೆ ಹುಚ್ಚರ ಹಾಗೆ ಪ್ರಶ್ನೆ ಕೇಳುವುದು, ನಮ್ಮವರ ಬಗ್ಗೆಯೇ ನಮಗೆ ನಕಾರಾತ್ಮಕತೆ ಭಾವನೆ ಮೂಡುವಂತೆ ಮಾಡುವುದು ಇದರ ಉದ್ದೇಶ. ಇದಕ್ಕಿಂತ ಮೊದಲು ಅಭಿಷೇಕ್ ಬ್ಯಾನರ್ಜಿ ಎಂಬ ಯೂಟ್ಯೂಬರ್ ಕೂಡ ಇದೇ ಕೆಲಸ ಮಾಡುತ್ತಿದ್ದ. ಈಗಲೂ ದೇಶದ ಕಾರ್ಯತಂತ್ರದ ಬಗ್ಗೆ ಪ್ರಶ್ನೆ ಮಾಡುವುದು ಇವರಿಬ್ಬರ ಕೆಲಸ.

ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಬಾಯಿಗೆ ಬಂದಂತೆ ಮಾತನಾಡುತ್ತವೆ. ರಾಜಕೀಯದಲ್ಲಿದ್ದವರು ಒಬ್ಬರಿಗೊಬ್ಬರ ವಿರುದ್ಧ ಮಾತನಾಡಿ ಕಾಲೆಳೆಯುತ್ತಾರೆ. ನಮ್ಮ ದೇಶದ ವಿಚಾರ ನಮ್ಮ ದೇಶದವರಿಗೆ ಬಿಟ್ಟದ್ದು, ವಿದೇಶಿ ಯೂಟ್ಯೂಬರ್‌ಗಳಿಗ್ಯಾಕೆ ಈ ಉಸಾಬರಿ? ಕಾಕ್ರೋಚ್ ಜನತಾ ಪಾರ್ಟಿ ಕೂಡ ಇದರ ಭಾಗ. ಜೆನ್-ಝಿಗಳಿಗೆ ಒಂದು ವಿಷಯದ ಬಗ್ಗೆ ತಿಳಿದುಕೊಂಡು ಅದರ ಬಗ್ಗೆ ಅಭಿಪ್ರಾಯ ಹುಟ್ಟಿಸಲು ಸಮಯವಿಲ್ಲ. ಒಂದು ವಿಷಯದ ಕುರಿತಂತೆ ತಿಳಿದುಕೊಳ್ಳಬೇಕೆಂಬ ಕುತೂಹಲ ಮೂಡಿದರೆ, ಅವರು ನೇರವಾಗಿ ಧ್ರುವ್ ರಾಥಿ ಅಂಥವರ ವಿಡಿಯೋ ಮೊರೆ ಹೋಗುತ್ತಾರೆ. ಜೆನ್-ಝಿಗಳಿಗೆ ರಾಜಕೀಯದಲ್ಲಿ ಆಸಕ್ತಿಯೂ ಕಡಿಮೆ. ನೇರವಾಗಿ ಮಾಧ್ಯಮೇತರ ವರದಿ ನೋಡುವದಕ್ಕಿಂತಲೂ ಅವರು, ಇಂಥಾ ಯೂಟ್ಯೂಬರ್‌ಗಳ ಮೊರೆ ಹೋಗುತ್ತಾರೆ. ಅದಕ್ಕೆ ಧ್ರುವ್ ರಾಥಿ, ಅಭಿಷೇಕ್ ಬ್ಯಾನರ್ಜಿ ಅಂಥವರಿಗೊಂದು ಕಾಲವಿತ್ತು.

ಈಗ ಜಿರಳೆ ಕಾಲ. ಈ ಹಿಂದೆ ನ್ಯಾಯಾಧೀಶರು ನುಡಿದ ಜಿರಳೆ ಎಂಬ ಹೇಳಿಕೆಯ ಲಾಭ ಪಡೆದ ಅಭಿಜಿತ್ ದಿಪ್ಕೆ ಎಂಬ ವ್ಯಕ್ತಿ ಕೂಡ ಅದನ್ನೇ ಮಾಡಿದ್ದು. ಮೊದಲಿಗೆ ಖಾತೆಯೊಂದನ್ನು ತೆರೆದ ಅಭಿಜಿತ್ ಕೇಂದ್ರ ಸರ್ಕಾರದ ವಿರುದ್ಧ ಮಾತನಾಡತೊಡಗಿದ. ಇಪ್ಪತ್ತೆಂಟು ಆಶ್ವಾಸನೆ ಕೊಟ್ಟ. ನಂತರ ಇತ್ತೀಚಿನ ವಿಡಿಯೋ ಒಂದರಲ್ಲಿ ಬಿಜೆಪಿಯನ್ನು ಅನ್‌ಫಾಲೋ ಮಾಡಲು ಹೇಳಿದ್ದಾನೆ. ದೇಶದಲ್ಲಿ ಯುವಕರ ನೌಕರಿಗಾಗಿ ಹೋರಾಟಗಳು ಆಗಬೇಕಿದೆ. ಆದರೆ ಅದು ಯಾರಿಂದ ಮತ್ತು ಹೇಗೆ ಆಗಬೇಕೆಂಬ ವಿಚಾರ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರ ನೌಕರಿ ಬಗ್ಗೆ ಮಾತುಗಳು ನಡೆದಿದ್ದವು. ದೇಶದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆ, ಯುವಕರಿಗೆ ನೌಕರಿಯೇ ಇಲ್ಲ ಎಂಬ ಮಾತು ವಿರೋಧ ಪಕ್ಷಗಳು ಹೇಳುತ್ತಾ ಬಂದವು. ಆದರೆ, ಈ ವಿಚಾರದ ಪಕ್ಕಾ ಲಾಭ ಪಡೆದವರೆ ಅಭಿಜಿತ್. ಆದರೆ ಇದು ಸಾಮಾಜಿಕ ಹೋರಾಟವೇ ಅಥವಾ ಸಾಮಾಜಿಕ ಜಾಲತಾಣ ಹೋರಾಟವೇ?

ವಾಸ್ತವವಾಗಿ ಜೆನ್-ಝಿಗಳು ಯಾವುದನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ, ಎಲ್ಲದರಲ್ಲೂ ಹಾಸ್ಯ ಹುಡುಕಲು ಯತ್ನಿಸುತ್ತಾರೆ. ಪ್ರಧಾನಿ ಮೋದಿ ಯಾವ ದೇಶಕ್ಕೆ ಹೋದರು, ಯಾವ ಒಪ್ಪಂದ ಮಾಡಿಕೊಂಡರು ಎಂಬ ವಿಚಾರ ಜಾಲತಾಣ ಪ್ರಿಯರಿಗೆ ಗೊತ್ತಿರುವುದೇ ಇಲ್ಲ, ಅವರಿಗೆ ಗೊತ್ತಿರುವುದು ಕೇವಲ ಮೆಲೋನಿ ಅವರೊಂದಿಗೆ ಮಾತನಾಡುವುದು, ಮೆಲೋಡಿ ಚಾಕಲೇಟ್ ಕೊಟ್ಟಿದ್ದು. ಇವೆಲ್ಲಾ ವಿಚಾರಗಳನ್ನು ಮೀಮ್, ಕಂಟೆಂಟ್ ಮತ್ತು ರೀಲ್ಸ್ ಮಾಡಲು ಬಳಸುತ್ತಾರೆ ಹೊರತು, ಈ ವಿಚಾರವನ್ನೂ ಜೆನ್-ಝಿಗಳು ಅಕ್ಷರಶಃ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಕಾಕ್ರೋಚ್ ಜನತಾ ಪಾರ್ಟಿ ವಿಚಾರದಲ್ಲೂ ಅದೇ ಆಗಿರಬಹುದು. ಕಂಟೆಂಟ್ ಹುಡುಕಾಟದಲ್ಲಿದ್ದವರೇ ಇದರ ಪ್ರಚಾರ ಮಾಡಿದ್ದು. ಮೀಮ್ ಪೇಜ್‌ಗಳೇ ಇದರ ಹವಾ ಮಾಡಿದ್ದು. ಕಾಕ್ರೋಚ್ ಎಂಬ ಹೆಸರು ವಿಭಿನ್ನವಾಗಿದ್ದು ಹಾಸ್ಯದ ಭಾಗವಾಗಿ ತೆಗೆದುಕೊಂಡಿರಬಹುದು. ಈ ನಡುವೆ ಇನ್ನೊಂದು ದೊಡ್ಡ ಕಾಕತಾಳಿಯಂದರೆ ಪಾಕಿಸ್ತಾನಿ ಹಿಂಬಾಲಕರು ಇರುವುದು. ಯೂಟ್ಯೂಬರ್ ಧ್ರುವ್ ರಾಥಿಗೂ ಅಲ್ಲಿಯವರೇ ಹಿಂಬಾಲಕರಿದ್ದಾರೆಂಬ ಆರೋಪಗಳಿದ್ದವು. ಆಪರೇಷನ್ ಸಿಂದೂರ ಸಮಯದಲ್ಲಿ ಭಾರತೀಯ ಯೂಟ್ಯೂಬರ್‌ಗಳನ್ನು ಬ್ಯಾನ್ ಮಾಡಿದ್ದ ಪಾಕ್, ರಾಥಿ ಚಾನಲ್ ಮಾತ್ರ ಹಾಗೇ ಬಿಟ್ಟಿತ್ತು. ಈಗಲೂ ಜಿರಳೆ ಪಕ್ಷಕ್ಕೆ ಪಾಕಿಸ್ತಾನ ಬೆಂಬಲ ಹೆಚ್ಚು ಎಂಬ ಆರೋಪವಿದೆ.

ಆಗೊಂದು ಕಾಲ, ಅದು ಧ್ರುವ್ ರಾಥಿಯದ್ದು. ಮುಂದೆ ಬಂದಂತೆ ಇಂಥಾ ಹತ್ತಾರು ಯೂಟ್ಯೂಬರ್‌ಗಳು ಬಂದರು. ಈಗ ಜಿರಳೆ ಪಕ್ಷ, ಇಂತಹ ಪಕ್ಷಗಳೂ ಬರುತ್ತವೆ. ಒಂದು ವೇಳೆ 'ಹರ್ ಕುತ್ತ ಕಾ ದಿನ್ ಆತಾ ಹೆ' ಎಂಬ ಹೇಳಿಕೆ ಬರೆದವರು ಏನಾದರೂ ಈಗ ಬರೆದಿದ್ದರೆ, 'ನಾಯಿಗೊಂದು ಕಾಲ, ಜಿರಳೆಗೊಂದು ಕಾಲ' ಎಂದು ಬರೆಯುತ್ತಿದ್ದರೇನೋ?

ರೂಬಿಯೋ ಭೇಟಿಯ ತಪ್ಪು ಸಂದೇಶಗಳು

• ಅರವಿಂದ ಶೆಣೈ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ಭೇಟಿ ನೀಡಿದ ಸಮಯ, ಸಂದರ್ಭ ನೋಡುವಾಗ ಅದರ ಹಿಂದಿನ ಉದ್ದೇಶ ಎಲ್ಲರಿಗೂ ಅರ್ಥವಾಗುವಂತದ್ದೆ. ಕಳೆದ ಒಂದೂವರೆ ವರ್ಷಗಳಿಂದ ಭಾರತ ಮತ್ತು ಅಮೆರಿಕಗಳ ಮಧ್ಯೆ ಹದಗೆಟ್ಟಿರುವ ಸಂಬಂಧವನ್ನು ಮತ್ತೆ ಸರಿದಾರಿಗೆ ತರಲೆತ್ನಿಸುವ ಸಲುವಾಗಿ ಬಂದಿದ್ದರೆಂಬುದು ಒಂದು ವಿಷಯವಾದರೆ, ಅದರ ಜತೆಗೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾಕ್ಕೆ ನೀಡಿದ ಭೇಟಿಯು ಅವರು ಅಪೇಕ್ಷಿಸಿದ ಫಲಿತಾಂಶ ನೀಡದ ಹಿನ್ನೆಲೆಯಲ್ಲಿ ಭಾರತವನ್ನು ಮತ್ತೆ ಓಲೈಸುವ ಪ್ರಯತ್ನವಾಗಿ ಬಂದಿದ್ದರೆಂಬುದು ಮತ್ತೊಂದು ವಿಷಯ. ಚೀನಾವು ಟ್ರಂಪ್ ಭೇಟಿಯ ವೇಳೆ ತಾನೇ ಬಲಿಷ್ಠ ಸ್ಥಾನದಲ್ಲಿದ್ದುಕೊಂಡು ವರ್ತಿಸಿತೇ ವಿನಹ ಅಮೆರಿಕದ ನಿಯಮಗಳಿಗೆ ಸೊಪ್ಪು ಹಾಕಲಿಲ್ಲ. ಉಳಿದೆಲ್ಲ ವಿಶ್ವನಾಯಕರ ಜತೆ ತಾನೇ ಮೇಲೆಂಬಂತೆ ವರ್ತಿಸುವ ಟ್ರಂಪ್ ಹಮ್ಮಿಗೆ ಕ್ಸಿ ಜಿನ್‌ಪಿಂಗ್ ಭೇಟಿಯಲ್ಲಿ ದೊಡ್ಡ ಪೆಟ್ಟು ಬಿತ್ತು ಎನ್ನುವುದೂ ಎಲ್ಲರಿಗೆ ತಿಳಿದಿದೆ. ಚೀನಾದಿಂದ ವ್ಯೂಹಾತ್ಮಕ ಹಿನ್ನಡೆ ಅನುಭವಿಸಿದಾಗಲೆಲ್ಲಾ ಅಮೆರಿಕವು ಭಾರತದತ್ತ ನೋಡುತ್ತದೆ ಎಂಬುದು ಈ ಮೊದಲೂ ಹಲವು ಬಾರಿ ಸಾಬೀತಾಗಿದೆ. ಇಂಡೋ-ಫೆಸಿಫಿಕ್ ವಲಯದ ವ್ಯೂಹಾತ್ಮಕ ರಣತಂತ್ರದಲ್ಲಿ ಸರ್ವಾಧಿಕಾರಿ ಚೀನಾದ ವಿರುದ್ಧ ಪ್ರಜಾತಾಂತ್ರಿಕ ರಾಷ್ಟ್ರವಾದ ಭಾರತವನ್ನು ಬಳಸಿಕೊಳ್ಳಬಹುದು ಎಂಬುದು ಅಮೆರಿಕಲಾಗಾಯ್ತಿನಿಂದ ಪಾಲಿಸಿಕೊಂಡು ಬಂದ ಧೋರಣೆ.

ಅಮೆರಿಕದ ಆಡಳಿತದ ಪಡಸಾಲೆಯಲ್ಲಿ ಕೂಡಾ ಭಾರತದೊಂದಿಗಿನ ಸಂಬಂಧ ಹದಗೆಡುತ್ತಿರುವ ಬಗ್ಗೆ ಆತಂಕವಿದೆ. ಟ್ರಂಪ್‌ರ ಅವಿವೇಕದ ತೆರಿಗೆ ಸಮರ, ಪಾಕಿಸ್ತಾನದ ಜತೆಗಿನ ಗೊಂದಲದ ನೀತಿ ಭಾರತದೊಂದಿಗಿನ ಸಂಬಂಧ ಕೆಡಲು ಕಾರಣವಾಗಿದೆ ಎಂದು ಅಧಿಕಾರಿಗಳಿಗೆ ಗೊತ್ತು. ಭಾರತದ ಜತೆ ಸಂಬಂಧ ಸುಧಾರಣೆಗೆ ದಶಕಗಳಿಂದ ನಡೆಸಿದ ಪ್ರಯತ್ನಗಳು ಈಗ ಒಮ್ಮೆಗೆ ವ್ಯರ್ಥವಾಗುತ್ತಿರುವುದು ಅವರ ನಿದ್ದೆ ಕೆಡಿಸಿದೆ. ಭಾರತವು ಅಮೆರಿಕಕ್ಕೆ ಕೇವಲ ಪಾಲುದಾರ ರಾಷ್ಟ್ರವಲ್ಲ, ಅದಕ್ಕಿಂತಲೂ ಮುಖ್ಯವಾಗಿ ಚೀನಾಕ್ಕೆ ಪ್ರತಿರೋಧ ಒಡ್ಡಬಲ್ಲ ಏಷ್ಯಾದ ಪ್ರಮುಖ ಶಕ್ತಿ ಎಂಬುದಾಗಿ ಅಮೆರಿಕದ ಆಡಳಿತಗಾರರು ಭಾವಿಸಿದ್ದಾರೆ. ಹಾಗಾಗಿ ರೂಬಿಯೋ ಭಾರತಕ್ಕೆ ಭೇಟಿ ನೀಡಿದ್ದು ಕೇವಲ ರಾಜತಾಂತ್ರಿಕ ಸಂದೇಶವಾಹಕರಾಗಿ ಮಾತ್ರವಲ್ಲ. ಅವರು ಭಾರತ-ಅಮೆರಿಕ ನಡುವಿನ ಸಂಬಂಧವನ್ನು ದುರಸ್ತಿ ಮಾಡುವ ಹೊಣೆ ಹೊತ್ತೂ ಬಂದಿದ್ದರು. ಆದರೆ ರಾಜತಾಂತ್ರಿಕತೆ ಎಂಬುದು ಕೇವಲ ಅಧಿಕೃತ ಮಾತುಕತೆಗಳು ಮತ್ತು ಜಂಟಿ ಹೇಳಿಕೆಗಳಿಂದ ಮಾತ್ರವೇ ನಿರ್ಣಯಿಸಲ್ಪಡುವುದಿಲ್ಲ. ಸಂಬಂಧಿತ ವ್ಯಕ್ತಿಗಳ ವರ್ತನೆ, ಅವರು ತೋರುವ ಕೆಲವು ಸಂಕೇತಗಳು, ಅವರು ತಮ್ಮ ಚರ್ಯೆದಿಂದ ರವಾನಿಸುವ ಸಂದೇಶಗಳೂ ಮಹತ್ವದ ಪಾತ್ರ ವಹಿಸುತ್ತವೆ.

ರೂಬಿಯೋ ಸೋತದ್ದು ಇಲ್ಲಿಯೆ. ಅವರು ಭಾರತ ಪ್ರವಾಸವನ್ನು ಆರಂಭಿಸಲು ಕೊಲ್ಕತ್ತಾದ ಮದರ್ ಥೆರೆಸಾ ಅವರ 'ಮಿಷನರೀಸ್ ಆಫ್ ಚಾರಿಟಿ'ಯನ್ನು ಆಯ್ದುಕೊಂಡುದೇ ವ್ಯತಿರಿಕ್ತ ಸಂದೇಶ ರವಾನಿಸಿತು. ಕ್ರೈಸ್ತ ಮತಾವಲಂಬಿಯಾದ ರೂಬಿಯೋ ಮೊತ್ತಮೊದಲಾಗಿ ಕ್ರೈಸ್ತ ಧಾರ್ಮಿಕ ಕೇಂದ್ರಕ್ಕೆ ಭೇಟಿ ನೀಡುವುದು ತಪ್ಪಲ್ಲವಾದರೂ ಅವರು ಮಿಷನರಿಸ್ ಆಫ್ ಚಾರೀಟಿಸ್ ಅನ್ನು ಆಯ್ದುಕೊಂಡುದು ಭಾರತದಲ್ಲಿ ತಪ್ಪು ಸಂದೇಶ ನೀಡುವ ಸಾಧ್ಯತೆ ಇದೆ. ಮಿಷನರಿಸ್ ಆಫ್ ಚಾರೀಟಿಸ್ ವಿವಾದಾಸ್ಪದ ಸಂಸ್ಥೆ. ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿರುವ ಕುರಿತು ರಾದ್ಧಾಂತವೆದ್ದಿದೆ. ಮತಾಂತರಕ್ಕಾಗಿ ವಿದೇಶಿ ನೆರವು ಪಡೆಯುತ್ತಿರುವ ಕುರಿತಂತೆ ಈ ಸಂಸ್ಥೆಯ ವಿರುದ್ಧ ವಿದೇಶೀ ಕೊಡುಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಅದರ ಪರವಾನಿಗೆಯನ್ನು 2021ರಲ್ಲಿ ರದ್ದುಪಡಿಸಲಾಗಿದೆ.

ಭಾರತವೀಗ ಬದಲಾಗಿದೆ ಎಂಬ ಸತ್ಯವನ್ನು ಅರಿತುಕೊಳ್ಳಲು ಅಮೆರಿಕವು ವಿಫಲವಾಗಿದೆಯೆನಿಸುತ್ತದೆ. 1980-90ರ ದಶಕದಲ್ಲಿ ಮದರ್ ಥೆರೆಸಾ ಅವರನ್ನು ವಿಸ್ಮಯದಿಂದ ಆರಾಧಿಸುತ್ತಿದ್ದುದು ನಿಜವಾದರೂ ಈಗ ಅಂತಹ ಭಾವ ಉಳಿದಿಲ್ಲ. ಸಾಮಾಜಿಕ ಜಾಲತಾಣದ ಈ ಕಾಲದಲ್ಲಿ ಮತ್ತು ಮಾಹಿತಿಯುಗದಲ್ಲಿ ಥೆರೆಸಾ ಅವರ ಕಾರ್ಯಗಳೂ ಪರಾಮರ್ಶೆಗೆ ಒಡ್ಡಲ್ಪಟ್ಟಿವೆ. ತಮ್ಮ ಕಾಲದ ಕೆಲವು ಕುಖ್ಯಾತ ಸರ್ವಾಧಿಕಾರಿಗಳೊಡನೆ ಆಕೆ ಹೊಂದಿದ್ದ ನಿಕಟ ಸಂಪರ್ಕ, ಮರಣೋನ್ಮುಖರಾದವರನ್ನು ಕೂಡಾ ಮತಾಂತರಗೊಳಿಸಲು ತೋರುತ್ತಿದ್ದ ಉತ್ಸುಕತೆ ಈಗ ಟೀಕೆಗೆ ಗುರಿಯಾಗುತ್ತಿವೆ. ಕ್ಯಾಥೊಲಿಕ್ ಆಗಿದ್ದ ಆಸ್ಟ್ರೇಲಿಯಾದ ಖ್ಯಾತ ಲೇಖಕಿ ಜರ್ಮೈನ್ ಗ್ರೀರ್ ಕೂಡಾ ಥೆರೆಸಾ ಅವರ ಕೆಲವು ನಿಲುವುಗಳನ್ನು ಟೀಕಿಸಿ ಬರೆದಿದ್ದಾರೆ. ಇಂತಿರುವಾಗ ರೂಬಿಯೋ ಅವರು ತಮ್ಮ ಭಾರತ ಭೇಟಿಯನ್ನು ಮಿಷನರೀಸ್ ಆಫ್ ಚಾರಿಟಿ ಮೂಲಕ ಆರಂಭಿಸಿ ತಪ್ಪು ನಡೆ ಪ್ರದರ್ಶಿಸಿದ್ದಾರೆ. ಭಾರತಕ್ಕೀಗ ಮಿಷನರಿಗಳ, ಅವರ ಮತಾಂತರದ ಅಗತ್ಯವಿಲ್ಲ. ಕೊಲ್ಕತಾ ಕೂಡಾ ಈಗ ಮಿಷನರಿಗಳನ್ನು ಆದರದ ಭಾವದಿಂದ ನೋಡುವುದಿಲ್ಲ. ಪಶ್ಚಿಮ ಬಂಗಾಳ ಕೂಡ ಈಗ ಬದಲಾಗಿದೆ.

ಅಮೆರಿಕದ ಸಮಸ್ಯೆಯೇನೆಂದರೆ ಅದು ಈಗಲೂ ಭಾರತವನ್ನು ತನ್ನ ದಶಕಗಳ ಹಿಂದಿನ ಕನ್ನಡಕದ ಮೂಲಕವೇ ನೋಡುತ್ತಿದೆ. ಅಮೆರಿಕದ ಆಡಳಿತದ ಒಂದು ವರ್ಗವು ಈಗಲೂ ಭಾರತ ವಿರೋಧಿ ಮಾನಸಿಕತೆಯನ್ನೆ ಹೊಂದಿದೆ. ಹಾಗಾಗಿಯೇ ಆಗಾಗ ಅಲ್ಲಿಂದ ಭಾರತ ವಿರೋಧಿ ಹೇಳಿಕೆಗಳು, ಭಾರತವನ್ನು ಅವಹೇಳನ ಮಾಡುವ ಮಾತುಗಳು ಹೊರಬೀಳುತ್ತಿರುತ್ತದೆ.

ಭಾರತದೊಡನೆ ಅಮೆರಿಕವು ಉತ್ತಮ ಸಂಬಂಧ ಬೆಳೆಸಲು ಬಯಸುವುದಾದರೆ, ತನ್ನ ಮುಖಂಡರು ಭಾರತಕ್ಕೆ ಭೇಟಿ ನೀಡುವಾಗ ಇಲ್ಲಿನ ಜನರ ಭಾವನೆಗೆ ಘಾಸಿಯಾಗದಂತೆ ವರ್ತಿಸುವಂತೆ ಸಲಹೆ ಸೂಚನೆಗಳನ್ನು ನೀಡುವುದೂ ಅಗತ್ಯವಾಗಿದೆ. ಅಮೆರಿಕನ್ ಮುಖಂಡರ ಭೇಟಿಯೇ ಪರಮ ಪಾವನ ಎಂದು ಭಾರತೀಯರು ಭಾವಿಸುವ ಕಾಲ ಸರಿದುಹೋಗಿದೆ. ಅಮೆರಿಕನ್ನರೂ ಈಗ ಭಾರತೀಯರ ಪರಾಮರ್ಶೆಗೆ ಒಳಪಡುತ್ತಿದ್ದಾರೆ.

ರೈತರ ಅಂಚೆ ಕಾರ್ಯಕ್ರಮಕ್ಕೆ ಕೆ.ಪ್ರಕಾಶ್ ಚಾಲನೆ

ಬೆಂಗಳೂರು: ಹಾಪ್‌ಕಾಮ್ಸ್ ಸಹಯೋಗದೊಂದಿಗೆ ಭಾರತೀಯ ಅಂಚೆ ಇಲಾಖೆ, ಪ್ರಸಕ್ತ ಸಾಲಿನಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಪಾರ್ಸೆಲ್ ಮೂಲಕ ಮಾವಿನ ಹಣ್ಣು ತಲುಪಿಸುವ ಸೇವೆ ರೈತರ ಅಂಚೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಗರದ ಜಿಪಿಒ ಮುಖ್ಯ ಅಂಚೆಪಾಲಕರ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮನೆಬಾಗಿಲಿಗೆ ಗುಣಮಟ್ಟದ ಮಾವಿನ ಹಣ್ಣು ತಲುಪಿಸುವ ಯೋಜನೆಗೆ, ಕರ್ನಾಟಕ ಅಂಚೆ ವಲಯದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಚಾಲನೆ ನೀಡಿ ಮಾತನಾಡಿ, ಮಾವು ಬೆಳೆಗಾರರೊಂದಿಗೆ ಬುಕ್ ನೌ ಪೇ ಲೇಟರ್ ಒಪ್ಪಂದದಡಿ ಪಾರ್ಸೆಲ್ ಸೇವೆ ಒದಗಿಸಲಾಗುತ್ತಿದೆ. ಇದರಿಂದ ರೈತರಿಗೆ ಉತ್ತಮ ಬೆಲೆ ದೊರೆಯುವ ಜತೆಗೆ ಗ್ರಾಹಕರಿಗೆ ತಾಜಾ ಮಾವಿನ ಹಣ್ಣು ಖರೀದಿಸಲು ಸಹಯವಾಗಲಿದೆ. ರೈತರು ತಲಾ 3ಕೆಜಿ ಮಾವಿನ ಹಣ್ಣು ಬಾಕ್ಸ್‌ನಲ್ಲಿ ಪ್ಯಾಕ್ ಮಾಡುತ್ತಾರೆ. ಪ್ಯಾಕ್ ಮಾಡಿದ ಮಾವಿನ ಹಣ್ಣನ್ನು ಅದೇ ದಿನ ಅಥವಾ ಮರು ದಿನದಂದು ಬುಕಿಂಗ್ ಮಾಡಿರುವ ಗ್ರಾಹಕರಿಗೆ ವಿತರಿಸಲಾಗುವುದು. ಬೆಂಗಳೂರು ನಗರ ಸೇರಿ ದೇಶದ ಆಯ್ದ ಸ್ಥಳಗಳಿಗೆ 24 ಗಂಟೆಯಲ್ಲಿ ಸ್ಪೀಡ್ ಸೇವೆಯಡಿ ಹಣ್ಣು ವಿತರಿಸುವ ಸೌಲಭ್ಯವಿದೆ. 2019ರ ಮಾರ್ಚ್‌ನಿಂದ 2025ರ ಜೂನ್‌ವರೆಗೆ 3,81,183 ಕೆಜಿ ಮಾವಿನ ಹಣ್ಣು ಅನ್ನು 1.13 ಲಕ್ಷದ ಪಾರ್ಸೆಲ್ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಿದ್ದೇವೆ ಎಂದರು. ರೇಷ್ಮೆ ಇಲಾಖೆ ಕಾರ್ಯದರ್ಶಿ ಆರ್.ಗಿರೀಶ್, ಬೆಂಗಳೂರು ಮುಖ್ಯಾಲಯ ಕ್ಷೇತ್ರದ ಅಂಚೆ ಸೇವೆಗಳ ನಿರ್ದೇಶಕಿ ವಿ.ತಾರಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ್, ಹಾಪ್‌ಕಾಮ್ಸ್ ಉಪಾಧ್ಯಕ್ಷ ನಾರಾಯಣಗೌಡ ಮತ್ತಿತರರಿದ್ದರು.




ರೈತರ ಅಂಚೆ ಎಂಬ ವಿಶಿಷ್ಟ ಆನ್‌ಲೈನ್ ವ್ಯಾಪಾರ

ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್.ಚಂದ್ರೇಗೌಡ ಮಾತನಾಡಿ, ಮೊದಲ ಬಾರಿಗೆ ಹಾಪ್‌ಕಾಮ್ಸ್ ನಿಂದ ರೈತರ ಅಂಚೆ ಎಂಬ ವಿಶಿಷ್ಟ ಆನ್‌ಲೈನ್ ವ್ಯಾಪಾರ ಸೇವೆ ಪರಿಚಯಿಸಿದ್ದೇವೆ. ಅಂಚೆ ಮೂಲಕ ಮಾವು ಸೇರಿ ಇತರೆ ವಿಶೇಷ ಹಣ್ಣುಗಳನ್ನು ಗ್ರಾಹಕರ ಮನೆಬಾಗಿಲಿಗೆ ತಲುಪಿಸುವ ವ್ಯವಸ್ಥೆ ಇದಾಗಿದೆ. ನೈಸರ್ಗಿಕವಾಗಿ ಮಾಗಿಸಿದ ಹಣ್ಣನ್ನು 3 ಕೆ.ಜಿ. ಹಾಗೂ 5 ಕೆ.ಜಿ. ಸಾಮರ್ಥ್ಯ ಬಾಕ್ಸ್‌ಗಳಲ್ಲಿ ಅಂಚೆ ಮೂಲಕ ಮಾವು ತರಿಸಿಕೊಳ್ಳಬಹುದು. ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲಿ ಹಾಪ್‌ಕಾಮ್ಸ್ ಮಳಿಗೆಗಳಿಲ್ಲ. ಆದ್ದರಿಂದ, ಗ್ರಾಹಕರಿಗೆ ತಾಜಾ ಹಣ್ಣುಗಳನ್ನು ಒದಗಿಸಲು ಈ ಸೇವೆಯನ್ನು ಆರಂಭಿಸಿದ್ದೇವೆ ಎಂದರು.

ಬುಕ್ ಮಾಡುವುದು ಹೇಗೆ?

ಆಸಕ್ತರು https://hopcomsbengaluru.com ಗೆ ಲಾಗಿನ್ ಆಗಿ ಹೆಸರು ನೋಂದಾಯಿಸಬೇಕು. (ಒಂದು ಬಾರಿ ನೋಂದಾಯಿಸಿದರೆ ಸಾಕು) ಬೇಕಾದ ಹಣ್ಣುಗಳನ್ನು ಆಯ್ಕೆ ಮಾಡಿ ಆನ್‌ಲೈನ್‌ನಲ್ಲಿ ಹಣ ಪಾವತಿಸಿ ಆರ್ಡರ್ ಮಾಡಿದರೆ, 24 ಗಂಟೆಗಳೊಳಗೆ ಅಂಚೆ ಸಿಬ್ಬಂದಿ ಮನೆ ಬಾಗಿಲಿಗೆ ತಲುಪಿಸುತ್ತಾರೆ.

ರಾಮ ಬಾಣ



ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ದೈವಾನುಗ್ರಹವಿದ್ದರೆ ಮಾತ್ರ ಬದುಕಿನಲ್ಲಿ ಸಾಧಿಸಲು, ಪಡೆಯಲು ಸಾಧ್ಯ
– ಭೀಮೇಶ್ವರ ಜೋಷಿ
– ಗದ್ದೆಯನ್ನು ಉತ್ತು ಬಿತ್ತಿ ಬೇಕಾದಷ್ಟು ಗೊಬ್ಬರ, ನೀರು ಹಾಕಿದರೂ ಬೆಳೆ ಬರಲು ದೈವಾನುಗ್ರಹ ಬೇಕು, ವ್ಯಾಪಾರಿ ರಾಶಿ ರಾಶಿ ಸರಕುಗಳನ್ನು ತಂದು ಅಂಗಡಿಯನ್ನು ತುಂಬಿದರೂ ಅದನ್ನು ಖರೀದಿಸುವ ಗಿರಾಕಿ ಬರಬೇಕಾದರೂ ದೈವಾನುಗ್ರಹವಿರಲೇ ಬೇಕು!

ದಿನ ಭವಿಷ್ಯ

ಮೇಷ
ನಿಮ್ಮ ಸುತ್ತ ಹರ್ಷದ ವಾತಾವರಣ. ಮನೆಯಲ್ಲಿ ಸಂಭ್ರಮ. ನೀವೂ ಭಾಗಿಯಾಗಿರಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ.

ವೃಷಭ
ನಿಮ್ಮ ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ. ಆರೋಗ್ಯ ಸಮಸ್ಯೆ ನಿವಾರಣೆ.

ಮಿಥುನ
ಕೌಟುಂಬಿಕ ವಿಚಾರ ಇತ್ಯರ್ಥಕ್ಕೇ ಈ ದಿನ ಮೀಸಲಾಗಲಿದೆ. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ.

ಕಟಕ
ನಿಮ್ಮ ಕಾರ್ಯಕ್ಕೆ ಅವಶ್ಯ ಬೆಂಬಲ ಲಭ್ಯ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಸಿಂಹ
ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕನ್ಯಾ
ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ತುಲಾ
ನೀವು ಬಯಸಿದ ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಂಬಂಧ ವೃದ್ಧಿಯ ಬೆಳವಣಿಗೆ ಸಂಭವ.

ವೃಶ್ಚಿಕ
ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಧನು
ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಮಕರ
ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ಕುಂಭ
ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ಮೀನ
ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 1,8,4,7

ಶಿವಕುಮಾರ್‌ಗೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ

ಡಿಕೆಶಿ ಪಕ್ಷ ನಿಷ್ಠೆ ಅಚಲ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ. ಶಿವಕುಮಾರ್



ಅವರಿಗೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆಸಲ್ಲಿಸಿದ್ದು, ನಿಮ್ಮ ನಿರಂತರ ಚೈತನ್ಯ, ಸಂಘಟನೆ ಸಾಮರ್ಥ್ಯ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಇರುವ ಅಚಲ ನಿಷ್ಠೆ ಯನ್ನು ನಾನು ಹತ್ತಿರದಿಂದ ಗಮನಿಸಿದ್ದೇನೆ. ಈ ಎಲ್ಲ ಗುಣಗಳು ರಾಜ್ಯದ ಜನರ ಹಿತಕ್ಕಾಗಿ ಅತ್ಯುತ್ತಮವಾಗಿ ಬಳಸಲ್ಪಡಲಿ ಎಂದು ಹಾರೈಸುತ್ತೇನೆ ಎಂದು ತಿಳಿಸಿದ್ದಾರೆ.

ಎಕ್ಸ್‌ನಲ್ಲಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿರುವ ಸಿದ್ದರಾಮಯ್ಯ ಅವರು, 8 ವರ್ಷದ ಅವಧಿಯಲ್ಲಿ ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಹಾಗೂ ಸ್ವಾಭಿಮಾನಿ ರಾಜ್ಯವನ್ನಾಗಿ ರೂಪಿಸಲು ಸಾಧ್ಯವಾದುದು ನನಗೆ ಹೆಮ್ಮೆಯ ವಿಷಯವಾಗಿದೆ. ಈ ಅಭಿವೃದ್ಧಿಯ ರಥವನ್ನು ಮುಂದುವರಿಸುವ ಹೊಣೆಗಾರಿಕೆ ಈಗ ನಿಮ್ಮ ಹೆಗಲ ಮೇಲೆ ಬಂದಿದೆ. ಅದನ್ನು ಸಮರ್ಥವಾಗಿ ಮುನ್ನಡೆಸಲು ಬೇಕಾದ ಸ್ಥೈರ್ಯ, ಸಾಮರ್ಥ್ಯ ಮತ್ತು ದೂರದೃಷ್ಟಿ ನಿಮ್ಮಲ್ಲಿದೆ ಎಂಬ ದೃಢ ನಂಬಿಕೆ ನನಗಿದೆ ಎಂದು ತಿಳಿಸಿದ್ದಾರೆ.

ದೇಶದ ಏಕತೆ, ಅಖಂಡತೆಯನ್ನು ಕಾಪಾಡಲು ಹಾಗೂ ಸಂವಿಧಾನದ ಗೌರವವನ್ನು ಉಳಿಸಲು ನಾವು ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾದ ಘಟ್ಟದಲ್ಲಿದ್ದೇವೆ. ಈ ಹೋರಾಟದಲ್ಲಿ ಕೇವಲ ವಿಧಾನಮಂಡಲ ಪಕ್ಷವಷ್ಟೇ ಅಲ್ಲ, ರಾಜ್ಯದ ಏಳು ಕೋಟಿ ಜನರೂ ನಿಮ್ಮೊಂದಿಗೆ ನಿಲ್ಲಲಿದ್ದಾರೆ. ನೀವು ಸದಾ ಯಶಸ್ಸನ್ನು ಸಾಧಿಸಲಿ ಎಂಬ ಹಾರೈಸಿದ್ದಾರೆ.

ಪ್ರಿಯ ಶಿವಕುಮಾರ್ ಅವರೇ, ಸಹೋದ್ಯೋಗಿಯಾಗಿ ಇಂದು ಕರ್ನಾಟಕವು ಕೇವಲ ಖಜಾನೆ ಹಾಗೂ ಆರ್ಥಿಕ ಬಲದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯವಷ್ಟೇ ಅಲ್ಲ, ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆಯಲ್ಲಿ ದೇಶಕ್ಕೆ ಮಾದರಿಯಾಗಿಯೂ ಹೊರಹೊಮ್ಮಿದೆ. ನಾವು ಜಾರಿಗೊಳಿಸಿರುವ ಪ್ರತಿಯೊಂದು ಜನಪರ ಯೋಜನೆಯೂ ಇತರ ರಾಜ್ಯಗಳಿಂದ ಮಾದರಿಯಾಗಿ ಸ್ವೀಕರಿಸಿ ಅನುಷ್ಠಾನಗೊಳ್ಳುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮಟ್ಟದಲ್ಲಿ ಕೆಲವು ರಾಜಕೀಯ ಹಿನ್ನಡೆಗಳನ್ನು ಎದುರಿಸಿದೆ. ಚುನಾವಣೆಯಲ್ಲಿ ನಾವು ಸೋಲಬಹುದು ಅಥವಾ ಗೆಲ್ಲಬಹುದು. ಆದರೆ ತಾತ್ವಿಕವಾಗಿ ನಾವು ಎಂದಿಗೂ ಸೋಲಬಾರದು. ಒಂದು ರಾಜಕೀಯ ಪಕ್ಷ ತಾತ್ವಿಕವಾಗಿ ಸೋತರೆ, ಆ ಪಕ್ಷವು ಚುನಾವಣೆಯಲ್ಲಿಯೂ ಗೆಲ್ಲಲು ಸಾಧ್ಯವಿಲ್ಲ ಹಾಗೂ ಕೊನೆಗೆ ನಾಶವಾಗುತ್ತದೆ ಎಂಬ ನಂಬಿಕೆ ನನ್ನದು ಎಂದು ತಿಳಿಸಿದರು.

ಡಿಕೆಶಿಗೆ ಅಭಿನಂದನೆ, ಸಿದ್ದುಗೆ ಧನ್ಯವಾದ ಹೇಳಿದ ಸುರ್ಜೇವಾಲ



ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ ಶಿವಕುಮಾರ್ ಅಭಿನಂದನೆ ಮತ್ತು ಸಿದ್ದರಾಮಯ್ಯ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ಡಿಕೆ ಶಿವಕುಮಾರ್ ಅವರು ಕರ್ನಾಟಕವನ್ನು ಸಮಗ್ರ ಅಭಿವೃದ್ಧಿ ಮತ್ತು ವೈಭವದ ಹೊಸ ಎತ್ತರಗಳಿಗೆ ಕೊಂಡೊಯ್ಯುವ ಮಹತ್ವಾಕಾಂಕ್ಷಿ ಕನಸನ್ನು ಹೊಂದಿದ್ದಾರೆ. ಅವರ ಎಲ್ಲಾ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ನಿರ್ವಹಿಸಿದ ಎಂಟು ವರ್ಷಗಳ ಅವಧಿ, ದೂರದೃಷ್ಟಿಯ ನಾಯಕತ್ವ, ಸಾಮಾಜಿಕ ನ್ಯಾಯದತ್ತ ಅಚಲ ಬದ್ಧತೆ ಹಾಗೂ ಜನಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಮಾನವಾಗಿ ಮುನ್ನಡೆಸಿದ ಸುವರ್ಣಯುಗವಾಗಿ ಸದಾ ನೆನಪಿನಲ್ಲಿ ಉಳಿಯಲಿದೆ ಎಂದು ಧನ್ಯವಾದ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಫಲಿತಾಂಶ: ಶೇ.98.08ಕ್ಕೆ ಏರಿಕೆ

ಬೆಂಗಳೂರು: 2026ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ(ಕೆಎಸ್‌ಇಎಬಿ) ಶನಿವಾರ ಪ್ರಕಟಿಸಿದ್ದು, ಶೇಕಡಾ 62.98ರಷ್ಟು ಫಲಿತಾಂಶ ದಾಖಲಾಗಿದ್ದು, ಇದರೊಂದಿಗೆ ಪರೀಕ್ಷೆ-1 ಮತ್ತು 2 ರ ಒಟ್ಟಾರೆ ಕ್ರೋಢೀಕೃತ ಫಲಿತಾಂಶವು ಶೇ. 98.08 ಕ್ಕೆ ಏರಿಕೆಯಾಗಿದೆ. 2025ರ ಸಾಲಿನ ಕ್ರೋಢೀಕೃತ ಫಲಿತಾಂಶಕ್ಕೆ (ಶೇ. 80.04) ಹೋಲಿಸಿದರೆ ಈ ಬಾರಿ ದಾಖಲೆಯ ಪ್ರಗತಿ ಕಂಡುಬಂದಿದೆ.

ರಾಜ್ಯಾದ್ಯಂತ ಮೇ 18 ರಿಂದ ಮೇ 25 ರವರೆಗೆ ಒಟ್ಟು 358 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ-2ನ್ನು ನಡೆಸಲಾಗಿತ್ತು. ಪರೀಕ್ಷೆ ಮುಗಿದು ಕೇವಲ ಮೂರೇ ದಿನಗಳಲ್ಲಿ ರಾಜ್ಯದ 8 ಶೈಕ್ಷಣಿಕ ಜಿಲ್ಲೆಗಳ 52 ಕೇಂದ್ರಗಳಲ್ಲಿ ಅತ್ಯಂತ ವೇಗವಾಗಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸಲಾಗಿದೆ. ಪರೀಕ್ಷೆ-2ಕ್ಕೆ ಒಟ್ಟು 49,351 ಶಾಲಾ ವಿದ್ಯಾರ್ಥಿಗಳು, 18,471 ಹೊಸ ವಿದ್ಯಾರ್ಥಿಗಳು, 32,740 ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 2,557 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1,03,119 ಅಭ್ಯರ್ಥಿಗಳು ಹಾಜರಾಗಿದ್ದರು.

ಪರೀಕ್ಷೆ-2 ಬರೆದ 49,351 ಶಾಲಾ ವಿದ್ಯಾರ್ಥಿಗಳಲ್ಲಿ 31,080 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆ-1, ಪರೀಕ್ಷೆ-2 ಎರಡನ್ನೂ ಸೇರಿಸಿ ರಾಜ್ಯದಲ್ಲಿ ಈ ವರ್ಷ ಒಟ್ಟು 8,18,956 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿದಂತಾಗಿದೆ. ಪರೀಕ್ಷೆ-2ರಲ್ಲಿ ಬಾಲಕರು ಉತ್ತಮ ಪ್ರದರ್ಶನ ನೀಡಿದ್ದು, ಪರೀಕ್ಷೆ ಬರೆದ 32,888 ಬಾಲಕರಲ್ಲಿ 20,815 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ. 63.29 ಫಲಿತಾಂಶ ದಾಖಲಿಸಿದ್ದಾರೆ. ಹಾಜರಾಗಿದ್ದ 16,463 ಬಾಲಕಿ ಯರಲ್ಲಿ 10,265 ವಿದ್ಯಾರ್ಥಿನಿಯರು ಪಾಸ್ ಆಗಿದ್ದು, ಶೇ.62.35 ಫಲಿತಾಂಶ ಪಡೆದಿದ್ದಾರೆ.

ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ-3 ಇಲ್ಲ

ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ-3 ನಡೆಸುವುದಿಲ್ಲ ಎಂದು ಶಿಕ್ಷಣ ಇಲಾಖೆ ಈಗಾಗಲೇ ಸ್ಪಷ್ಟಪಡಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಉತ್ತಮ ಫಲಿತಾಂಶ ಬಂದಿರುವ ಹಿನ್ನೆಲೆಯಲ್ಲಿ ಮೂರನೇ ಪರೀಕ್ಷೆ ನಡೆಸುವ ಅಗತ್ಯ ಇಲ್ಲವೆಂದು ಶಿಕ್ಷಣ ಸಚಿವರು ತಿಳಿಸಿದ್ದರು. ಅದರಂತೆ ವಿದ್ಯಾರ್ಥಿಗಳಿಗೆ ಈ ಬಾರಿ ಪರೀಕ್ಷೆ-2 ಕೊನೆಯ ಅವಕಾಶವಾಗಿತ್ತು.

ಮಹಿಳೆಯರಿಂದ ಕಾನೂನು ದುರ್ಬಳಕೆ: ಸುಪ್ರೀಂ ಆತಂಕ

ಪುಟ ೧➡ ಪತಿಯ ವಿರುದ್ಧ ಲೈಂಗಿಕ ಕಿರುಕುಳದ ಸುಳ್ಳು ಪೋಕ್ಸೊ ಕೇಸುಗಳನ್ನು ಮತ್ತು ಸ್ವಂತ ಅಪ್ರಾಪ್ತ ಮಗಳ ಮೇಲೆಯೇ ಪತಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂದು(ಮಗಳಿಂದ ಬಲವಂತವಾಗಿ ಕೇಸು ಕೊಡಿಸುವ) ಸುಳ್ಳು ಪ್ರಕರಣ ದಾಖಲಿಸುವಂತಹ ವೈಪರೀತ್ಯಗಳೂ ನಡೆಯುತ್ತಿರುವುದನ್ನು ನ್ಯಾಯಾಲಯ ಕಳವಳದಿಂದ ಉಲ್ಲೇಖಿಸಿದೆ.

ಇತ್ತೀಚಿನ ದಿನಗಳಲ್ಲಿ, ಸಂಬಂಧ ಹಳ ಸಿದ ಬಳಿಕ ಸಂಗಾತಿಯಿಂದ 'ವೈವಾಹಿಕ ಪುಷ್ಪ ಗುಚ್ಛ' ನೀಡಲಾಗುತ್ತಿದೆ ಎಂದು ನ್ಯಾ.ಬಿ.ವಿ. ನಾಗರತ್ನ ಮತ್ತು ನ್ಯಾ.ಉಜ್ವಲ್ ಭೂಯಾನ್ ಅವರನ್ನೊಳಗೊಂಡ ಪೀಠ ಮಾರ್ಮಿಕವಾಗಿ ವ್ಯಾಖ್ಯಾನಿಸಿದೆ. ಇಂತಹ ಕೇಸಿನ ಸೆಟ್‌ಗಳಲ್ಲಿ, ಮತ್ತೆ ಮತ್ತೆ ಬೋಗಸ್ ಹಾಗೂ ಹುಸಿ ಆರೋಪಗಳು, ದೌರ್ಜನ್ಯ, ಕ್ರೌರ್ಯ, ವೈವಾಹಿಕ ಬದುಕಿನ ಸಂಕಷ್ಟಗಳ ಕುರಿತಾದ ಸುಳ್ಳು ಹೇಳಿಕೆಗಳನ್ನು ಕಾಣಬಹುದಾಗಿದೆ. ಆದರೆ ಇವುಗಳಿಗೆ ಯಾವುದೇ ಸೂಕ್ತ ಆಧಾರ, ಸಾಕ್ಷ್ಯಗಳ ಬೆಂಬಲ ಕಂಡುಬರುವುದಿಲ್ಲ. ಇಂತಹ ನಕಲಿ ಪ್ರಕರಣಗಳ ಮೂಲಕ ನ್ಯಾಯಾಲಯಗಳನ್ನು ದುರುಪಯೋಗಪಡಿಸುವ ಮತ್ತು ನ್ಯಾಯಾಲಯಗಳಿಗೆ ಹೊರೆಯುಂಟು ಮಾಡುತ್ತಿರುವ ಬಗ್ಗೆ ನ್ಯಾಯಪೀಠ ನೋವಿನಿಂದ ಉಲ್ಲೇಖಿಸಿದೆ. ಈಗ ಕಾಳಿನಿಂದ ಜೊಳ್ಳನ್ನು ಬೇರ್ಪಡಿಸುವ ಕೆಲಸ ಆಗಬೇಕಿದೆ. ಇಂತಹ ಸುಳ್ಳು ಪ್ರಕರಣಗಳ ಹಾವಳಿಯಿಂದ ನಿಜವಾಗಿಯೂ ಅನ್ಯಾಯಕ್ಕೊಳಗಾದ ಮುಗ್ಧರನ್ನು ಸೋಲದಂತೆ ನೋಡಿಕೊಳ್ಳಬೇಕಿದೆ ಎಂದು ನ್ಯಾಯಾಲಯ ಕಳಕಳಿ ವ್ಯಕ್ತಪಡಿಸಿದೆ.

ಇಂತಹ ಯಾವುದೇ ತಪ್ಪು ಹೆಜ್ಜೆ ಸಂಬಂಧಿಸಿದವರ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಬೀಳಬಹುದಾದ ಹಾನಿಕಾರಕ ಪರಿಣಾಮ ಮತ್ತು ವಿವಾಹದ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವುದರಿಂದ ಇಂತಹ ಪ್ರಕರಣಗಳ ವಿಚಾರಣೆಯಲ್ಲಿ ನ್ಯಾಯಾಲಯಗಳು ಹೆಚ್ಚು ಸಂಯಮ ವಹಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಹೇಳಿತು.

ದಾಳಿ ಸಂಚು: 9 ಶಂಕಿತ ಉಗ್ರರ ಸೆರೆ

ಪುಟ ೧➡ ದಿಲ್ಲಿಯ ಪ್ರಮುಖ ಸೇನಾ ನೆಲೆಗಳು ಮತ್ತು ಭದ್ರತಾ ಸಿಬ್ಬಂದಿ ಮೇಲೆ ದಾಳಿ ನಡೆಸಲು ಯೋಜಿಸುತ್ತಿದ್ದ ಐಎಸ್‌ಐ-ಮುಂಬೈ ಭೂಗತ ಜಾಲಕ್ಕೆ ಸಂಬಂಧಿಸಿದ 9 ಶಂಕಿತ ಉಗ್ರರನ್ನು ಪೊಲೀಸರ ವಿಶೇಷ ಘಟಕ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಪ್ರಮುಖ ಸೇನಾ ನೆಲೆಗಳು ಮತ್ತು ಭದ್ರತಾಸಿಬ್ಬಂದಿಮೇಲೆದಾಳಿಮಾಡಲು ಅವರನ್ನು ನಿಯೋಜಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಶಂಕಿತ ಉಗ್ರರ ದಾಳಿ ಯೋಜನೆಯಲ್ಲಿ ಪರಮಾಣು ಸೌಲಭ್ಯಗಳು, ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ವಿದ್ಯುತ್ ಸ್ಥಾವರಗಳು ಇದ್ದವು ಎಂದು ಮೂಲಗಳು ತಿಳಿಸಿವೆ. ಕೆಲ ಸಮಯದಿಂದ ಈ ತಂಡ ಪೊಲೀಸ್ ಕಣ್ಗಾವಲಿನಲ್ಲಿ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಂಟ್ರಿ ಬಂದೂಕು ತಯಾರಿಸುತ್ತಿದ್ದ ಖದೀಮರ ಬಂಧನ

9 ಪಿಸ್ತೂಲ್ ವಶ: 13 ಆರೋಪಿಗಳ ಸೆರೆ

ಬೆಳಗಾವಿ: ಜಿಲ್ಲೆಯ ಖಾನಾಪೂರ ತಾಲೂಕಿನಲ್ಲಿ ಅಕ್ರಮವಾಗಿ ಕಂಟ್ರಿ ಪಿಸ್ತೂಲ್ ತಯಾರಿಸುತ್ತಿದ್ದ 13 ಆರೋಪಿಗಳನ್ನು ಬಂಧಿಸಿದ ಬೆಳಗಾವಿ ಪೊಲೀಸರು, ಆರೋಪಿಗಳಿಂದ 9 ಪಿಸ್ತೂಲ್ ಹಾಗೂ ಮದ್ದುಗುಂಡುಗಳು, ತಯಾರಿಕೆಗೆ ಉಪಯೋಗಿಸುತ್ತಿದ್ದ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಕೆ. ರಾಮರಾಜನ್ ಹೇಳಿದರು.



ಶನಿವಾರ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಖಾನಾಪೂರ ತಾಲೂಕಿನ ಕಾಟಗಾಳಿ ಗ್ರಾಮದಲ್ಲಿ 9 ಕಂಟ್ರಿ ಬಂದೂಕುಗಳ ಜಪ್ತಿ ಮಾಡಲಾಗಿದೆ. ಬಂದೂಕು ತಯಾರಿಸುತ್ತಿದ್ದವ, ಬಂದೂಕು ಖರೀದಿಸಿದವರು, ಅಕ್ರಮವಾಗಿ ಮದ್ದುಗುಂಡುಗಳನ್ನು ಮಾರಾಟ ಮಾಡಿದವರು ಮತ್ತು ಬಂದೂಕಿನ ಬ್ಯಾರೆಲ್‌ಗಳನ್ನು ವೆಲ್ಡಿಂಗ್ ಮಾಡಿಕೊಡುತ್ತಿದ್ದವನು ಸೇರಿ 13 ಜನರನ್ನು ಬಂಧಿಸಿದ್ದೇವೆ ಎಂದರು. ಆರೋಪಿ ಮಾರುತಿ ಶ್ರೀಕಾಂತ್ ಸುತಾರ ಇವನು ಕಾಟಗಾಳಿ ಗ್ರಾಮದಲ್ಲಿಯ ತನ್ನ ಮನೆಯಲ್ಲಿ ಅಕ್ರಮವಾಗಿ 2024ರಿಂದ ಈವರೆಗೆ ಕಂಟ್ರಿ ಬಂದೂಕುಗಳನ್ನು ತಯಾರಿಸಿ ಜನರಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಸಂಗ್ರಹಿಸಿ ದಾಳಿ ಮಾಡಲಾಗಿತ್ತು. ಸಿದ್ರಾಮ ಅಜ್ಜಪ್ಪ ಹಸರೆ ಖಾನಾಪೂರ ಪೊಲೀಸ್ ಠಾಣೆಯಲ್ಲಿ ಮೇ 11ರಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

ಆರೋಪಿ ಮಾರುತಿ ಶ್ರೀಕಾಂತ್ ಸುತಾರನನ್ನು ಬಂಧಿಸಿ ಆತನಿಂದ ತಯಾರಿ ಸ್ಥಿತಿಯಲ್ಲಿದ್ದ ಒಂದು ಕಂಟ್ರಿ ಬಂದೂಕು ಹಾಗೂ ಈ ಆರೋಪಿತನಿಂದ ಕಂಟ್ರಿ ಬಂದೂಕುಗಳನ್ನು ಖರೀದಿಸಿದ ಕಾಟಗಾಳಿ ಗ್ರಾಮದ ಸೋಮನಾಥ ಪಲ್ಲಾದ ಚೌಗುಲೆ, ಸಂತೋಷ ಶಿವಾಜಿ ನಾಯಕ, ಮಾರುತಿ ಯಲ್ಲಪ್ಪ ಗುಡದ್ಯಾಗೋಳ, ಬಾಳು ಭರಮಾಣಿ ನಾಯಕ ಮತ್ತು ಲಕ್ಷ್ಮಣ ಬಾಲಪ್ಪ ಗುಜನಾಳ, ಬಸವರಾಜ ಗಂಗಪ್ಪ ಸಾಲೋಟಗಿ, ಬಸವಂತ ಭರಮಾಣಿ ಯರಮಾಳಕರ, ಲಕ್ಷ್ಯ್ಮಲ ಈಶ್ವರ ಗುರವ ಇವರ ಕಡೆಯಿಂದ ತಲಾ ಒಂದರಂತೆ 8 ಕಂಟ್ರಿ ಬಂದೂಕುಗಳನ್ನು ಜಪ್ತ ಮಾಡಲಾಗಿದೆ.

ಹೆಚ್ಚುವರಿ ಎಸ್.ಪಿ ಮಾರ್ಗದರ್ಶನ ಮತ್ತು ಡಿಎಸ್‌ಪಿ ಬೈಲಹೊಂಗಲ ಇವರ ನೇತೃತ್ವದಲ್ಲಿ ಎಲ್.ಎಚ್ ಗೌಂಡಿ, ಪಿ.ಐ.ಖಾನಾಪೂರ, ಠಾಣಾಧಿಕಾರಿ, ಸಿಬ್ಬಂದಿಗಳೊಂದಿಗೆ ತನಿಖೆ ಕೈಕೊಂಡು ಆರೋಪಿತರಿಗೆ, ಕಂಟ್ರಿ ಬಂದೂಕುಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಶ್ಲಾಘಿಸಿದರು.

ಗೊಂದಲದಲ್ಲಿ ಡಿಕೆಶಿ ಇನ್ನಿಂಗ್ಸ್: ಸಂಸದ ಬೊಮ್ಮಾಯಿ

ಬೆಂಗಳೂರು: ಡಿ.ಕೆ. ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ರಾಜ್ಯದ ಜನತೆ ಈಗಾಗಲೇ ಈ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಅವರಿಗೆ ಅವಕಾಶ ಬಂದಾಗ ಈ ಸರ್ಕಾರವನ್ನು ಕಿತ್ತೊಗೆಯಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿನ ನಾಯಕತ್ವ ಬದಲಾವಣೆ ರಾಜ್ಯದ ಆಡಳಿತದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ ಇದು ಕಾಂಗ್ರೆಸ್ ದುರಾಡಳಿತದ ಮುಂದುವರೆದ ಭಾಗ. ರಾಜ್ಯದ ಆರ್ಥಿಕತೆಯ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಹಾನಿ ಮಾಡಲಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ ಆಗಿದ್ದು, ವ್ಯವಸ್ಥೆಯನ್ನು ಸುಧಾರಿಸಲು ಡಿ.ಕೆ. ಶಿವಕುಮಾರ್ ಅವರಿಗೆ ಸಮಯ ಸಿಗುತ್ತದೆಯೊ ಇಲ್ಲವೊ ಗೊತ್ತಿಲ್ಲ ಎಂದರು.

ಸಂಪುಟ ರಚನೆಯ ಕಸರತ್ತಿನಲ್ಲಿ ಆಂತರಿಕ ಭಿನ್ನಮತ ಹೊರಬರುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡದಿರುವುದರಿಂದ ಒಬಿಸಿ, ಎಸ್ಸಿ-ಎಸ್ಟಿ ಸಮುದಾಯದವರು ಅಸಮಾಧಾನಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಡಿ.ಕೆ. ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ಕರ್ನಾಟಕದ ಜನತೆ ಈಗಾಗಲೇ ಈ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದರು. ಹೊಸ ಸಂಪುಟ ಸೇರಲು ಪ್ರಥಮಬಾರಿ ಆಯ್ಕೆಯಾದವರಿಂದ ಹಿಡಿದು ಐದಾರು ಬಾರಿ ಆಯ್ಕೆಯಾದವರೂ ಲಾಬಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರು ಸ್ಥಾನ ಬಿಟ್ಟು ಕೊಡಲು ಸಿದ್ಧರಿಲ್ಲ ಎಂದರು.

ಬಿರುಗಾಳಿ ಮಳೆಗೆ ನೆಲಕ್ಕುರುಳಿದ ಮರಗಳು

ಚಿಕ್ಕಮಗಳೂರು: ಶುಕ್ರವಾರ ತಡರಾತ್ರಿ ಸುರಿದ ಭಾರೀ ಬಿರುಗಾಳಿ ಮಳೆಯಿಂದಾಗಿ ನಗರದ ವಿವಿಧೆಡೆ ಸರಣಿ ಆಸ್ತಿ ಪಾಸ್ತಿಗೆ ಸಾಕಷ್ಟು ಹಾನಿ ಸಂಭವಿಸಿದೆ. ರಾತ್ರಿ 12.45 ರ ಸುಮಾರಿಗೆ ಬಿರುಗಾಳಿ, ಗುಡುಗು, ಸಿಡಿಲಿನೊಂದಿಗೆ ಮಳೆಯ ಆರ್ಭಟ ಆರಂಭವಾಯಿತು. ಸುಮಾರು ಒಂದೂವರೆ ಗಂಟೆ ಕಾಲ ಗಾಳಿ, ಮಳೆಯ ಅಬ್ಬರ ಮುಂದುವರಿದ ಪರಿಣಾಮ 20 ಹೆಚ್ಚು ವಿದ್ಯುತ್ ಕಂಬಗಳು, ಹತ್ತಾರು ಮರಗಳು ಬುಡಮೇಲಾದವು. ಹೈಟೆನ್ಶನ್ ವಿದ್ಯುತ್ ಲೈನ್‌ಗಳ ಮೇಲೆ ಭಾರೀ ಗಾತ್ರದ ಮರಗಳು ಉರುಳಿಬಿದ್ದ ಪರಿಣಾಮ ಒತ್ತಡ ತಡೆದು ಕೊಳ್ಳಲಾಗದೆ ಸಾಲು ಸಾಲಾಗಿ ವಿದ್ಯುತ್ ಕಂಬಗಳು ಉರುಳಿ ಬೀಳುವಂತಾಯಿತು. ಕ್ಲಬ್ ಆವರಣದಲ್ಲಿ ನಾಲ್ಕೈದು ಮರಗಳು ಉರುಳಿಬಿದ್ದಿದ್ದು, ಈ ಪೈಕಿ ಒಂದು ಬೃಹತ್ ಮರ ಕಾಂಪೌಡ್ ಪಕ್ಕದ ರಸ್ತೆ ಬದಿ ಹಾದು ಹೋಗಿದ್ದ ವಿದ್ಯುತ್ ಲೈನ್ ಮೇಲೆ ಬಿದ್ದ ಪರಿಣಾಮ 8 ವಿದ್ಯುತ್ ಕಂಬಗಳು, ಬೇಲೂರು ರಸ್ತೆಯಲ್ಲಿ 4 ಮರಗಳು ವಿದ್ಯುತ್‌ಲೈನ್ ಮೇಲೆ ಬಿದ್ದು ಕಂಬಗಳಿಗೆ ಹಾನಿ ಸಂಭವಿಸಿದೆ.

ಬುಧವಾರ ಡಿಕೆಶಿ ಪ್ರಮಾಣವಚನ

ಪುಟ ೧➡ ಡಿಕೆಶಿ ಅವರ ಸಂಘಟನಾ ಶಕ್ತಿ ಮತ್ತು ಪಕ್ಷಕ್ಕೆ ಅವರು ನೀಡಿದ ಕೊಡುಗೆ ಪರಿಗಣಿಸಿ ಎಐಸಿಸಿ ನಾಯಕತ್ವ ಅವರ ಹೆಸರನ್ನು ಸೂಚಿಸಿತ್ತು. ಶನಿವಾರ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಅವರು ಈ ಹೆಸರನ್ನು ಅಧಿಕೃತವಾಗಿ ಮಂಡಿಸುವ ಮೂಲಕ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ಚಾಲನೆ ನೀಡಿದರು. ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಶಾಸಕರಿಗೆ ಮತ್ತು ಹಿರಿಯ ನಾಯಕ ಸಿದ್ದರಾಮಯ್ಯ ಅವರಿಗೆ ಡಿ.ಕೆ. ಶಿವಕುಮಾರ್ ಅವರು ಈ ಸಂದರ್ಭದಲ್ಲಿ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.

ಆಪರೇಷನ್ ಸಿಂದೂರ್ 2.0ಗೆ ಸಿದ್ಧ

ಪುಟ ೧➡ **ಯುದ್ಧ ಭೂಮಿ ಪಾರದರ್ಶಕ:** ನಾವು ಕಳೆದ ಕೆಲವು ವರ್ಷಗಳಲ್ಲಿ 24/7ನ್ನು ನೋಡಿದ್ದೇವೆ. ಯುದ್ಧಭೂಮಿಯು ಎಷ್ಟು ಪಾರದರ್ಶಕವಾಗಿದೆಯೆಂದರೆ ಪ್ರತಿ ಚಲನೆಯೂ ಇನ್ನೊಂದು ಬದಿಗೆ ತಿಳಿದಿದೆ. ಆದ್ದರಿಂದ, ನಮ್ಮ ನಿಯೋಜನೆಯ ವಿಷಯದಲ್ಲಿ, ನಮ್ಮ ಉದ್ಯೋಗದ ವಿಷಯದಲ್ಲಿ ಮತ್ತು ನಮ್ಮ ಪಡೆಗಳನ್ನು ಮತ್ತು ಗಡಿ ಪ್ರದೇಶಗಳಲ್ಲಿನ ನಾಗರಿಕರನ್ನು ರಕ್ಷಿಸಲು ಅಗತ್ಯವಿರುವ ರಕ್ಷಣೆಯ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿರಬೇಕು ಎಂದು ಹೇಳಿದರು.

ಶೇ.96.5 ಮನೆಗಳಿಗೆ ಶುದ್ಧ ನೀರು

ಪುಟ ೧➡ ಇದು ನಗರ ಪ್ರದೇಶದಲ್ಲಿ ಶೇ.18.2 ಆಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ.19.1ರಷ್ಟಾಗಿದೆ. 2021ರ ಸಮೀಕ್ಷೆಯಲ್ಲಿದು ಶೇ.14ರಷ್ಟು ಮಾತ್ರ ಇತ್ತು.

ಗೃಹ ಹಿಂಸೆ ಶೇ.22ಕ್ಕೆ ಇಳಿಕೆ: ಮಹಿಳೆಯರಲ್ಲಿ ಬೊಜ್ಜಿನ ಸಮಸ್ಯೆ 2019-21ಕ್ಕೆ ಹೋಲಿಸಿದರೆ ಶೇ.7ರಷ್ಟು ಹೆಚ್ಚಿರುವ ಅಂಶ ವ್ಯಕ್ತವಾಗಿದೆ. ಇದೇ ವೇಳೆ ಕೌಟುಂಬಿಕ ಹಿಂಸೆ ಪ್ರಕರಣಗಳು ಶೇ.29.2ರಿಂದ ಶೇ.22.3ಕ್ಕೆ ಇಳಿಕೆಯಾಗಿದೆ. ಬಾಲ್ಯ ವಿವಾಹ ಪ್ರಮಾಣ ಕೂಡ ಶೇ.23.3ರಿಂದ ಶೇ.20.1ಕ್ಕೆ ಇಳಿಕೆಯಾಗಿದ್ದು, ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಶೇ.25.4ರಿಂದ ಶೇ.30.8ಕ್ಕೆ ಗಣನೀಯವಾಗಿ ಏರಿಕೆಯಾಗಿರುವುದು ಕಂಡುಬಂದಿದೆ.

ದೇಶದ 715 ಜಿಲ್ಲೆಗಳಲ್ಲಿನ ಸುಮಾರು 6.79 ಲಕ್ಷ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದ್ದು, ಜನಸಂಖ್ಯೆ, ಆರೋಗ್ಯ, ಪೌಷ್ಟಿಕತೆ ಮತ್ತು ಕುಟುಂಬ ಕಲ್ಯಾಣದ ಅಂಶಗಳನ್ನು ಈ ಸಮೀಕ್ಷೆ ಹೊರಹಾಕಿದೆ.

ಸಿಸೇರಿಯನ್ ಹೆರಿಗೆ ತೀವ್ರ ಹೆಚ್ಚಳ: ಈ ನಡುವೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗಳು ದಾಖಲೆಯ ಶೇ.54.1ಕ್ಕೇರಿದ್ದರೆ, ಮೊದಲ ಆರು ತಿಂಗಳ ಕಾಲ ಪ್ರತ್ಯೇಕವಾಗಿ ಹಾಲುಣಿಸುವ ಪ್ರಮಾಣ ಶೇ.63.7ರಿಂದ ಶೇ.55.8ಕ್ಕೆ ಇಳಿದಿದೆ. ಆದರೆ ಮಾತ್ರೆ, ಕಾಂಡೋಮ್, ಸಂತಾನಹರಣದಂತಹ ಆಧುನಿಕ ಕುಟುಂಬ ಯೋಜನಾ ವಿಧಾನಗಳನ್ನು ಬಳಸುವವರ ಪ್ರಮಾಣ ಶೇ.56.4ರಿಂದ ಶೇ.52.7ಕ್ಕೆ ಇಳಿದಿದೆ.

2021ರ ಸಮೀಕ್ಷೆಯಲ್ಲಿ ಪೌಷ್ಟಿಕತೆ ಕೊರತೆಯ ಮಕ್ಕಳಲ್ಲಿ ಬೆಳವಣಿಗೆ ಕುಂಠಿತ ಪ್ರಮಾಣ ಶೇ.35.5ರಷ್ಟಿತ್ತು. ಅದೀಗ ಶೇ.29.3ಕ್ಕಿಳಿದಿದೆ. ಮಕ್ಕಳಲ್ಲಿ ಎತ್ತರದ ಪ್ರಮಾಣ ಶೇ.6.2ಕ್ಕೆ ಸುಧಾರಣೆಯಾಗಿದ್ದು, ಇದೊಂದು ಧನಾತ್ಮಕ ಬೆಳವಣಿಗೆ ಎನಿಸಿದೆ. 6ರಿಂದ 2ವರ್ಷ ನಡುವಣ ಮಕ್ಕಳಿಗೆ ಸೂಕ್ತ ಮತ್ತು ಸಮತೋಲಿತ ಪೌಷ್ಟಿಕಾಂಶ ಲಭ್ಯತೆಯು ಶೇ.15.3ರಷ್ಟು ಮಾತ್ರ ಇದ್ದು, ಶೇ.85ರಷ್ಟು ಮಂದಿಗೆ ಇನ್ನೂ ಅಗತ್ಯ ಪೌಷ್ಟಿಕಾಂಶಯುಕ್ತ ಆಹಾರ ಲಭಿಸುತ್ತಿಲ್ಲ ಎಂಬುದು ವ್ಯಕ್ತವಾಗಿದೆ.

ಕೌಟುಂಬಿಕ ಹಿಂಸೆ ಬಿಹಾರದಲ್ಲಿ ಅಧಿಕ: ಬಾಲ್ಯ ವಿವಾಹ ಪ್ರಮಾಣ ಕೇರಳದಲ್ಲಿ ಶೇ.2.9ರಷ್ಟು ಕನಿಷ್ಠ ಪ್ರಮಾಣದಲ್ಲಿದ್ದರೆ, ಇದು ಪಶ್ಚಿಮ ಬಂಗಾಳದಲ್ಲಿ ಶೇ.36.4 ಮತ್ತು ಬಿಹಾರದಲ್ಲಿ ಶೇ.34.6ರಷ್ಟು ಗರಿಷ್ಠ ಪ್ರಮಾಣದಲ್ಲಿದೆ. ಕೌಟುಂಬಿಕ ಹಿಂಸೆಯ ಪ್ರಕರಣಗಳು ಹಿಮಾಚಲ ಪ್ರದೇಶದಲ್ಲಿ ಕನಿಷ್ಠ ಪ್ರಮಾಣ(ಶೇ.4.3)ದಲ್ಲಿದ್ದರೆ, ಬಿಹಾರದಲ್ಲಿ ಗರಿಷ್ಠ (ಶೇ.36.1)ಪ್ರಮಾಣದಲ್ಲಿದೆ. ಅಚ್ಚರಿ ಎಂದರೆ ಕೇರಳದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಿದ್ದರೂ, ಇದೀಗ ಕೌಟುಂಬಿಕ ಹಿಂಸೆಯ ಪ್ರಮಾಣ ಕೂಡ ಶೇ.9.8 (2019-21)ರಿಂದ ಶೇ.17.7ಕ್ಕೆ ತೀವ್ರವಾಗಿ ಏರಿರುವ ಆತಂಕಕಾರಿ ಅಂಶವೂ ಸಮೀಕ್ಷೆಯಿಂದ ವ್ಯಕ್ತವಾಗಿದೆ.

ಬೊಜ್ಜಿನ ಸಮಸ್ಯೆ ಹೆಚ್ಚಳ: ಆಂಧ್ರಪ್ರದೇಶ(ಶೇ.48), ಸಿಕ್ಕಿಂ(ಶೇ.48), ಕೇರಳದ(ಶೇ.46.7) ಮಹಿಳೆಯ ರಲ್ಲಿ ಬೊಜ್ಜಿನ ಸಮಸ್ಯೆ ತೀವ್ರವಾಗಿರುವುದು ಕಂಡು ಬಂದಿದೆ. ಈ ಸಮಸ್ಯೆ ಮೇಘಾಲಯ(ಶೇ.13.8), ಜಾರ್ಖಂಡ್‌ನಲ್ಲಿ(ಶೇ.16.9) ಅತಿ ಕಡಿಮೆ ಪ್ರಮಾಣದಲ್ಲಿದೆ.

ಜಾಗತಿಕವಾಗಿ 84 ಕೋಟಿ ಮಹಿಳೆಯರು ಪತಿ ಅಥವಾ ಗೆಳೆಯನಿಂದ ಲೈಂಗಿಕ ದೌರ್ಜನ್ಯಕ್ಕೆ ಈಡಾಗುತ್ತಿದ್ದರೆ, ಭಾರತದಲ್ಲಿ ಶೇ.30ರಷ್ಟು ಮಂದಿ ವೈವಾಹಿಕ ಬದುಕಿನಲ್ಲಿ ಮಾನಸಿಕ, ಆರ್ಥಿಕ ಮತ್ತು ಲೈಂಗಿಕ ಹಿಂಸೆ ಎದುರಿಸುತ್ತಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ವರದಿ ಹೇಳಿದೆ. ಆದಾಗ್ಯೂ 2000 ಇಸವಿಯ ಬಳಿಕ ಇದೀಗ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಕಂಡುಬಂದಿದೆ. ಜಾಗತಿಕ ಮಟ್ಟದಲ್ಲಿ 15-49 ವಯಸ್ಸಿನ ಮಹಿಳೆಯರ ಪೈಕಿ ಶೇ.8.4ರಷ್ಟು ಮಂದಿ ಗಂಡನಲ್ಲದ ಜತೆಗಾರನಿಂದ ಲೈಂಗಿಕ ಹಿಂಸೆಗೀಡಾಗುತ್ತಿದ್ದಾರೆ. ಭಾರತದಲ್ಲಿ ಇದು ಶೇ.4ರಷ್ಟಿದೆ.

ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ಮಾನವ ಹಕ್ಕು ಆಯೋಗ ಅಧ್ಯಕ್ಷ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ



ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

ಈ ನೇಮಕ ರಾಜ್ಯ ರಾಜಕೀಯದಲ್ಲಿ ಪಕ್ಷಪಾತದ ಹೊಸ ಆರೋಪಗಳಿಗೆ ಕಾರಣವಾಗಿದೆ. ಮೇ 28 ರಂದು ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವ ಕೆಲವೇ ದಿನಗಳ ಮೊದಲು, ಮೇ 21 ರ ಸುಮಾರಿಗೆ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರನ್ನು ನೇಮಕ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿತ್ತು.

ಮುಖ್ಯಮಂತ್ರಿಗಳ ಪತ್ನಿ ಪಾರ್ವತಿ ಸಿದ್ದರಾಮಯ್ಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಪಡೆದ ನಿವೇಶನ ಸಂಬಂಧ, ಭೂ ಮಂಜೂರಾತಿ ಪ್ರಕರಣದ ತನಿಖೆ ನಡೆಸಿದ ಏಕಸದಸ್ಯ ನ್ಯಾಯಾಂಗ ಆಯೋಗದ ನೇತೃತ್ವವನ್ನು ನ್ಯಾಯಮೂರ್ತಿ ದೇಸಾಯಿ ವಹಿಸಿದ್ದರು, ಈ ಮುಡಾದಿಂದ ಪರ್ಯಾಯ ನಿವೇಶನಗಳ ಹಂಚಿಕೆ ಕಾನೂನುಬಾಹಿರವಲ್ಲ ಎಂದು ತೀರ್ಮಾನಿಸಿ ನ್ಯಾಯಮೂರ್ತಿ ದೇಸಾಯಿ ಆಯೋಗವು ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಕ್ಲೀನ್ ಚಿಟ್ ನೀಡಿತು. ಈ ವರದಿಯನ್ನು ಸೆಪ್ಟೆಂಬರ್ 2025 ರಲ್ಲಿ ರಾಜ್ಯ ಸಚಿವ ಸಂಪುಟ ಅಂಗೀಕರಿಸಿತು.

ಕಿರುಸುದ್ದಿ

ಅಲೆಮಾರಿಗಳಿಗೆ ವಸತಿ ನಿರ್ಮಿಸಲು ಆರ್ಥಿಕ ನೆರವು

ದೊಡ್ಡಬಳ್ಳಾಪುರ: ಅಲೆಮಾರಿ ಸಮುದಾಯದವರಿಗೆ ವಸತಿ ಯೋಜನೆಯಡಿ ವಸತಿ ನಿರ್ಮಿಸಲು ಸಹಾಯಧನಕ್ಕಾಗಿ ಪ.ಜಾತಿ, ಪ. ಪಂಗಡಗಳ ಅಲೆಮಾರಿ ಸಮುದಾಯದ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮ ಹಾಗೂ ರಾಜೀವ ಗಾಂಧಿ ವಸತಿ ನಿಗಮದ ಮೂಲಕ ಪ್ರಸ್ತುತ ಸಾಲಿನಲ್ಲಿ ನಿವೇಶನ ಹೊಂದಿರುವ ಅರ್ಹರಿಗೆ ಮನೆ ನಿರ್ಮಾಣಕ್ಕೆ 2.00 ಲಕ್ಷ ರೂ. ಮಂಜೂರು ಮಾಡಿ ನಾಲ್ಕು ಹಂತದಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಆಸಕ್ತರು ಸ್ವ-ವಿವರ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಅಥವಾ ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ 15 ದಿನದೊಳಗೆ ಅರ್ಜಿ ಸಲ್ಲಿಸಲು ನಿಗಮದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.ಟಿ.ಶ್ರೀನಿವಾಸ್‌ಗೆ ಸಚಿವ ಸ್ಥಾನಕ್ಕೆ ಒತ್ತಾಯ

ತಾವರೆಕೆರೆ: ವಿಧಾನ ಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್ ಅವರಿಗೆ ಮಂತ್ರಿಸ್ಥಾನ ನೀಡಬೇಕೆಂದು ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ಕರಪನಹಳ್ಳಿ ಗ್ರಾಮದ ಸುನಿಲ್ ಯಾದವ್ ಒತ್ತಾಯ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಗೊಲ್ಲ ಸಮುದಾಯ ರಾಜ್ಯದಲ್ಲಿ ಅತಿ ಹಿಂದುಳಿದವರಾಗಿದ್ದಾರೆ. ಗೊಲ್ಲ ಸಮುದಾಯ ರಾಜ್ಯದಲ್ಲಿ ಸುಮಾರು 28 ಲಕ್ಷ ಜನಸಂಖ್ಯೆ ಹೊಂದಿದೆಂದಿದ್ದಾರೆ. ಸಮುದಾಯವನ್ನು ಮುನ್ನಡೆಸಿಕೊಂಡು ಬಂದಿದ್ದ ಮಾಜಿ ಸಚಿವ ಎ .ಕೃಷ್ಣಪ್ಪ ಅವರು ನಿಧನರಾದ ಮೇಲೆ ಸಮುದಾಯಕ್ಕೆ ರಾಜಕೀಯ ಶಕ್ತಿ ಇಲ್ಲದಂತಾಗಿದೆ. ಹೀಗಾಗಿ ಅವರ ಕುಟುಂಬದ ಸದಸ್ಯರಾದ ಯಾದವ ಸಂಘದ ರಾಜ್ಯಾಧ್ಯಕ್ಷರು, ವಿಧಾನ ಪರಿಷತ್ ಸದಸ್ಯರು, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾಗಿರುವ ಡಿ.ಟಿ.ಶ್ರೀನಿವಾಸ್ ಅವರಿಗೆ ಸಾಮಾಜಿಕ ನ್ಯಾಯದಲ್ಲಿ ರಾಜಕೀಯ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿದ್ದಾರೆ. ನೂತನ ಸರಕಾರ ಯಾದವ ಸಮುದಾಯಕ್ಕೆ ಮನ್ನಣೆಯನ್ನ ಕೊಟ್ಟು ಸಚಿವ ಸ್ಥಾನವನ್ನು ನೀಡಬೇಕು. ಡಿ.ಟಿ.ಶ್ರೀನಿವಾಸ ಅವರು ಇಡೀ ರಾಜ್ಯವನ್ನು ಸಂಚಾರ ಮಾಡುವ ಮೂಲಕ ಯಾದವ ಸಮುದಾಯದವರೊಂದಿಗೆ ಹಿಂದುಳಿದ ವರ್ಗಗಳ ಸಮುದಾಯಗಳ ಸಂಘಟನೆಯನ್ನು ಮಾಡಿಕೊಂಡು ಬಂದಿದ್ದಾರೆಂದದ್ದಾರೆ. ಹಿಂದುಳಿದ ವರ್ಗಕ್ಕೆ ಶಕ್ತಿಯನ್ನು ತುಂಬುವ ಸಲುವಾಗಿ ಎ.ಕೃಷ್ಣಪ್ಪ ಅವರಿಗಾದ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಸಮುದಾಯವನ್ನು ಜತೆಯಲ್ಲಿ ತೆಗೆದು ಕೊಂಡು ಹೋಗಲು ನೂತನ ಮುಖ್ಯಮಂತ್ರಿಗಳು ಸಹಕರಿಸುತ್ತಾರೆಂಬ ಆಶಯವನ್ನು ಇಟ್ಟುಕೊಳ್ಳಲಾಗಿದೆ ಎಂದಿದ್ದಾರೆ.

ಹೈನುಗಾರರ ಹಿತ ಕಾಯಲು ಬಮುಲ್ ಬದ್ಧ

ಹೊಸಕೋಟೆ: ಹಾಲು ಉತ್ಪಾದಕರ ಹಿತವನ್ನು ಕಾಯಲು ಬಮುಲ್ ಬದ್ಧವಾಗಿದೆ. ಮುಂದಿನ ದಿನದಲ್ಲಿ ಬಮುಲ್‌ನಿಂದ ಉತ್ಪಾದಕ ಸದಸ್ಯರು ಮತ್ತು ಅವರ ಕುಟುಂಬದವರಿಗೆ ನೀಡುವ ವೈದ್ಯಕೀಯ ಹಾಗೂ ಮರಣ ಪರಿಹಾರ ಮೀಸಲಿಡುವ ಹಣ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಬಮುಲ್ ನಿರ್ದೇಶಕ ಬಿ.ವಿ ಸತೀಶ್ ಗೌಡ ಹೇಳಿದರು. ತಾಲೂಕಿನ ಬೆಂಡಿಗಾನಹಳ್ಳಿಯಲ್ಲಿ ಬಮೂಲ್ ಕಲ್ಯಾಣ ಟ್ರಸ್ಟ್‌ವತಿಯಿಂದ ಹಮ್ಮಿಕೊಂಡಿದ್ದ ಹಾಲು ಉತ್ಪಾದಕ ಸದಸ್ಯರಿಗೆ ವೈದ್ಯಕೀಯ ವೆಚ್ಚ ಪರಿಹಾರ ಹಾಗೂ ಸದಸ್ಯರ ಕುಟುಂಬಗಳಿಗೆ ಮರಣ ಪರಿಹಾರ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಸುಗಳಿಗೆ ನೀಡುವ ಮೇವು, ಹಿಂಡಿ, ಬೂಸಾ, ಫೀಡ್ಸ್, ಮೇವು ಬೆಳೆಯಲು ಬಳಸುವ ಕಾಂಪ್ಲೆಕ್ಸ್ ಬೆಲೆ ದುಬಾರಿಯಾಗಿದೆಂದರು. ರಾಸುಗಳಿಗೆ ನೀಡುವ ಹಿಂಡಿ 1650 ರೂ.ಆಗಿದೆ. ರಾಸು ಸಾಕಣಿದಾರರು ಬೆಲೆ ಏರಿಕೆಯಿಂದಾಗಿ ತತ್ತರಿಸಿದ್ದಾರೆ. ರಾಸುಗಳಿಗೆ ಮೇವು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ, ಉತ್ಪಾದನೆ ವೆಚ್ಚ ದುಬಾರಿಯಾಗುತ್ತಿರುವ ಕಾರಣ ಹಾಲಿನ ದರವನ್ನು ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು. ಬಮುಲ್ ಕಲ್ಯಾಣ ಟ್ರಸ್ಟ್ ನಿಂದ ಹಾಲು ಉತ್ಪಾದಕರ ಸದಸ್ಯರಿಗೆ ವೈದ್ಯಕೀಯ ವೆಚ್ಚ ಪರಿಹಾರ, ಸದಸ್ಯರ ಮರಣ ನಂತರ ಅವರ ಕುಟುಂಬದವರಿಗೆ ನೆರವು ಪರಿಹಾರ ಹಾಗೂ ಸದಸ್ಯರ ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹ ಧನ ವಿತರಣೆ ಕಾರ್ಯ ಮಾಡಲಾಗುತ್ತಿದೆಂದರು. 2025-26ನೇ ಸಾಲಿನಲ್ಲಿ ಹೊಸಕೋಟೆ ತಾಲೂಕಿನಾದ್ಯಂತ ಹಾಲು ಉತ್ಪಾದಕ 60 ಸದಸ್ಯರಿಗೆ ವೈದ್ಯಕೀಯ ಪರಿಹಾರವಾಗಿ 11.50 ಲಕ್ಷ, 70 ವರ್ಷ ಮೇಲ್ಪಟ್ಟ 13 ಸದಸ್ಯ ಕುಟುಂಬಗಳಿಗೆ ಮರಣ ಪರಿಹಾರ 3.60 ಲಕ್ಷ,6 ಜನ ಬಮುಲ್ ಸದಸ್ಯರ ಕುಟುಂಬಗಳಿಗೆ ಮರಣ ಪರಿಹಾರವಾಗಿ ತಲಾ 1ಲಕ್ಷದಂತೆ 6ಲಕ್ಷ, ಕುಡಿಯುವ ನೀರು ಘಟಕ, ಬಸ್ ನಿಲ್ದಾಣ,ವಿದ್ಯುತ್ ದೀಪ ಇತ್ಯಾದಿ ಸಾಮಾಜಿಕ ಕಾರ್ಯಗಳಿಗೆ 15 ಲಕ್ಷ , 298 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವಾಗಿ 11 ಲಕ್ಷ ಪ್ರೋತ್ಸಾಹ ಧನ ವಿತರಣೆ ಮಾಡಲಾಗಿದೆ.ಸದಸ್ಯರ ವೈದ್ಯಕೀಯ,ಮರಣ ಪರಿಹಾರ ಇತ್ಯಾದಿ ಕಾರ್ಯಗಳಿಗೆ ಮೀಸಲಿಡುವ ಹಣವನ್ನು ಒಂದು ಕೋಟಿಗೆ ಏರಿಕೆ ಮಾಡುತ್ತೇವೆಂದರು. ಬಮುಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡರ ಕೋಟಾದದಲ್ಲಿ ಹೊಸಕೋಟೆ ತಾಲೂಕಿನ ವಾಬಸಂದ್ರ, ತಿಮ್ಮಪ್ಪನಹಳ್ಳಿ, ನೆಲವಾಗಿಲು, ಸೋಲೂರು, ಚಿಕ್ಕನಲ್ಲೂರಹಳ್ಳಿ, ಆಲಪ್ಪನಹಳ್ಳಿ, ಹೊಸಕೋಟೆ ಮೇಲಿನಪೇಟೆ, ಒಳಗೆರೆಪುರ, ಅತ್ತಿಬೆಲೆ, ಬೆಂಡಿಗಾನಹಳ್ಳಿ, ಬೊಮ್ಮನ ಬಂಡೆ ಸೇರಿ ಒಟ್ಟು 12 ಮಂದಿಗೆ ಚೆಕ್ ವಿತರಿಸಲಾಯಿತು.

ಸಾರ್ವಜನಿಕ ದರ್ಶನಕ್ಕೆ ಮಾಜಿ ಸಚಿವ ವೆಂಕಟರಮಣಪ್ಪ ಪ್ರಾರ್ಥಿವ ಶರೀರ: ಗೌರವ ಸಲ್ಲಿಕೆ

ಹಂಗಾಮಿ ಸಿಎಂ, ಹಲವು ಗಣ್ಯರ ನಮನ

ವೈ.ಎನ್.ಹೊಸಕೋಟೆ: ಮಾಜಿ ಸಚಿವ ವೆಂಕಟರಮಣಪ್ಪ ನಿಧನರಾದ ಬಳಿಕ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗಿತ್ತು. ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು, ಕಾರ್ಯಕರ್ತರು, ವಿವಿಧ ಕ್ಷೇತ್ರದ ಗಣ್ಯರು ಸೇರಿದಂತೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ದರ್ಶನ ಪಡೆದು, ಅಳಿದ ನಾಯಕನಿಗಾಗಿ ಕಂಬನಿ ಮಿಡಿದರು.

ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸೇರಿದಂತೆ ಸುಮಾರು 19ಕ್ಕೂ ಹೆಚ್ಚು ವಿವಿಧ ಮಠಗಳ ಸ್ವಾಮೀಜಿಗಳು ಆಗಮಿಸಿ, ಅಂತಿಮ ದರ್ಶನ ಪಡೆದು ಮಂತ್ರೋಚ್ಛಾರಣೆಯೊಂದಿಗೆ ಆತ್ಮಕ್ಕೆ ಶಾಂತಿ ಕೋರಿದರು.

ಸಚಿವರಾದ ಕೆ.ಜೆ.ಜಾರ್ಜ್, ಜಮೀರ್ ಅಹಮ್ಮದ್, ಶಾಸಕರಾದ ಕೆ.ಎನ್.ರಾಜಣ್ಣ, ಯತೀಂದ್ರಸಿದ್ದರಾಮಯ್ಯ, ರಾಜೇಂದ್ರ ರಾಜಣ್ಣ, ಪರಿಟಾಲ ಸುನೀತಮ್ಮ, ಕಲ್ಯಾಣದುರ್ಗ ಶಾಸಕ ಅಮಲಿನೇನಿ ಸುರೇಂದ್ರಬಾಬು, ಮಾಜಿ ಸಂಸದರಾದ ಮುದ್ದುಹನುಮೇಗೌಡ, ಜನಾರ್ದನಸ್ವಾಮಿ, ಮುಖಂಡರಾದ ಗೂಳಿಹಟ್ಟಿಶೇಖರ್, ರಘುವೀರಾರೆಡ್ಡಿ, ವೈ.ಎ.ನಾರಾಯಣಸ್ವಾಮಿ, ಸುಧಾಕರ್, ನಿಂಗಪ್ಪ, ಶಾಂತಲಾರಾಜಣ್ಣ, ಸೂರನಹಳ್ಳಿ ಶ್ರೀನಿವಾಸ ಸೇರಿದಂತೆ ವಿವಿಧ ಮುಖಂಡರು ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಅರ್ಪಿಸಿದರು.

ಸ್ಥಳೀಯ ಮುಖಂಡರು, ಅಧಿಕಾರಿಗಳು, ಅಪಾರ ಅಭಿಮಾನಿಗಳು ಸರದಿ ಸಾಲಿನಲ್ಲಿ ಆಗಮಿಸಿ ಅಂತಿಮ ದರ್ಶನ ಪಡೆದು ಅಗಲಿದ ನಾಯಕನ ಆತ್ಮಕ್ಕೆ ಶಾಂತಿ ಕೋರುವ ಮೂಲಕ ಕಂಬನಿ ಮಿಡಿದರು.



ಜಿಲ್ಲಾಧಿಕಾರಿ ಶುಭಾಕಲ್ಯಾಣ್ , ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಅಶ್ವಿನಿ, ಸ್ಥಳೀಯ ತಹಶೀಲ್ದಾರ್ ವೈ.ರವಿ ಅವರ ಉಸ್ತುವಾರಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ತಳ ಸಮುದಾಯ ಪರ ಕಾಳಜಿವುಳ್ಳ ನಾಯಕ: ವೆಂಕಟರಮಣಪ್ಪ ತಳಸಮುದಾಯದ ಬಗ್ಗೆ ಅಪಾರ ಕಾಳಜಿಯುಳ್ಳ ಜನನಾಯಕ ಎಂದು ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಾರ್ಥೀವ ಶರೀರ ಅಂತಿಮ ದರ್ಶನ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ವೆಂಕಟರಮಣ ಅವರೊಬ್ಬ ಅಹಿಂದ ಪರ ನಾಯಕರಾಗಿದ್ದರು. ಸದಾ ನಮ್ಮ ಸಂಪರ್ಕದಲ್ಲಿದ್ದವರು. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತ್ತಿದ್ದರು. ರೈತರ ಪರವಾಗಿ ಅಪಾರ ಕಾಳಜಿ ಹೊಂದಿದ್ದರು. ಆದಾಗಿ ಅವರೆಂದರೆ ನನಗೆ ಅಪಾರ ಪ್ರೀತಿ ಮತ್ತು ಅಭಿಮಾನ. ಇನ್ನೂ ಹೆಚ್ಚು ಕಾಲ ಬದುಕಿ ಇರುತ್ತಿದ್ದರು ಎಂದುಕೊಂಡಿದ್ದೇನು. ಆದರೆ, ಅವರ ಅಕಾಲಿಕ ಮರಣದಿಂದಾಗಿ ರಾಜ್ಯಕ್ಕೆ ನಷ್ಟ ಉಂಟಾಗಿದೆ. ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ದೊರೆಯಲಿ ಎಂದರು.

ನಮಗೆ ಉತ್ತಮ ಗೆಳೆಯ

ವೆಂಕಟರಮಣಪ್ಪ ಅವರು 2008ರಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸಲು ಸಹಕಾರ ನೀಡಿದ್ದರು. ಆದಾಗಿ ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಅವರು ನಮಗೆ ಒಬ್ಬ ಶ್ರೇಷ್ಠ ಗೆಳೆಯ. ಅವರ ಅಗಲಿಕೆಯಿಂದ ತುಂಬಾ ನೋವಾಗಿದೆ ಎಂದು ಸಂಸದ ಗೋವಿಂದ ಎಂ. ಕಾರಜೋಳ ತಮ್ಮ ನೋವನ್ನು ವ್ಯಕ್ತಪಡಿಸಿದರು.

ಸರಕಾರಿ ಗೌರವದೊಡನೆ ಅಂತಿಮ ಸಂಸ್ಕಾರ

ಮಾಜಿ ಸಚಿವ ವೆಂಕಟರಮಣಪ್ಪ ಅವರ ಮರಿದಾಸನಹಳ್ಳಿಯ ರಸ್ತೆಯಲ್ಲಿರುವ ತೋಟದ ಮನೆಯಲ್ಲಿ ಸಾರ್ವಜನಿಕರ ಅಂತಿಮ ದರ್ಶನದ ಬಳಿಕ ಪೊಲೀಸರು ಕುಶಾಲು ತೋಪಿ ಆರಿಸುವ ಮೂಲಕ ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ ಸಲ್ಲಿಸಲಾಯಿತು.

ಜೆಡಿಎಸ್ ಎಸ್‌ಸಿ ಘಟಕದ ಪದಾಧಿಕಾರಿಗಳ ಪದಗ್ರಹಣ

ತಳಮಟ್ಟದಿಂದ ಜೆಡಿಎಸ್ ಬಲಗೊಳಿಸಿ



ದೇವನಹಳ್ಳಿ: ಮುಂಬರುವ ಗ್ರಾಪಂ, ತಾಪಂ ಮತ್ತು ಜಿಪಂ ಚುನಾವಣೆಯನ್ನು ಸಮರ್ಥವಾಗಿ ಎದುರಿಸಿ, ಜೆಡಿಎಸ್ ತಳಮಟ್ಟದಿಂದ ಬಲಪಡಿಸಲು ಕಾರ್ಯಕರ್ತರು ಇಂದಿನಿಂದಲೇ ಸಜ್ಜಾಗಬೇಕೆಂದು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ. ಮಂಜುನಾಥ್ ಹಾಗೂ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಸ್. ಮಹೇಶ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ನೂತನ ಎಸ್‌ಸಿ ಘಟಕದ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಣಾ ಸಮಾರಂಭದಲ್ಲಿ ಮಾತನಾಡಿ , ಪ. ಜಾತಿಯ ಎಲ್ಲಾ ನೂರೊಂದು ಸಮಾಜದ ಮುಖಂಡರು ಒಟ್ಟಾಗಿ ಸೇರಿ ಅತ್ಯಂತ ಅಚ್ಚುಕಟ್ಟಾಗಿ ಈ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಿದ್ದಾರೆಂದರು.

ಮುಂದಿನ ದಿನದಲ್ಲಿ ಕುಮಾರಣ್ಣನವರು ರಾಜ್ಯದ ಮುಖ್ಯಮಂತ್ರಿಯಾಗಬೇಕು. ದೇವನ ಹಳ್ಳಿ ಕ್ಷೇತ್ರದಲ್ಲಿ ಜೆಡಿಎಸ್ ಪ್ರಚಂಡ ಜಯ ಸಾಧಿಸಬೇಕು. ಇದಕ್ಕಾಗಿ ನೂತನ ಪದಾಧಿಕಾರಿಗಳು ಹಾಗೂ ಮೂಲ ಸಂಸ್ಥೆ ಮುಖಂಡರು ಹಗಲು-ರಾತ್ರಿ ಶ್ರಮಿಸಿ, ಕಾರ್ಯಕರ್ತರ ವಿಶ್ವಾಸ ಗಳಿಸಿ ಪಕ್ಷ ಕಟ್ಟಬೇಕೆಂದು ಸಲಹೆ ನೀಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಜೆಡಿಎಸ್ ಎಸ್.ಸಿ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ದೊಡ್ಡಬಳ್ಳಾಪುರ ತಾಲೂಕಿನ ಬಚ್ಚಹಳ್ಳಿಯ ನಾಗರಾಜು ಹಾಗೂ ದೇವನಹಳ್ಳಿ ತಾಲೂಕು ಎಸ್.ಸಿ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜನತಾ ಕಾಲೊನಿಯ ರಾಮಣ್ಣ ಅವರಿಗೆ ಇದೇ ಸಂದರ್ಭದಲ್ಲಿ ಅಧಿಕೃತ ನೇಮಕಾತಿ ಪತ್ರ ನೀಡಿ ಅಭಿನಂದಿಸಲಾಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ.ಮಂಜುನಾಥ್ ಮಾತನಾಡಿ, ತಾಲೂಕಿನಲ್ಲಿ ಎಸ್‌ಸಿ ಘಟಕದ ಪುನರ್ ರಚನೆಗೆ ಕರೆ ನೀಡಿದಾಗ ಎಲ್ಲಾ ಹಿರಿಯ ಮುಖಂಡರು ಸಕಾರಾತ್ಮಕವಾಗಿ ಸ್ಪಂದಿಸಿದರು. ಇದು ಪಕ್ಷಕ್ಕೆ ಆನೆಬಲ ತಂದಿದೆ ಎಂದರು. ಜಿಲ್ಲಾ ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಬಚ್ಚಹಳ್ಳಿ ನಾಗರಾಜ್ ಮಾತನಾಡಿ, ಹಿರಿಯ ಮುಖಂಡರಾದ ಹಾಡೋನಹಳ್ಳಿ ದಿ. ಅಪ್ಪಯ್ಯಣ್ಣನವರ ಮಾರ್ಗದರ್ಶನದಲ್ಲಿ ನಾನು ಜೆಡಿಎಸ್ ಕೆಲಸ ಮಾಡುತ್ತಿದ್ದು ನನ್ನ ಕಾರ್ಯವೈಖರಿಯನ್ನು ನೋಡಿ ರಾಜ್ಯದ ಹಾಗೂ ಜಿಲ್ಲಾ ಜೆಡಿಎಸ್ ಮುಖಂಡರು ಜಿಲ್ಲಾ ಘಟಕದ ಅಧ್ಯಕ್ಷನನ್ನಾಗಿ ಗುರುತರವಾದ ಜವಾಬ್ದಾರಿ ನೀಡಿದ್ದಾರೆಂದರು. ಎಸ್‌ಸಿ ಘಟಕದ ತಾಲೂಕು ಜೆಡಿಎಸ್ ನೂತನ ಅಧ್ಯಕ್ಷ ರಾಮಣ್ಣ ಮಾತನಾಡಿ, ಯಾವುದೇ ಚುನಾವಣೆ ಇರಲಿ ಬೂತ್ ಮಟ್ಟದಿಂದ ಪಕ್ಷ ಸಂಘಟನೆ ಮಾಡಿ ಎಲ್ಲಾ ಪದಾಧಿಕಾರಿಗಳ ಸಹಕಾರದೊಂದಿಗೆ ಹೆಚ್ಚಿನ ಮತ ಬರುವಂತೆ ಕೆಲಸ ಮಾಡುತ್ತೇವೆ ಎಂದರು.

ತಾಲೂಕಿನ ನೂತನ ಪದಾಧಿಕಾರಿಗಳಾಗಿ ಕಾರ್ಯಾಧ್ಯಕ್ಷ ಶಿವಾನಂದ, ಪ್ರಧಾನ ಕಾರ್ಯದರ್ಶಿ ಸಿ. ತಿರುಮಲೇಶ್ ಕಾರ್ಯದರ್ಶಿ: ಡಿ.ಟಿ. ಮೂರ್ತಿ, ಹಿರಿಯ ಉಪಾಧ್ಯಕ್ಷರುಗಳಾಗಿ ಚಂದ್ರು, ನಾಗರಾಜು, ಮಾರಪ್ಪ, ಹರೀಶ್ ನಾಯಕ್, ಸಿದ್ದಪ್ಪ, ನಾರಾಯಣಸ್ವಾಮಿ, ಮೋಹನ್, ಮುನಿಕೃಷ್ಣ, ಉಪಾಧ್ಯಕ್ಷರಾಗಿ ನರಸಿಂಹಮೂರ್ತಿ, ಜನಕಮಣಿ, ನರಸಿಂಹಯ್ಯ (ಬಾಬು), ಭರತ್, ಚನ್ನಕೃಷ್ಣ, ಶ್ರೀನಿವಾಸ್, ಡಿ.ಎಂ.ನಾಗರಾಜು, ನಾಗೇಶ್, ಸಂಘಟನಾ ಕಾರ್ಯದರ್ಶಿಗಳಾಗಿ ಮುರಳೀಧರ್, ನಾರಾಯಣ (ಅಪ್ಪಿ), ಮಂಜುನಾಥ, ಸಂತೋಷ್, ವೆಂಕಟೇಶ್, ರಾಜಶೇಖರ್, ಕಿಶೋರ್, ಮಧು, ಚಂದ್ರು, ಸತೀಶ್, ಮುನಿರಾಜು, ಸೋಮಶೇಖರ್, ಮಹೇಶ್.ಕಾರ್ಯಕಾರಿಸಮಿತಿಸದಸ್ಯರುಗಳಾಗಿ : ವೆಂಕಟೇಶ್, ನಾಗರಾಜು, ನಾರಾಯಣಸ್ವಾಮಿ, ಹರೀಶ್, ಮುನಿಚಿನ್ನಪ್ಪ, ಶ್ರೀನಿವಾಸ್, ಕಾಟಪ್ಪ, ಮಂಜುನಾಥ್, ಮುನಿತಿಮ್ಮರಾಯಪ್ಪ, ರಮೇಶ್ ನೇಮಕಗೊಂಡವರಿಗೆ ಆದೇಶ ಪತ್ರ ವಿತರಣೆ ಮಾಡಲಾಯಿತು.

ಕಸದ ರಾಶಿ ತೆರವಿಗೆ ಒತ್ತಾಯ

ದಾಬಸ್ ಪೇಟೆ: ಸೋಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಡವಂದ ಕಾಲೊನಿಯ ಚೌಡೇಶ್ವರಿ ದೇವಾಲಯದ ಮುಂಭಾಗಕ್ಕೆ ಹೊಂದಿಕೊಂಡಂತೆ ರಸ್ತೆ ಪಕ್ಕದಲ್ಲಿಯೇ ಕಸದರಾಶಿ ಬಿದ್ದಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ತ್ಯಾಮಗೊಂಡ್ಲು ಮಾರ್ಗದಿಂದ ದಾಬಸ್ ಪೇಟೆ ಹೊಸಕೋಟೆ ರಾಷ್ಟ್ರೀಯ ಹೆದ್ದಾರಿ ಮೂಲಕ ದಾಬಸ್ ಪಟ್ಟಣಕ್ಕೆ ಹಾಗೂ ಸೋಂಪುರ ಕೈಗಾರಿಕಾ ಪ್ರದೇಶಕ್ಕೂ ಈ ರಸ್ತೆ ಸಂಪರ್ಕಿಸುತ್ತದೆ.

ರಸ್ತೆಯ ಈ ಭಾಗದಲ್ಲಿ ಅಷ್ಟೇ ಅಲ್ಲ ಇನ್ನೊಂದು ಬದಿಯಲ್ಲೂ ಕಸದ ರಾಶಿ ಬಿದ್ದಿದೆ. ತಿಂಗಳುಗಟ್ಟಲೆ ಆದರೂ ಕಸವನ್ನು ತೆರವು ಮಾಡುವುದಿಲ್ಲ. ಜನವಸತಿ ಪ್ರದೇಶ ಇದಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಜನ ವಾಸಿಸುತ್ತಿದ್ದಾರೆ. ಸಾರ್ವಜನಿಕ ಓಡಾಟದ ಪ್ರಮುಖ ರಸ್ತೆಯಾಗಿದೆ. ಇಲ್ಲಿ ಓಡಾಡಲು ಅಸಹ್ಯವಾಗುತ್ತದೆ ಎನ್ನುತ್ತಾರೆ ಸ್ಥಳೀಯರು. ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಬಂದಿರುವ ಹೊರ ರಾಜ್ಯದವರು ರಾತ್ರಿ ಸಂದರ್ಭದಲ್ಲಿ ತಂದು ಕಸ ಹಾಕುತ್ತಿದ್ದಾರೆ. ಮಿಕ್ಕಿದ ಆಹಾರ, ಕೊಳೆತ ತರಕಾರಿ-ಹಣ್ಣು ಎಲ್ಲವನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಗೂ ಚೀಲದಲ್ಲಿ ತಂದು ಸುರಿಯುತ್ತಿದ್ದಾರೆ. ಕಾಲಕಾಲಕ್ಕೆ ವಿಲೇವಾರಿಯಾಗುತ್ತಿಲ್ಲ ಎಂಬುದು ನಾಗರಿಕರ ಆರೋಪವಾಗಿದೆ. ಮಳೆಗಾಲ ಆಗಿರುವುದರಿಂದ ಕಸ ಕೊಳೆಯುತ್ತಾ ವಾಸನೆ ಬರುತ್ತಿದೆ. ಈ ರಸ್ತೆಯಲ್ಲಿ ಸಂಚರಿಸುವುದೇ ಕಷ್ಟವಾಗಿದೆ. ಇದಕ್ಕೆ ಸಂಬಂಧಿಸಿದವರು ಈ ಕಸ ತೆರವು ಮಾಡಬೇಕಿದೆ.



ಘಾಟಿ ಸುಬ್ರಹ್ಮಣ್ಯದಲ್ಲಿ ಹುಂಡಿ ಹಣ ಎಣಿಕೆ

ದೊಡ್ಡಬಳ್ಳಾಪುರ: ಎರಡು ತಿಂಗಳ ನಂತರ ತಾಲೂಕಿನ ಐತಿಹಾಸಿಕ ಘಾಟಿ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಹುಂಡಿ ಹಣ ಎಣಿಕೆ ಕಾರ್ಯ ಮಾಡಲಾಗಿದೆ., 79 ಲಕ್ಷ ರೂಪಾಯಿ ಸಂಗ್ರಹವಾಗಿರುವ ಬಗ್ಗೆ ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ.

ಹಣದ ಜತೆಯಲ್ಲಿ ಭಕ್ತರು ಚಿನ್ನ ಮತ್ತು ಬೆಳ್ಳಿಯನ್ನ ದೇವರಿಗೆ ಕಾಣಿಕೆ ರೂಪದಲ್ಲಿ ನೀಡಿದರು. 1,92,000 ಮೌಲ್ಯದ ಒಂದು ಕೆಜಿ 200 ಗ್ರಾಂ ಬೆಳ್ಳಿ ಹಾಗೂ 41.400 ರೂಪಾಯಿ ಮೌಲ್ಯದ 3 ಗ್ರಾಂ 900 ಮಿಲಿ ಗ್ರಾಂ ಚಿನ್ನ ಸಂಗ್ರಹವಾಗಿದೆ.

ಇದರ ಜತೆ ವಿದೇಶಿ ಕರೆನ್ಸಿಯನ್ನು ಸಹ ಭಕ್ತರು ದೇವರಿಗೆ ಕಾಣಿಕೆ ರೂಪದಲ್ಲಿ ನೀಡಿದ್ದಾರೆ. 22 ಅಮೆರಿಕನ್ ಡಾಲರ್, ಯುಎಇ ದೇಶದ 16 ದಿರ್ಹಾಮ್ ಸಂಗ್ರಹವಾಗಿದೆ.



79,72,502 ರೂ. ನಿಧಿ ಸಂಗ್ರಹ

ಹೊಸಕೋಟೆಗೆ ಪ್ರಥಮ ಸ್ಥಾನ

ಹೊಸಕೋಟೆ: ಪಾರದರ್ಶಕವಾಗಿ ಕೆಲಸ ಮಾಡುವ ಮೂಲಕ ಕಂದಾಯ ಇಲಾಖೆಯ ನಿಗದಿತ ಗುರಿ ತಲುಪಲು ಸಾಧ್ಯವಾಯಿತು ಎಂದು ನಿರ್ಗಮಿತ ತಹಶೀಲ್ದಾರ್ ಸೋಮಶೇಖರ್ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪೋಡಿ, ಈ ಪೌತಿ ಖಾತೆ, ಹಕ್ಕುಪತ್ರಗಳ ವಿತರಣೆ, ಆಶ್ರಯ ಯೋಜನೆಗೆ ಜಮೀನು ಮಂಜೂರು, ಸರ್ಕಾರಿ ಒತ್ತುವರಿ ಜಾಗ ತೆರವು, ಚುನಾವಣಾ ಕರ್ತವ್ಯ, ಕಂದಾಯ ವಿಭಾಗಕ್ಕೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣ ಇತ್ಯರ್ಥ ರೆಕಾರ್ಡ್ ರೂಂ ಡಿಜಿಟಲೀಕರಣ ಕಾರ್ಯವನ್ನು ಸಾಕಷ್ಟು ವೇಗವಾಗಿ ಜಿಲ್ಲೆಯ ಉಳಿದ ಮೂರು ತಾಲೂಕುಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಾಡಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದೆಂದರು. ಒಂದೂವರೆ ವರ್ಷದಲ್ಲಿ ಸುಮಾರು 1200 ಎಕರೆಯಷ್ಟು ಜಾಗಕ್ಕೆ 900 ಪೋಡಿ ಮಾಡಲಾಗಿದೆ. ಅದರಲ್ಲಿ 600 ಪೋಡಿ ಕಂದಾಯ ಸಚಿವರ ಕೈಯಲ್ಲಿ ದಾಖಲೆ ವಿತರಣೆ ಮಾಡಿದ್ದೇವೆ. ಪೌತಿ ಖಾತೆ ಆಂದೋಲನದಲ್ಲೂ ಅಗ್ರಸ್ಥಾನದಲ್ಲಿದೆಂದು ತಿಳಿಸಿದರು. 4200 ಪೌತಿಖಾತೆ ಮಾಡಿದ್ದು ಹಿಡುವಳಿ ಭೂಮಿಯಲ್ಲಿ ಮನೆ ಕಟ್ಟಿಕೊಂಡಿರುವವರಿಗೆ 5500 ಹಕ್ಕುಪತ್ರ ಕೊಡುವ ಮೂಲಕ 198 ಕಂದಾಯ ಗ್ರಾಮಗಳನ್ನು ಗುರ್ತಿಸಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದೇವೆ. ವಸತಿರಹಿತರಿಗೆ ನಿವೇಶನ ಕೊಡುವ ಆಶ್ರಯ ಯೋಜನೆ ನಿವೇಶನಕ್ಕಾಗಿ ಸಹ 325 ಎಕರೆ ಜಾಗವನ್ನು ಗ್ರಾಮ ಪಂಚಾಯತ್ ಗಳಿಗೆ ಹಸ್ತಾಂತರ ಮಾಡಿದ್ದೇವೆ.



ಒತ್ತುವರಿ ತೆರವು ವಿಚಾರದಲ್ಲೂ ಮುಂಚೂಣಿಯಲ್ಲಿದೆಂದರು. 167 ಎಕರೆ ಸರ್ಕಾರಿ ಜಮೀನಿನ ಒತ್ತುವರಿ ತೆರವು ಮಾಡಿದ್ದೇವೆ. ಚುನಾವಣಾ ಕರ್ತವ್ಯದಲ್ಲಿ ಪ್ರೋಜಣಿ, ಮ್ಯಾಪಿಂಗ್ ಮಾಡುವುದರಲ್ಲಿ ಶೇ.90ರಷ್ಟು ಗುರಿ ಸಾಧಿಸಿದ್ದೇವೆ. ಕಂದಾಯ ಇಲಾಖೆಯ ನ್ಯಾಯಾಲಯದಲ್ಲಿ ಹೆಚ್ಚಾಗಿ ಪ್ರಕರಣ ದಾಖಲಾಗುತ್ತಿದ್ದು ಕಳೆದ ಮೂರು ತಿಂಗಳಲ್ಲಿ 500ಕ್ಕೂ ಹೆಚ್ಚು ಪ್ರಕರಣ ವಿಲೇವಾರಿ ಮಾಡಿದ್ದೇನೆ. ರೆಕಾರ್ಡ್ ರೂಂ ಡಿಜಿಟಲೀಕರಣ ಮಾಡಲು ಸರ್ಕಾರ ಮುಂದಡಿ ಇಟ್ಟಿದ್ದೇವೆ. 42 ಲಕ್ಷ ಪುಟವನ್ನು ಸ್ಕ್ಯಾನ್ ಮಾಡುವ ಮೂಲಕ 38389 ದಾಖಲೆ ಒದಗಿಸಿ ಜಿಲ್ಲೆಯಲ್ಲಿ ಪ್ರಥಮವಾಗಿದ್ದೇವೆ.

ಕೆಎಚ್‌ಎಂಗೆ ಡಿಸಿಎಂ ಸ್ಥಾನಕ್ಕಾಗಿ ಆಗ್ರಹ

ದೊಡ್ಡಬಳ್ಳಾಪುರ: ಸಚಿವ ಸಂಪುಟ ಪುನರ್ ರಚನೆಯಾಗುತ್ತಿರುವ ಸಮಯದಲ್ಲಿ ಮಾದಿಗ ಸಮುದಾಯದ ಪ್ರಮುಖ ನಾಯಕರಾದ ಕೆ.ಎಚ್ . ಮುನಿಯಪ್ಪ ಅವರಿಗೆ ರಾಜ್ಯದ ಉಪಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ಕೇಂದ್ರ ಹಾಗೂ ರಾಜ್ಯ ಕಾಂಗ್ರೆಸ್ ಶೋಷಿತರ ಪರ ನಿಲುವು ಕೈಗೊಳ್ಳಬೇಕು ಎಂದು ಮಾದರ ಮಹಾಸಭಾ ಮುಖಂಡ ರಾಮಕೃಷ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ಅತಿ ದೊಡ್ಡ ಸಮುದಾಯವಾದ ಮಾದಿಗ ಸಮಾಜಕ್ಕೆ ಸಚಿವ ಸಂಪುಟದಲ್ಲಿ ಇನ್ನಷ್ಟು ಬಲಿಷ್ಠ ಹಾಗೂ ನ್ಯಾಯಯುತ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಿದೆ. ಈ ಕಾರಣದಿಂದಾಗಿ ಕೆ .ಎಚ್.ಮುನಿಯಪ್ಪ ಅವರಿಗೆ ಉಪಮುಖ್ಯ ಮಂತ್ರಿ ಸ್ಥಾನ ನೀಡಬೇಕು. ಆರ್ .ಬಿ.ತಿಮ್ಮಾಪುರ ಅವರಿಗೆ ಸಚಿವ ಸ್ಥಾನ , ಎಚ್. ಆಂಜನೇಯ ಅವರಿಗೆ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವ ಮೂಲಕ ರಾಜ್ಯ ರಾಜಕೀಯದಲಿ ದಲಿತರ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.



ದಲಿತ ಮುಖಂಡ ಪುರುಷೋತ್ತಮ್ ಮಾತನಾಡಿ, ಮಾದಿಗ ಜನಾಂಗ ರಾಜ್ಯದಲ್ಲಿ ಅತಿ ದೊಡ್ಡ ದಲಿತ ಸಮುದಾಯವಾಗಿದೆ. ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಸಾಮಾಜಿಕ ನ್ಯಾಯ ಒಳಗೊಂಡಂತೆ ಹಲವು ಪ್ರಗತಿಪರ, ಜನಪರ ಹೋರಾಟದಲ್ಲಿ ನಿರಂತರವಾಗಿ ದಲಿತ ಸಮುದಾಯ ಪ್ರಮುಖ ಪಾತ್ರವಹಿಸುವ ಮೂಲಕ ಶಕ್ತಿ ತುಂಬುವ ಕಾರ್ಯ ಮಾಡಿದೆಂದರು. ಸಮುದಾಯಕ್ಕೆ ಸರ್ಕಾರದಲ್ಲಿ ತಕ್ಕ ಮಟ್ಟಿನ ರಾಜಕೀಯ ಸ್ಥಾನಮಾನ ಸಿಗದಿರುವುದು ಬೇಸರದ ಸಂಗತಿಯಾಗಿದೆ. ಈ ಸಮಯ ಸಚಿವ ಸಂಪುಟ ಪುನರ್ ರಚನೆಯಾಗುತ್ತಿದೆ. ಮಾದಿಗ ಸಮುದಾಯದ ನಾಯಕರಾದ ಕೆ.ಎಚ್. ಮುನಿಯಪ್ಪ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ರಾಜಕೀಯ ಸ್ಥಾನಮಾನದ ಕೊರತೆ ನೀಗಿಸಬೇಕು ಎಂದು ಆಗ್ರಹಿಸಿದರು. ಮಾದರ ಮಹಾಸಭಾ ತಾಲೂಕು ಅಧ್ಯಕ್ಷ ತಾಳಗವಾರ ನಾಗರಾಜ್ ಮಾತನಾಡಿ, ರಾಜ್ಯದ ಅತಿ ದೊಡ್ಡ ದಲಿತ ಸಮುದಾಯದ ಜನಸಂಖ್ಯೆ, ಕೊಡುಗೆಯನ್ನು ಪರಿಗಣಿಸಿದರೆ ಸಮರ್ಪಕ ಪ್ರಾತಿನಿಧ್ಯ ದೊರೆತಿಲ್ಲ. ನಮ್ಮ ಸಮುದಾಯದ ಪ್ರಮುಖ ನಾಯಕರಾದ ಕೆ. ಎಚ್. ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ರಾಜಕೀಯ ಶಕ್ತಿ ಹಾಗೂ ಸಾಮಾಜಿಕ ಪಾಲುದಾರಿಕೆಯ ಸಮುದಾಯದ ಭಾವನೆಗಳನ್ನು ಗೌರವಿಸಿ ತಕ್ಷಣ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದರು. ರಾಮಕೃಷ್ಣಪ್ಪ ದೊಡ್ಡ ತುಮಕೂರು, ಅಪಕಾರನಹಳ್ಳಿ ಹನುಮಯ್ಯ, ಮಾದರ ಸಭಾ ತಾಲೂಕು ಅಧ್ಯಕ್ಷ ತಳವಾರ್ ನಾಗರಾಜು, ವೆಂಕಟೇಶ್ ದೊಡ್ಡ ತುಮಕೂರು, ಗಂಗರಾಜು, ವೆಂಕಟೇಶ್ ಸಂಜಯನಗರ, ಕೆ.ವಿ.ಮುನಿಯಪ್ಪ, ಹನು ಮಂತಯ್ಯ ಹಳೆಕೋಟೆ. ಲಕ್ಕಪ್ಪ ಕಾಡನೂರು. ಆರ್. ವಿ.ಮಹೇಶ್, ಆರ್.ವಿ, ಶಿವಕುಮಾರ್, ಆರ್ .ವಿ . ಮನು, ಶ್ರೀರಾಮ್ ಮಲ್ಲೋಹಳ್ಳಿ, ರಾಜಘಟ್ಟ ಕಾಂತರಾಜು ವಕೀಲರು, ಖಾನೆಹೊಸಳ್ಳಿ ಮಂಜುನಾಥ್ ವಕೀಲರು. ಬಿಳಿಕೆರೆ ಮುನಿರಾಜು ವಕೀಲರು ಇದ್ದರು.

ಜಲ ಸಂಪನ್ಮೂಲ ಇಲಾಖೆ

ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)

ಬೇಲೂರ ಕೈಗಾರಿಕಾ ವಸಾಹತು, ಧಾರವಾಡ– 580011.ದೂರವಾಣಿ: 0836–2486889
ಮೊ: 9448386889 ಮಿಂಚಂಚೆ: walmiengtrg@gmail.com www.walmidharwad.karnataka.gov.in

ಕ್ರ.ಸಂ. ವಾಲ್ಮಿ/ತಾಂ.ಶಾ/ಮಾನವ ಸಂಪನ್ಮೂಲ/ಟೆಂಡರ್/2026–27/331
ದಿನಾಂಕ: 30–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ–580011 ಕಚೇರಿ ಅಡಿಯಲ್ಲಿ ವಿವಿಧ ಮಾನವ ಸಂಪನ್ಮೂಲ ಸರಬರಾಜು ಮಾಡಲು ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ ಶೇಕಡವಾರು ಟೆಂಡರನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amount put to Tender excluding GST in Lakhs	EMD Rs.
1	Providing Manpower Services at WALMI, Campus, Dharwad for the period of one year during 2026-27	60.98	1,44,000/-
2	Providing Housekeeping and training support staff Services at WALMI, Campus, Dharwad for the period of one year during 2026-27	62.95	1,49,000/-
3	Providing Agriculture and Related Works Labor Services at WALMI, Campus, Dharwad for the period of one year during 2026-27	28.77	68,000/-
4	Providing Security Services at WALMI Campus, Dharwad for the period of one year during 2026-27	50.24	1,19,000/-

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಮ್.ಡಿ ಶುಲ್ಕದೊಂದಿಗೆ https://kppp.karnataka.gov.in ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ: 02–06–2026, ರಿಂದ ಡೌನ್‌ಲೋಡ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17–06–2026 ರಂದು ಸಂಜೆ 4.00 ಗಂಟೆಯ ವರೆಗೆ ಬಿಡ್ ತೆರೆಯುವ ದಿನಾಂಕ: 18–06–2026 ರ ಸಂಜೆ 4.30 ಗಂಟೆಯ ನಂತರ ಮಾಡಲಾಗುವುದು. ಟೆಂಡರ್‌ಗೆ ಸಂಬಂದಪಟ್ಟಂತೆ ಇ.ಎಂ.ಡಿ. ಮೊತ್ತ, ಟೆಂಡರ್ ಷರತ್ತುಗಳು ಹಾಗೂ ಇನ್ನಿತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ https://kppp.karnataka.gov.in ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಹಾಗೂ ಈ ಕಚೇರಿ ದೂರವಾಣಿ ಸಂಖ್ಯೆ. 0836–2486680 ಸಂಪರ್ಕಿಸಬಹುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು,
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ.
ವಾಲ್ಮಿ, ಧಾರವಾಡ– 580011

ಡಿಐಪಿಆರ್/ಧಾರವಾಡ/246/ಮಣಿಪಾಲ್/2026–27

ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿಡ್ಲಘಟ್ಟ
ಕ್ರಿಮಿನಲ್ ಮಿಸ್ ನಂ.: 733/2025

ಅರ್ಜಿದಾರರು– 1. ಶ್ರೀ ಜಯರಾಮ್ ಬಿನ್ ಲೇಟ್ ಚಿಕ್ಕದಾದೆಪ್ಪ, ವಯಸ್ಸು ಸುಮಾರು 35 ವರ್ಷ. 2. ಶ್ರೀಮತಿ ದ್ಯಾವಮ್ಮ ಕೋಂ ಲೇಟ್ ದೊಡ್ಡತಾತಪ್ಪ, ವಯಸ್ಸು ಸುಮಾರು 75 ವರ್ಷ. 3. ಶ್ರೀಮತಿ ನರಸಮ್ಮ ಕೋಂ ಲೇಟ್ ಚಿಕ್ಕದಾದೆಪ್ಪ, ವಯಸ್ಸು ಸುಮಾರು 65 ವರ್ಷ. ಅರ್ಜಿದಾರರು 1 ರಿಂದ 3 ರವರ ವಾಸ- ಚೌಡರೆಡ್ಡಿಹಳ್ಳಿ ಗ್ರಾಮ, ಬಶೆಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. ವಿರುದ್ಧ
ಎದುರುದಾರರು: ಮಾನ್ಯ ತಹಸೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಶಿಡ್ಲಘಟ್ಟ ತಾಲ್ಲೂಕು

ಮರಣ ಪ್ರಮಾಣ ಪತ್ರಿಕಾ ಪ್ರಕಟಣೆ

ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಬಶೆಟ್ಟಿಹಳ್ಳಿ ಹೋಬಳಿ, ಚೌಡರೆಡ್ಡಿ ಗ್ರಾಮದಲ್ಲಿ ವಾಸವಾಗಿರುವ ಚಿಕ್ಕದಾದೆಪ್ಪ ಬಿನ್ ಲೇಟ್ ಕಾಮಯ್ಯ ಇವರು ದಿನಾಂಕ 10.06.1980 ರಂದು ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಸಮರ್ಥನ ಪ್ರಮಾಣ ಪತ್ರ ಪಡೆಯಲು ಇವರ ಹೆಂಡತಿ ಮತ್ತು ಮಕ್ಕಳು ಮಾನ್ಯ ಗೌರವಾನ್ವಿತ ಘನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಶಿಡ್ಲಘಟ್ಟ ರವರಲ್ಲಿ ಕ್ರಿಮಿನಲ್ ಮಿಸ್ ನಂ. 733/2025ರಂತೆ ಅರ್ಜಿ ಹೂಡಲಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿ ಚಿಕ್ಕದಾದೆಪ್ಪ ಬಿನ್ ಲೇಟ್ ಕಾಮಯ್ಯ ರವರ ಮರಣ ಸಮರ್ಥನ ಪ್ರಮಾಣ ಪತ್ರ ಪಡೆಯಲು ಯಾವುದೇ ತಕರಾರು ಇದ್ದಲ್ಲಿ ಅಥವಾ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಸೂಕ್ತ ದಾಖಲೆಗಳೊಂದಿಗೆ ದಿನಾಂಕ 30.06.2026ರಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದೆಂದು ತಿಳಿಸುವುದು.

ಶಿರಸ್ತೇದಾರರು, ಘನಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿಡ್ಲಘಟ್ಟ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗೌರಿಬಿದನೂರು
ಕ್ರಿಮಿನಲ್ ಮಿಸ್. 273/2026

ಅರ್ಜಿದಾರರು : 1) ಶ್ರೀಮತಿ, ನಾಗಮ್ಮ ಕೋಂ ಲೇಟ್ ಗಂಗಾಧರಪ್ಪ, ವಯಸ್ಸು-40 ವರ್ಷ. 2) ಶಿಲ್ಪ, ಜಿ. ಬಿನ್ ಲೇಟ್ ಗಂಗಾಧರಪ್ಪ, ವಯಸ್ಸು-28 ವರ್ಷ, 3) ಕುಮಾರಿ. ರೂಪ. ಜಿ. ಬಿನ್ ಲೇಟ್ ಗಂಗಾಧರಪ್ಪ, ವಯಸ್ಸು-25 ವರ್ಷ, ಎಲ್ಲರ ವಾಸ: ಗುಂಡಾಪುರ ಗ್ರಾಮ, ಕಸಬಾ ಹೋಬಳಿ, ಗೌರಿಬಿದನೂರು ತಾಲ್ಲೂಕು. : ವಿರುದ್ಧ :
ಎದುರುದಾರರು : ಮಾನ್ಯ ಆಯುಕ್ತರು, ನಗರಸಭಾ ಕಾರ್ಯಾಲಯ, ಜನನ ಮತ್ತು ಮರಣ ದಾಖಲೆಗಳ ರಿಜಿಸ್ಟ್ರಾರ್, ಗೌರಿಬಿದನೂರು ಟೌನ್, ಚಿಕ್ಕಬಳ್ಳಾಪುರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಗ, 2ನೇ ಮತ್ತು 3ನೇ ಅರ್ಜಿದಾರರ ತಮ್ಮನಾದ ಪವನ್‌ಕುಮಾರ್ ಬಿನ್ ಲೇಟ್ ಗಂಗಾಧರಪ್ಪ ನವರು ದಿನಾಂಕ : 23-11-2024 ರಂದು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ಟೌನ್, ಕಸಬಾ, ಗುಂಡಾಪುರದಲ್ಲಿ ಮರಣ ಹೊಂದಿರುತ್ತಾರೆ ಹಾಗೂ ಅವರ ಮರಣದ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳು ಇಲ್ಲದ ಸಲುವಾಗಿ ಜನನ ಮತ್ತು ಮರಣಗಳ ನೊಂದಣಿ ಕಾಯಿದೆಯಂತೆ ಎದುರುದಾರರು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರದ ಆದೇಶ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದಾಗಿ ಸಾರ್ವಜನಿಕರು ಯಾವುದೇ ಆಕ್ಷೇಪಣೆ ಇದ್ದಲ್ಲಿ ಈ ನ್ಯಾಯಾಲಯದ ಮುಂದೆ ದಿನಾಂಕ 25-06-2026 ರಂದು ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ 27-05-2026ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ : ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗೌರಿಬಿದನೂರು.
ಸಣ್ಣಕ್ಕಿವೆಂಕಟರವಣಪ್ಪ, ಅರ್ಜಿದಾರರ ಪರ ವಕೀಲರು, ಗೌರಿಬಿದನೂರು ತಾಲ್ಲೂಕು.

HITTCO TOOLS LIMITED

Regd Off: No. No-17-C, KIADB Industrial Area, 2nd Phase, Peenya, Bangalore-560058
Ph: +91 80 40865600/ Website : www.hittco.in/ CIN: L28939KA1995PLC016888
Statement of Standalone Audited Financial Results for the quarter and year ended 31st March 2026

(Rs. in lakhs)

Sr. No	Particulars	Quarter ended: Current 3 Months 31-03-2026 Audited	Quarter ended: Previous 3 Months 31-12-2025 Unaudited	Quarter ended: Corresponding 3 Months 31-03-2025 Audited	Year ended (Year to date figures): Current 31-03-2026 Audited	Year ended (Year to date figures): Previous 31-03-2025 Audited
1	(a) Revenue from operations	247.39	191.23	261.54	809.75	694.51
2	(b) Other Income	1.36	0.07	41.94	2.56	42.97
3	Total Income	248.75	191.30	303.48	812.31	737.47
4	Total Expenses	228.53	217.31	247.18	871.45	729.68
5	Profit/(Loss) before Tax	20.21	(26.01)	56.30	(59.13)	7.79
6	Tax Expense	8.42	-	8.42	11.60	8.42
7	Net Profit / (Loss) after tax	11.79	(26.01)	47.87	(70.73)	(0.63)
8	Other comprehensive income/ (expense) net of taxes	(4.55)	-	(4.55)	(1.02)	(4.55)
9	Total Comprehensive income	7.24	(26.01)	43.33	(71.76)	(5.18)
10	Paid-up equity share capital (Face value of the shares is Rs. 10/- each)	632.07	603.60	603.60	648.10	603.60
11	Earnings per equity share					
	(a) Basic	0.12	(0.43)	0.72	-	0.34
	(b) Diluted	0.12	(0.43)	0.72	-	0.34

Note 1) The above are the extract of the detailed format of quarterly and Year ended financial results filed with stock exchange under regulation 33 of the SEBI (LODR) Regulation, 2015. The Full format of the quarter are available on stock exchange and company website.
2) The above result reviwed by audit committee and approved by Board of Director on Board Meeting dated 30.05.2026

Place : Bengaluru
Date : 30-05-2026

For and on behalf of Board of Directors
of HITTCO TOOLS LIMITED
Sd/-
SURENDRA BHANDARI
Managing Director DIN: 00727912

IN THE COURT OF THE ADDL. CIVIL JUDGE AND JUDICIAL MAGISTRATE FIRST CLASS AT BANGARPET
C.M.C. Pet. No. 686/2026,

PETITIONER: UMAPATHI, aged 62 years, S/o Gurappa Reddy, residing at Halanayakanahalli, Karmalam Post, Bengaluru East Taluk, Bengaluru-560 035.
V/s
RESPONDENT: The Tahsildar, Bangarpet Taluk, Bangarpet.

PUBLIC NOTICE

It is hereby informed that the petitioner has filed the above petition seeking an order to direct the respondent to incorporate the date of death and place of death of his wife Smt. Y. Manjula W/o Umapathi of Halanayakanahalli, Karmalam Post, Bengaluru East Taluk, Bengaluru-560035 on 21.11.2022 in Railway Accident at Bisanatham-Varadhapura K.Mts. No.273/600-700 downline, Kamasamudra Railway Station Platform, in their concerned register and to issue the death certificate of late Smt. Y.Manjula to the Petitioner.

Hence, any interested person/s having objection may appear either personally or through their Advocate before the Addl. Civil Judge & JMFC Court at Bangarpet on 04.07.2026 at 11-00 A.M. failing which the exparte order will be passed.

By Order of the Court
Sheristhedar, Addl.Civil Judge Court, Bangarpet.

S.RAJAGOPAL M.A., LL.B., D.J., Advocate,
Enrodent No. KAR 1520/2007
Puneeth Rajkumar Circle, Near Ayyappaswamy Temple, Bangarpet 53114.
Bangarpet, Date: 24/04/2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ– 06/2026–27/965 ದಿನಾಂಕ: 30.05.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಸಿ–8) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08–06–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 09–06–2026 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 10–06–2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: 5054-80-190-0-01-132 KRDCL During 2026-27 ವರ್ಕ ಇಂಡೆಂಟ್ (1) PWD/2026-27/SE1375

(ಕೆಸಿ–8) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 91802550121 & 91802550122‌7) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/169/26-27 dt. 30.05.2026

ಜಾಹೀರಾತಿಗಾಗಿ ಸಂಪರ್ಕಿಸಿ:
9845438807,9611755391

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ
ಕೆ.ಜಿ.ಎಫ್–563122 CITY MUNICIPAL COUNCIL ROBERTSONPET KOLAR GOLD FIELDS - 563122

Website: www.robertsonpetcity.mrcgov.in, E mail: itstaff_ulb_robertsonpet@yahoo.com Phone No:08153-260256

ಸಂಖ್ಯೆ:ನಸರಾ/ತಾಶಾ/ಸ.ಅ/ಇ–ಪ್ರೊಕ್/ಸಿಆರ್/02/2026–27 ದಿನಾಂಕ:26.05.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ದ್ವಿ–ಲಕೋಟೆ ಪದ್ಧತಿ)

ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆ ನಿಧಿ ಮತ್ತು ಮಾನ್ಯ ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದ ಅಡಿಯಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

sl no	Name of work	estimated cost (Rs.In Lakhs	category
1	DMA/2026-27/OW/WORK_INDENT57582	300.00	OTHERS
2	DMA/2025-26/OW/WORK_INDENT53058/CALL-3	80.5	OTHERS
3	DMA/2025-26/OW/WORK_INDENT53068/CALL-3	50.3	OTHERS
4	DMA/2025-26/OW/WORK_INDENT53071/CALL-3	67.5	OTHERS

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08153–260256.

ಸಹಿ/–
ಡಾ॥ಎಂ.ಆರ್ ರವಿ
ಆಡಳಿತಾಧಿಕಾರಿಗಳು, ನಗರಸಭೆ, ಕೆಜಿಎಫ್
ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ

ಸಹಿ/–
ಶ್ರೀಧರ್ ವಿ
ಪೌರಾಯುಕ್ತರು
ನಗರಸಭೆ, ಕೆಜಿಎಫ್

ವಾಸಾಸಂಇ/ ಕೋಲಾರ/ ಆರ್.ಓ.ಸಂಖ್ಯೆ:91/ಕೆಎಸ್‌ಎಂಸಿಎ/ 2026–27

ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ–2,3/ಟೆಂಡರ್/2026–27/603
ದಿನಾಂಕ : 29–05–2026

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ & ದ್ವಿ-ಲಕೋಟೆ) ಕೆ.ಡಬ್ಲ್ಯೂ. 1, 2 & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2025–26 ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಮಂಜೂರಾದ ಅನುದಾನದ ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಜಮಖಂಡಿ, ಬೀಳಗಿ, ಬಾದಾಮಿ ಹಾಗೂ ತೇರದಾಳ ವಿಧಾನಸಭಾ ಮತ ಕ್ಷೇತ್ರದ ಗ್ರಾಮೀಣ ರಸ್ತೆ, ಸೇತುವೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 2 & 3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 1999 –2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ. : 25537, 25526, 25550, 25592, 25546, 25547, 22142/ಕರೆ–3, 26671, 22143/ಕರೆ–2, 22172/ಕರೆ–2, ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25588, 25541, ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25532, 25551, 25549, 18795/ಕರೆ–2, ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25525, 25548.

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 10.00 ದಿಂದ 60.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 18–06–2026 ರ ಸಂಜೆ 5.30 ಗಂಟೆವರೆಗೆ.
2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 20–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ.
3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಬಿಡ್ ಅನುಮೋದನೆ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/69/ಮಣಿಪಾಲ್/2026–27

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
☎ ಕಛೇರಿ 26678572 : 26600512 : 26609066, Tele Fax: (080)26617980,
Web : bccbl.co.in, E -mail : recovery@bccbl.co.in

ಸ್ಥಿರ ಸ್ವತ್ತುಗಳ ಸ್ವಾಧೀನದ ಬಗ್ಗೆ ಪ್ರಕಟಣೆ (ವಾಸ್ತವಿಕ)

ಕೆಳ ಸಹಿದಾರರು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ., ನ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 ರ ಅನ್ವಯ ಮತ್ತು 2002 ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್ ಫೋರ್ಸ್‌ಮೆಂಟ್) ನಿಯಮಗಳ ನಿಯಮ 9 ಅನ್ನು ಓದಿಕೊಂಡಂತೆ ಪ್ರಕರಣ 13 (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಸಾಲಗಾರರುಗಳು / ಕಾನೂನು ಬದ್ಧ ಉತ್ತರಾಧಿಕಾರಿಗಳಾದವರಿಗೆ ಸಾಲವನ್ನು ಮರು ಪಾವತಿಸಲು ತಗಾದೆ ಸೂಚನೆಯನ್ನು ನೀಡಲಾಗಿತ್ತು. ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡಬೇಕಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರುಪಾವತಿ ಮಾಡಲಿಲ್ಲವಾದ್ದರಿಂದ ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮದ ನಿಯಮ 9 ನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13 (4) ರನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಕಂಡ ದಿನಾಂಕಗಳಂದು ವಿವರಿಸಲಾಗಿರುವ ಸ್ವತ್ತುಗಳನ್ನು ಕೆಳಸಹಿದಾರರು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ ಕಾನೂನು ಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರು ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದ ಆದರೆ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ಥಿರಾಸ್ತಿಗಳ ವಿವರ ಮತ್ತು ಅಳತೆ
ವಿಜಯನಗರ ಶಾಖೆ :			
01	ಮಾದಮ್ಮ (ಪಾವತಿದಾರರು) ಕಾನೂನುಬದ್ಧ ವಾರಸುದಾರರುಗಳು (1) ಮಹಾದೇವ ಎಸ್ (ಮಗ), (2) ಕುಮಾರ್ ಎಸ್ (ಮಗ) (3) ಸಿದ್ದರಾಜಮ್ಮ (ಮಗಳು), & (4) ಮಂಜಮ್ಮ (ಮಗಳು)	ತಗಾದೆ ನೋಟೀಸ್ ದಿನಾಂಕ : 05.12.2025 ಸ್ವಾಧೀನತೆ ನೊಟೀಸ್ ದಿನಾಂಕ : 25.05.2026 ಬಾಕಿ ಇರುವ ಮೊತ್ತ : ದಿನಾಂಕ: 25.05.2026 ಕ್ಕೆ ರೂ. 8,99,581/–	ಸ್ಥಿರಾಸ್ತಿಗಳ ವಿವರ ಹಾಗೂ ಅಳತೆ :– ನಂ.17/15, ಪಿಐಡಿ ಸಂಖ್ಯೆ. 32–26–17/5, 18ನೇ ಕ್ರಾಸ್, (8ನೇ ಮತ್ತು 10ನೇ ಕ್ರಾಸ್ ನಡುವೆ), ಭುವನೇಶ್ವರಿನಗರ, ಬಿಎಂಪಿ ವಾರ್ಡ್ ಸಂಖ್ಯೆ. 32, ಬೆಂಗಳೂರು. ಅಳತೆ : 15 ಅಡಿ & ಉತ್ತರದಿಂದ ದಕ್ಷಿಣಕ್ಕೆ: 55+56/2 ಅಡಿ. ಪೂರ್ವಕ್ಕೆ : ಆಸ್ತಿ ಕಡಬ ಸಾಹುಜಿ ಮಠಕ್ಕೆ ಸೇರಿದ್ದು, ಪಶ್ಚಿಮಕ್ಕೆ : ಆಸ್ತಿ ಎಸ್. ಮಾದಯ್ಯ ಅವರಿಗೆ ಸೇರಿದೆ, ಉತ್ತರಕ್ಕೆ : ರಾಜಕಾಲುವೆ, ದಕ್ಷಿಣಕ್ಕೆ : ರಸ್ತೆ.
02	ಶ್ರೀ. ಬಾಬು ಸಾಬ್ @ ಬಾಬು	ತಗಾದೆ ನೋಟೀಸ್ ದಿನಾಂಕ : 05.03.2026 ಸ್ವಾಧೀನತೆ ನೊಟೀಸ್ ದಿನಾಂಕ : 25.05.2026 ಬಾಕಿ ಇರುವ ಮೊತ್ತ : ದಿನಾಂಕ: 25.05.2026 ಕ್ಕೆ. 10,47,015/–	ಸ್ಥಿರಾಸ್ತಿಗಳ ವಿವರ ಹಾಗೂ ಅಳತೆ :– ಹೊಸ ಸಂಖ್ಯೆ 208/1–1, ಹಿಂದಿನ ಪಶ್ಚಿಮ ಭಾಗ, ಹಳೆಯ ಸಂಖ್ಯೆ 208/1, ಗುಡ್ಡದಹಳ್ಳಿ ವಿಸ್ತರಣೆ, ಬಾಪೂಜಿನಗರ, ಬಾಪೂಜಿನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 42, ಪಿಐಡಿ ಸಂಖ್ಯೆ 42–40–208/1–1, ಬೆಂಗಳೂರು. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ: 15 ಅಡಿ & ಉತ್ತರದಿಂದ ದಕ್ಷಿಣಕ್ಕೆ: 45 ಅಡಿ. ಪೂರ್ವಕ್ಕೆ : ಅದೇ ಆಸ್ತಿಯ ಉಳಿದ ಭಾಗಗಳು, ಪಶ್ಚಿಮಕ್ಕೆ : ಆಸ್ತಿ ಶಾಮಣ್ಣ ಅವರಿಗೆ ಸೇರಿದ್ದು, ಉತ್ತರಕ್ಕೆ : 30 ಅಡಿ ರಸ್ತೆ, ದಕ್ಷಿಣಕ್ಕೆ : ಆಸ್ತಿ ಗುಂಡರಾಯ ಅವರಿಗೆ ಸೇರಿದೆ.
03	ಶ್ರೀಮತಿ ಶಹೀದ್ ಬೇಗಂ	ತಗಾದೆ ನೋಟೀಸ್ ದಿನಾಂಕ : 02.02.2026 ಸ್ವಾಧೀನತೆ ನೊಟೀಸ್ ದಿನಾಂಕ : 25.05.2026 ಬಾಕಿ ಇರುವ ಮೊತ್ತ : ದಿನಾಂಕ: 25.05.2026 ಕ್ಕೆ ರೂ. 13,45,810/–	1 ನೇ ಷೆಡ್ಯೂಲ್ ಆಸ್ತಿ ಮತ್ತು ಅಳತೆ :– ಹೊಸ ಸಂಖ್ಯೆ 1/7, ಹಳೆಯ ಸಂಖ್ಯೆ 1/6, 5 ನೇ ಕ್ರಾಸ್, ಪಾದರಾಯನಪುರ, ಪಾದರಾಯನಪುರದ ಬಿಬಿಎಂಪಿ ವಾರ್ಡ್ ಸಂಖ್ಯೆ 43, ಪಿಐಡಿ ಸಂಖ್ಯೆ 43–123–1/7, ಬೆಂಗಳೂರು. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ: 31 ಅಡಿ & ಉತ್ತರದಿಂದ ದಕ್ಷಿಣಕ್ಕೆ: 14 ಅಡಿ. ಪೂರ್ವಕ್ಕೆ : ಶ್ರೀಮತಿ ಸುಶೀಲಮ್ಮ ಅವರಿಗೆ ಸೇರಿದ ಅದೇ ಆಸ್ತಿಯ ಉಳಿದ ಭಾಗ, ಪಶ್ಚಿಮಕ್ಕೆ : ಜಲೀಲಾ ಸಾಹೇಬರ ಆಸ್ತಿ, ಉತ್ತರಕ್ಕೆ : ಅದೇ ಆಸ್ತಿಯ ಉಳಿದ ಭಾಗ 14 X 42 ಅಡಿ ಅಳತೆ, ದಕ್ಷಿಣಕ್ಕೆ : ಒಳಚರಂಡಿ. 2ನೇ ಷೆಡ್ಯೂಲ್ ಆಸ್ತಿ ಮತ್ತು ಅಳತೆ :– ಹೊಸ ಸಂಖ್ಯೆ 1/8, ಹಳೆಯ ಸಂಖ್ಯೆ 1/6, 5ನೇ ಕ್ರಾಸ್, ಪಾದರಾಯನಪುರ, ಪಾದರಾಯನಪುರದ ಬಿಬಿಎಂಪಿ ವಾರ್ಡ್ ಸಂಖ್ಯೆ 43, ಪಿಐಡಿ ಸಂಖ್ಯೆ 43–123–1/8, ಬೆಂಗಳೂರು. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ: 10 ಅಡಿ & ಉತ್ತರದಿಂದ ದಕ್ಷಿಣಕ್ಕೆ: 11 ಅಡಿ. ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಶಾರದಮ್ಮನ ಆಸ್ತಿ, ಉತ್ತರಕ್ಕೆ : ಒಂದೇ ಆಸ್ತಿಯ ಉಳಿದ ಭಾಗಗಳು, ದಕ್ಷಿಣಕ್ಕೆ : ಒಳಚರಂಡಿ.

ದಿನಾಂಕ : 30.05.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.,

{XELP}

XELPMOC DESIGN AND TECH LIMITED

CIN: L72200KA2015PLC082873
Registered Office: No.57, 13th Cross, Novel Business Park, Hosur Road, Anepalya, Adugodi, Bengaluru - 560030, Karnataka, India. Tel. No: (+91) 6364316889;
E-mail: vaishali.kondbhar@xelpmoc.in; Website: www.xelpmoc.in

Statement of Financial Results for the quarter and year ended March 31, 2026

(Rupees in 1000's except per share data)

Sr. No.	Particulars	Standalone: Quarter ended March 31, 2026 (Unaudited)	Standalone: Quarter ended March 31, 2025 (Unaudited)	Standalone: Year ended March 31, 2026 (Audited)	Standalone: Year ended March 31, 2025 (Audited)	Consolidated: Quarter ended March 31, 2026 (Unaudited)	Consolidated: Quarter ended March 31, 2025 (Unaudited)	Consolidated: Year ended March 30, 2026 (Audited)	Consolidated: Year ended March 31, 2025 (Audited)
1	Income from operations	10,791.35	9,052.41	37,353.38	39,011.88	10,791.35	7,062.41	37,353.38	38,984.73
2	Net profit / (Loss) for the period (before tax, Exceptional and/or Extraordinary items)	(18,299.26)	(15,951.29)	(72,895.84)	(70,166.88)	(18,486.19)	(16,848.21)	(74,634.66)	(80,570.73)
3	Net profit / (Loss) for the period before tax (after Exceptional and/or Extraordinary items)	(18,299.26)	(15,936.94)	(75,676.59)	(86,087.66)	(18,486.19)	(18,443.12)	(77,415.41)	(80,570.73)
4	Net profit / (Loss) for the period after tax (after Exceptional and/or Extraordinary items)	(17,604.59)	(15,930.19)	(74,188.95)	(86,194.63)	(17,791.52)	(18,568.66)	(75,927.78)	(80,809.99)
5	Total Comprehensive Income for the period[Comprising Profit / (Loss) for the period (after tax) and Other Comprehensive Income (after tax)]	(5,259.74)	24,002.91	100,529.83	13,062.39	(5,446.67)	20,422.10	98,791.00	18,873.17
6	Equity share capital	147,594.93	147,199.93	147,594.93	147,199.93	147,594.93	147,199.93	147,594.93	147,199.93
7	Reserves excluding revaluation reserves as per the balance sheet of the previous year			596,584.07	487,531.80			600,517.66	493,189.87
8	Earnings per share of (Rs. 10 each) **								
	a) Basic (Rs.)	(1.19)	(1.08)	(5.03)	(5.86)	(1.21)	(1.26)	(5.15)	(5.50)
	b) Diluted (Rs.)	(1.17)	(1.07)	(4.93)	(5.79)	(1.18)	(1.25)	(5.05)	(5.43)

**EPS is not annualized for the quarter ended March 31, 2026 and quarter ended Mar 31, 2025.

Note:
1 The above is an extract of the detailed format of quarter and year ended March 31, 2026 Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the websites of the Stock Exchange(s) www.bseindia.com & www.nseindia.com and on the website of the Company www.xelpmoc.in under Investor Relation Section.
2 The statement of audited financial results for the quarter and year ended March 31, 2026, has been reviewed by the Audit Committee and approved by the Board of Directors at their respective meetings held on May 29, 2026. The Statutory Auditors have expressed an unmodified audit opinion.

For and on behalf of the Board of Directors of
Xelpmoc Design and Tech Limited
sd/-
Srinivas Koora
Whole Time Director and Chief Financial Officer
(DIN: 07227584)

Place: Hyderabad
Date: May 29, 2026

CONCEPT

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.
Email:commn_hassan@yahoo.com ದೂರವಾಣಿ: 08172–268276, 263033 web: http://www.hassancity.mrc.gov.in ಸಹಾಯವಾಣಿ: 233702 ಫ್ಯಾಕ್ಸ್: 234792

ನಂ:ಮನಪಾಹಾ/ಮಿ.ಶಾ/ಸಿಆರ್/02/2026–27 ದಿನಾಂಕ:–30–05–2026

:: ಹರಾಜು ಪ್ರಕಟಣೆ ::

ಈ ಮೂಲಕ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 01–06–2026 ರಿಂದ ದಿನಾಂಕ:15–06–2026 ರ ವರೆಗಿನ ಅವಧಿಯಲ್ಲಿ ಈ ಕೆಳಕಂಡ ವಿವಿದ ಬಾಬುಗಳ ಸುಂಕ ವಸೂಲಿ ಹಕ್ಕುಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಹರಾಜು ಇಸ್ತಿಯಾರ್ ಹೊರಡಿಸಲಾಗಿದೆ. (http:/kppp.karnataka4.gov.in) ಸದರಿ ಬಾಬುಗಳ ಸುಂಕ ವಸೂಲಿ ಹಕ್ಕನ್ನು ಪಡೆಯುವ ಆಸಕ್ತರು/ಏಜೆನ್ಸಿಯವರು ದಿನಾಂಕ:15–06–2026 ರಂದು ಸಂಜೆ 5 ಗಂಟೆಯೊಳಗಾಗಿ ಠೇವಣಿ ಮೊತ್ತವನ್ನು ಪಾವತಿಸಿ ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯಾಧಿಕಾರಿಯನ್ನು ಸಂಪರ್ಕಿಸುವುದು. ಕ್ರ.ಸಂ. ಬಾಬುಗಳ ವಿವರ 1)ಪ್ರತಿ ಮಂಗಳವಾರ ಗೊರೂರು ರಸ್ತೆಯ ಬದಿ ಸಂತೆ ಸಾಲಗಾಮೆ ರಸ್ತೆ ಕ್ರೀಡಾಂಗಣದ ಹತ್ತಿರ ಎನ್.ಸಿ.ಸಿ. ಕಛೇರಿ ಮುಂಭಾಗ ನಡೆಯುವ ಸಂತೆ, ಕೇಂದ್ರ ಅರಣ್ಯ ಇಲಾಖೆ ಹತ್ತಿರ ನಡೆಯುವ ಸಂತೆ ಸುಂಕ ವಸೂಲಿ ಮಾಡುವ ಹಕ್ಕು. ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯ ಕಟ್ಟಿನ ಕೆರೆ ಮಾರುಕಟ್ಟೆ ಹಾಗೂ ರಸ್ತೆ ಬದಿ ಮಾರಾಟ ಮಾಡುವ ತರಕಾರಿಗಳಿಗೆ ಸುಂಕ ವಸೂಲಿ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.2,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ.65,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ Live Bidding time 15-06-2026 ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ರ ಗಂಟೆ ವರೆಗೆ 2)ಗೊರೂರು ರಸ್ತೆ ಎಡಭಾಗದಲ್ಲಿ ನಿರ್ಮಿಸಿರುವ (ಕಸಾಯಿ ಖಾನೆಯಲ್ಲಿ) ಕುರಿ ಮಾಂಸ ಮಾರಾಟ ಮಾಡುವ ಹಕ್ಕು, ಖಸಾಯಿ ಖಾನೆಯಲ್ಲಿ ಬೀಳುವ ಗೊಬ್ಬರವನ್ನು ತೆಗೆದುಕೊಂಡು ಹೋಗುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 1,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ. 2,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ 3)ಮಹಾನಗರ ಪಾಲಿಕೆ ಜಾಗದ ಮಳಿಗೆಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 50,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ. 1,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ 4)ಹಾಸನ ಮಹಾನಗರ ಪಾಲಿಕೆಯ ಮುಖ್ಯ ರಸ್ತೆಗಳಾದ ಸಹ್ಯಾದ್ರಿ ರಸ್ತೆಯ ಫುಡ್ ಕೋರ್ಟ್, ಎಂ.ಜಿ.ರಸ್ತೆಯ ಫುಡ್ ಕೋರ್ಟ್ ಹಾಗೂ ಪೃಥ್ವಿ ಥಿಯೇಟರ್ ಹತ್ತಿರ ಇರುವ ಫುಡ್ ಕೋರ್ಟ್ ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.1,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ.13,00,000.00 ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ ಷರತ್ತುಗಳು: 1.ಹರಾಜಿನಲ್ಲಿ ಭಾಗವಹಿಸುವವರು ಕಾಲಂ ನಂ 3 ರಲ್ಲಿ ಸೂಚಿಸಿರುವಂತೆ ಐಟಂವಾರು ಠೇವಣಿ ಮೊತ್ತವನ್ನು ಆನ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಬೇಕು. 2.ಹರಾಜು ಅಖೈರಾದ ಕೂಡಲೇ ಅಖೈರು ಸವಾಲುದಾರರು ಹರಾಜಿನ ಬಾಕಿ ಮೊತ್ತವನ್ನು ಹರಾಜು ಆದ ಸ್ಥಳದಲ್ಲಿಯೇ ಪೂರ್ಣ ಮೊತ್ತವನ್ನು ಜಿ.ಎಸ್.ಟಿ. ಮೊತ್ತದೊಂದಿಗೆ ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು. 3.ಹರಾಜು ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಧಿಕಾರ ಮಹಾನಗರ ಪಾಲಿಕೆ ಆಯುಕ್ತರಿಗೆ ಇರುತ್ತದೆ. 4.ಹರಾಜು ಖಾಯಂ ಆಯಿತೆಂದು ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರರನ್ನು ಗುತ್ತಿಗೆದಾರನೆಂದು (ಕಂಟ್ರಾಕ್ಟರ್) ಕರೆಯಲ್ಪಡುತ್ತಾನೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹರಾಜು ಇಸ್ತಿಯಾರ್‌ನಲ್ಲಿ ವಿಧಿಸಿರುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ಧರಾಗಿರುತ್ತೇನೆಂತಲು ಮತ್ತು ಕೆಳಗೆ ನಮೂದಿಸಿರುವ ಆಗಿಂದ್ದಾಗ್ಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡಬಹುದಾದ ಆದೇಶಗಳಿಗೆ ಬದ್ಧರಾಗಿರುತ್ತಾರೆಂದು ಛಾಪಾ ಕಾಗದಲ್ಲಿ ಸ್ಟ್ಯಾಂಪ್ ಕಾಯ್ದೆ(ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದ ಸ್ವಂತ ಖರ್ಚಿನಿಂದ ರಿಜಿಸ್ಟರ್ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲು ಆಗುವ ನಷ್ಟವನ್ನು ಮೊದಲನೇ ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. 5.ಗುತ್ತಿಗೆದಾರು (ಕಂಟ್ರಾಕ್ಟರ್) ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೂಡದು, ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಗುತ್ತಿಗೆಯನ್ನು ತಪ್ಪಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ಮಹಾನಗರ ಪಾಲಿಕೆ ಸ್ವಾದೀನಪಡಿಸಿಕೊಳ್ಳಲಾಗುವುದು. ಮತ್ತು ಗುತ್ತಿಗೆವಾಯಿದೆಯವರಿಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು 6.ಫುಡ್‌ಕೋರ್ಟ್‌ನಿಂದ ಬರುವಂತಹ ತ್ಯಾಜ್ಯವನ್ನು ಹಸಿಕಸ – ಒಣಕಸಗಳನ್ನಾಗಿ ಬೇರ್ಪಡಿಸಿ ಪ್ರತ್ಯೇಕ ಆಟೋ ಟಿಪ್ಪರ್‌ನಲ್ಲಿ ವಿಲೇವಾರಿ ಮಾಡುವುದು ಹಾಗೂ ಸ್ವಚ್ಚತೆ ಕಾಪಾಡುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ. 7.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಮಹಾನಗರ ಪಾಲಿಕೆ ಇಸ್ತಿಹಾರ್ ಚಾಪ್ಟರ್ 12 ರಲ್ಲಿ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 8.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಪುರಸಭಾ ಕಾಯ್ದೆ 1964ರ ಅನುಸೂಚಿ 10 ಮತ್ತು 11 ರ ಪ್ರಕರಣ 142 ಮತ್ತು 143ರಂತೆ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 9.ಗುತ್ತಿಗೆದಾರನಾಗಲಿ, ಆತನ ನೌಕರನಾಗಲಿ ಹರಾಜು ಇಸ್ತಿಹಾರ್ ಷರತ್ತು ಅಥವಾ ಹುಕುಂ ಉಲ್ಲಂಘಡಿಸಿದಲ್ಲಿ ಆತನ ಗುತ್ತಿಗೆ ತಪ್ಪಿಸಿ ಸೂಕ್ತ ರೀತಿ ವಿಲೇವಾರಿ ಮಾಡಲು ಆಯುಕ್ತರಿಗೆ ಅಧಿಕಾರವಿರುತ್ತದೆ. 10.ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಗುತ್ತಿಗೆದಾರರು (ಕಂಟ್ರಾಕ್ಟರ್) ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತು ಹರಾಜಿನಲ್ಲಿ ಸವಾಲು ಮಾಡಲು ಅಧಿಕಾರವಿರುವುದಿಲ್ಲ. 11.ಗುತ್ತಿಗೆದಾರರು ಆಂಗಿದ್ದಾಂಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡತಕ್ಕ ಹುಕುಂಗಳಿಗೆ ಬದ್ಧರಾಗಿರತಕ್ಕದ್ದು. 12.ಬಿಡ್‌ದಾರರು ಯಾವ ಕಾರಣದಿಂದಲೂ ಖಿಸ್ತು ಮೊಬಲಗನ್ನು ರೆಮೀಷನ್ ಮಾಡುವುದಾಗಲೀ ಪರಿಹಾರ ದ್ರವ್ಯವನ್ನು ಕೇಳಲು ಅವಕಾಶವಿರುವುದಿಲ್ಲ. 13.ಬಿಡ್‌ದಾರರು ಸರ್ಕಾರದಿಂದ ಮುಂದೆ ಬರುವ ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕು ಸಂದರ್ಭಾನುಸಾರ ಮಹಾನಗರ ಪಾಲಿಕೆಯವರು ಮಾಡಬಹುದಾದ ಬದಲಾವಣೆಗೆ ಒಳಪಟ್ಟಿರತಕ್ಕದ್ದು. 14.ಬಿಡ್‌ದಾರರು ತಾನು ವಸೂಲು ಮಾಡುವ ಬಗ್ಗೆ ಲೆಕ್ಕವನ್ನು ಇಡುವುದಲ್ಲದೇ, ತನಿಖೆಗೆ ಬಂದಾಗ ಅಧಿಕಾರಿಗಳು ಅಪೇಕ್ಷಿಸಿದಲ್ಲಿ ಹಾಜರುಪಡಿಸಬೇಕು. 15.ಕಂಟ್ರಾಕ್ಟರ್‌ದಾರರು ಪ್ರತಿ ಬಾಬಿಗೂ ಮಹಾನಗರ ಪಾಲಿಕೆಯಿಂದ ನಿಗದಿಪಡಿಸಿರುವ ಧರದಂತೆ ಅಚ್ಚಾದ ರಶೀದಿಯನ್ನು ಪಾರ್ಟಿಗೆ ಕೊಡಬೇಕು ಹಾಗೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡತಕ್ಕದ್ದಲ್ಲ. 16.ಷೆಡ್ಯೂಲ್ ದರದ ವಿಚಾರದಲ್ಲಿ ಏನಾದರೂ ತಕರಾರು ಬಂದರೆ ಮಹಾನಗರ ಪಾಲಿಕೆಯಿಂದ ಅಧಿಕಾರ ಹೊಂದಿರುವವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. 17.ಒಂದು ಅಂಗಡಿಯಲ್ಲಿರತಕ್ಕ ವಿವಿಧ ಸಾಮಾನುಗಳನ್ನು ಬೇರೆ ಬೇರೆಯೆಂದು ಪರಿಗಣಿಸದೆ ಒಂದು ಅಂಗಡಿಯನ್ನು ಮಾಡಬೇಕು. ಷರಾ:– ಇಸ್ತಿಹಾರ್ ಒಳಗೊಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯಕತೆ ಕಂಡು ಬಂದಲ್ಲಿ ನಿಭಂದನೆಗಳನ್ನು ಸೇರಿಸಲು ಆಡಳಿತಾಧಿಕಾರಿಗಳು/ಆಯುಕ್ತರಿಗೆ ಅಧಿಕಾರ ಇರುತ್ತದೆ.

ವಾಸಾಸಂಇ/ಹಿಸನಿ/ಹಾಸನ/177/ಕೆಎಸ್‌ಎಂಸಿಎ/2026–27

ಸಹಿ/–ಆಯುಕ್ತರು, ಹಾಸನ ಮಹಾನಗರ ಪಾಲಿಕೆ, ಹಾಸನ.

ಗ್ಲೋಬಲ್ ಎಂಎಸ್‌ಎಂಇ ಸಮಾವೇಶದಲ್ಲಿ ಕರಂದ್ಲಾಜೆ

ರೋಬೋಟಿಕ್ಸ್ ಶ್ರೇಷ್ಠತಾ ಕೇಂದ್ರ ಸ್ಥಾಪನೆ

• **ಬೆಂಗಳೂರು:** ಎಂಎಸ್‌ಎಂಇಗಳಿಗೆ ಅನುಕೂಲವಾಗಲು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಶೀಘ್ರದಲ್ಲೇ ಕೇಂದ್ರ ಸರ್ಕಾರದ ವತಿಯಿಂದ ಕೃತಕ ಬುದ್ಧಿ ಮತ್ತೆ, ರೋಬೋಟಿಕ್ಸ್‌ನ ನಾವಿನ್ಯತೆ ಶ್ರೇಷ್ಠತಾ ಕೇಂದ್ರ ಸ್ಥಾಪನೆ ಮಾಡಲಾಗುವುದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮತ್ತು ಪೀಣ್ಯ ಕೈಗಾರಿಕೆಗಳ ಸಂಘಯಿಂದ ನಡೆಯುತ್ತಿರುವ ಗ್ಲೋಬಲ್ ಎಂಎಸ್‌ಎಂಇ ಸಮಾವೇಶದ ಎರಡನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬರುವಂತ ದಿನಗಳಲ್ಲಿ ಎಂಎಸ್ ಎಸ್‌ಇ ಗಳ ಅಭಿವೃದ್ಧಿಗೆ ರಕ್ಷಣ ಕ್ಷೇತ್ರ, ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್ ತಂತ್ರಜ್ಞಾನದ ಬಗ್ಗೆ ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಎಂಎಸ್‌ಎಂಇ ಗಳಿಗೆ ಅನುಕೂಲವಾಗಲು ಶೀಘ್ರದಲ್ಲೇ ನಾವಿನ್ಯತೆ ಶ್ರೇಷ್ಠತಾ ಕೇಂದ್ರ ಸ್ಥಾಪನೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಎಂಎಸ್‌ಎಂಇಗಳಿಗೆ ಹಲವಾರು ಸವಾಲುಗಳಿವೆ, ಕೋವಿಡ್ ಸಮಯದಲ್ಲಿ ಕೇಂದ್ರ ಸರ್ಕಾರ ತಮ್ಮ ಜೊತೆ ಬೆನ್ನೆಲುಬಾಗಿತ್ತು. ರಾಷ್ಟ್ರದ ಅಭಿವೃದ್ಧಿಗೆ ಎಂಎಸ್‌ಎಮ್‌ಇ ಪಾಲುದಾರರಾಗಿ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರ ಸಣ್ಣ ಕೈಗಾರಿಕಾ ಉದ್ಯಮಿಗಳಿಗೆ ಸಬ್ಸಿಡಿ ನೀಡಿದೆ. ದೇಶದ ಜಿಡಿಪಿ ಬೆಳವಣಿಗೆಗೆ ಕೃಷಿ ನಂತರ ಎಂಎಸ್‌ಎಮ್‌ಇಯೇ ಆಧಾರವಾಗಿದೆ. ಎಮ್‌ಎಸ್‌ಎಂಇಗಳು ಹಳೆ ತಂತ್ರಜ್ಞಾನಗಳನ್ನು ಬಿಟ್ಟು ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.



ಕೌಶಲ್ಯವುಳ್ಳ ಯುವಕರು ಬ್ಯಾಂಕರ್ಸ್‌ಗಳ ವಿಶ್ವಾಸ, ನೂತನ ತಂತ್ರಜ್ಞಾನ ಮತ್ತು ಮಾರ್ಕೆಟಿಂಗ್ ಇದರ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗಿದೆ. ಎಂಎಸ್‌ಎಮ್‌ಇಗಳು ತಯಾರಿಸುವ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಯಲ್ಲಿ ಸಿಗುವಂತೆ ಮಾಡಬೇಕಾಗಿದೆ. ಹಲವಾರು ಸಮಸ್ಯೆಗಳನ್ನು ಆಲಿಸಿದ್ದೇನೆ. ಇದರ ಬಗ್ಗೆ ನಾನು ಶೀಘ್ರದಲ್ಲೇ ರಾಜ್ಯ ಸರ್ಕಾರದೊಡನೆ ಮಾತನಾಡುತ್ತೇನೆ ಎಂದು ಭರವಸೆ ನೀಡಿದರು.

ಜೂ.28ಕ್ಕೆ ಬೂತ್‌ಗಳಲ್ಲೇ ಲಸಿಕೆ

• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ಇಲಾಖೆಗಳು ಸಮನ್ವಯದೊಂದಿಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ–2026ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಉತ್ತರ ನಗರ ಪಾಲಿಕೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಸಂಬಂಧ ಆಯುಕ್ತರ ನೇತೃತ್ವದಲ್ಲಿ ಸಭೆ ನಡೆಸಲಾಯಿತು ಎಂದು ಪಾಲಿಕೆ ತಿಳಿಸಿದೆ. ಜೂನ್ 28 ರಿಂದ ಜುಲೈ 1ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಯಲಿದೆ. ಜೂನ್.28ರಂದು ಬೂತ್ ದಿನ ಆಚರಿಸಲಾಗುತ್ತಿದೆ. ಬೂತ್ ಮಟ್ಟದಲ್ಲಿಯೇ ಅತಿಹೆಚ್ಚು ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲಾಗುತ್ತದೆ. ಜೂನ್ 29, 30 ಹಾಗೂ ಜುಲೈ 1ರಂದು ಮನೆ–ಮನೆ ಭೇಟಿ ಮೂಲಕ ಲಸಿಕೆ ನೀಡಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡೆಂಗ್ಯು ನಿಯಂತ್ರಣಕ್ಕೂ ಒತ್ತು: ಸಭೆಯಲ್ಲಿ ಡೆಂಗ್ಯು ನಿಯಂತ್ರಣ ಕುರಿತಾಗಿಯೂ ಚರ್ಚೆ ನಡೆಸಲಾಯಿತು. ಕಳೆದ ವರ್ಷ ಮಳೆಗಾಲದಲ್ಲಿ ಡೆಂಗ್ಯು ಪ್ರಕರಣಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ, ಈ ವರ್ಷ ಡೆಂಗ್ಯೂ ನಿಯಂತ್ರಣಕ್ಕೆ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿ ಶುಕ್ರವಾರ ಡೆಂಗ್ಯು ಡ್ರೈ ಡೇ ಕಾರ್ಯಕ್ರಮಗಳು, ಲಾರ್ವಾ ಸಮೀಕ್ಷೆ, ಮೂಲ ನಾಶ ಕಾರ್ಯಾಚರಣೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಡೆಂಗ್ಯು ನಿಯಂತ್ರಣ ಚಟುವಟಿಕೆಯನ್ನು ಮತ್ತಷ್ಟು ತೀವ್ರಗೊಳಿಸುವ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಕ್ತಿ ನಮನ



ಸಿಎಲ್‌ಪಿ ಸಭೆಗೂ ಮುನ್ನ ಡಿ.ಕೆ.ಶಿವಕುಮಾರ್ ಅವರು ವಿಧಾನಸೌಧ ಕೊಠಡಿಯಲ್ಲಿ ಆರಾಧ್ಯ ದೈವ ಅಜ್ಜಯ್ಯರಿಗೆ ಪೂಜೆ ಸಲ್ಲಿಸಿದ ಬಳಿಕ ಶಾಸಕಾಂಗ ಪಕ್ಷದ ಸಭೆಗೆ ತೆರಳಿದರು.

ಕಿರುಸುದ್ದಿ

ವಿದ್ಯಾರ್ಥಿ ರಿಯಾಯಿತಿ ಪಾಸ್ ವಿತರಣೆ

• **ಬೆಂಗಳೂರು:** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ರಿಯಾಯಿತಿ ದರದಲ್ಲಿ ವಿದ್ಯಾರ್ಥಿ ಪಾಸುಗಳಿಗಾಗಿ ಶನಿವಾರದಿಂದ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರ ಆರಂಭವಾಗಲಿದೆ. 2026–27ನೇ ಸಾಲಿನಲ್ಲಿ (1ನೇ ತರಗತಿಯಿಂದ 12ನೇ ತರಗತಿವರೆಗಿನ) ವಿದ್ಯಾರ್ಥಿ ಬಸ್ ಪಾಸಿಗಾಗಿ ಶನಿವಾರದಿಂದ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ, ಜೂ.1 ರಿಂದ ವಿದ್ಯಾರ್ಥಿ ಪಾಸುಗಳನ್ನು ಬೆಂಗಳೂರು ಒನ್ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗುವುದು. ಪಾಸಿನ ಆನ್‌ಲೈನ್ ಅರ್ಜಿಯು ಸೇವಾಸಿಂಧು ಪೋರ್ಟಲ್ https://sevasindhu.karnataka.gov.in ನಲ್ಲಿ ಲಭ್ಯವಿರುತ್ತದೆ. ವಿದ್ಯಾರ್ಥಿಗಳು ಬೆಂಗಳೂರು ಒನ್ ಕೇಂದ್ರಗಳ ಮೂಲಕವು ವಿದ್ಯಾರ್ಥಿ ಪಾಸಿಗಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿ ಪಾಸುಗಳನ್ನು ಬೆಂಗಳೂರು ಒನ್ ಕೇಂದ್ರ ಹಾಗೂ ಬೆಂ.ಮ.ಸಾ.ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣ, ಕೆಂಗೇರಿ ಟಿಟಿಎಂಸಿ, ಹೊಸಕೋಟೆ, ಎಲೆಕ್ಟ್ರಾನಿಕ್ ಸಿಟಿ ಘಟಕ –19, ಶಾಂತಿನಗರ ಟಿಟಿಎಂಸಿ, ಕರಾರಸಾ ನಿಗಮದ ಆನೇಕಲ್ ಬಸ್ ನಿಲ್ದಾಣದಲ್ಲಿ ವಿತರಿಸಲಾಗುವುದು.

ಚಿತ್ರಕೂಟ ಶಾಲೆ ಸಭಾಂಗಣದಲ್ಲಿ ಬೆಂಕಿ: ಅಪಾಯದಿಂದ ಪಾರು

• **ಬೆಂಗಳೂರು:** ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ನಾಗದೇವನಹಳ್ಳಿಯ ಚಿತ್ರಕೂಟ ಶಾಲೆಯ 4ನೇ ಮಹಡಿಯಲ್ಲಿರುವ ಆಡಿಟೋರಿಯಂನಲ್ಲಿ ಬೆಳಗ್ಗೆ 9.30ರ ಸುಮಾರಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಶಾಲೆಯಲ್ಲಿ 2 ಮತ್ತು 10ನೇ ತರಗತಿಯ 50 ಮಂದಿ ವಿದ್ಯಾರ್ಥಿಗಳಿಗೆ ಶಾಲೆಯ ನೆಲಮಹಡಿಯ ತರಗತಿಗಳಲ್ಲಿ ಪಾಠ ನಡೆಯುತ್ತಿತ್ತು. ಶಾಲೆಗೆ ಬೆಂಕಿ ಹೊತ್ತಿಕೊಂಡಿರುವುದು ತಿಳಿಯುತ್ತಿದ್ದಂತೆ ಶಿಕ್ಷಕರು ತಕ್ಷಣ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಗೆ ಕರೆದುಕೊಂಡು ಬಂದು ರಕ್ಷಿಸಿದ್ದಾರೆ. ನಂತರ ಅಗ್ನಿ ಶಾಮಕ ದಳಕ್ಕೆ ವಿಷಯ ತಿಳಿಸಿದ್ದಾರೆ. ಸುದ್ದಿ ತಿಳಿದು ಮೂರು ಅಗ್ನಿ ಶಾಮಕ ವಾಹನದೊಂದಿಗೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶಾಲೆಗೆ ಬೆಂಕಿ ಹೊತ್ತಿಕೊಂಡಿರುವ ವಿಷಯ ತಿಳಿದ ಪೋಷಕರು ಆತಂಕದಿಂದ ಶಾಲೆ ಬಳಿ ದೌಡಾಯಿಸಿದ್ದರು. ತಮ್ಮ ಮಕ್ಕಳು ಸುರಕ್ಷಿತವಾಗಿರುವುದು ಕಂಡು ನಿಟ್ಟುಸಿರು ಬಿಟ್ಟರು. ಜ್ಞಾನಭಾರತಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಮೇಲ್ನೋಟಕ್ಕೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರುವಬಹುದೆಂದು ಶಂಕಿಸಲಾಗಿದೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಿವಿಧ ಕಾಮಗಾರಿಗೆ ಚಾಲನೆ

• **ದಾಸರಹಳ್ಳಿ:** ಚಿಕ್ಕಬಾಣಾವರದಲ್ಲಿ ಅಂಗನವಾಡಿ ಕೇಂದ್ರ, ಪೌರಕಾರ್ಮಿಕರ ವಿಶ್ರಾಂತಿ ಕೊಠಡಿ ಮತ್ತು ಸಮುದಾಯ ಭವನ, ಚೊಕ್ಕಸಂದ್ರದ ವಿದ್ಯಾನಗರದಲ್ಲಿ ರಾಜ ಕಾಲುವೆ ಮೇಲೆ ಸಂಪರ್ಕ ರಸ್ತೆ ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಎಸ್.ಮುನಿರಾಜು ತಿಳಿಸಿದರು. ಜನರ ಹಿತ ದೃಷ್ಟಿಯಿಂದ ಅನೇಕ ಕಡೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಕ್ಷೇತ್ರದಲ್ಲೇಡೆ ಮೋರಿ, ಚರಂಡಿ ಮತ್ತು ಹದಗೆಟ್ಟ ರಸ್ತೆಗಳಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಅನುದಾನದ ಕೊರತೆಯಿದ್ದು, ಸರ್ಕಾರ ಮನಸ್ಸು ಮಾಡಿ ಅನುದಾನ ನೀಡಬೇಕೆಂದರು.

ದಕ್ಷಿಣ ಪಾಲಿಕೆ ವ್ಯಾಪ್ತಿ ಪ್ರವಾಹಪೀಡಿತ ಪ್ರದೇಶ | ವಿವಿಧ ಸ್ಥಳಗಳಿಗೆ ಮುಖ್ಯ ಆಯುಕ್ತರ ಭೇಟಿ

ಜಲಾವೃತ ಸಮಸ್ಯೆಗೆ ಶಾಶ್ವತ ಪರಿಹಾರ

• **ಬೆಂಗಳೂರು:** ಬನ್ನೇರಘಟ್ಟ ರಸ್ತೆಯಲ್ಲಿ ಜಲಾವೃತವಾಗದಂತೆ ಶಾಶ್ವತ ಯೋಜನೆ ರೂಪಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳು ಹಾಗೂ ಇತರೆ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಬನ್ನೇರಘಟ್ಟ ರಸ್ತೆಯ ರೈನ್ ಬೋ ಮಕ್ಕಳ ಆಸ್ಪತ್ರೆ ಬಳಿ ಮಳೆಯಾದಾಗಲೆಲ್ಲಾ ಜಲಾವೃತವಾಗುತ್ತಿದ್ದು, ವಾಹನ ಸಂಚಾರಕ್ಕೆ ಸಾಕಷ್ಟು ತೊಂದರೆಯಾಗುತ್ತಿದೆ. ಈ ಸಂಬಂಧ ಜಲಾವೃತ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ರಾಜಕಾಲುವೆಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾದಾಗ ಸೈಡ್ ಡ್ರೈನ್‌ಗಳಿಂದ ನೀರು ಹಿಮ್ಮುಖವಾಗಿ ಹರಿದು ರಸ್ತೆಯಲ್ಲಿ ಜಲಾವೃತ ಉಂಟಾಗುತ್ತಿದೆ. ಈ ನಿಟ್ಟಿನಲ್ಲಿ ಮಳೆನೀರುಗಾಲುವೆಯಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಯೋಜನೆ ರೂಪಿಸಬೇಕು. ಜೊತೆಗೆ ರಾಜಕಾಲುವೆಯಲ್ಲಿ ಸಂಪೂರ್ಣವಾಗಿ ಹೂಳೆತ್ತುವಂತೆ ಸೂಚನೆ ನೀಡಿದರು.

ಹುಳಿಮಾವು ಮೆಟ್ರೊ ನಿಲ್ದಾಣದ ಬಳಿಯಿರುವ ಮಳೆನೀರುಗಾಲುವೆಯಲ್ಲಿ ಕೊಳಚೆ ನೀರು ಹರಿದು ಬರುತ್ತಿರುವುದನ್ನು ಗಮನಿಸಿ, ಜಲಮಂಡಳಿ ಅಧಿಕಾರಿಗಳು ಮೂಲವನ್ನು ಪತ್ತೆಹಚ್ಚಿ ಕೊಳಚೆ ನೀರು ಮಳೆನೀರುಗಾಲುವೆಗೆ ಸೇರದಂತೆ ಕ್ರಮವಹಿಸಲು ನಿರ್ದೇಶನ ನೀಡಿದರು.



ಸಿಲ್ಕ್ ಬೋರ್ಡ್ ಜಂಕ್ಷನ್ ಪರಿಶೀಲನೆ

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಉಂಟಾಗುವ ಜಲಾವೃತ ಸಮಸ್ಯೆಯನ್ನು ತಪ್ಪಿಸುವಸಲುವಾಗಿ ರಸ್ತೆ ಭಾಗದಲ್ಲಿ ಹಾದು ಹೋಗುವ ರಾಜಕಾಲುವೆಯ ಸಾಮರ್ಥ್ಯವನ್ನು 1.5 ಮೀ.ನಿಂದ 3.5 ಮೀ.ಗೆ ಹೆಚ್ಚಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಮೇಲ್ಭಾಗದಲ್ಲಿ ಸ್ಟೀಲ್ ಗ್ರೇಟಿಂಗ್‌ಗಳನ್ನು ಅಳವಡಿಸಲಾಗುತ್ತಿದೆ. ಈ ಸಂಬಂಧ ಮೊದಲ ಹಂತದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ನಂತರ ಉಳಿದ ಎರಡು ಭಾಗಗಳ ಕಲ್ವರ್ಟ್ ಕಾಮಗಾರಿಯನ್ನು ಎರಡನೇ ಹಂತದಲ್ಲಿ ಕೈಗೆತ್ತಿಕೊಂಡು ಜೂನ್ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚನೆ ನೀಡಿದರು.

ಈಜೀಪುರ ಮೇಲ್ಸೇತುವೆ ಕಾಮಗಾರಿ ಪರಿಶೀಲನೆ ನಡೆಸಿದ ಆಯುಕ್ತರು, ದೊಮ್ಮಲೂರು ಕಡೆಯ ರ್‍ಯಾಂಪ್‌ನ್ನು ವಾರದೊಳಗೆ ಹಾಗೂ ಮಡಿವಾಳ ಕಡೆಯ ರ್‍ಯಾಂಪ್‌ನ್ನು 60 ದಿನಗಳಲ್ಲಿ ಪೂರ್ಣಗೊಳಿಸಬೇಕು. ಅಲ್ಲದೆ ಹೆಚ್ಚುವರಿಯಾಗಿ ಎರಡು ಗುಂಪನ್ನು ನಿಯೋಜಿಸಿಕೊಂಡು, ಬೇರಿಂಗ್ ಹಾಗೂ ಇತರೆ ಜೋಡಣೆ ಕಾಮಗಾರಿಗೆ ವೇಗ ನೀಡುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.

ಜಲಮಂಡಳಿ ಕಾಮಗಾರಿ ಶೀಘ್ರ ಪೂರ್ಣ

ಬನ್ನೇರಘಟ್ಟ ರಸ್ತೆಯಲ್ಲಿ ಮೊದಲ ಹಂತವಾಗಿ ವೆಗಾಸಿಟಿ ಮಾಲ್‌ನಿಂದ ಅರಕೆರೆ ಸಿಗ್ನಲ್ ವರೆಗೆ 1.5 ಕಿ.ಮೀ. ಉದ್ದದ ರಸ್ತೆಯಲ್ಲಿ ಜಲಮಂಡಳಿಯಿಂದ ಕಾಮಗಾರಿ ನಡೆಯುತ್ತಿದೆ. ಎರಡು ದಿನದಲ್ಲಿ ಪೂರ್ಣಗೊಳಿಸಬೇಕು. ನಂತರ ಪಾಲಿಕೆಯಿಂದ ಡಾಂಬರೀಕರಣ ಕಾರ್ಯ ಕೈಗೆತ್ತಿಕೊಂಡು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಆಯುಕ್ತರು ಸೂಚನೆ ನೀಡಿದರು.

- ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಹೊಸದಾಗಿ ಕಾಲುವೆ ನಿರ್ಮಿಸಲು ಸರ್ವೆ ನಡೆಸಿ ವರದಿ ನೀಡಲು ಸೂಚನೆ
- ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಬಾಲಾಜಿ ಕಾಂಪ್ಲೆಕ್ಸ್‌ನ್ನು ತೆರವುಗೊಳಿಸಿ ಫ್ರೀ ಲೆಫ್ಟ್ ನಿರ್ಮಾಣಕ್ಕೆ ಕ್ರಮವಹಿಸಲು ನಿರ್ದೇಶನ
- ಸಿಲ್ಕ್ ಬೋರ್ಡ್ ಜಂಕ್ಷನ್ ಮೇಲ್ಸೇತುವೆ ಕೆಳಭಾಗದ ಅಭಿವೃದ್ಧಿ ಕಾರ್ಯ ವೇಗಗೊಳಿಸಲು ಸೂಚನೆ

ಉದ್ಯಮ ವಲಯ ಜತೆ ಸಹಯೋಗ ಅವಶ್ಯ

• **ಬೆಂಗಳೂರು:** ಕೃತಕ ಬುದ್ಧಿಮತ್ತೆ, ಯಾಂತ್ರೀಕರಣ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವೇಗವಾಗಿ ನಡೆಯುತ್ತಿರುವ ಬದಲಾವಣೆ ಹಿನ್ನೆಲೆಯಲ್ಲಿ, ಭವಿಷ್ಯದ ಉದ್ಯೋಗ ಮಾರುಕಟ್ಟೆಗೆ ಸಿದ್ಧವಾಗಿರುವ ಪ್ರತಿಭಾವಂತರನ್ನು ರೂಪಿಸಲು ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯಮ ವಲಯಗಳ ನಡುವೆ ಗಟ್ಟಿಯಾದ ಸಹಯೋಗ ಅಗತ್ಯ ಎಂದು ಸೋನಾ ವಲ್ಲಿಯಪ್ಪ ಗ್ರೂಪ್‌ನ ಉಪಾಧ್ಯಕ್ಷ ತ್ಯಾಗು ವಲ್ಲಿಯಪ್ಪ ಅಭಿಪ್ರಾಯಪಟ್ಟರು.

ಪುಣೆಯ ಎಂಐಟಿ ವರ್ಲ್ಡ್ ಪೀಸ್ ಯುನಿವರ್ಸಿಟಿ (ಖಐಖ–ಗಕಖ), ರಾಷ್ಟ್ರೀಯ ಸಿಬ್ಬಂದಿ ನಿರ್ವಹಣಾ ಸಂಸ್ಥೆ (ಫೆಐಕಖ) ಕರ್ನಾಟಕ ಶಾಖೆಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಇಂಡಸ್ಟ್ರಿ ಅಕಾಡೆಮಿಯಾ ಕಾನ್‌ಕ್ಲೇವ್ 2026ನಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳನ್ನು ಕೇವಲ ಇಂದಿನ ಉದ್ಯೋಗಗಳಿಗೆ ಮಾತ್ರವಲ್ಲ, ಭವಿಷ್ಯದ ತಂತ್ರಜ್ಞಾನ ಮತ್ತು ಕೈಗಾರಿಕಾ ಅಗತ್ಯಗಳಿಗೆ ಸಜ್ಜುಗೊಳಿಸುವ ಶಿಕ್ಷಣ ವ್ಯವಸ್ಥೆ ಅಗತ್ಯವಿದೆಂದರು.

ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕೆಗಳು ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಭಾರತ ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕ ಮಾನವ ಸಂಪನ್ಮೂಲವನ್ನು ರೂಪಿಸಲು ಸಾಧ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾವೇಶದಲ್ಲಿ ಉದ್ಯೋಗಾರ್ಹತೆ ಹೆಚ್ಚಿಸುವ ಕೌಶಲ್ಯಾಭಿವೃದ್ಧಿ, ಬಹುವಿಷಯಕ ಕಲಿಕೆ, ಉದ್ಯಮಾಧಾರಿತ ತರಬೇತಿ ಹಾಗೂ ಎಐ ಸಿದ್ಧ ಪ್ರತಿಭೆಗಳ ನಿರ್ಮಾಣ ಕುರಿತು ಚರ್ಚಿಸಲಾಯಿತು.

ರಸ್ತೆ ಬದಿಯಲ್ಲಿ ಮರಮುಟ್ಟು ಕಂಡುಬಂದಲ್ಲಿ ಮಾಹಿತಿ ನೀಡಿ

• **ಬೆಂಗಳೂರು:** ಪಶ್ಚಿಮ ನಗರ ಪಾಲಿಕೆಯ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ರಸ್ತೆ ಬದಿಗಳಲ್ಲಿ, ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಸ್ಥಳದಲ್ಲಿ ಮರಮುಟ್ಟುಗಳಿರುವುದು ಕಂಡುಬಂದಲ್ಲಿ ಸಾರ್ವಜನಿಕರು ಸಹಾಯವಾಣಿ 1533 ಅಥವಾ ಪಶ್ಚಿಮ ನಗರ ಪಾಲಿಕೆ ನಿಯಂತ್ರಣಕೊಠಡಿದೂರವಾಣಿ ಸಂಖ್ಯೆ: 9480685703ಗೆ ಅಥವಾ ಅರಣ್ಯ ವಿಭಾಗದ ಅಧಿಕಾರಿಗಳನ್ನು ಮನವಿ ಮಾಡಿದೆ.

ಅರಣ್ಯ ಇಲಾಖೆ ಅಧಿಕಾರಿಗಳ ಮಾಹಿತಿ

- ವಿ. ಜಗದೀಶ್ -9880516322- ರಾಜರಾಜೇಶ್ವರಿನಗರ, ಯಶವಂತಪುರ ಹಾಗೂ ದಾಸರಹಳ್ಳಿಯ 4 ವಾರ್ಡ್
- ಸುದರ್ಶನ್ - 9480683341 - ಮಹಾಲಕ್ಷ್ಮಿ ಬಡಾವಣೆ, ರಾಜಾಜಿನಗರ, ಗೋವಿಂದರಾಜನಗರ ಹಾಗೂ ಮಲ್ಲೇಶ್ವರ
- ಬಿ.ಬಿ. ಮೇಟಿ-9740576919- ವಿಜಯನಗರ, ಬಸವನಗುಡಿ ಹಾಗೂ ಪದ್ಮನಾಭನಗರ 4 ವಾರ್ಡ್
- ಹೆಚ್ಚಿನ ಮಾಹಿತಿಗೆ ಸಂತೋಷ್ ಕುಮಾರ್- 7019464699

ಭಕ್ತಿಯಿಂದ ಬಸ್ಸಿಗೆ ನಮನ: 34 ವರ್ಷದ ಸೇವೆ ಬಳಿಕ ಭಾವುಕರಾದ ಚಾಲಕ

ಅಪಘಾತರಹಿತ ಚಾಲಕ ಜೋಸೆಫ್ ನಿವೃತ್ತಿ

• **ಬೆಂಗಳೂರು:** ಕಳೆದ 34 ವರ್ಷಗಳ ಕಾಲ ಕೆಎಸ್‌ಆರ್‌ಟಿಸಿ ವೋಲ್ವೋ ಬಸ್‌ನಲ್ಲಿ ಅಪಘಾತ ರಹಿತವಾಗಿ ಬಸ್ ಚಲಾಯಿಸಿದ ಚಾಲಕ ಜೋಸೆಫ್ ಮಚಾದೊ ಶುಕ್ರವಾರ ನಿವೃತ್ತಿ ಹೊಂದಿದ್ದಾರೆ. ತಮ್ಮ ಸೇವೆಯ ಕೊನೆಯ ದಿನದಂದು ಕೆಎಸ್‌ಆರ್‌ಟಿಸಿ ಬಸ್ಸಿನ ಸ್ಟೀರಿಂಗ್ ಚಕ್ರವನ್ನು ಅತ್ಯಂತ ಭಕ್ತಿಯಿಂದ ಕೈ ಮುಗಿದು ಭಾವುಕರಾಗಿದ್ದಾರೆ.



ಕಳೆದ 34 ವರ್ಷಗಳ ಕಾಲ ನಿಷ್ಕಳಂಕವಾಗಿ ಅತ್ಯಂತ ಶಿಸ್ತುಬದ್ಧ ಮತ್ತು ಹರ್ಷಚಿತ್ತದಿಂದ ಸೇವೆಸಲ್ಲಿಸಿದ ಚಾಲಕ ಜೋಸೆಫ್ ಮಚಾದೊ ನಿವೃತ್ತಿ ಹೊಂದಿದ್ದಾರೆ. 35 ವರ್ಷಗಳ ಕಾಲ ಅಪಘಾತ ರಹಿತವಾಗಿ ಬಸ್ ಚಲಾಯಿಸುವ ಮೂಲಕ ಸಾವಿರಾರು ಜನರು ಸುರಕ್ಷಿತವಾಗಿ ಕರೆದುಕೊಂಡಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳೊಬ್ಬರು ಹೇಳಿದರು.

ಪ್ರಯಾಣಿಕರು ಹಾಗೂ ಸಹದ್ಯೋಗಿಗಳು ಚಾಲಕರಿಂದ ಕೇಕ್ ಕತ್ತರಿಸಿ, ಚಾಲಕರ ಭಾವಚಿತ್ರವನ್ನು ಉಡುಗರೆ ನೀಡುವ ಮೂಲಕ ಆತ್ಮೀಯವಾಗಿ ಬೀಳ್ಕೋಡುಗೆ ನೀಡಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಪ್ರಯಾಣಿಕರೊಬ್ಬರು ಹಂಚಿಕೊಳ್ಳುತ್ತಿದ್ದಂತೆಯೇ ಲಕ್ಷಾಂತರ ವೀಕ್ಷಣೆಗಳನ್ನು ಪಡೆದುಕೊಂಡಿದೆ. ನೆಟ್ಟಿಗರು ಚಾಲಕನಿಗೆ ಶುಭ ಹಾರೈಕೆಗಳ ಮಹಾಪೂರವನ್ನೇ ಹರಿಸುತ್ತಿದ್ದಾರೆ. ಯಾವುದೇ ಅಪಘಾತಗಳಿಲ್ಲದೆ 34 ವರ್ಷಗಳ ಕಾಲ ಜನರನ್ನು ಸುರಕ್ಷಿತವಾಗಿ ಕರೆದೊಯ್ದ ಇವರ ಸೇವೆ ಶ್ಲಾಘನೀಯ, ಇದು ಕೇವಲ ಕೆಲಸವಲ್ಲ, ಅವರ ಪಾಲಿನ ದೇವಸ್ಥಾನ ಎಂದು ಜನರು ಕಮೆಂಟ್ ಮಾಡುತ್ತಿದ್ದಾರೆ.

ಪತಿ ಕಿರುಕುಳ : ಗೃಹಿಣಿ ಆತ್ಮಹತ್ಯೆಗೆ ಪ್ರಚೋದನೆ ಹಿನ್ನೆಲೆಯಲ್ಲಿ ಕ್ರಮ

ಇನ್‌ಸ್ಪೆಕ್ಟರ್ ವಿಚಾರಣೆಗೆ ಹೈ ನಿರ್ದೇಶನ

• **ಬೆಂಗಳೂರು:** ಪತಿಯ ಕಿರುಕುಳದಿಂದಾಗಿ ಆತ್ಮಹತ್ಯೆಗೆ ಯತ್ನಿಸಿದ್ದ ಮಹಿಳೆಯೊಬ್ಬರು ಪ್ರಾಣಾಪಾಯದಿಂದ ಪಾರಾಗಿ ಜೀವಂತವಾಗಿದ್ದರೂ, ಪತಿಯ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಪರಾಧದಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದ ಬಾಣಸವಾಡಿ ಠಾಣೆಯ ಇನ್‌ಸ್ಪೆಕ್ಟರ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಪತ್ನಿಗೆ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಹಾಗೂ ಜೀವ ಬೆದರಿಕೆಯೊಡ್ಡಿದ ಆರೋಪದಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಆರ್ ಎಸ್ ಪಾಳ್ಯದ ನಿಕ್ಸೋನ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.



ಪ್ರಕರಣದಲ್ಲಿ ದೋಷಪೂರಿತ ಆರೋಪಪಟ್ಟಿ ಸಲ್ಲಿಸಿರುವ ತಪ್ಪಿತಸ್ಥ ಪೊಲೀಸ್ ಅಧಿಕಾರಿಯ ವಿರುದ್ಧದ ಇಲಾಖಾ ವಿಚಾರಣೆ ನಡೆಸಿ, ಮೂರು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಪ್ರಾಸಿಕ್ಯೂಷನ್ ನಿರ್ದೇಶಿಸಿದೆ.

ಪ್ರಕರಣದಲ್ಲಿ ಕಳೆದ 2025ರ ಅ. 20ರಂದು ಅರ್ಜಿದಾರ ಹಾಗೂ ಆತನ ಪತ್ನಿ ನಡುವೆ ಜಗಳ ನಡೆದಿತ್ತು. ಮಾತಿನ ಭರದಲ್ಲಿ ಪತ್ನಿ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿ, ಮನೆಯ ಎರಡನೆಯ ಮಹಡಿಯಿಂದ ಕೆಳಗೆ ಜಿಗಿದಿದ್ದರು. ಪರಿಣಾಮ ಬೆನ್ನುಮೂಳೆ ಮತ್ತು ಕೈ ಮುರಿದಿತ್ತು. ನಂತರ ಸಂಪೂರ್ಣ ಚೇತರಿಸಿಕೊಂಡಿದ್ದರು. ಆತ್ಮಹತ್ಯೆಗೆ ಯತ್ನಿಸಿದ ಅರ್ಜಿದಾರರ ಪತ್ನಿ ಬದುಕಿರುವಾಗ ತನಿಖಾಧಿಕಾರಿಯು ಬಿಎನ್‌ಎಸ್ ಸೆಕ್ಷನ್ 108ರ ಅಡಿಯಲ್ಲಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಪರಾಧದಲ್ಲಿ ಅರ್ಜಿದಾರನ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿರುವುದು ಮೂರ್ಖತನ ಎಂದು ಪೀಠ ತೀಕ್ಷ್ಣವಾಗಿ ನುಡಿದಿದೆ.

ಇದೇ ವೇಳೆ, ಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಂಡು, ಜತೆಯಾಗಿ ಜೀವನ ನಡೆಸಲಾಗುವುದು ಎಂದು ಅರ್ಜಿದಾರ ಪತಿ ಹಾಗೂ ದೂರುದಾರ ಪತ್ನಿ ತಿಳಿಸಿರುವುದನ್ನು ಮನ್ನಿಸಿರುವ ಪೀಠವು ಅರ್ಜಿದಾರನ ವಿರುದ್ಧ ಪ್ರಕರಣವನ್ನು ರದ್ದುಪಡಿಸಿದೆ.

ಬೀದಿನಾಯಿಗಳ ನಿರ್ವಹಣೆ, ಜನನ ನಿಯಂತ್ರಣ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಭೆ

ಆಶ್ರಯ ಕೇಂದ್ರಗಳ ಅಭಿವೃದ್ಧಿಗೆ ವೇಗ

• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ನಿರ್ವಹಣೆ, ಪ್ರಾಣಿ ಜನನ ನಿಯಂತ್ರಣ ಕಾರ್ಯಕ್ರಮ ಪರಿಣಾಮಕಾರಿ ಅನುಷ್ಠಾನ ಹಾಗೂ ಬೀದಿ ನಾಯಿಗಳ ಆಶ್ರಯ ಕೇಂದ್ರಗಳ ಅಭಿವೃದ್ಧಿಗೆ ವೇಗ ನೀಡುವಂತೆ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬೀದಿ ನಾಯಿಗಳ ಶೆಲ್ಟರ್ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಮುಕ್ತಾಯಗೊಳಿಸಿ. ನಗರದಲ್ಲಿ ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಲು ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಲಭ್ಯವಿರುವುದು ಅತ್ಯಂತ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಅಗತ್ಯ ಮಾನವ ಸಂಪನ್ಮೂಲವನ್ನು ಹೆಚ್ಚಿಸಿ ಕಾರ್ಯಾಚರಣೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸುವಂತೆ ಸೇವಾ ಪೂರೈಕೆದಾರರಿಗೆ ಸೂಚನೆ ನೀಡಿದರು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ, ಅಪಾಯಕಾರಿ ಹಾಗೂ ಆಕ್ರಮಣಕಾರಿ ಸ್ವಭಾವದ ನಾಯಿಗಳ ನಿರ್ವಹಣೆ ಮತ್ತು ಅವುಗಳಿಗೆ ಸೂಕ್ತ ಆಶ್ರಯ ಕಲ್ಪಿಸುವ ಕುರಿತು ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳುವ ಅಗತ್ಯವನ್ನು ಹೇಳಿದರು.



ಪಾಲಿಕೆಯ ಬೀದಿ ನಾಯಿಗಳ ನಿರ್ವಹಣೆಯನ್ನು ಮತ್ತಷ್ಟು ಸುಧಾರಿಸುವ ಉದ್ದೇಶದಿಂದ ದಾಸರಹಳ್ಳಿ ಎಬಿಸಿ ಕೇಂದ್ರದಲ್ಲಿ 500 ನಾಯಿಗಳ ಸಾಮರ್ಥ್ಯದ ಆಶ್ರಯ ಕೇಂದ್ರ ಆರಂಭಿಸುವ ಕುರಿತು ಸಭೆಯಲ್ಲಿ ತೀರ್ಮಾನಿಸಲಾಯಿತು.

2025–26ನೇ ಸಾಲಿನಲ್ಲಿ ಸುಮಾರು 7,000 ಬೀದಿ ನಾಯಿಗಳಿಗೆ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡಲಾಗಿದ್ದು, ಪಾಲಿಕೆಯಲ್ಲಿ ಅಂದಾಜು 65,041 ನಾಯಿಗಳ ಪೈಕಿ ಶೇ.60ರಷ್ಟು ನಾಯಿಗಳಿಗೆ ಎಬಿಸಿ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಪ್ರಸ್ತುತ ದಿನಕ್ಕೆ ಸುಮಾರು 25 ನಾಯಿಗಳಿಗೆ ಎಬಿಸಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದ್ದು, ಈ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಆಯುಕ್ತರು ತಿಳಿಸಿದರು. ವಿಶೇಷವಾಗಿ ಹೆಣ್ಣು ನಾಯಿಗಳಿಗೆ ಆದ್ಯತೆ ನೀಡಿ ದಿನಕ್ಕೆ 40–42 ನಾಯಿಗಳಿಗೆ ಎಬಿಸಿ ಚಿಕಿತ್ಸೆ ನೀಡುವ ಗುರಿಗೆ ಸೂಚಿಸಿದರು.

ಮೈಕ್ರೋಚಿಪ್ ಅಳವಡಿಕೆಗೆ ಚಿಂತನೆ

ಮುಂದಿನ ದಿನಗಳಲ್ಲಿ ಎಬಿಸಿ ಶಸ್ತ್ರಚಿಕಿತ್ಸೆಯ ನಂತರ ನಾಯಿಗಳಿಗೆ ಮೈಕ್ರೋಚಿಪ್ ಅಳವಡಿಸುವ ವ್ಯವಸ್ಥೆ ಜಾರಿಗೊಳಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಮೈಕ್ರೋಚಿಪ್ ತಂತ್ರಜ್ಞಾನವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಿದೆ. ಅಲ್ಲದೆ ದೇಶದ ಇತರೆ ಭಾಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಮಾದರಿ ಕಸಾಯಿಖಾನೆಗಳನ್ನು ಅಧ್ಯಯನ ಮಾಡಿ, ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಕುರಿತು ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಪಾಲಿಕೆ ಆಯುಕ್ತರು ಸೂಚಿಸಿದರು.

ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜು ವಾರ್ಷಿಕೋತ್ಸವ

ಸಂಸ್ಕೃತಿಯೊಂದಿಗೆ ತಾಂತ್ರಿಕತೆಯೂ ಇರಲಿ

• **ಕೆಂಗೇರಿ:** ನಮಗೆ ನಮ್ಮ ಸಂಸ್ಕೃತಿ ಹೇಗೆ ಮುಖ್ಯವೋ ಹಾಗೆಯೇ ತಾಂತ್ರಿಕತೆ ಅಷ್ಟೇ ಮುಖ್ಯವಾಗಿರುತ್ತದೆ ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ವೂಡೇ ಪಿ.ಕೃಷ್ಣ ಹೇಳಿದರು.

ಕೆಂಗೇರಿ ಉಪನಗರದಲ್ಲಿರುವ ಶೇಷಾದ್ರಿಪುರ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ಆಯೋಜಿಸಿದ್ದ 20ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಕನ್ನಡದ ಸಂಸ್ಕೃತಿಯ ಬೇರನ್ನು ಗಟ್ಟಿಗೊಳಿಸಬೇಕು, ನಮ್ಮ ಸಂಸ್ಕೃತಿಯನ್ನು ಬಲಿಕೊಟ್ಟು ನಾವು ತಾಂತ್ರಿಕತೆಯ ಕಡೆಗೆ ಹೋಗಬಾರದು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಖಜಾಂಚಿ ದಿನೇಶ್ ಎಚ್.ಬಿ.ಮಾತನಾಡಿ ಕನ್ನಡ ನಾಡಿನಲ್ಲಿ ಕನ್ನಡಿಗರಿಗೆ ಕನ್ನಡ ಭಾಷೆ ಮಾತೃಭಾಷೆ, ನಮ್ಮ ತಾಯಿಯಂತೆ ಪ್ರೀತಿಸಿ ಗೌರವಿಸುವುದು ಕನ್ನಡಿಗರಾದ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು, ಇಂಗ್ಲಿಷ್ ಭಾಷೆ ಕೇವಲ ವ್ಯಾವಹಾರಿಕವಾಗಿ ಬಳಸುವುದನ್ನು ಕಲಿಯಿರಿ, ನಮ್ಮ ಮಾತೃಭಾಷೆಯನ್ನು ಪ್ರೀತಿಸಿ ಗೌರವಿಸಿ ಬೆಳೆಸಬೇಕು ಎಂದು ತಿಳಿಸಿದರು.




ಅತ್ಯುತ್ತಮ ಶ್ರೇಷ್ಠತೆ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು.

ಶೇಷಾದ್ರಿಪುರ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನ ಪ್ರಾಂಶುಪಾಲ ಡಾ.ಜಯರಾಮು, ಕನ್ನಡ ವಿಭಾಗದ ಮುಖ್ಯಸ್ಥೆ, ಸೃಷ್ಟಿ ಸಾಂಸ್ಕೃತಿಕ ಸಮಿತಿ ಸಂಚಾಲಕಿ ಡಾ.ಶೋಭಾ.ಎಂ.ಸಿ, ಐಕ್ಯೂಎಸಿ ಸಂಚಾಲಕಿ ಡಾ.ರೂಪಶ್ರೀ.ಯು, ದೈಹಿಕ ಶಿಕ್ಷಣ ನಿರ್ದೇಶಕ ಸುರೇಶ್.ಸಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ಗ್ರೀನ್ ಹೆರಿಟೇಜ್ ವಾಕ್. ಸ್ಥಳ: ಕಬ್ಬನ್ ಪಾರ್ಕ್, ಬೆಳಗ್ಗೆ 6:30
- ಎಫ್‌ಕೆಸಿಸಿಐ ಗ್ಲೋಬಲ್ ಸಮಾವೇಶ-2026, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಗ್ಗೆ 10.30
- ಭರತನಾಟ್ಯ ರಂಗಪ್ರವೇಶ. ಸ್ಥಳ: ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 5
- ನಮಃ ಶಂಕರಾಯ ಜಪ ಯಜ್ಞ. ಸ್ಥಳ: ಶೃಂಗೇರಿ ಶಂಕರ ಮಠ,ಶಂಕರಪುರ, ಸಂಜೆ 6





ಕಿರುಸುದ್ದಿ

ಏಷ್ಯನ್ ಗೇಮ್ಸ್ ಆಯ್ಕೆ: ವಿನೇಶ್‌ಗೆ ಸೋಲು



ಹೊಸದಿಲ್ಲಿ: ಇಲ್ಲಿ ನಡೆದ ಏಷ್ಯನ್ ಗೇಮ್ಸ್ 2026 ಆಯ್ಕೆ ಟ್ರಯಲ್‌ನಲ್ಲಿ ಭಾರತದ ಖ್ಯಾತ ಕುಸ್ತಿಪಟು ವಿನೇಶ್ ಫೋಗಟ್ ಅವರ ಅಭಿಯಾನ ಸೆಮಿಫೈನಲ್ ಹಂತದಲ್ಲೇ ಅಂತ್ಯಗೊಂಡಿದೆ. ಮಹಿಳೆಯರ 53 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಮೀನಾಕ್ಷಿ ಗೋಯತ್ ವಿರುದ್ಧ 4-6 ಅಂತರದಲ್ಲಿ ಸೋಲು ಅನುಭವಿಸಿದ ವಿನೇಶ್, ಏಷ್ಯನ್ ಗೇಮ್ಸ್ ತಂಡದಲ್ಲಿ ಸ್ಥಾನ ಪಡೆಯುವ ಅವಕಾಶ ಕಳೆದುಕೊಂಡರು.ಎರಡು ಬಾರಿ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತೆಯಾಗಿರುವ ವಿನೇಶ್, ಮೊದಲ ಸುತ್ತಿನಲ್ಲಿ ಜ್ಯೋತಿ ಅವರನ್ನು 7-1 ಅಂತರದಲ್ಲಿ ಮಣಿಸಿದ್ದರು. ಬಳಿಕ ನಿಶು ವಿರುದ್ಧದ ಕಠಿಣ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಮಬಲದ ಹೋರಾಟದ ಬಳಿಕ ಮಾನದಂಡದ ಆಧಾರದ ಮೇಲೆ ಗೆದ್ದು ಸೆಮಿಫೈನಲ್‌ಗೆ ಪ್ರವೇಶಿಸಿದ್ದರು. ಆದರೆ ಮೀನಾಕ್ಷಿ ವಿರುದ್ಧ ಗೆಲುವು ಸಾಧಿಸಲು ವಿಫಲರಾದರು. ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸುವ ವಿಚಾರಕ್ಕೆ ಸಂಬಂಧಿಸಿದಂತೆ ತೀವ್ರ ಗೊಂದಲ ಮಾಡಿಕೊಂಡಿದ್ದ ವಿನೇಶ್ ಶುಕ್ರವಾರವಷ್ಟೇ ಸುಪ್ರೀಂ ಕೋರ್ಟ್‌ನಿಂದ ಅವಕಾಶ ಪಡೆದಿದ್ದರು.

ಹಾಕಿ: ಆಸ್ಟ್ರೇಲಿಯಾ ಸರಣಿ ಡ್ರಾ ಕೊನೆ ಪಂದ್ಯದಲ್ಲಿ ಭಾರತ ಸೋಲು



ಪರ್ಥ್: ಪರ್ಥ್‌ನಲ್ಲಿ ನಡೆದ ನಾಲ್ಕನೇ ಹಾಗೂ ಅಂತಿಮ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತೀಯ ಮಹಿಳಾ ಹಾಕಿ ತಂಡ 2-3 ಅಂತರದಿಂದ ಆಸ್ಟ್ರೇಲಿಯಾ ವಿರುದ್ಧ ಸೋಲು ಅನುಭವಿಸಿದೆ. ಆದರೆ ನಾಲ್ಕು ಪಂದ್ಯಗಳ ಸರಣಿ 2-2ರಿಂದ ಸಮಬಲದಲ್ಲಿ ಅಂತ್ಯಗೊಂಡಿದ್ದು, ಭಾರತ ಉತ್ತಮ ಪ್ರದರ್ಶನದೊಂದಿಗೆ ಪ್ರವಾಸ ಮುಗಿಸಿದೆ.ಪಂದ್ಯದ ಎರಡನೇ ನಿಮಿಷದಲ್ಲೇ ನವ್ನೀತ್ ಕೌರ್ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಬಳಿಕ ಎರಡನೇ ಕ್ವಾರ್ಟರ್‌ನಲ್ಲಿ ದೀಪಿಕಾ ಸೊರೆಂಗ್ 23ನೇ ನಿಮಿಷದಲ್ಲಿ ಮತ್ತೊಂದು ಗೋಲು ಬಾರಿಸಿ ಭಾರತದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಮೊದಲಾರ್ಧದ ಅಂತ್ಯಕ್ಕೆ ಭಾರತ ಭದ್ರ ಸ್ಥಿತಿಯಲ್ಲಿತ್ತು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾ ಭರ್ಜರಿ ಪುನರಾಗಮನ ಮಾಡಿತು. ಅಬ್ಬಿ ವಿಲ್ಸನ್ 42ನೇ ನಿಮಿಷದಲ್ಲಿ ಹಾಗೂ ಒಲಿವಿಯಾ ಡೌನ್ಸ್ 44ನೇ ನಿಮಿಷದಲ್ಲಿ ಗೋಲು ಬಾರಿಸಿ ಪಂದ್ಯವನ್ನು 2-2ರಿಂದ ಸಮಬಲಕ್ಕೆ ತಂದರು. ಪಂದ್ಯ ಡ್ರಾದತ್ತ ಸಾಗುತ್ತಿದ್ದ ವೇಳೆ 58ನೇ ನಿಮಿಷದಲ್ಲಿ ಕೋರ್ಟ್ನಿ ಶೊನೆಲ್ ನಿರ್ಣಾಯಕ ಗೋಲು ದಾಖಲಿಸಿ ಆಸ್ಟ್ರೇಲಿಯಾಗೆ 3-2 ಅಂತರದ ಗೆಲುವು ತಂದುಕೊಟ್ಟರು. ಮೊದಲ ಪಂದ್ಯದಲ್ಲಿ ಸೋತಿದ್ದ ಭಾರತ ನಂತರದ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಸರಣಿಯಲ್ಲಿ ಮೇಲುಗೈ ತೋರಿಸಿತ್ತು. ಅಂತಿಮ ಪಂದ್ಯದಲ್ಲಿ ಸೋಲು ಕಂಡರೂ, ಸರಣಿಯನ್ನು 2-2ರಿಂದ ಸಮಬಲಗೊಳಿಸುವ ಮೂಲಕ ತಂಡದ ಹೋರಾಟದ ಮನೋಭಾವ, ತಾಂತ್ರಿಕ ಶಿಸ್ತು ಹಾಗೂ ಆಕ್ರಮಣಕಾರಿ ಆಟ ಗಮನ ಸೆಳೆಯಿತು.

ಏಷ್ಯನ್ ಅಂಡರ್-20 ಅಥ್ಲೆಟಿಕ್ಸ್: ಭಾರತಕ್ಕೆ ಮೂರು ಚಿನ್ನ

ಹೊಸದಿಲ್ಲಿ: ಹಾಂಗ್ ಕಾಂಗ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಅಂಡರ್-20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಅಥ್ಲೀಟ್‌ಗಳು ಪದಕ ಬೇಟೆಯನ್ನು ಮುಂದುವರಿಸಿದ್ದು, ಶನಿವಾರ ಮೂರು ಚಿನ್ನದ ಪದಕಗಳನ್ನು ಗೆದ್ದು ಮಿಂಚಿದ್ದಾರೆ. ಅದರಲ್ಲೂ ಪುರುಷರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾರತ ಮೊದಲ ಎರಡು ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಶಹ್ನವಾಜ್ 7.84 ಮೀಟರ್ ದೂರ ಜಿಗಿದು ಚಿನ್ನದ ಪದಕ ಗೆದ್ದರೆ, ಮತ್ತೋರ್ವ ಭಾರತೀಯ ಅಥ್ಲೀಟ್ ಜಿತಿನ್ 7.66 ಮೀಟರ್ ಜಿಗಿತದೊಂದಿಗೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಬಸಂತ್ 2.20 ಮೀಟರ್ ಎತ್ತರ ದಾಟಿ ಚಿನ್ನದ ಪದಕ ಜಯಿಸಿದರು. ಇದೇ ವೇಳೆ ಪುರುಷರ 3000 ಮೀಟರ್ ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ನಿಖಿಲ್ ಚಂದ್ರಶೇಖರ್ 9 ನಿಮಿಷ 25.44 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದು ಭಾರತದ ಪದಕ ಸಂಗ್ರಹ ಹೆಚ್ಚಿಸಿದರು.

ಮತ್ತೆ ಕಪ್ ಗೆಲ್ಲಲಿ ಆರ್‌ಸಿಬಿ

ಸತತ 2ನೇ ಟ್ರೋಫಿಗಾಗಿ ಫೈನಲ್‌ನಲ್ಲಿ ಫೈಟ್ ರಜತ್ ಪಡೆಗೆ ಗುಜರಾತ್ ಸವಾಲು

ಹಮದಾಬಾದ್: ಸಮಸ್ತ ಕ್ರಿಕೆಟ್ ಅಭಿಮಾನಿಗಳಿಗೆ ಈ ಒಂದೇ ಪ್ರಶ್ನೆ. ಸತತ ಎರಡನೇ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಚಾಂಪಿಯನ್ ಪಟ್ಟ ಅಲಂಕರಿಸಲಿದೆಯಾ ಅಥವಾ ಗುಜರಾತ್ ಮೂರು ವರ್ಷದ ಬಳಿಕ ಕಿರೀಟ ಮುಡಿಗೇರಿಸಿಕೊಳ್ಳಲಿದೆಯಾ ಎಂಬ ಕುತೂಹಲ. 73 ಪಂದ್ಯದಲ್ಲಿ ಸಾವಿರಾರು ರನ್ ಹರಿದಿವೆ. ಸಹಸ್ರಾರು ಸಿಕ್ಸರ್‌ಗಳು ಸುರಿದಿವೆ. ಹತ್ತರು ಟ್ವಿಸ್ಟ್, ನೂರಾರು ಬೌಂಡರಿಗಳು ಮೂಡಿವೆ. ವಿದೇಶಿ ಕ್ರಿಕೆಟಿಗರ ಅಬ್ಬರದ ಜತೆಗೆ ದೇಶಿ ಕ್ರಿಕೆಟಿಗರ ಮಿಂಚಿನಾಟ. ಹೊಚ್ಚ ಹೊಸ ಕ್ರಿಕೆಟಿಗರ ಮೆರೆದಾಟ. ಬಂದ ಬಾಲ್‌ಗಳನ್ನು ಬೌಂಡರಿಗಟ್ಟುವ ಛಲ ಬ್ಯಾಟರ್‌ಗಳಿಗಾದರೆ, ಮೂರು ಸ್ಟಂಪ್‌ಗಳನ್ನು ಕಿತ್ತುವ ಉತ್ಸಾಹ ಬೌಲರ್‌ಗಳಿಗೆ. ಇದೆಲ್ಲಾ ಆಟ, ಪಾಠ ಮತ್ತು ಮಹಾಕೂಟ ಭಾನುವಾರದಂದು ಅಂತ್ಯಗೊಳ್ಳಲಿದೆ. ಫೈನಲ್‌ಗೇರಿರುವ ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ತಂಡಗಳು ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಎದುರಾಗಲಿವೆ. ಎರಡೂ ತಂಡಕ್ಕೂ ಎರಡನೇ ಕಪ್‌ನ ಹಂಬಲ. ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೊದಲ ಕ್ವಾಲಿಫೈಯರ್ ಪಂದ್ಯದಲ್ಲೇ ಗೆಲುವು ಸಾಧಿಸಿ ಫೈನಲ್‌ಗೇರಿದೆ. ಅಲ್ಲಿ ಸೋತಿದ್ದ ಗುಜರಾತ್ ಟೈಟಾನ್ಸ್ ರಾಜಸ್ಥಾನ ವಿರುದ್ಧದ ಕ್ವಾಲಿಫೈಯರ್-2 ಪಂದ್ಯದಲ್ಲಿ ಫೈನಲ್‌ಗೇರಿದೆ.

ಗೆದ್ದವರಿಗೆ ಎರಡನೇ ಕಿರೀಟ

ಕಳೆದ ಕೂಟ ಅಂದರೆ 2025ರಲ್ಲಿ ಬೆಂಗಳೂರು ತಂಡ ಚಾಂಪಿಯನ್ ಪಟ್ಟಕ್ಕೇರಿತು. ತನ್ನ ಟ್ರೋಫಿ ತನ್ನ ಬಳಿಯೇ ಉಳಿಸಿಕೊಳ್ಳಲು ಹೋರಾಡಲಿದೆ. ಇತ್ತ 2022ರಲ್ಲಿ ತನ್ನ ಅಭಿಯಾನ ಶುರು ಮಾಡಿರುವ ಗುಜರಾತ್ ಲಾಂಚ್ ಆದ ವರ್ಷವೇ ಹಾರ್ದಿಕ್ ಪಾಂಡ್ಯ ಅವರ ನೇತೃತ್ವದಲ್ಲಿ ಚಾಂಪಿಯನ್ ಪಟ್ಟಕ್ಕೇರಿತ್ತು. 2023ರಲ್ಲಿ ಫೈನಲ್ ಗೇರಿದ್ದರೂ ಕಪ್ ಗೆದ್ದಿರಲಿಲ್ಲ

ಜಿಟಿ-ಆರ್‌ಸಿಬಿ-ಸಮಬಲದ ಹೋರಾಟ

ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಸಮಬಲದ ಹೋರಾಟ ನಡೆಸಿವೆ. ಇಲ್ಲಿಯವರೆಗೆ ಇತ್ತಂಡಗಳು 8 ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಆರ್ ಸಿಬಿ, ಗುಜರಾತ್ ಸಮಾನ ಗೆಲುವು ಸಾಧಿಸಿವೆ. ಹೀಗಾಗಿ ಫೈನಲ್ ಪಂದ್ಯದಲ್ಲಿ ಗೆದ್ದವರು ಮುಖಾಮುಖಿಯ ಸಮಬಲ ಮುರಿದು ವಿನ್ನರ್ ಆಗಲಿರುವುದು ವಿಶೇಷ.

ಪಿಚ್ ರಿಪೋರ್ಟ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಗುಜರಾತ್‌ನ ತವರು ಪಿಚ್‌ನಲ್ಲಿ ಪಂದ್ಯ ನಡೆಯಲಿರುವುದು ಅಲ್ಪ ಲಾಭ ಪಡೆಯಬಹುದು. ಸ್ಪಿನ್ನರ್‌ಗಳಿಗೆ ಅಲ್ಪ ಸಹಾಯಕವಾಗಿರಲಿದೆ. ಹೆಚ್ಚಿನ ಬೌನ್ಸ್ ಕೂಡ ಇರಲಿದೆ. ಮಳೆ ಸಾಧ್ಯತೆ ಕಡಿಮೆ.

ಪಂದ್ಯದ ವಿವರ

ಯಾವಾಗ: ಭಾನುವಾರ, ಎಲ್ಲಿ: ಅಹಮದಾಬಾದ್,
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್,
ಜಿಯೋ ಹಾಟ್‌ಸ್ಟಾರ್

ಒಂದು ವಿಚಿತ್ರ ದಾಖಲೆ

ಗುಜರಾತ್ ಹಾಗೂ ಆರ್‌ಸಿಬಿ ನಡುವೆ ನಡೆದಿರುವ ಎಲ್ಲ 8 ಪಂದ್ಯಗಳಲ್ಲೂ ಚೇಸಿಂಗ್ ಮಾಡಿದ ತಂಡವೇ ಗೆದ್ದಿದೆ. ಯಾವುದೇ ಪಂದ್ಯದಲ್ಲೂ ಡಿಫೆಂಡ್ ಮಾಡುವ ತಂಡ ಗೆದ್ದಿಲ್ಲ. ಇದು ಫೈನಲ್ ಪಂದ್ಯದ ಟಾಸ್ ವೇಳೆ ತಂಡದ ನಾಯಕರುಗಳಿಗೆ ಒತ್ತಡ ಹೇರಲಿದೆ.

ಕೊಹ್ಲಿಯೇ ಕಿಂಗ್

ಗುಜರಾತ್ ವಿರುದ್ಧ ಕೊಹ್ಲಿ

- 460 ರನ್
- ಸರಾಸರಿ 76.66
- 1 ಶತಕ
- ಸ್ಟ್ರೈಕ್ ರೇಟ್ 152+


ಗುಜರಾತ್ ಪರ ಸುದರ್ಶನ್ ಬೆಸ್ಟ್

- ಸುಮಾರು 265 ರನ್
- 2026ರಲ್ಲಿ 58 ಎಸೆತಗಳಲ್ಲಿ ಶತಕ
- ಆರ್‌ಸಿಬಿ ವಿರುದ್ಧ ಹೆಚ್ಚಿನ ರನ್



ಕೂಟದಲ್ಲಿ ಆರ್‌ಸಿಬಿ

2024ರ ಡಿಸೆಂಬರ್‌ನಲ್ಲಿ ನಡೆದಿದ್ದ ಮೆಗಾ ಹರಾಜಿನಲ್ಲೇ ಬೆಂಗಳೂರು ತಂಡದ ನಾಗಾಲೋಟ ಶುರುವಾಗಿದ್ದು. ಅಂದಿನ ದಿನ ಮಾತನಾಡಿದ್ದ ನಿರ್ದೇಶಕ ಮೊ ಬೋಬಾಟ್ ಮತ್ತು ಮುಖ್ಯ ತರಬೇತುದಾರ ಆ್ಯಂಡಿ ಫ್ಲವರ್ ನಾವು ಸ್ಟಾರ್ ಆಟಗಾರರಗಿಂತಲೂ ಗೆಲುವಿನಲ್ಲಿ ಮಿಂಚುವ ದೇಶಿ ಕ್ರಿಕೆಟಿಗರ ಮೊರೆ ಹೋದೆವು. ಬೇಕಾದ ಆಟಗಾರರನ್ನು ಖರೀದಿಸಿದೇವು ಎಂದು ಹೇಳಿದ್ದರು. ಆ ಹೇಳಿಕೆ ಬಂದಿದ್ದೆ ತಡ ಆರ್‌ಸಿಬಿ ಇತಿಹಾಸವೇ ಬದಲಾಯಿತು. ಪಂದ್ಯಾವಳಿಯಲ್ಲಿ ಸದೃಢ ತಂಡವಾಗಿ ಮೆರೆದಾಡಿತು. 2025ರ ಐಪಿಎಲ್ ಗೆದ್ದ ನಂತರ ಹೆಚ್ಚಿನ ಬದಲಾವಣೆ ಮಾಡಿಕೊಳ್ಳದ ಆರ್ ಸಿಬಿ ಯಶ್ ದಯಾಳ್ ಅವರನ್ನು ಬಿಟ್ಟು ಆಡಿದರೆ,



ಜೋಶ್ ಹ್ಯಾಜೆಲ್ವುಡ್ ಕೆಲವು ಪಂದ್ಯಗಳಲ್ಲಿ ಆಡಲ್ಲ ಎಂಬ ಆಘಾತ ಎದುರಿಸಿತು. ಜೇಕಬ್ ಡಫಿ, ಭುವನೇಶ್ವರ್ ಕುಮಾರ್ ಮತ್ತು ಯುವ ಆಲ್ ರೌಂಡರ್ ರಸೀಖ್ ಸಲಾಂ ಧಾರ್ ಅವರ ಬಲದೊಂದಿಗೆ ಆಡಿದ ಆರ್‌ಸಿಬಿ ಬೌಲಿಂಗ್‌ನಲ್ಲಿ ಮೊದಲಿನಿಂದಲೂ ನಂಬರ್.1 ಆಗಿರುವುದೇ ವಿಶೇಷ. ಈಗ ತಂಡದಲ್ಲಿ ರಸೀಖ್, ಭುವನೇಶ್ವರ್ ಕುಮಾರ್, ಡಫಿ ಹಾಗೂ ಶೇಫರ್ಡ್ ಎಲ್ಲರೂ ಮಿಂಚುತ್ತಿದ್ದಾರೆ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ ತಂಡಕ್ಕರುವ ದೊಡ್ಡ ಶಕ್ತಿಯೇ ವಿರಾಟ್ ಕೊಹ್ಲಿ. ಮೊದಲ ಪಂದ್ಯದಿಂದಲೂ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಅತ್ತ ನಾಯಕ ಪಾಟಿದಾರ್ ತಂಡಕ್ಕೆ ಆನೆ ಬಲ ತಂದಿದ್ದಾರೆ. ಸಾಲ್ಟ್ ತಂಡದಲ್ಲಿ ಕೆಲವು ಪಂದ್ಯದ ಮಟ್ಟಿಗೆ ಇಲ್ಲದಿದ್ದರೂ ಅವರ ಬದಲಿಗೆ ಆರಂಭಿಕರಾಗಿ ಆಡುತ್ತಿರುವ ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಈ ನಡುವೆ ಮೂರನೇ ಕ್ರಮಾಂಕದಲ್ಲಿ ಆಡುವ ದೇವದತ್ತ ಪಡಿಕ್ಕಲ್ ಪಂದ್ಯದ ಗತಿಯೇ ಬದಲಿಸುತ್ತಿರುವುದು ಆರ್‌ಸಿಬಿಯ ಭರವಸೆ.

ಜಿಟಿ ದಾಳಿ ಎದುರಿಸಬೇಕಿದೆ ಆರ್‌ಸಿಬಿ

ಆದಾಗ್ಯೂ ಬೆಂಗಳೂರು ಗುಜರಾತ್ ಟೈಟಾನ್ಸ್ ಬೌಲಿಂಗ್ ಪಡೆಯನ್ನು ಸಮರ್ಥವಾಗಿ ಎದುರಿಸುವ ಸವಾಲನ್ನು ಹೊಂದಿದೆ. ಕ್ವಾಲಿಫೈಯರ್ ಪಂದ್ಯದಲ್ಲಿ ದಂಡಿಸಿರುವ ಆರ್‌ಸಿಬಿ, ರಬಾಡ, ಸಿರಾಜ್, ಹೋಲ್ಡರ್ ದಾಳಿಯನ್ನು ಎದುರಿಸಬೇಕಿದೆ. ಮುಖ್ಯವಾ ಆಡಿರುವ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿಗೆ ಹೋಲ್ಡರ್ ಅಲ್ಪ ಕಾಟ ಕೊಟ್ಟಿದ್ದಾರೆ. ಎರಡು ಬಾರಿಯೂ ವಿರಾಟ್ ಕೊಹ್ಲಿ ವಿಕೆಟ್ ಪಡೆದಿರುವ ಜೇಸನ್ ಆರ್‌ಸಿಬಿ ವಿರುದ್ಧ ಉತ್ತಮ ಅಂಕಿ-ಸಂಖ್ಯೆಗಳನ್ನು ಅವರ ಹೊಂದಿರುವುದು ಸವಾಲನ್ನು ಎದುರಿಸಬೇಕಿದೆ.

ಪ್ರಮುಖ ಆಟಗಾರರು(ಆರ್‌ಸಿಬಿ)

ಬ್ಯಾಟಿಂಗ್

- ಕೊಹ್ಲಿ: 600 ರನ್
- ಪಾಟಿದಾರ್: 486ರನ್
- ಪಡಿಕ್ಕಲ್: 463ರನ್
- ಕೃಣಾಲ್ : 281ರನ್,13 ವಿಕೆಟ್

ಬೌಲಿಂಗ್

- ಭುವನೇಶ್ವರ್ : 26 ವಿಕೆಟ್
- ರಸೀಖ್ : 16 ವಿಕೆಟ್
- ಹ್ಯಾಜೆಲ್ವುಡ್: 18 ವಿಕೆಟ್
- ಸುಯಶ್: 9 ವಿಕೆಟ್

ಕೂಟದಲ್ಲಿ ಪ್ರದರ್ಶನ

- ಪಂದ್ಯ: 15
- ಗೆಲುವು: 10
- ಸೋಲು: 5



ಕಳೆದ ಪಂದ್ಯದ ಫಲಿತಾಂಶ
ಗುಜರಾತ್ ವಿರುದ್ಧ 47 ರನ್ ಗೆಲುವು

ಗುಜರಾತ್ ಬಳಗಕ್ಕೂ ತಪ್ಪದ ಸವಾಲು

ಗುಜರಾತ್ ಹಾದಿ ನೋಡುತ್ತಾ ಬಂದರೆ ವಿಶೇಷ ಕಾರಣ, ವಿಶೇಷ ಮೈಲಿಗಲ್ಲುಗಳು ಸಿಗುತ್ತವೆ. ದೊಡ್ಡ ಪ್ಲೇಯರ್‌ಗಳ ಲಿಸ್ಟ್‌ನಲ್ಲಿ ಸಿಗುವುದು ಶುಭಮನ್ ಗಿಲ್ ಮತ್ತು ಜಾಸ್ ಬಟ್ಲರ್ ಹೆಸರು. ಇನ್ನುಳಿದವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿದ್ದರೂ ಅಷ್ಟೊಂದು ಪ್ರಭಾವಿಯಾಗಿ ಕಂಡವರಲ್ಲ. ಯಥಾವತ್ತಾಗಿ ಸಾಯಿ ಸುದರ್ಶನ್ ಮತ್ತೊಮ್ಮೆ ಮಿಂಚಿದರು. ಶುಭಮನ್ ಗಿಲ್ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಈವರೆಗೂ ಮಿಂಚಿದ್ದಾರೆ. ಅವರ ಕಳೆದ ಪಂದ್ಯದಲ್ಲಿನ ಅವರ ಶತಕ ಬಲ ತಂದಿದೆ. ಮಧ್ಯಮ ಕ್ರಮಾಂಕದಲ್ಲಿ ವಾಷಿ, ಬಟ್ಲರ್ ಮಿಂಚಿರುವುದು ತಂಡಕ್ಕೆ ದೊಡ್ಡ ಬಲ. ಬೌಲಿಂಗ್ ವಿಭಾಗವನ್ನೇ ಶಕ್ತಿಯಾಗಿರಿಸಿರುವ ಗುಜರಾತ್ ಗೆಲುವಿನ ನಾಗಾಲೋಟದಲ್ಲಿದೆ. ಸಿರಾಜ್, ರಬಾಡ, ಹೋಲ್ಡರ್, ಕೃಷ್ಣ ಹೀಗೆ ಬಂದವರೆಲ್ಲಾ ಅತ್ಯುತ್ತಮ ಬೌಲರ್‌ಗಳೇ ಹೌದು. ಆದಾಗ್ಯೂ ಆರ್ ಸಿಬಿ ಪಡೆ ವಿರುದ್ಧ ಕ್ವಾಲಿಫೈಯರ್‌ನಲ್ಲಿ ದೊಡ್ಡ ಹಿನ್ನಡೆಯೊಂದನ್ನು ಅನುಭವಿಸಿದೆ. ಬ್ಯಾಟಿಂಗ್‌ನಲ್ಲೂ ಭುವನೇಶ್ವರ್ ದಾಳಿಗೆ ಉತ್ತರ ಕೊಡುವುದೇ ತಂಡಕ್ಕಿರುವ ದೊಡ್ಡ ಸವಾಲು.

ಪ್ರಮುಖ ಆಟಗಾರರು(ಗುಜರಾತ್)

ಬ್ಯಾಟಿಂಗ್

- ಗಿಲ್: 722 ರನ್
- ಸುದರ್ಶನ್: 710 ರನ್
- ಬಟ್ಲರ್: 507 ರನ್
- ಸುಂದರ್: 327ರನ್

ಬೌಲಿಂಗ್

- ರಬಾಡ: 28 ವಿಕೆಟ್
- ರಶೀದ್: 19 ವಿಕೆಟ್
- ಸಿರಾಜ್: 18 ವಿಕೆಟ್
- ಹೋಲ್ಡರ್: 17 ವಿಕೆಟ್

ಕೂಟದಲ್ಲಿ ಪ್ರದರ್ಶನ:

- ಪಂದ್ಯ: 16
- ಗೆಲುವು: 10
- ಸೋಲು: 6



ಕಳೆದ ಪಂದ್ಯದ ಫಲಿತಾಂಶ
ರಾಜಸ್ಥಾನ ವಿರುದ್ಧ 7 ವಿಕೆಟ್ ಜಯ

ಏಷ್ಯನ್ ಗೇಮ್ಸ್‌ಗೆ ವೈಭವ್!

ಮುಂಬೈ: ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಕ್ರಿಕೆಟ್ ಸ್ಪರ್ಧೆಗಾಗಿ ಸಂಭಾವ್ಯ ಪಟ್ಟಿಯಲ್ಲಿ ವೈಭವ್ ಸೂರ್ಯವಂಶಿ ಅವರನ್ನು ಸೇರಿಸಲಾಗಿದೆ. ಬಹು ವರ್ಷಗಳ ನಂತರ ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ಮರಳಿದೆ. ಇದೇ ಪಂದ್ಯಾವಳಿಗಾಗಿ ಭಾರತ ತಂಡವನ್ನು ಪ್ರತಿನಿಧಿಸಲಿರುವ 30 ಜನರ ಸಂಭಾವ್ಯ ಪಟ್ಟಿಯನ್ನು ಬಿಸಿಸಿಐ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗೆ ಸಲ್ಲಿಸಿದೆ.

ಟೆಸ್ಟ್ ಮತ್ತು ಏಕದಿನ ನಾಯಕ ಶುಭಮನ್ ಗಿಲ್, ಹಾಲಿ ವಿಶ್ವಕಪ್ ಚಾಂಪಿಯನ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರ ಹೆಸರು ಇದರಲ್ಲಿಲ್ಲ. ಏಷ್ಯನ್ ಗೇಮ್ಸ್ ನಡೆಯುವ ಸಮಯದಲ್ಲೇ ವೆಸ್ಟ್ ಇಂಡೀಸ್‌ನೊಂದಿಗೆ ದೊಡ್ಡ ಸರಣಿ ಆಡಬೇಕಿದೆ. ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಟಿ20 ಮಾದರಿಯಲ್ಲಿ ನಡೆಯುತ್ತದೆ. ಪರಿಣಾಮ ವಿಂಡೀಸ್ ಸರಣಿಗಾಗಿ ಬೇರೆ ತಂಡ ಮತ್ತು ಏಷ್ಯನ್ ಗೇಮ್ಸ್ ಸರಣಿಗಾಗಿ ಬೇರೆ ತಂಡವನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ.

ವಿಂಡೀಸ್ ವಿರುದ್ಧ ಭಾರತ 8 ವೈಟ್ ಬಾಲ್ ಪಂದ್ಯಗಳನ್ನಾಡಲಿದೆ. ಹೀಗಿರುವಾಗಿ



- 30 ಜನ ಕ್ರಿಕೆಟಿಗರ ಸಂಭಾವ್ಯ ಪಟ್ಟಿಯಲ್ಲಿ ಸೂರ್ಯವಂಶಿ
- ಗಿಲ್-ಸೂರ್ಯಗಿಲ್ಲ ಅವಕಾಶ
- ಒಲಿಂಪಿಕ್ಸ್ ಸಮಿತಿ ಕೈಗೆ ಪಟ್ಟಿ

ಶುಭಮನ್ ಗಿಲ್ ಏಕದಿನ ತಂಡವನ್ನು ಮುನ್ನಡೆಸಲಿದ್ದಾರೆ ಎನ್ನಲಾಗಿದೆ. ಟಿ20 ವಿಚಾರಕ್ಕೆ ಬಂದರೆ ಸೂರ್ಯಕುಮಾರ್ ಯಾದವ್ ಅವರನ್ನು ಒಲಿಂಪಿಕ್ಸ್ ಮುಂದಿನ ಟಿ20 ವಿಶ್ವಕಪ್ ಪಂದ್ಯಾವಳಿಯ ಯೋಜನೆಗಳಲ್ಲಿ ಪರಿಗಣಿಸಲಾಗಿಲ್ಲ ಎಂಬ ವಿಚಾರವೂ ಮುನ್ನೆಲೆಗೆ ಬಂದಿದೆ.

ಯಾರ್‍ಯಾರಿಗೆ ಅವಕಾಶ

ಮುಖ್ಯವಾಗಿ ಈ ಬಾರಿಯ ಐಪಿಎಲ್‌ನಲ್ಲಿ ಮಿಂಚಿ ವಿಶ್ವ ಕ್ರಿಕೆಟ್‌ನ ಪ್ರಮುಖ ಆಕರ್ಷಣೆಯಾಗಿರುವ ವೈಭವ್ ಸೂರ್ಯವಂಶಿ ಅವರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ರಾಜಸ್ಥಾನ ತಂಡದ ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್ ಅವರನ್ನು ಆಯ್ಕೆ ಮಾಡಲಾಗಿದೆ. ಆಯುಷ್ ಬದೋನಿ, ಹರ್ಷ ದುಬೆ, ಶೆಹಬಾಜ್ ಅಹ್ಮದ್, ಅನುಕುಲ್ ರಾಯ್, ಗಮನಾರ್ಹವಾಗಿ ರುತುರಾಜ್ ಗಾಯಕ್ವಾಡ್ ಅವರನ್ನು ಆಯ್ಕೆ ಮಾಡಲಾಗಿದೆ. ವಿಕೆಟ್ ಕೀಪರ್ ರಿಷಭ್ ಪಂತ್ ಅವರನ್ನೂ ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

30 ಜನರ ಪಟ್ಟಿ

ಯಶಸ್ವಿ ಜೈಸ್ವಾಲ್, ಅಭಿಷೇಕ್ ಶರ್ಮ, ವೈಭವ್ ಸೂರ್ಯವಂಶಿ, ಇಶಾನ್ ಕಿಶನ್, ಸಂಜು ಸ್ಯಾಮ್ಸನ್ (ವಿ.ಕಿ), ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿ.ಕಿ), ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ತಿಲಕ್ ವರ್ಮಾ, ಜಸ್‌ಪ್ರೀತ್ ಬುಮ್ರಾ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಕುಲದೀಪ್ ರೆಡ್ಡಿ, ಕುಲದೀಪ್ ರೆಡ್ಡಿ, ಕುಲದೀಪ್ ಯಾದವ್, ಕುಲದೀಪ್ ಯಾದವ್ ಅನುಕೂಲ್ ರಾಯ್, ಆಯುಷ್ ಬದೋನಿ, , ಹರ್ಷ್ ದುಬೆ, ಧ್ರುವ್ ಜುರೆಲ್, ಖಲೀಲ್ ಅಹ್ಮದ್, ರುತುರಾಜ್ ಗಾಯಕ್ವಾಡ್, ರವಿ ಬಿಷ್ಣೋಯ್, ಶಹಬಾಜ್ ಅಹ್ಮದ್, ಶಿವಂ ದುಬೆ, ವಿಪ್ರಜ್ ನಿಗಮ್, ಹರ್ಷಿತ್ ರಾಣಾ, ಯಶ್ ಠಾಕೂರ್, ವಾಷಿಂಗ್ಟನ್ ಸುಂದರ್.

ಫ್ರೆಂಚ್ ಓಪನ್: ಜೋಕೊವಿಚ್ ಹೊರಕ್ಕೆ ಪ್ರಿಕ್ವಾರ್ಟರ್‌ಗೆ ಜ್ವೇರೆವ್, ಸಬಲೆಂಕಾ

ಪ್ಯಾರಿಸ್: ಪ್ರತಿಷ್ಠಿತ ಫ್ರೆಂಚ್ ಓಪನ್ ಪಂದ್ಯಾವಳಿ ಪ್ರಿಕ್ವಾರ್ಟರ್‌ಫೈನಲ್‌ಗೆ ಆಲೆಕ್ಸಾಂಡರ್ ಜ್ವೇರೆವ್ ತಲುಪಿದ್ದಾರೆ. ಪಂದ್ಯಾವಳಿಯ ಮೊದಲ ಪಂದ್ಯದಿಂದಲೂ ಅತ್ಯುತ್ತಮ ಪ್ರದರ್ಶನ ನೀಡುತ್ತಿರುವ ಅವರು, ಗೆಲುವಿನ ನಾಗಾಲೋಟವನ್ನು ಮೂರನೇ ಸುತ್ತಿಗೆ ವಿಸ್ತರಿಸಿದರು. ಕ್ವಿಂಟಿನ್ ಹಾಲ್ಸ್ ಅವರೊಂದಿಗೆ ಕಠಿಣ ಪೈಪೋಟಿಯಲ್ಲಿ ಅವರು, 6-4, 6-3, 5-7, 6-2ರಿಂದ ಗೆಲುವು ಸಾಧಿಸಿದರು.

ಶುಕ್ರವಾರದ ಪ್ರಮುಖ ಪಂದ್ಯದಲ್ಲಿ ನೋವಾಕ್ ಜೋಕೊವಿಚ್ ಸೋಲ ನುಭವಿಸಿದ್ದರು. ಬ್ರೇಜಿಲ್‌ನ ಜೊವಾವೊ ಫೊನ್ಸಿಕಾ ವಿರುದ್ಧ ಆಡಿದ್ದ ಅವರು, 6-4, 6-4, 3-6, 5-7, 5-7ರಿಂದ ಸೋತು ಹೊರಬಿದ್ದರು. ಮೊದಲಿಗೆ ಮುನ್ನಡೆ ಸಾಧಿಸಿದ್ದ ಅವರು, ಬಳಿಕ ಅಚ್ಚರಿಯ ಸೋಲು ಕಂಡರು. ಈ ಹಿಂದೆ ಪಂದ್ಯಾವಳಿಯಿಂದ ಯಾನಿಕ್ ಸಿನ್ನರ್ ಸೋತು ಹೊರ ಬಿದ್ದಿದ್ದರು. ಈ ನಿಟ್ಟಿನಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಸ್ಟಾರ್ ಆಟಗಾರರು ಬಹುತೇಕ ಹೊರಬಿದ್ದಂತಿದೆ. ಜ್ವೇರೆವ್ ಮಾತ್ರವೇ ಉಳಿದಿದ್ದಾರೆ.

ಸಬಲೆಂಕಾ ಮುನ್ನಡೆ: ಮಹಿಳೆಯ ವಿಭಾಗದಲ್ಲಿ ತಮ್ಮ ಭರ್ಜರಿ ಪ್ರದರ್ಶನ



ಮುಂದುವರಿಸಿರುವ ಅರಿನಾ ಸಬಲೆಂಕಾ ಡಾರಿಯಾ ಅವರೊಂದಿಗೆ 6-4, 7-5ರಿಂದ ಗೆಲುವುಸಾಧಿಸಿದ್ದು, ಪ್ರಿ-ಕ್ವಾರ್ಟರ್‌ಗೇರಿದ್ದಾರೆ. ಅಚ್ಚರಿಯ ಫಲಿತಾಂಶದಲ್ಲಿ ಜೋವಿಕ್ ನಾವೊಮಿ ಒಸಾಕಾ ಅವರೊಂದಿಗೆ ಸೋತು ಹೊರನಡೆದಿದ್ದಾರೆ. ಶುಕ್ರವಾರದಂದು ತಮ್ಮ ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿರುವ ಈಗಾ ಸ್ವಿಯಾಟೆಕ್, ಮಾಗ್ದಾ ಅವರೊಂದಿಗೆ ಗೆಲುವು ಸಾಧಿಸಿದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಈಗಾ 6-4, 6-4ರಿಂದ ಗೆದ್ದು ಬೀಗಿದ್ದಾರೆ.

ಸಿಂಗಾಪುರ ಓಪನ್: ವಿಶ್ವ ನಂ.1 ಜೋಡಿಗೆ ಶಾಕ್ ನೀಡಿದ ಭಾರತೀಯರು

ಫೈನಲ್‌ಗೆ ಸಾತ್ವಿಕ್-ಚಿರಾಗ್ ಲಗ್ಗೆ

ಸಿಂಗಾಪುರ: ಸಿಂಗಾಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ತಾರಾ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಫೈನಲ್‌ಗೆ ಪ್ರವೇಶಿಸಿದ್ದಾರೆ. ಶನಿವಾರ ನಡೆದ ಪುರುಷರ ಡಬಲ್ಸ್ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಭಾರತೀಯ ಜೋಡಿ, ಅಗ್ರ ಶ್ರೇಯಾಂಕದ ಹಾಗೂ ವಿಶ್ವ ನಂ.1 ದಕ್ಷಿಣ ಕೊರಿಯಾದ ಕಿಮ್ ವೋನ್ ಹೋಸಿಯೊ ಸೆಯುಂಗ್ ಜೇ ಜೋಡಿಯನ್ನು ನೇರ ಗೇಮ್‌ಗಳಲ್ಲಿ ಮಣಿಸಿ ಸಂಚಲನ ಮೂಡಿಸಿತು. 52 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಸಾತ್ವಿಕ್-ಚಿರಾಗ್ 21-19, 21-18 ಅಂತರದಲ್ಲಿ ಗೆಲುವು ಸಾಧಿಸಿದರು. ಹಾಲಿ ವಿಶ್ವ ಚಾಂಪಿಯನ್‌ಗಳ ವಿರುದ್ಧ ಒತ್ತಡದ ಕ್ಷಣಗಳಲ್ಲೂ ಸಮಾಧಾನ ಕಾಪಾಡಿಕೊಂಡ ಭಾರತೀಯ ಜೋಡಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು. ಮೊದಲ ಗೇಮ್‌ನಲ್ಲಿ ವಿರಾಮದ ವೇಳೆಗೆ ಕೊರಿಯಾ



ಜೋಡಿ 13-11ರಿಂದ ಮುನ್ನಡೆಯಲ್ಲಿತ್ತು. ಆದರೆ ಸಾತ್ವಿಕ್-ಚಿರಾಗ್ ಅದ್ಭುತ ಪುನರಾಗಮನ ಮಾಡಿ ಪ್ರಮುಖ ಅಂಕಗಳನ್ನು ಗಳಿಸುವ ಮೂಲಕ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲೂ ಭಾರತೀಯಜೋಡಿ11-14ರಿಂದಹಿನ್ನಡೆಯಲ್ಲಿತ್ತು. ಆದರೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಹೋರಾಡಿದ ಸಾತ್ವಿಕ್-ಚಿರಾಗ್ ಸತತ ಅಂಕಗಳನ್ನು ಗಳಿಸಿ ಪಂದ್ಯವನ್ನು ಮುಗಿಸಿದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಸಾತ್ವಿಕ್- ಚಿರಾಗ್, ಇಂಡೋನೇಷ್ಯಾದ ಫಜರ್ ಅಲ್ಫಿಯನ್-ಮುಹಮ್ಮದ್ ಶೋಹಿಬುಲ್ ಫಿಕ್ರಿ ಜೋಡಿ ಹಾಗೂ ಚೀನಾದ ಲಿಯಾಂಗ್ ವೇ ಕಾಂಗ್‌ವಾಂಗ್ ಚಾಂಗ್ ಜೋಡಿ ನಡುವಿನ ಇನ್ನೊಂದು ಸೆಮಿಫೈನಲ್ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ. ಇನ್ನೊಂದೆಡೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೊ ಅವರ ಅಭಿಯಾನ ಅಂತ್ಯಗೊಂಡಿತು. ಸೆಮಿಫೈನಲ್‌ನಲ್ಲಿ ಜಪಾನ್‌ನ ಯುಯಿಚಿ ಶಿಮೊಗಾ-ಮಿಸಯಾಕಾ ಹೋಬರಾ ಜೋಡಿಗೆ 16-21, 21-17, 13-21 ಅಂತರದಲ್ಲಿ ಸೋತು ಅವರು ಟೂರ್ನಿಯಿಂದ ಹೊರಬಿದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6000

5999 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮರತಿ 4.ತುಡಿತ
6.ದಿಟ್ಟಿಗಿಡಿಯ 9.ನವರಸ
10.ನವರಸ 13.ಹಣದೊಡತಿ
15.ಮಾಳಿಗೆ 17.ಬಾಕಿ
18.ತಾಲಮಾನ

ಮೇಲಿನಿಂದ ಕೆಳಕ್ಕೆ : 1.ಪಾತ
2.ಆತುರಗಾರ 3.ರಜಾದಿನ
4.ಗಾರುಡಿ 7.ಯಶೋಮತಿ
8.ಜ್ಞಾನದಾಹ
11.ಮಾನಾಪಮಾನ
12.ಅತಿಬಲ 14.ಕಿರಣ
16.ಗೆಡ್ಡೆ


ಎಡದಿಂದ ಬಲಕ್ಕೆ
2.ವಿಮಾನವನ್ನೊಳಗೊಂಡ ವಸ್ತುಸ್ಥಿತಿ (4)
4.ಅದೃಷ್ಟ-ಸುದೈವದ ಸಮಾನಪದ (2)
5.ವಿಶ್ವದ ಅತಿದೊಡ್ಡ ಮರುಭೂಮಿ (3)
6.ಅವರು ಭಯದಿಂದ ಪಡೆದ ಆಶ್ವಾಸನೆ (4)
8.ಕುಚೇಷ್ಟೆ-ಅಧಿಕಪ್ರಸಂಗವಿದು (4)
10.ತಲೆ ರಕ್ಷಿಸಲು ಹಾಕಿಕೊಳ್ಳುವ ಸಾಧನ (4)
12.ಮೊಬಲಗಿನಲ್ಲಿ ಕೊಡುವ ಸೋಡಿ (4)
14.ಹರನ ಜಟೆಯ ಬಗೆಗಿನ ವೃಥಾ ಮಾತುಕತೆ (3)
16.ದನ-ಜಾನುವಾರು ಇದು (2)
17.ಮರಣ ವಿರಸವಾದರೆ ಜೀವನ? (4)

ಮೇಲಿನಿಂದ ಕೆಳಕ್ಕೆ
1.ಉದಾಸನಾಗಿ ಕುಳಿತ ಸೇವಕ (2)
2.ಹೊಳೆಯುವ-ವೈಭವದಿಂದ ಕೂಡಿದ್ದು (4)
3.ಮನುಷ್ಯರ ಬಗ್ಗೆ ಇರುವ ಅಂಜಿಕೆ (4)
4.ಭಾವನ ಗರ್ವ ಮುರಿದ ಪರಶುರಾಮ (3)
7.ಇದು ಆಕರ್ಷಿಸುವ ಸ್ವಭಾವ (4)
8.ಈಕೆ ರಾವಣನ ಪತ್ನಿ (4)
9.ಪೂರ್ವಕಥೆ-ಚರಿತ್ರೆಯಿದು(4)
11. ನೆರವನ್ನು ಉಲ್ಟಾ ನೀಡುತ್ತಿದ್ದಾರೆ (4)
13.ದಯನೀಯವಾಗಿ ಬೇಡು (3)
15.ಬಲವಾದ ಸುತ್ತುಗೋಡೆ ತಲೆಕೆಳಗಾಗಿದೆ (2)

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಾರ್ನಿಂಗ್ ಶೋ
ಭಾನುವಾರ 31 ಮೇ 2026,
ಬೆಂಗಳೂರು

ಕ್ರೈಂ ಥ್ರಿಲ್ಲರ್ ಚಾರ್ಜ್‌ಶೀಟ್ 03-08 ಚಿತ್ರಕ್ಕೆ ಸೆನ್ಸಾರ್

ಕನ್ನಡದ ಬಹುನಿರೀಕ್ಷಿತ ಕ್ರೈಂ ಥ್ರಿಲ್ಲರ್ ಸಿನಿಮಾ ಚಾರ್ಜ್ ಶೀಟ್ 03-08 ಇದೀಗ ಸೆನ್ಸಾರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯಿಂದ ಯಾವುದೇ ಕಟ್ ಇಲ್ಲದೆ ಯು/ಎ ಪ್ರಮಾಣ ಪತ್ರವನ್ನು ಪಡೆದುಕೊಂಡಿದೆ. ಚಿತ್ರದ ನಿರೂಪಣೆ ಹಾಗೂ ಕಥೆಯ ನಿರ್ವಹಣೆಯನ್ನು ಸೆನ್ಸಾರ್ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿರುವುದು ಚಿತ್ರತಂಡಕ್ಕೆ ಮತ್ತಷ್ಟು ಉತ್ಸಾಹ ತುಂಬಿದೆ.



ಎಂ/ಎಸ್ ಅರ್ಜುನ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರದ ನಿರ್ಮಾಪಕರಾದ ದಿನೇಶ್ ಮತ್ತು ಲಕ್ಷ್ಮಣ್, ಚಾರ್ಜ್‌ಶೀಟ್ 03-08 ಚಿತ್ರಕ್ಕೆ ಸಿಕ್ಕಿರುವ ಮೆಚ್ಚುಗೆ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿ ಎಸ್.ಕೆ. ಉಮೇಶ್ ಅವರ ಮೂಲ ಕಥಾಹಂದರವನ್ನು ಆಧರಿಸಿ ನಿರ್ಮಾಣವಾಗಿರುವ ಈ ಚಿತ್ರವನ್ನು ವೆಂಕಟ್ ಭಾರದ್ವಾಜ್ ಅವರು ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಈ ಚಿತ್ರಕ್ಕೆ ಅವರು ಚಿತ್ರಕಥೆ, ಸಂಭಾಷಣೆ ಮತ್ತು ನಿರ್ದೇಶನದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ವಾಸ್ತವಿಕತೆಯೊಂದಿಗೆ ಕುತೂಹಲಕಾರಿಯಾಗಿ ಸಾಗುವ ತನಿಖಾ ಶೈಲಿಯ ಕಥಾಹಂದರ ಪ್ರೇಕ್ಷಕರನ್ನು ಸೆಳೆಯಲಿದೆ ಎಂಬ ವಿಶ್ವಾಸ ಚಿತ್ರತಂಡದಲ್ಲಿದೆ.

ಇದೇ ವೇಳೆ ಚಿತ್ರದ ಆಡಿಯೋ ಹಕ್ಕುಗಳನ್ನು ಎ2 ಮ್ಯೂಸಿಕ್ ಸಂಸ್ಥೆ ಪಡೆದುಕೊಂಡಿರುವುದಾಗಿ ನಿರ್ಮಾಪಕರು ತಿಳಿಸಿದ್ದಾರೆ. ಚಿತ್ರದ ಪ್ರಚಾರ ಕಾರ್ಯಗಳನ್ನು ಈಗಾಗಲೇ ಸೂಕ್ತ ಯೋಜನೆಯೊಂದಿಗೆ ಆರಂಭಿಸಲಾಗಿದ್ದು, ಮೊದಲಿಗೆ ಟೀಸರ್, ನಂತರ ಎರಡು ಹಾಡುಗಳು ಹಾಗೂ ಕೊನೆಯಲ್ಲಿ ಚಿತ್ರದ ಟ್ರೈಲರ್ ಬಿಡುಗಡೆ ಮಾಡುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ.

ಈ ಚಿತ್ರದಲ್ಲಿ ಹಿರಿಯನಟ ಸುಂದರ್‌ರಾಜ್, ಹರ್ಷ ಅರ್ಜುನ್, ಸತ್ಯಶ್ರೀ, ಅಮರ್, ರೂಪೇಶ್, ಡಾ. ಪ್ರಮೋದ್, ಡಾ. ಸುಧಾಕರ್‌ಶೆಟ್ಟಿ, ಚೇತನ ಖೋಟ್ ಹಾಗೂ ವೆಂಕಟ್ ಭಾರದ್ವಾಜ್ ಸೇರಿದಂತೆ ಹಲವು ಪ್ರತಿಭಾವಂತ ಕಲಾವಿದರು ಅಭಿನಯಿಸಿದ್ದಾರೆ. ಪ್ರಬಲ ಪಾತ್ರನಿರ್ವಹಣೆ ಮತ್ತು ಗಟ್ಟಿಯಾದ ಕಥಾನಿರೂಪಣೆ ಚಾರ್ಜ್‌ಶೀಟ್ 03-08 ಚಿತ್ರದ ಪ್ರಮುಖ ಆಕರ್ಷಣೆಯಾಗಲಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಸಮೀರ್ ಕುಲಕರ್ಣಿ ಅವರು ಈ ಚಿತ್ರಕ್ಕೆ ಸಂಗೀತ ಮತ್ತು ಹಿನ್ನೆಲೆ ಸಂಗೀತ ಸಂಯೋಜನೆ ಮಾಡಿದ್ದಾರೆ, ಛಾಯಾಗ್ರಹಣವನ್ನು ಪ್ರಮೋದ್ ಭಾರತೀಯ ಹಾಗೂ ಸಂಕಲನ ಮತ್ತು ಶಬ್ದ ಗ್ರಹಣವನ್ನು ಶಮೀಕ್ ವಿ.ಭರದ್ವಾಜ್ ವರು ನಿರ್ವಹಿಸಿದ್ದಾರೆ. ಈ ಚಿತ್ರಕ್ಕೆ ಲಾರೆನ್ಸ್ ಪ್ರೀತಮ್ ಅವರ ಸಹ ನಿರ್ದೇಶನವಿದೆ. ಕುತೂಹಲ, ರೋಚಕ ತನಿಖೆ, ಭಾವನಾತ್ಮಕ ಅಂಶಗಳು ಮತ್ತು ತೀವ್ರತೆಯಿಂದ ಕೂಡಿದ ವಿಭಿನ್ನ ಸಿನಿಮಾ ಅನುಭವವನ್ನು ಚಾರ್ಜ್‌ಶೀಟ್ 03-08 ಚಿತ್ರವು ಕನ್ನಡ ಪ್ರೇಕ್ಷಕರಿಗೆ ನೀಡಲಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಲೈಫ್ ಟುಡೆ 'ನೀನೊಬ್ಬಳೆ' ಹಾಡು ವಿ.ನಾಗೇಂದ್ರಪ್ರಸಾದ್ ಬಿಡುಗಡೆ



ಕಾಂತ ಕನ್ನಲ್ಲಿ ಅವರ ನಿರ್ದೇಶನದ ಬಹುನಿರೀಕ್ಷಿತ ಚಿತ್ರ ಲೈಫ್ ಟುಡೆ ತನ್ನ ಹಾಡುಗಳ ಮೂಲಕವೇ ಸದ್ದು ಮಾಡುತ್ತಿದೆ.

ಇತ್ತೀಚೆಗೆ ಈ ಚಿತ್ರದ ನೀನೊಬ್ಬಳೆ... ಎಂಬ ಮತ್ತೊಂದು ಹಾಡು ಬಿಡುಗಡೆಯಾಗಿದೆ. ನಾಯಕ ಕಿರಣ್ ಆದಿತ್ಯ, ನಾಯಕಿ ಲೇಖಾಚಂದ್ರ ನಟಿಸಿರುವ ಈ ಹಾಡಿಗೆ ಹಿರಿಯ ಗೀತರಚನೆಕಾರ ಹಾಗು ನಿರ್ದೇಶಕ ಡಾ. ವಿ.ನಾಗೇಂದ್ರಪ್ರಸಾದ್ ಅವರು ಸಾಹಿತ್ಯ ರಚಿಸಿದ್ದು, ಇತ್ತೀಚೆಗೆ ತಾವೇ ಬರೆದಿದ್ದ ಈ ಹಾಡನ್ನು ಬಿಡುಗಡೆ ಮಾಡಿ ಶುಭ ಹಾರೈಸಿದರು. ಕಾಂತ ಕನ್ನಲ್ಲಿ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿರುವ ಈ ಚಿತ್ರಕ್ಕೆ ಮೇಘನಾ ಪ್ರದೀಪ್ ಅವರು ಬಂಡವಾಳ ಹಾಕಿದ್ದಾರೆ. ಶ್ರೀಧರ್ ವಿ. ಸಂಭ್ರಮ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ನಂತರ ವಿ.ನಾಗೇಂದ್ರಪ್ರಸಾದ್ ಮಾತನಾಡಿ, ಇಡೀ ಸಿನಿಮಾದ ಕಥೆ ಪ್ರೀತಿಯ ಸುತ್ತ ಸಾಗಲಿದೆ. ಯುವಜನರಿಗೆ ಹತ್ತಿರವಾಗುವ ಕಂಟೆಂಟ್ ಇರುವ ಈ ಚಿತ್ರದ ನಾಯಕ ಕಿರಣ್, ನಿರ್ಮಾಪಕ ಪ್ರದೀಪ್ ಹಾಗು ಸಂಗೀತ ನಿರ್ದೇಶಕ ಶ್ರೀಧರ್ ಸಂಭ್ರಮ್ ಸೇರಿದಂತೆ ಇಡೀ ಚಿತ್ರತಂಡಕ್ಕೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು.

ನಿರ್ದೇಶಕ ಕಾಂತ ಕನ್ನಲ್ಲಿ ಮಾತನಾಡಿ, ಚಿತ್ರದ ಗುಣಮಟ್ಟದಲ್ಲಿ ಎಲ್ಲಿಯೂ ರಾಜಿ ಮಾಡಿಕೊಂಡಿಲ್ಲ. ಕಿರಣ್, ನಿರ್ಮಾಪಕ ಪ್ರದೀಪ್ ಅವರ ಸಹಕಾರದಿಂದ ಚಿತ್ರ ಚೆನ್ನಾಗಿ ಮೂಡಿ ಬಂದಿದೆ. ಪ್ರೀತಿ, ತ್ಯಾಗ, ನೋವು, ಕೌಟಂಬಿಕ ಬದ್ಧತೆ ಸೇರಿ ಹಲವಾರು ಅಂಶಗಳಿರುವ ಮನರಂಜನಾತ್ಮಕ ಚಿತ್ರ. ಮುಂದಿನ ದಿನಗಳಲ್ಲಿ ಟ್ರೈಲರ್ ಮೂಲಕ ಸಿನಿಮಾದ ಕಥೆಯ ತಿರುಳು ತಿಳಿಯಲಿದೆ ಎಂದರು.

ನಾಯಕ ನಟ ಕಿರಣ್ ಆದಿತ್ಯ ಮಾತನಾಡಿ ಹೊಸಬರ ಸಿನಿಮಾಗೆ

ಲೈಫ್ ಟು ಡೇ, ಈ ವರ್ಷ ಕನ್ನಡ ಚಿತ್ರರಂಗದಲ್ಲಿ ಮೂಡಿಬರ್ತಿರೋ ಮತ್ತೊಂದು ವಿಭಿನ್ನ ಸಿನಿಮಾ, ಪಕ್ಕಾ ಲವ್ ಸ್ಟೋರಿ ಒಳಗೊಂಡ ಈ ಚಿತ್ರವು ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಏಕಕಾಲಕ್ಕೆ ತಯಾರಾಗುತ್ತಿದೆ, ಕಾಂತ ಕನ್ನಲ್ಲಿ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಕಿರಣ್ ಆದಿತ್ಯ ನಾಯಕನಾಗಿ ನಟಿಸಿದ್ದು, ನಾಯಕಿಯಾಗಿ ಲೇಖಾಚಂದ್ರ ಅವರು ಅಭಿನಯಿಸಿದ್ದಾರೆ.



ಬರಗಾಲದಲ್ಲಿ ಸೌಂಡ್ ಮಾಡೋಕೆ ನಾವು ಬರ್ತಾ ಇದ್ದೇವೆ. ಮತ್ತೊಂದು ಮುಂಗಾರು ಮಳೆಯ ರೀತಿ ಬರುವ ಉದ್ದೇಶ ಇದೆ. ಜೂನ್ ತಿಂಗಳಲ್ಲಿ ನಮ್ಮ ಸಿನಿಮಾ ಬಿಡುಗಡೆಯಾಗಲಿದೆ. ಹಾಡುಗಳು ಒಂದಕ್ಕಿಂತ ಒಂದು ಚೆನ್ನಾಗಿ ಮೂಡಿಬಂದಿದೆ. ಲೈಫ್ ಟುಡೇ ಈ ವರ್ಷದ ಮತ್ತೊಂದು ಸೂಪರ್‌ಹಿಟ್ ಆಗಲಿದೆ ಎಂದರು. ನಿರ್ಮಾಪಕ ಪ್ರದೀಪ್ ಮಾತನಾಡಿ ಚಿತ್ರದ ಹಾಡುಗಳು ಚೆನ್ನಾಗಿ ಮೂಡಿಬಂದಿದೆ ಎಂದು ಎಲ್ಲರ ಶ್ರಮಕ್ಕೆ ಮೆಚ್ಚಿಗೆ ವ್ಯಕ್ತಪಡಿಸಿದರು.

ಸಂಗೀತ ನಿರ್ದೇಶಕ ಶ್ರೀಧರ್ ವಿ.ಸಂಭ್ರಮ್ ಮಾತನಾಡಿ ಕನ್ನಡದ ಬಗ್ಗೆ ಹಲವು ಹಾಡುಗಳು ಮೂಡಿಬಂದಿದೆ. ಹಾಡು ಚೆನ್ನಾಗಿ ಮೂಡಿಬರಲು ನಟ ಕಿರಣ್ ಆದಿತ್ಯ ಅವರೇ ಕಾರಣ. ಒಂದೊಂದು ಹಾಡು ಒಂದೊಂದು ರೀತಿ ಬಿಡುಗಡೆ ಆಗಿದೆ. ಗಾಯಕ ಸಂಚಿತ್ ಹೆಗ್ಡೆ ಮತ್ತು ಅನುರಾಧ ಭಟ್ ಅವರುಗಳು ಉತ್ತಮವಾಗಿ ಹಾಡಿದ್ದಾರೆ ಎಂದರು.

ಟಾಕ್ಸಿಕ್ ಟೀಸರ್‌ನಲ್ಲಿ ಟ್ರೆಂಡ್‌ಗೆ ತಕ್ಕಂತೆ ಬೋಲ್ಡ್ ದೃಶ್ಯಗಳಿವೆ

-ಯಶ್ ತಾಯಿ ಪುಷ್ಪಾ ಸಮರ್ಥನೆ

ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ 'ಟಾಕ್ಸಿಕ್' ಚಿತ್ರದ ಟೀಸರ್ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆ ಮತ್ತು ಟ್ರೋಲ್‌ಗಳಿಗೆ ಕಾರಣವಾಗಿತ್ತು. ಚಿತ್ರದ ಟೀಸರ್‌ನಲ್ಲಿದ್ದ ಕೆಲವು ಬೋಲ್ಡ್ ದೃಶ್ಯಗಳ ಕುರಿತು ವ್ಯಕ್ತವಾಗಿದ್ದ ಟೀಕೆಗಳಿಗೆ ನಟ ಯಶ್ ಅವರ ತಾಯಿಯೂ ಆಗಿರುವ ನಿರ್ಮಾಪಕಿ ಪುಷ್ಪಾ ಅರುಣಕುಮಾರ್ ಅವರು ಸ್ಪಷ್ಟನೆ ನೀಡುವ ಮೂಲಕ ಮಗನ ಬೆಂಬಲಕ್ಕೆ ನಿಂತಿದ್ದಾರೆ. ಟಾಕ್ಸಿಕ್ ಚಿತ್ರದ ಟೀಸರ್‌ನಲ್ಲಿನ ಬೋಲ್ಡ್ ದೃಶ್ಯಗಳು ಈಗಿನ ಟ್ರೆಂಡ್‌ಗೆ ತಕ್ಕಂತೆ ಇದೆ ಎಂದು ಸಮರ್ಥಿಸಿಕೊಂಡಿದ್ದಾರೆ.



ಬದಲಾಗುತ್ತಿರುವ ಸಿನಿಮಾ ಟ್ರೆಂಡ್ ಕುರಿತು ಮಾತನಾಡಿರುವ ಪುಷ್ಪಾ ಅರುಣಕುಮಾರ್ ಅವರು, ಇಂದಿನ ಯುವ ಪೀಳಿಗೆಯ ಅಭಿರುಚಿ ಬದಲಾಗಿದೆ. ಪ್ರೇಕ್ಷಕರು ಕಥೆಯಲ್ಲಿ ಹೊಸತನ ಮತ್ತು ಮಾಸ್ ಅಂಶಗಳನ್ನು ಬಯಸುತ್ತಾರೆ. ಪ್ರತಿಯೊಬ್ಬರ ಆಹಾರದ ಆಯ್ಕೆ ಒಂದೇ ಆಗಿರುವುದಿಲ್ಲ, ಹಾಗೆಯೇ ಸಿನಿಮಾದಲ್ಲೂ ಬದಲಾವಣೆ ಅನಿವಾರ್ಯ. ಕೇವಲ ಒಂದು ಟೀಸರ್ ನೋಡಿ ಇಡೀ ಸಿನಿಮಾವನ್ನು ಅಳೆಯುವುದು ತಪ್ಪು. ಜನರನ್ನು ಚಿತ್ರಮಂದಿರದತ್ತ ಆಕರ್ಷಿಸಲು ಟೀಸರ್‌ನಲ್ಲಿ ಅಂತಹ ದೃಶ್ಯಗಳನ್ನು ಬಳಸಲಾಗಿರುತ್ತದೆ ಎಂದು ಚಿತ್ರದ ಬಗ್ಗೆ ಸಮರ್ಥಿಸಿಕೊಂಡಿದ್ದಾರೆ.

ಅಲ್ಲದೆ ಈ ದೃಶ್ಯಗಳ ಬಗ್ಗೆ ಸ್ವತಃ ಯಶ್ ಅವರೇ ಗೀತು ಮೋಹನ್ ದಾಸ್ ಕೆಲಸದ ಬಗ್ಗೆ ಮಾತನಾಡುತ್ತಾ ಹಸಿಬಿಸಿ ದೃಶ್ಯಗಳ ಕುರಿತು ಪ್ರತಿಕ್ರಿಯಿಸಿದ್ದಾರೆ. ಮಹಿಳಾ ನಿರ್ದೇಶಕಿಯೊಬ್ಬರು ಟಾಕ್ಸಿಕ ರೀತಿಯ ಆಕ್ಷನ್ ಚಿತ್ರವನ್ನು ನಿರ್ದೇಶನ ಮಾಡುವುದು ಅಪರೂಪ. ಆಕ್ಷನ್ ನಮ್ಮ ಚಿತ್ರದ ರೋಮಾಂಚಕಾರಿ ಭಾಗವಾಗಿರುತ್ತದೆ. ಇದು ದೊಡ್ಡ ಪ್ರಮಾಣದ ಆಕ್ಷನ್ ಸಿನಿಮಾ. ಅದರಲ್ಲೂ ಹೊಸ ಬಗೆಯ, ವಿಭಿನ್ನವಾದ ಸ್ತ್ರೀ ನೋಟ ಹೊಂದಿರುವ ಗ್ಯಾಂಗ್‌ಸ್ಟರ್ ಸಿನಿಮಾ ಎಂದು ಯಶ್ ತಿಳಿಸಿದ್ದಾರೆ.

ಕುಟುಂಬದ ಜವಾಬ್ದಾರಿ ಹೊತ್ತ ಯುವತಿಯಾಗಿ ಅಮೂಲ್ಯಗೌಡ

ಮಧ್ಯಮ ವರ್ಗದ ಕುಟುಂಬದ ಯುವತಿ ಮಹಾಲಕ್ಷ್ಮಿಯಾಗಿ ನಟಿ ಅಮೂಲ್ಯಗೌಡ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಈವರೆಗೆ ವಿಭಿನ್ನ ಶೈಲಿಯ ಪಾತ್ರಗಳನ್ನೇ ಮಾಡಿಕೊಂಡು ಬಂದಿರುವ ಪ್ರತಿಭಾವಂತ ನಟಿ ಅಮೂಲ್ಯಗೌಡ ಅವರಿಗೆ ಹಲವಾರು ಸಿನಿಮಾ ಆಫರ್ಸ್ ಬಂದರೂ ಸಿನಿಮಾ, ಕಿರುತೆರೆ ಎನ್ನದೆ ತನ್ನ ಕನಸಿನ ಪಾತ್ರಕ್ಕಾಗಿ ಕಾಯುತ್ತಿದ್ದರು, ಈಗವರು ತಂದೆಯ ಆಸರೆಯಿಲ್ಲದೆ, ಮನೆಯ ಸಂಪೂರ್ಣ ಜವಾಬ್ದಾರಿ ಹೊತ್ತ ಗಟ್ಟಿಗಿತ್ತಿ ಯುವತಿಯಾಗಿ ಮಹಾಲಕ್ಷ್ಮಿ ಮದುವೆಯಲ್ಲಿ ನಟಿಸಿದ್ದಾರೆ, ತಂಗಿಯರನ್ನು ಚೆನ್ನಾಗಿ ಓದಿಸಬೇಕು, ಅಮ್ಮನಿಗೆ ಆಸರೆಯಾಗಬೇಕು ಎಂಬ ನೂರಾರು ಕನಸುಗಳನ್ನು ಕಟ್ಟಿಕೊಂಡಿದ್ದ ಮಹಾಲಕ್ಷ್ಮಿಯ ಮದುವೆಯ ನಂತರದ ಜೀವನ, ಆಕೆ ತನ್ನ ಲೈಫನ್ನು ಹೇಗೆ ಫೇಸ್ ಮಾಡಿದಳು ಎಂಬುದನ್ನು ನಿರ್ದೇಶಕ ಶಿವು ಪೂಜೇನ ಅಗ್ರಹಾರ ಅವರು ಪ್ರೇಕ್ಷಕರ ಮನ ಮುಟ್ಟುವ ಹಾಗೆ ನಿರೂಪಿಸಿದ್ದಾರೆ, ಈವರೆಗೆ ವಿಭಿನ್ನ ಶೈಲಿಯ ಪಾತ್ರಗಳನ್ನೇ ನಿರ್ವಹಿಸುತ್ತ ಬಂದಿರುವ ಅಮೂಲ್ಯಗೌಡ ಅವರೀಗ ಕುಟುಂಬದ ಜವಾಬ್ದಾರಿ ಹೊತ್ತ ಮಹಿಳೆಯ ಪಾತ್ರ ನಿರ್ವಸುತ್ತಿದ್ದಾರೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಸನ್ಮಾನ



ಬನ್ನೂರು ಪಟ್ಟಣದ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸುರೇಶ್ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾಗಿ ಬಡ್ತಿ ಪಡೆದುಕೊಂಡ ಹಿನ್ನೆಲೆ ಅವರನ್ನು ಸನ್ಮಾನಿಸಲಾಯಿತು. ವಿಭಾಗಿಯ ಉಪ ನಿರ್ದೇಶಕ ಶಂಕರ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ವಿಜಯ್‌ಕುಮಾರ್, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸಿದ್ದರಾಜು ಸೋಮಶೇಖರ್, ಕೃಷ್ಣ, ಸಿದ್ದೇಶ್ವರ ಉಪಸ್ಥಿತರಿದ್ದರು.

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಿ | ೨
ಮಹನೀಯರ ಆದರ್ಶ ಪಾಲಿಸಿ: ಶ್ರೀಗಳು | ೩
ಪ್ರತಿಭಾ ಪುರಸ್ಕಾರ ಕಾರ್ಯಕ್ರಮ | ೪

ಕಿರುಸುದ್ದಿ

ಬ್ರಾಹ್ಮಣ ಸಂಘದ ಶತಮಾನೋತ್ಸವ ಇಂದು

ಮೈಸೂರು: ನಗರದ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಶತಮಾನೋತ್ಸವ ಸಂಭ್ರಮಾಚರಣೆ, ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ ಮತ್ತು ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯದ ಸಮಾಗಮ ಕಾರ್ಯಕ್ರಮವನ್ನು ಮೇ 31ರಂದು ಬೆಳಗ್ಗೆ 8 ಗಂಟೆಗೆ ನಗರದ ದಟ್ಟಗಳ್ಳಿಯಲ್ಲಿನ ಸಾ.ರಾ. ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ ತಿಳಿಸಿದರು. ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಂಗವಾಗಿ ಲೋಕ ಕಲ್ಯಾಣಾರ್ಥವಾಗಿ ಅಂದು 180ಕ್ಕೂ ಹೆಚ್ಚು ದಂಪತಿಗಳಿಂದ ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ ನಡೆಯಲಿದೆ. ಬೆಳಗ್ಗೆ 11ಕ್ಕೆ ವಿವಿಧ ಕ್ಷೇತ್ರಗಳಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿರುವ ಸಮುದಾಯದ ಸಾಧಕರನ್ನು ಸನ್ಮಾನಿಸಲಾಗುವುದು ಮತ್ತು ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು ಎಂದು ಹೇಳಿದರು. ಪ್ರಧಾನ ಕಾರ್ಯದರ್ಶಿ ಕೆ.ಆರ್.ಮಂಜುನಾಥ್ ಮಾತನಾಡಿ, ಮೈಸೂರಿನಲ್ಲಿ ಸಮುದಾಯದವರ ಸಂಖ್ಯೆ ಏಳರಿಂದ ಎಂಟು ಸಾವಿರ ಇದೆ. ಅಲ್ಲದೆ, ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆ ಸೇರಿದಂತೆ ರಾಜ್ಯದಾದ್ಯಂತ ಸುಮಾರು 4-5 ಲಕ್ಷ ಜನಸಂಖ್ಯೆಯಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಎಚ್.ಎಸ್.ನಾಗಶಯನ, ಹೊಮ್ಮ ಮಂಜುನಾಥ್ ಹಾಜರಿದ್ದರು.

ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಪ್ರಬಂಧ ಸ್ಪರ್ಧೆ

ಮೈಸೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ 2026 ನೇ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಬಾರಿಯ ಪ್ರಕೃತಿಯಿಂದ ಪ್ರೇರಿತಗೊಂಡು, ಉತ್ತಮ ಹವಮಾನಕ್ಕಾಗಿ ಹಾಗೂ ನಮ್ಮ ಭವಿ?ಕ್ಕಾಗಿ ಈ ವಿ?ಯವಾಗಿ ಮೈಸೂರು ಜಿಲ್ಲೆ ಹಾಗೂ ಎಲ್ಲಾ ತಾಲ್ಲೂಕು ಮಕ್ಕಳಲ್ಲಿ ಅರಿವು ಮೂಡಿಸಲು ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಜೂನ್ 02 ರಂದು ಬೆಳಗ್ಗೆ 10:30 ಗಂಟೆಯಿಂದ ಮಧ್ಯಾಹ್ನ 12:30 ಗಂಟೆವರೆಗೆ ಮೈಸೂರಿನ ಕಲಾಮಂದಿರದ ಆವರಣದಲ್ಲಿ ಏರ್ಪಡಿಲಾಗಿದೆ. ಚಿತ್ರಕಲೆ ಸ್ಪರ್ಧೆಯಲ್ಲಿ 1 ರಿಂದ 8 ನೇ ತರಗತಿ ವಿದ್ಯಾರ್ಥಿಗಳಿಗೆ (ವಿಭಾಗ-1: 1 ರಿಂದ 4 ನೇ ತರಗತಿ, ವಿಭಾಗ-2: 5 ರಿಂದ 7 ನೇ ತರಗತಿ ವಿದ್ಯಾಥಿಗಳಿಗೆ, ವಿಭಾಗ-3: 8 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ) ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ 8 ರಿಂದ 10 ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದ್ದು, ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮುಖ್ಯ ಕಾರ್ಯಕ್ರಮ ದಿನದಂದು ಬಹುಮಾನ ವಿತರಣೆಯನ್ನು ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶ್ರೀನಿವಾಸ್ ಇವರ ದೂ ಸಂ: 7019033602 ನ್ನು ಸಂಪರ್ಕಿಸಬಹುದೆಂದು ಮೈಸೂರು ನಗರದ ಪರಿಸರ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಸ್ಥಾನದ ಬಾಗಿಲು ಮೀಟಿ ಚಿನ್ನಾಭರಣ ಕಳವು

ಮೈಸೂರು: ದೇವಸ್ಥಾನವೊಂದರ ಬಾಗಿಲು ಮೀಟಿ ಒಳ ನುಗ್ಗಿರುವ ಕಳ್ಳರು, ಅಲ್ಲಿದ್ದ 80 ಗ್ರಾಂ ಚಿನ್ನಾಭರಣ ಹಾಗೂ 10 ಸಾವಿರ ರೂ. ನಗದು ದೋಚಿಕೊಂಡು ಹೋಗಿರುವ ಘಟನೆ ಮೈಸೂರಿನ ನಜರಬಾದ್‌ನಲ್ಲಿರುವ ಆದಿನಾಥ ಜಿನಾಲಯದಲ್ಲಿ ನಡೆದಿದೆ. ಪೂಜಾ ವಿಧಿ-ವಿಧಾನಗಳನ್ನು ಮಾಡುವುದಕ್ಕೋಸ್ಕರ ಅರ್ಚಕ ಮಹೇಶ್ ಬಂದಿದ್ದಾರೆ. ಈ ವೇಳೆ ದೇವಾಲಯದ ಬಾಗಿಲು ಅರ್ಧ ತೆರೆದಿರುವುದು ಕಂಡುಬಂದಿದೆ. ಕೂಡಲೇ ಅವರು ದೇವಾಲಯ ಟ್ರಸ್ಟ್‌ನ ಕಾರ್ಯದರ್ಶಿ ಪ್ರವೀಣ್ ಜೈನ್ ಅವರಿಗೆ ವಿಚಾರ ಮುಟ್ಟಿಸಿದ್ದಾರೆ. ಕೂಡಲೇ ಅವರು ಸ್ಥಳಕ್ಕೆ ಬಂದಿದ್ದಾರೆ. ದೇವಾಲಯದ ಒಳಗೆ ತೆರಳಿ ಪರಿಶೀಲನೆ ನಡೆಸಿದ ವೇಳೆ ದೇವರ ವಿಗ್ರಹದ ಹಣೆಗೆ ಹಾಕಿದ್ದ ಚಿನ್ನದ ಬಾಲಪಟ್ಟಿ ಹಾಗೂ ಗೋಲಕದಲ್ಲಿದ್ದ ಸುಮಾರು 10 ಸಾವಿರ ರೂ. ಹಣವನ್ನು ಕಳ್ಳರು ದೋಚಿಕೊಂಡು ಹೋಗಿರುವುದು ಕಂಡು ಬಂದಿದೆ. ಈ ಸಂಬಂಧ ಅವರು ನೀಡಿದ ದೂರಿನ ಮೇಲೆ ನಜರ್‌ಬಾದ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾಹಿತಿ

ಕಾಮಗಾರಿಗೆ ₹50 ಕೋ. ಅನುದಾನ ಮಂಜೂರು

ಮೈಸೂರು: ಮೈಸೂರು, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕುಗಳನ್ನು ಒಳಗೊಂಡಂತೆ ಹಲವು ಪ್ರಮುಖ ರಸ್ತೆ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳಿಗೆ 50 ಕೋಟಿ ರೂ ಮಂಜೂರಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ. ಸುಮಾರು 50 ಕೋಟಿ ಮೌಲ್ಯದ ಕೇಂದ್ರ ರಸ್ತೆ ನಿಧಿ ಮೂಲಕ ಕೈಗೆತ್ತಿಕೊಳ್ಳಲಾಗುತ್ತಿರುವ ಕಾಮಗಾರಿಗಳು ರಸ್ತೆ ಸಂಪರ್ಕ ಸುಧಾರಣೆ, ಸುರಕ್ಷಿತ ಸಂಚಾರ, ವಾಹನ ದಟ್ಟಣೆ ನಿವಾರಣೆ ಹಾಗೂ ಗ್ರಾಮೀಣ ಮತ್ತು ಆರ್ಥಿಕ ಅಭಿವೃದ್ಧಿಗೆ ನೆರವಾಗಲಿವೆ ಎಂದು ಹೇಳಿದ್ದಾರೆ.

ಈ ಯೋಜನೆಗಳಡಿ, ಹುಣಸೂರು ತಾಲ್ಲೂಕಿನ ರಾಮನಾಥಪುರ-ತೆರಕನಾಂಬಿ ವಿಭಾಗದ ಎಸ್‌ಹೆಚ್-86 ರಸ್ತೆಯ ಕಿಮೀ 50.75 ರಿಂದ 64.87ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣಾ ಕಾಮಗಾರಿಗೆ 6 ಕೋಟಿ ಮಂಜೂರಾಗಿದೆ.



ಅದೇ ರೀತಿ, ಹಾದ್ಯ (ರಾಜ್ಯ ಹೆದ್ದಾರಿ-86)ದಿಂದ ಅವರ್ತಿ (ಎಸ್ ಹೆಚ್-287)ವರೆಗೆ ಕಿತ್ತೂರು, ಅತ್ತಿಗುಡು, ಬೆಟ್ಟದಪುರ (ಎಸ್‌ಹೆಚ್ -21) ಹಾಗೂ ಚಿಕ್ಕನೇರಳೆ ಮಾರ್ಗವಾಗಿ ಪಿರಿಯಾಪಟ್ಟಣ ತಾಲ್ಲೂಕಿನ ಕಿಮೀ 24.75 ರಿಂದ 30.31ರವರೆಗಿನ ಎಸ್‌ಹೆಚ್ -289 ರಸ್ತೆಯ ಅಭಿವೃದ್ಧಿಗೆ 3.75 ಕೋಟಿ ಮಂಜೂರಾಗಿದೆ.

ಹುಣಸೂರು (ಎನ್‌ಎಚ್-275)ದಿಂದ ಪಿರಿಯಾಪಟ್ಟಣ (ಎನ್‌ಎಚ್ -275)ವರೆಗೆ ನೀಲವಾಗಿಲು, ರಾಮೇನಹಳ್ಳಿ, ಹೊನ್ನೇನಹಳ್ಳಿ, ಹಂಗುಡು, ಪಂಚವಳ್ಳಿ (ಎಸ್‌ಹೆಚ್ -90) ಹಾಗೂ ಸತ್ಯಗಾಲ ಮಾರ್ಗವಾಗಿ ಕಿಮೀ 36.69 ರಿಂದ 37.69ರವರೆಗಿನ ಎಸ್‌ಹೆಚ್ -297 ರಸ್ತೆಯ ಅಭಿವೃದ್ಧಿಗೆ 1 ಕೋಟಿ ಮಂಜೂರಾಗಿದೆ.

ಇದೇ ವೇಳೆ, ಮೈಸೂರು ತಾಲ್ಲೂಕಿನ ಇಲವಾಲ-ಕೆ.ಆರ್.ನಗರ ರಸ್ತೆಯ ಎಸ್‌ಹೆಚ್ 117ರಲ್ಲಿ ಕಿಮೀ 0.00 ರಿಂದ 10.40ರವರೆಗೆ ಆಯ್ದ ಭಾಗಗಳ ಸುಧಾರಣೆಗೆ 6 ಕೋಟಿ ಮಂಜೂರಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಮಾಹಿತಿ ನೀಡಿದ್ದಾರೆ.

ನಗರಾಭಿವೃದ್ಧಿ ಭಾಗವಾಗಿ, ಚಾಮರಾಜ ಕ್ಷೇತ್ರದ ವಿಜಯನಗರ 2ನೇ ಮತ್ತು 3ನೇ ಹಂತ ಪ್ರದೇಶಗಳಿಂದ ಓಊ-275ಏ ಮೈಸೂರು ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ 6 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯಲಿವೆ.

ಹಾಗೆಯೇ, ನರಸಿಂಹರಾಜ ಕ್ಷೇತ್ರದ ನಾಯ್ಡುನಗರ ಪ್ರದೇಶದಿಂದ ಎನ್‌ಎಚ್ -275ಏ ಮೈಸೂರು ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಸಹ 6 ಕೋಟಿ ಅನುದಾನ ನೀಡಲಾಗಿದೆ.

ಗ್ರಾಮೀಣ ಮೈಸೂರು ಭಾಗದಲ್ಲಿ, ಬಿಳಿಕೆರೆ,ಚೆಲ್ಲಹಳ್ಳಿ,ಗೆಜ್ಜಯ್ಯನ ವಡ್ಡರಗುಡಿ ರಸ್ತೆಯ ಕಿಮೀ 0.00 ರಿಂದ 18.20ರವರೆಗೆ ಬಿಳಿಕೆರೆ, ದಳ್ಳಾಲು, ದಳ್ಳಾಲು ಕೊಪ್ಪಲು, ಹಳ್ಳಿಕೆರೆ, ಚೆಲ್ಲಹಳ್ಳಿ, ಮಹದೇವಪುರ ಹಾಗೂ ಧರ್ಮಪುರ ಸಂಪರ್ಕಿಸುವ ರಸ್ತೆಯ ಅಭಿವೃದ್ಧಿಗೆ 15 ಕೋಟಿ ಮಂಜೂರಾಗಿದೆ.

ಇನ್ನೂ, ಚೆಲ್ಲಹಳ್ಳಿ ಹೊಸಪುರ,ತಿಪ್ಪೂರು, ಮಹದೇವಪುರ ರಸ್ತೆಯ ಕಿಮೀ 0.00 ರಿಂದ 4.64ರವರೆಗೆ ರಸ್ತೆ ಅಭಿವೃದ್ಧಿಗೆ 7 ಕೋಟಿ ಮೀಸಲಿಡಲಾಗಿದೆ ಎಂದು ವಿವರಿಸಿದ್ದಾರೆ.

ಮೂಲಸೌಕರ್ಯ ತರಲು ಬದ್ಧ

ರಸ್ತೆ ಮೂಲಸೌಕರ್ಯ ಅಭಿವೃದ್ಧಿಯು ಆರ್ಥಿಕ ಪ್ರಗತಿ, ಗ್ರಾಮೀಣ ಸಂಪರ್ಕ, ಸಾರ್ವಜನಿಕ ಸುರಕ್ಷತೆ ಮತ್ತು ಸಮಗ್ರ ಪ್ರಾದೇಶಿಕ ಅಭಿವೃದ್ಧಿಗೆ ಅತ್ಯಂತ ಅಗತ್ಯವಾಗಿದೆ. ಮೈಸೂರು ಜಿಲ್ಲೆಗೆ ಇನ್ನಷ್ಟು ಅಭಿವೃದ್ಧಿ ಆಧಾರಿತ ಯೋಜನೆಗಳು ಹಾಗೂ ಮೂಲಸೌಕರ್ಯ ಹೂಡಿಕೆಗಳನ್ನು ತರಲು ತಾವು ಬದ್ಧರಾಗಿರುವುದಾಗಿ ಸಂಸದ ಯದುವೀರ್ ತಿಳಿಸಿದರು.

ಈ ರಸ್ತೆ ಅಭಿವೃದ್ಧಿ ಕಾಮಗಾರಿಗಳು ವಿದ್ಯಾರ್ಥಿಗಳು, ರೈತರು, ವ್ಯಾಪಾರಸ್ಥರು, ಸಾರ್ವಜನಿಕರು ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶದ ನಿವಾಸಿಗಳಿಗೆ ಉತ್ತಮ ಸಂಚಾರ ವ್ಯವಸ್ಥೆ ಮತ್ತು ಸುಗಮ ಸಂಪರ್ಕ ಕಲ್ಪಿಸುವ ಮೂಲಕ ಮಹತ್ವದ ಪ್ರಯೋಜನವನ್ನು ಒದಗಿಸಲಿವೆ.

■ **ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ**

ದಾಸ ಸಾಹಿತ್ಯದ ಬಗ್ಗೆ ಸಂಶೋಧನೆ ನಡೆಯಲಿ

ಮೈಸೂರು: ಲೋಕಕ್ಕೆ ಬೆಳಕಾಗಿರುವ ದಾಸ ಸಾಹಿತ್ಯದ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಲಿ ಎಂದು ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಹೇಳಿದರು.

ಶನಿವಾರ ಅಗ್ರಹಾರದ ದಿವಾನ್ ಪೂರ್ಣಯ್ಯ ಛತ್ರದಲ್ಲಿ ಏರ್ಪಡಿಸಲಾಗಿದ್ದ ವಿಶ್ವಮಧ್ವ ಮಹಾಪರಿಷತ್ತಿನ ಅಂಗಸಂಸ್ಥೆಯಾದ ಸೌರಭ ದಾಸ ಸಾಹಿತ್ಯ ವಿದ್ಯಾಲಯದ 9ನೇ ಸಮ್ಮೇಳನ, 2 ದಿನಗಳ ವಿಶ್ವ ಸಮಾವೇಶ ಮತ್ತು ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಅಮೃತೋಪದೇಶ ನೀಡಿದರು.

ಜ್ಞಾನಿಗಳ, ಯತಿವರೇಣ್ಯರ, ಆಚಾರ್ಯ ಮಧ್ವರ ಮತ್ತು ಹರಿದಾಸರ ಸಂದೇಶ ಮತ್ತು ತತ್ವ ಚಿಂತನೆಗಳು ಸಮುದಾಯದ ಎಲ್ಲೆಯನ್ನು ಮೀರಿ, ವಿಶ್ವದ ಜನರ ಸಾಧನೆಗಳಿಗೆ ಪ್ರೇರಕವಾಗಿದೆ. ಬದುಕಿನ ಎಲ್ಲ ಸ್ತರಗಳನ್ನೂ ದಾಸ ಸಾಹಿತ್ಯ ಮುಟ್ಟಿದೆ.ಹಾಗಿರುವಾಗ ದಾಸ ಸಾಹಿತ್ಯದ ಒಳಗಿನ ಹೂರಣವನ್ನು ಸವಿದು ಜೀವನ ಸಾರ್ಥಕ ಮಾಡಿಕೊಳ್ಳಬೇಕು. ಇದಕ್ಕಾಗಿ ಸತ್ಯ ಸಂಕಲ್ಪ ಈ ಕ್ಷಣದಿಂದಲೇ ಆರಂಭವಾಗಬೇಕು. ಆಗ ಭಗವಂತ ಸಂತುಷ್ಟನಾಗುತ್ತಾನೆ ಎಂದು ತಿಳಿಸಿದರು.

ಸಾವಿರಾರು ಮಾತೆಯರಿಗೆ ದಾಸ ಸಾಹಿತ್ಯದ ದೀಕ್ಷೆ: ಸೌರಭದಾಸಸಾಹಿತ್ಯ ವಿದ್ಯಾಲಯದ ಅಧ್ಯಕ್ಷ, ಹಿರಿಯ ವಿದ್ವಾಂಸ ಕೊಪ್ಪಳ ಪ್ರಮೋದಾಚಾರ್ಯ ಪೂಜಾರ ಮಾತನಾಡಿ, ಸಾವಿರಾರು ಮಾತೆಯರಿಗೆ ದಾಸ ಸಾಹಿತ್ಯದ ದೀಕ್ಷೆಯನ್ನು ನೀಡುವ ಮೂಲಕ ಅಧ್ಯಯನ ಶೀಲತೆಯನ್ನು ಪ್ರೇರೇಪಿಸುವಲ್ಲಿ ಸಂಸ್ಥೆ ಸಾಕಷ್ಟು ಶ್ರಮಿಸುತ್ತಿದೆ. ಸಾಗರದ ಆಚೆಗಿನ ಮಾತೆಯರೂ ಆನ್‌ಲೈನ್ ಪಾಠಗಳ ಮೂಲಕ, ದಾಸ ಸಾಹಿತ್ಯದ ಪಠ್ಯ ಕ್ರಮಗಳ ಅಭ್ಯಾಸ ಮತ್ತು ಪರೀಕ್ಷೆಗಳನ್ನು ತೆಗೆದುಕೊಂಡು ಜ್ಞಾನ ವಿಸ್ತಾರಗೊಳಿಸಿಕೊಳ್ಳುತ್ತಿದ್ದಾರೆ. ಇಂದು ಇಲ್ಲಿ ಸಮಾವೇಶಗೊಂಡಿರುವ ಸಾವಿರಕ್ಕೂ ಹೆಚ್ಚು ಮಹಿಳೆಯರೇ ಇದಕ್ಕೆ ಸಾಕ್ಷಿ ಎಂದರು. ಹಿರಿಯ ವಿದ್ವಾಂಸರಾದ ಅನಂತಪುರ ರಾಧಾಕೃಷ್ಣಾಚಾರ್ಯ, ಧಾರವಾಡ ಕೇಶವಾಚಾರ್ಯ, ದಿವಾನ ಶಶಿ ಆಚಾರ್ಯ, ಅನಿರುದ್ಧಾಚಾರ್ಯ ಪಾಂಡುರಂಗಿ, ಪ್ರದ್ಯುಮ್ನಾಚಾರ್ಯ ವಿಜಯಪುರ, ಪ್ರಹ್ಲಾದಾಚಾರ್ಯ ಹನುಮಸಾಗರ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಸಂವಾದ, ಸ್ಪರ್ಧೆಗಳು

ಎರಡು ದಿನದ ಸಮ್ಮೇಳನದಲ್ಲಿ ದಾಸರ ಕೀರ್ತನೆ, ಸುಳಾದಿ, ಉಗಾಭೋಗ ಕುರಿತ ಸಂವಾದ, ವಿಚಾರಗೋಷ್ಠಿ, ಪ್ರಬಂಧ ಸಮರ್ಪಣೆ, ಅಧಿಕ ಮಾಸದ ಅಂಗವಾಗಿ ಮಾತೆಯರಿಗೆ 33 ಸ್ಪರ್ಧೆಗಳು, ಹರಿಕಥಾಮೃತಸಾರ ಕೃತಿಯ ಪರೀಕ್ಷೆ, ಸರ್ವಮೂಲಗಳ ಪಾರಾಯಣ ಅನುವಾದ ಇತ್ಯಾದಿ ನಡೆದವು. ಭಾನುವಾರವೂ ವಿದ್ವಾಂಸರಿಂದ ವಿವಿಧ ಗೋಷ್ಠಿ ನಡೆಯಲಿದೆ. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಮಹಿಳೆಯರು ಸಾಂಪ್ರದಾಯಿಕ ಸಮವಸ್ತ್ರದಲ್ಲಿ ಗಮನ ಸೆಳೆದರು.

ಆರ್‌ಸಿಬಿ ಗೆಲುವಿಗೆ ವಿಶೇಷ ಪೂಜೆ

ಮೈಸೂರು: ಭಾನುವಾರ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 2026 ಐಪಿಎಲ್ ಫೈನಲ್ ಪಂದ್ಯಾವಳಿ ನಡೆಯಲಿದ್ದು, ಗುಜರಾತ್ ಟೈಟನ್ಸ್ ವಿರುದ್ಧ ಆಡಲಿರುವ ಆರ್‌ಸಿಬಿ ಮತ್ತೊಮ್ಮೆ ಆರ್‌ಸಿಬಿ ಫೈನಲ್ ನಲ್ಲಿ ವಿಜಯ ಸಾಧಿಸಲಿ ಎಂದು ಆಟಗಾರರ ಹೆಸರಿನಲ್ಲಿ ಶನಿವಾರ ನಗರದಲ್ಲಿ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದರು..

ನಗರದ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನದಲ್ಲಿ ಆರ್‌ಸಿಬಿ ಜರ್ಸಿ ಧರಿಸಿ ವಿಶೇಷ ಪೂಜೆಯನ್ನು ಶಾಸಕ ಹರೀಶ್ ಗೌಡ ನೇತೃತ್ವದಲ್ಲಿ ಕ್ರಿಕೆಟ್ ಪ್ರೇಮಿಗಳು ಪೂಜೆ ನೆರವೇರಿಸಿದರು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು.

ಈ ಸಂದರ್ಭದಲ್ಲಿ ಶಾಸಕ ಹರೀಶ್ ಗೌಡರವರು ಮತ್ತೊಮ್ಮೆ ಆರ್‌ಸಿಬಿ ಜಯಗಳಿಸುವ ಮೂಲಕ ಕರ್ನಾಟಕಕ್ಕೆ ಕೀರ್ತಿ ತಂದು ಕೊಡಲಿ ಎಂದು ಶುಭ ಹಾರೈಸಿದರು.



ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಮೈ.ಕುಮಾರ್, ಪ್ರವೀಣ್ ಜೈನ ,ನವೀನ , ರವಿಚಂದ್ರ, ಕಿರಣ್ ,ಗುರುರಾಜ್ ಶೆಟ್ಟಿ, ಲೋಕೇಶ, ನಿತಿನ್, ಹರೀಶ್ ಗೌಡ, ಪಾಪಣ್ಣ, ನಿಶಾಂತ, ಎಸ್ ಎನ್ ರಾಜೇಶ,ಪ್ರಮೋದ್, ವಿನೋದ್, ನಂಜುಂಡಸ್ವಾಮಿ, ಮಂಜುನಾಥ, ಹರ್ಷ, ಶ್ರೀನಿವಾಸ್ ಶೆಟ್ಟಿ, ಜಯರಾಮ, ಹಾಗೂ ಇನ್ನೂ ಅನೇಕ ಕ್ರಿಕೆಟ್ ಪ್ರೇಮಿಗಳು ಭಾಗವಹಿಸಿದ್ದರು.

ಅರಮನೆ ಅಂಗಳದಲ್ಲಿ ಯೋಗಾಭ್ಯಾಸ ಇಂದು

ಮೈಸೂರು: ಮೈಸೂರು ಯೋಗ ಫೆಡರೇಷನ್ ವತಿಯಿಂದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮೇ 31ರಂದು ನಗರದ ಅರಮನೆ ಆವರಣದಲ್ಲಿ ಯೋಗಾಭ್ಯಾಸ ಹಾಗೂ ಮಹಾ ಸಂಕಲ್ಪ ದಿವಸ್ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಡಿ.ಶ್ರೀಹರಿ ದ್ವಾರಕನಾಥ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,

ಅಂದು ಬೆಳಗ್ಗೆ 5.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಸುಮಾರು ಸಾವಿರ ಮಂದಿ ಯೋಗಾಸಕ್ತರು ಪಾಲ್ಗೊಳ್ಳುವರು. ಇದೇ ವೇಳೆ ನಗರದ ವಿವಿಧ ಅಪಾರ್ಟ್‌ಮೆಂಟ್, ಶಾಲಾ ಕಾಲೇಜು, ಉದ್ಯಾನಗಳು ಸೇರಿದಂತೆ 120 ಕೇಂದ್ರಗಳಲ್ಲಿ ಸುಮಾರು 1.20 ಲಕ್ಷ ಮಂದಿ ಯೋಗಾಸನದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಯೋಗದ ಮೂಲಕ ಆರೋಗ್ಯಕರ, ಶಾಂತಿಯುತ, ಶಿಸ್ತುಬದ್ಧ ಸಮಾಜ ನಿರ್ಮಾಣದ ಸಂಕಲ್ಪದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರೊಡನೆ ಜಿಲ್ಲೆಯ ಎಲ್ಲ ತಾಲೂಕುಗಳಲ್ಲೂ ಯೋಗದ ಪ್ರಚಾರ ಮತ್ತು ಪ್ರಸಾರ ಮಾಡಲು ಇದೇ ರೀತಿಯ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು. ಇದೇ ವೇಳೆ ಯೋಗ ಮಹಾಸಂಕಲ್ಪದ ಪೋಸ್ಟರ್‌ನ್ನು ಬಿಡುಗಡೆ ಮಾಡಲಾಯಿತು.



ಸುದ್ದಿಗೋಷ್ಠಿಯಲ್ಲಿ ಯೋಗ ಸಂಸ್ಥೆಗಳ ಪ್ರಮುಖರಾದ ದೇವರಾಜ್, ಯೋಗಾಚಾರ್ಯ ಡಾ.ಗಣೇಶ್ ಕುಮಾರ್, ಪಶುಪತಿ, ಶಶಿಕುಮಾರ್, ಜಿ.ನಂಜುಂಡಸ್ವಾಮಿ, ಅನಂತ್ ಹಾಗೂ ರಂಗನಾಥ್ ಉಪಸ್ಥಿತರಿದ್ದರು.

30 ಜತೆ ನಾಡಕುಸ್ತಿ ಪಂದ್ಯಾವಳಿ ಇಂದು

ಮೈಸೂರು: ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ದಲಿತ ಸಂಘರ್ಷ ಸಮಿತಿ ಹಾಗೂ ಅಶೋಕಪುರಂ ಫ್ರೆಂಡ್ಸ್ ಬಳಗದ ಸಹಯೋಗದೊಂದಿಗೆ ಮೇ 31ರಂದು ಮಧ್ಯಾಹ್ನ 3 ಗಂಟೆಗೆ ನಗರದ ದಸರಾ ವಸ್ತುಪ್ರದರ್ಶನ ಆವರಣದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 30 ಜತೆ ನಾಡಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ತಿಳಿಸಿದರು. ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಅಶೋಕಪುರಂಗೂ ಕುಸ್ತಿ ಚಟುವಟಿಕೆಗೂ ದೊಡ್ಡ ಸಂಬಂಧವಿದೆ. ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಕುಡಿತ, ಮಾದಕ ವಸ್ತು ಸೇವನೆ ಮೊದಲಾದವುಗಳಿಗೆ ದಾಸರಾಗುತ್ತಿದ್ದಾರೆ. ಹೀಗಾಗಿ ಇದರಿಂದ ಇವರನ್ನು ಹೊರ ತರಲು ಕುಸ್ತಿ ಚಟುವಟಿಕೆಯಂತಹವುಗಳಿಗೆ ಸಂಘಟನೆ ಗಮನ ನೀಡಿದೆ. ಈ ನಿಟ್ಟಿನಲ್ಲಿ ಈ ಕುಸ್ತಿ ಪಂದ್ಯಾ ವಳಿಯನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನಟ ದುನಿಯಾ ವಿಜಯ್, ಶಾಸಕ ಟಿ.ಎಸ್. ಶ್ರೀವತ್ಸ , ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮಹಾಪೌರ ಎಂ.ಪುರುಷೋತ್ತಮ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವಿಶಿಷ್ಟಚೇತನರು, ಹಿರಿಯ ನಾಗರಿಕರಿಗೆ ಶ್ರೀಗಳ ನೆರವು

ಮೈಸೂರು: ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 84ನೇ ಜನ್ಮದಿನೋತ್ಸವ ಭಾಗವಾಗಿ ಶನಿವಾರ ಆಶ್ರಮದ ವತಿಯಿಂದ ಸಮಾಜದ ವಿಶಿಷ್ಟಚೇತನರು ಹಾಗೂ ಹಿರಿಯ ನಾಗರಿಕರಿಗೆ ವಿವಿಧ ನೆರವು ನೀಡುವುದರ ಜತೆಗೆ ವೈದ್ಯಕೀಯ ಉಪಕರಣಗಳನ್ನು ಶ್ರೀಗಳು ವಿತರಿಸಿದರು.

ಮೈಸೂರು ವಿಭಾಗದ ವಿಶೇಷಚೇತನರು ಮತ್ತು ಹಿರಿಯ ನಾಗರಿಕರ ಇಲಾಖೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಗಳ ಜಂಟಿ ಸಲಹೆ ಮತ್ತು ಸಹಯೋಗದೊಂದಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಈ ಕೊಡುಗೆಗಳನ್ನು ಹಸ್ತಾಂತರಿಸಲಾಯಿತು.

ಒಟ್ಟು 89 ವೈದ್ಯಕೀಯ ಉಪಕರಣಗಳ ವಿತರಣೆ: ವೀಲ್ ಚೇರ್ (ಚಕ್ರದ ಕುರ್ಚಿ) 21, ಕಮೋಡ್ ವೀಲ್ ಚೇರ್ 2, ವಾಕರ್ಸ್ 9, ಕ್ರಚಸ್ (ಬಗಲುಗೋಲು) 9, ಎಲ್ಬೊ ಕ್ರಚಸ್ 1, ವಾಕಿಂಗ್ ಸ್ಟಿಕ್ (ಊರುಗೋಲು) 5, ವೈಟ್ ಕೇನ್ (ಅಂಧರ ಊರುಗೋಲು) 8, ವಿಶೇಷ ಸಿ.ಪಿ. ಚೇರ್ (ಮೈಸೂರು ವಿಭಾಗದ ವಿಕಲಚೇತನರ ಇಲಾಖೆ ನೆರವಿನಡಿ) 18, ವಿಶೇಷ ಸಿ.ಪಿ. ಚೇರ್ (ವಾಕ್ ಮತ್ತು ಶ್ರವಣ ಸಂಸ್ಥೆಯ ನೆರವಿನಡಿ) 16 ಹಾಗೂ ಶ್ರೀರಾಮ ಮಂದಿರ ಪುನರ್ ನಿರ್ಮಾಣಕ್ಕೆ 10 ಲಕ್ಷ ಧನಸಹಾಯ ವಿತರಿಸಲಾಯಿತು.



ಇದೇ ಪಾವನ ಸಂದರ್ಭದಲ್ಲಿ, ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಪ್ರಸಿದ್ಧ ಶ್ರೀರಾಮ ಮಂದಿರದ ಪುನರ್ ನಿರ್ಮಾಣ ಕಾರ್ಯಕ್ಕಾಗಿ ಆಶ್ರಮದ ವತಿಯಿಂದ 10 ಲಕ್ಷ ರೂ ಆರ್ಥಿಕ ಸಹಾಯದ ಚೆಕ್ಕನ್ನು ದೇವಸ್ಥಾನದ ಸಮಿತಿಗೆ ಹಸ್ತಾಂತರಿಸಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಆಶ್ರಮದ ಬೆಂಬಲವನ್ನು ಘೋಷಿಸಲಾಯಿತು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಉದಯ್ ಶಂಕರ್ ಸೂಚನೆ

ಗ್ಯಾರಂಟಿ ಸಮರ್ಪಕವಾಗಿ ಅನುಷ್ಠಾನ ಮಾಡಿ

ಸಾಲಿಗ್ರಾಮ: ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಅನುಷ್ಠಾನ ಮಾಡಬೇಕು ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಉದಯ್ ಶಂಕರ್ ಹೇಳಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಸಾರ್ವಜನಿಕರು ಯಾವುದೇ ಯೋಜನೆಯ ಬಗ್ಗೆ ಅದಕ್ಕೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದರೆ ಅವರುಗಳಿಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಿ ಯೋಜನೆಯ ಸದುಪಯೋಗವನ್ನು ನೀಡುವಂತೆ ಕಾರ್ಯನಿರ್ವಹಿಸಬೇಕು ಎಂದರು.

ಪ್ರಗತಿ ಪರಿಶೀಲನಾ ಸಭೆಗೆ ಅಧಿಕಾರಿಗಳು ಬರುವಂತಹ ಸಂದರ್ಭದಲ್ಲಿ ಕಳೆದ ಸಭೆಗಳಲ್ಲಿ ಬಂದಿರುವ ದೂರುಗಳು ಹಾಗೂ ಅದಕ್ಕೆ ಪರಿಹಾರ ಕಲ್ಪಿಸಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ತರುವ ಮೂಲಕ ಸಾರ್ವಜನಿಕರ ಸಮಸ್ಯೆ ಗಳನ್ನು ಪರಿಹಾರ ಮಾಡಲು ಅಗತ್ಯ ಕ್ರಮ ವಹಿಸಬೇಕು ಎಂದರು.



ನ್ಯಾಯಬೆಲೆ ಅಂಗಡಿಗಳಲ್ಲಿ, ಪಡಿತರ ಚೀಟಿದಾರರ ಹೆಬ್ಬಟ್ಟು ಪಡೆಯುವ ದಿನದಂದೇ ಪಡಿತರ ವನ್ನು ವಿತರಿಸಲು ಅಗತ್ಯ ಕ್ರಮವಹಿಸಬೇಕು ಎಂದರು.

ಸಾಲಿಗ್ರಾಮ ಪಟ್ಟಣದಲ್ಲಿನ ಕೆ.ಎಸ್.ಆರ್ .ಟಿ.ಸಿ. ಬಸ್ ನಿಲ್ದಾಣದಲ್ಲಿನ ಶೌಚಾಲಯದ ಸ್ವಚ್ಛತೆಯನ್ನು ಕಾಪಾಡಬೇಕು, ಉತ್ತಮವಾದ ಸಿಸಿ ಕ್ಯಾಮೆರಾ ಅಳವಡಿಸಬೇಕು. ಹಲವು ಗ್ರಾಮಗಳಿಗೆ ಬಸ್ ಸಂಪರ್ಕ ಕಲ್ಪಿಸಬೇಕು ಎಂಬ ಬೇಡಿಕೆ ಇದ್ದು, ಈ ಬಗ್ಗೆ ಅಗತ್ಯ ಕ್ರಮವಹಿಸಬೇಕು ಅಲ್ಲದೇ. ರಾತ್ರಿ ಸಮಯದಲ್ಲಿ ಬಸ್ಸುಗಳನ್ನು ಬಸ್ ನಿಲ್ದಾಣದ ಒಳಗಡೆ ನಿಲುಗಡೆ ಮಾಡುವಂತೆ ಕ್ರಮವಹಿಸಬೇಕೆಂದು ಸೂಚಿಸಿದರು. ತಾಲ್ಲೂಕಿನ ಹಲವೆಡೆ ವಿದ್ಯುತ್ ಸಮಸ್ಯೆಗಳು ಕಂಡುಬಂದರೂ ಕೂಡ ಸೆಸ್ಕ್ ಇಂಜಿನಿಯರ್‌ಗಳು ನಿರ್ಲಕ್ಷ್ಯ ತೋರುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸಿಕೊಂಡು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಯಾಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಎ.ಎನ್. ರವಿಕುಮಾರ್ ಗ್ಯಾರಂಟಿ ಯೋಜ ನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಮಹಾಲಿಂಗಪ್ಪ, ರಾಣಿಕುಮಾರ್, ಅನಿಲ್, ಮೋಹನ್, ಮೂರ್ತಿ, ರವೀಶ್, ಲೋಕೇಶ್, ವಾಸಿಮ್, ಮಹದೇವಪ್ಪ, ಸಿಡಿಪಿಓ ಅಣ್ಣಯ್ಯ, ಆಹಾರ ಇಲಾಖೆಯ ಸುರೇಶ, ಸಾರಿಗೆ ಇಲಾಖೆ ಗುರು, ಸೆಸ್ಕ್ ಎಇಇ ಮಧುಸೂದನ್ ಸೇರಿದಂತೆ ಮತ್ತಿತರರು ಇದ್ದರು.

ಶಾಸಕ ಅನಿಲ್ ಚಿಕ್ಕಮಾದು ಬಳಿ ನಿಯೋಗ ಕರೆದೊಯ್ಯಲು ನಿರ್ಧಾರ

ಮದ್ಯದಂಗಡಿ ತೆರವಿಗೆ ಒಕ್ಕೊರಲ ಒತ್ತಾಯ

ಎಚ್ ಡಿ ಕೋಟೆ: ಸರಗೂರು ತಾಲೂಕಿನ ಶಕ್ತಿದೇವತೆ ಶ್ರೀ ಚಿಕ್ಕದೇವಮ್ಮ ಬೆಟ್ಟದ ತಪ್ಪಲಿನಲ್ಲಿರುವ ಹಾಲುಗಡದ ಗಣೇಶ ದೇವಾಲಯದ ಸಮೀಪ ತಲೆಯೆತ್ತಿರುವ ಮದ್ಯದಂಗಡಿ ತೆರವುಗೊಳಿಸುವ ಸಂಬಂಧ ಶಾಸಕ ಅನಿಲ್ ಚಿಕ್ಕಮಾದು ಬಳಿಗೆ ನಿಯೋಗ ಕರೆದೊಯ್ಯಲು ಸಭೆಯಲ್ಲಿ ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು.

ತಾಲೂಕಿನ ಹಾಲುಗಡದ ಬಳಿ ನಡೆದ ಸಭೆಯಲ್ಲಿ ಇಟ್ನಾ, ಸರಗೂರು ಟೌನ್, ಚಾಮೇಗೌಡನಹುಂಡಿ, ಶಾಂತಿಪುರ, ಪುರದಕಟ್ಟೆ, ಕುನ್ನಪಟ್ಟಣ , ಮಂಚಹಳ್ಳಿ , ಕೊತ್ತೇಗಾಲ, ಸಾಗರೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು. ಪ್ರಗತಿಪರ ಚಿಂತಕರು, ಮಹಿಳಾ, ರೈತ ಹಾಗೂ ಕನ್ನಡಪರ ಸಂಘಟನೆಗಳು, ಭಕ್ತರು, ಜನಪ್ರತಿನಿಧಿಗಳು ಭಾಗವಹಿಸಿ, ಧಾರ್ಮಿಕ ಕ್ಷೇತ್ರಕ್ಕೆ ಅಪಕೀರ್ತಿ ತರಲು ತಲೆಯೆತ್ತಿರುವ ಬಾರ್ ತೆರವುಗೊಳಿಸುವ ಸಂಬಂಧ ಹೋರಾಟದ ರೂಪುರೇಷೆ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರು ತಮ್ಮ ಅಭಿಪ್ರಾಯ, ಸಲಹೆ ಸೂಚನೆ ನೀಡಿದರು.



ಬಳಿಕ ಮಾತನಾಡಿದ ಹಾಲುಗಡ ಶ್ರೀ ಚಿಕ್ಕದೇವಮ್ಮ ದೇವಸ್ಥಾನ ಜಾತ್ರಾ ಸಮಿತಿ ಅಧ್ಯಕ್ಷ ದೊಡ್ಡವೀರನಾಯಕ, ವರ್ಷದ ಹಿಂದೆಯಷ್ಟೇ ಬಾರ್ ತೆರೆಯುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿತ್ತು. ತಕ್ಷಣವೇ ನಾವು ಹೆಚ್ ಡಿ ಕೋಟೆಯಲ್ಲಿ ಅಬಕಾರಿ ಸಬ್ ಇನ್ಸ್ಪೆಕ್ಟರ್ ಬಾರ್ ಓಪನ್ ಮಾಡಲು ಅವಕಾಶ ನೀಡದಂತೆ ಮನವಿ ಪತ್ರ ಕೂಡ ನೀಡಿದ್ದೆವು. ಇಷ್ಟಾದರೂ ಬಾರ್ ತೆರೆಯಲಾಗಿದೆ. ಧಾರ್ಮಿಕ ಕ್ಷೇತ್ರಕ್ಕೆ ಹೆಸರುವಾಸಿಯಾಗಿರುವ ಈ ಜಗದಲ್ಲಿ ಯಾವುದೇ ಕಾರಣಕ್ಕೂ ನಾವು ಬಾರ್ ನಡೆಸಲು ಬಿಡಬಾರದು. ಕಾನೂನು ರೀತಿಯಲ್ಲೇ ಹೋರಾಟ ಮಾಡೋಣ . ಅದಕ್ಕೂ ಮೊದಲು ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ತರೋಣ. ಶೀಘ್ರದಲ್ಲೇ ದಿನಾಂಕ ನಿಗದಿ ಮಾಡಿ, ಎಲ್ಲರು ಶಾಸಕರ ಬಳಿ ತೆರಳಿ, ಬಾರ್ ಮುಚ್ಚಿಸುವಂತೆ ಮನವಿ ಮಾಡೋಣ. ಈ ಪ್ರಯತ್ನವು ಫಲ ಕೊಡದಿದ್ದರೆ, ಕಾನೂನು ರೀತಿಯಲ್ಲೇ ಹೋರಾಟ ಮಾಡೋಣ. ಅಲ್ಲಿಯವರೆಗೆ ಎಲ್ಲರೂ ದುಡುಕಿನ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಹೇಳಿದರು.

ಸಭೆಯಲ್ಲಿ ದೊಡ್ಡವೀರನಾಯಕ, ಬಸವನಾಯಕ, ಸಿದ್ದರಾಜು ಕಾಳಿಂಗನಾಯಕ, ಜಯರಾಮು, ಬಸವರಾಜು, ಚಾಮನಾಯಕ, ಸಣ್ಣಸ್ವಾಮಿನಾಯಕ, ಚಿನ್ನನಾಯಕ, ಲಿಂಗರಾಜು ಮತ್ತಿತರರಿದ್ದರು.

ಕಿರುಸುದ್ದಿ

ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡಿ

ಮೈಸೂರು: ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮಾಜದ ಪ್ರಭಾವಿ ನಾಯಕರಾದ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಎಸ್.ಚಿಕ್ಕಮಾದು ಅಭಿಮಾನ ಬಳಗದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಆಗ್ರಹಿಸಿದ್ದಾರೆ.

ಶನಿವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಮತ್ತು ಹಾಸನ ಜಿಲ್ಲೆಯಲ್ಲಿ ನಾಯಕ ಸಮಾಜದ ಸುಮಾರು 6 ಲಕ್ಷ ಮತದಾರರು ಇದ್ದು, ಈ ಭಾಗದಲ್ಲಿ ಇದುವರೆಗೂ ಸಚಿವ ಸಾ ಈ ಸಮಾಜಕ್ಕೆ ನೀಡಿಲ್ಲ, ಹಾಗಾಗಿ ಈ ಭಾಗದ ಪ್ರಭಾವಿ ಶಾಸಕ ಅನಿಲ್ ಚಿಕ್ಕಮಾದುರವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಿದರು. ಹಿಂದೆ ಸರ್ಕಾರದಲ್ಲಿ ಸಮುದಾಯದ ನಾಯಕರಾಗಿದ್ದ ನಾಗೇಂದ್ರ, ಹಾಗೂ ರಾಜಣ್ಣ ನವರು ಸಚಿವರಾಗಿದ್ದರು. ಕಾರಣಾಂತರಗಳಿಂದ ಅವರನ್ನು ಸಚಿವ ಸ್ಥಾನದಿಂದ ಕೈಬಿಟ್ಟು, ಆ ಸ್ಥಾನವನ್ನು ಇದುವರೆಗೂ ಕೂಡ ಭರ್ತಿ ಮಾಡಿಲ್ಲ. ಅನಿಲ್ ಚಿಕ್ಕಮಾದು ಅವರು ಮೈಸೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ಹಗಲು-ರಾತ್ರಿ ದುಡಿಯುತ್ತಿದ್ದಾರೆ. ಇವರಿಗೆ ಸಚಿವ ಸ್ಥಾನ ನೀಡಿರುವುದರಿಂದ ಈ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಹೆಚ್ಚಿನ ಯುವಕರನ್ನು ಸೆಳೆದು. ಪಕ್ಷವನ್ನು ಇನ್ನಷ್ಟು ಸದೃಢವಾಗಿ ಮಾಡಲು ಸಹಾಯಕವಾಗುತ್ತದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಳಗದ ಕಾರ್ಯದರ್ಶಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗಣೇಶ್ ಪ್ರಸಾದ್‌ಗೆ ಸಚಿವ ಸ್ಥಾನ ನೀಡಿ

ಗುಂಡ್ಲುಪೇಟೆ: ಚಾಮರಾಜನಗರ, ಮೈಸೂರು ಬಾಗದಲ್ಲಿ ವೀರಶೈವ ಲಿಂಗಾಯತ ಸಮಾಜದ ಏಕೈಕ ಶಾಸಕರಾಗಿದ್ದಾರೆ. ಹಾಗಾಗಿ ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲ ಪಡಿಸಲು ಶಾಸಕ ಎಚ್.ಎಂ. ಗಣೇಶ ಪ್ರಸಾದ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ದೇವರಹಳ್ಳಿ. ಪ್ರಕಾಶ್ ಆರ್ ಹೈಕಮಾಂಡ್ ಗೆ ಒತ್ತಾಯಿಸಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ವೀರಶೈವ ಲಿಂಗಾಯತ ಮತ್ತು ಇತರೇ ಸಮುದಾಯದ ಮತಗಳು ನಿರ್ಣಾಯಕವಾಗಿದೆ ಇವುಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಮೊದಲು ಬಾರಿಗೆ 36 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾದಿಸಿ ಶಾಸಕರಾಗಿ ಆಯ್ಕೆಯಾದ ಎಚ್.ಎಂ. ಗಣೇಶ್ ಪ್ರಸಾದ್ ರಿಗೆ ಸಚಿವ ಸ್ಥಾನ ನೀಡಬೇಕು. ಇದರಿಂದ ಪಕ್ಷಕ್ಕೆ ಮತ್ತಷ್ಟು ಬಲ ಬರಲಿದೆ ಜತೆಗೆ ಅವರ ತಂದೆ ದಿ. ಮಹದೇವ್ ಪ್ರಸಾದ್ ಚಾಮರಾಜನಗರ ಜಿಲ್ಲೆಯನ್ನು ಹೆಚ್ಚಿನ ಅಭಿವೃದ್ಧಿ ಪಡಿಸಿದ್ದಾರೆ ಅವರ ಹಾದಿಯಲ್ಲಿ ಮಗ ಕೂಡ ಹೆಜ್ಜೆಯಿಡಲು ಸಚಿವ ಸ್ಥಾನ ಪೂರಕ ವೇದಿಕೆಯಾಗಲಿದೆ ಅದ್ದರಿಂದ ಡಿ ಕೆ ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಮಂತ್ರಿ ಮಾಡಬೇಕೆಂದು ಮನವಿ ಮಾಡಿದರು.

ಶಾಸಕ ಗಣೇಶ ಪ್ರಸಾದ್ ರವರಿಗೆ ಸಚಿವ ಸ್ಥಾನ ನೀಡಿದರೆ ಮುಂಬರುವ ಜಿಪಂ.ತಾಪಂ. ಗ್ರಾಮ ಪಂ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಪರವಾಗಿ ಹಳೇ ಮೈಸೂರು ಭಾಗದಲ್ಲಿಪೂರಕ ವಾತವರಣ ನಿರ್ಮಾಣವಾಗಲಿದೆ ಇದನ್ನೆಲ್ಲ ವರಿಷ್ಠರು ಮನಗಂಡು ಸಚಿವರನ್ನಾಗಿ ಮಾಡಬೇಕೆಂದು ಆಗ್ರಹಿಸಿದರು.

ಹಂದಿ ಮಂದಿ ನಾಟಕ ಪ್ರದರ್ಶನ ಇಂದು

ಮೈಸೂರು: ನಗರದ ರಂಗಾಯಣದ ವತಿಯಿಂದ 2025-26 ನೇ ಸಾಲಿನ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಶಕೀಲ್ ಅಹ್ಮದ್ ಅವರು ವಿನ್ಯಾಸಗೊಳಸಿ ನಿರ್ದೇಶನ ಮಾಡಿರುವ ಜಾರ್ಜ್ ಆರ್ವೆಲ್ ಅವರ ಅನಿಮಲ್ ಫಾರ್ಮ್ ಆಧಾರಿತ 'ಹಂದಿ ಮಂದಿ' ನಾಟಕ ಪ್ರದರ್ಶನವನ್ನು ಮೇ 31 ರಂದು ಸಂಜೆ 6:30 ಗಂಟೆಗೆ ರಂಗಾಯಣ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.10ಕ್ಕೆ ಉದ್ಯೋಗ, ಅಪ್ರೆಂಟಿಸ್‌ಶಿಪ್ ಮೇಳ

ಮೈಸೂರು: ಸರ್ಕಾರಿ ಕೈಗಾರಿಕ ತರಬೇತಿ ಸಂಸ್ಥೆಯ ವತಿಯಿಂದ ಉದ್ಯೋಗ ಮತ್ತು ಅಪ್ರೆಂಟಿಸ್‌ಶಿಪ್ ಮೇಳವನ್ನು ಜೂನ್ 10 ರಂದು ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನಡೆಯಲಿದೆ. ಅಂದು ಬೆಳಗ್ಗೆ 9 ಗಂಟೆಗೆ ನಡೆಯುವ ಈ ಮೇಳದಲ್ಲಿ ವಿವಿಧ ಪ್ರತಿಷ್ಠಿತ ಉದ್ದಿಮೆಗಳು ಪಾಲ್ಗೊಳ್ಳುತ್ತಿವೆ. ಈ ಮೇಳದಲ್ಲಿ ಮೈಸೂರು ಮತ್ತು ಶ್ರೀರಂಗಪಟ್ಟಣ ಐ.ಟಿ.ಐ ಗಳಿಗೆ ಸಂಯೋಜನೆಗೊಂಡಿರುವ ಇತರೆ ತರಬೇತಿ ಸಂಸ್ಥೆಗಳು ಹಾಲಿ 2026 ನೇ ಸಾಲಿನಲ್ಲಿ ಐ.ಟಿ.ಐ ನ ವಿವಿಧ ವೃತ್ತಿಗಳಲ್ಲಿ ತರಬೇತಿ ಪಡೆಯುತ್ತಿರುವ ಹಿರಿಯ ಹಾಗೂ ಉತ್ತೀರ್ಣರಾದ ಅಭ್ಯರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.



ಕೊಳ್ಳೇಗಾಲದ ಉಪ ಖಜಾನೆಯಲ್ಲಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಕಚೇರಿಯ ಸಹಾಯಕಿ ಡಿ. ಕಮಲಾಕ್ಷಿ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಎಸ್‌ಐಆರ್ ರದ್ದುಗೊಳಿಸುವಂತೆ ಒತ್ತಾಯ

ಎಚ್ ಡಿ ಕೋಟೆ: ಎಚ್ ಡಿ ಕೋಟೆ ಮತ್ತು ಸರಗೂರು ತಾಲೂಕಿನ ಸಂವಿಧಾನ ಸಂರಕ್ಷಣಾ ಪಡೆ ಮತ್ತು ಎಲ್ಲಾ ಜಾತಿ ಜನಾಂಗ ಧರ್ಮದ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಎಸ್ ಐ ಆರ್ ಕರ್ನಾಟಕದಲ್ಲಿ ಬೇಡವೇ ಬೇಡ ಎಂದು ಒತ್ತಾಯಿಸಿ ತಹಸೀಲ್ದಾರ್ ಮೂಲಕ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲಾಯಿತು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಮಾತನಾಡಿ ಖ ಪ್ರಕ್ರಿಯೆಗೆ ಕರ್ನಾಟಕದಲ್ಲಿ ಪ್ರತಿರೋಧವನ್ನು ದಾಖಲಿಸುತ್ತಿದ್ದೇವೆ. ಖ ಎಂಬುದು ಸಂವಿಧಾನ ವಿರೋಧಿಯಾದ, ಪ್ರಜಾತಂತ್ರಕ್ಕೆ ಮಾರಕವಾದ, ಪ್ರತಿಯೊಬ್ಬ ಪ್ರಜೆಯನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸುವ, ದುರುದ್ದೇಶಪೂರಿತ ಪ್ರಕ್ರಿಯೆಯಾಗಿದೆ. ಇದು ಈ ದೇಶದಲ್ಲಿ ಮತದಾನದ ಹಕ್ಕಿಲ್ಲದ ಎರಡನೇ ದರ್ಜೆಯ ಪ್ರಜೆಗಳನ್ನು ಸೃಷ್ಟಿಸುವ ಪ್ರಕ್ರಿಯೆಯ ಪ್ರಾರಂಭವಾಗಿದೆ. ಕೇಂದ್ರದಲ್ಲಿ ಆಡಳಿತರೂಢ ಬಿಜೆಪಿಯ ರಾಜಕೀಯ ಷಡ್ಯಂತ್ರಮೂ ಸಹ ಇದರಲ್ಲಿ ಅಡಗಿದೆ ಎಂದು ಆರೋಪಿಸಿದರು.

ಬೆಟ್ಟಯ್ಯಕೋಟೆ, ಏಜಾಜ್ ಪಾಷಾ , ಇಬ್ರಾಹಿಂ, ಅಕ್ಬರ್ ಪಾಷಾ , ಸ್ಟುಡಿಯೋ ಪ್ರಕಾಶ್, ಮನಗನಹಳ್ಳಿ ಮಾದಪ್ಪ, ಚಾಮರಾಜ, ಚೆನ್ನಿಪುರ ಚೆಲುವರಾಜ್, ಮಂಜು ಹೊಸಮಾಳ, ಶಿವಣ್ಣ ಸರಗೂರು, ಚೆನ್ನಪುರ ಮಲ್ಲೇಶ್, ಕಂದೇಗಾಲ ಶಿವರಾಜ್, ಕೆಂಡಗಣಸ್ವಾಮಿ, ಹೈರಿಗೆ ಶಿವರಾಜ್, ಮುದ್ದುಮಲ್ಲಯ್ಯ, ರಹಮದ್ ಖಾನ್ ಇದ್ದರು.



ಎಚ್ ಡಿ ಕೋಟೆ, ಸರಗೂರು ತಾಲೂಕಿನ ಸಂವಿಧಾನ ಸಂರಕ್ಷಣಾ ಪಡೆ, ಎಲ್ಲಾ ಜಾತಿ ಜನಾಂಗ ಧರ್ಮದ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ಎಸ್‌ಐಆರ್ ರದ್ದುಗೊಳಿಸುವಂತೆ ಒತ್ತಾಯಿಸಿ ತಹಸೀಲ್ದಾರ್ ಮೂಲಕ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲಾಯಿತು.

ಮಹಿಳೆಯರಿಂದ ಪುಟ್ಟರಂಗಶೆಟ್ಟಿ, ಸಿದ್ದರಾಮಯ್ಯ, ಡಿಕೆಶಿ ಪೋಸ್ಟರ್ ಪ್ರದರ್ಶನ

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಿ



ಚಾಮರಾಜನಗರ: ಚಾಮರಾಜನಗರ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿರಿಗೆ ಸಚಿವ ಸ್ಥಾನ ನೀಡಬೇಕೆಂದು ನಗರದಲ್ಲಿ ಮಹಿಳೆಯರು ಹಾಗೂ ಪುಟ್ಟರಂಗಶೆಟ್ಟರ ಅಭಿಮಾನಿಗಳು ಇಡುಗಾಯಿ ಹೊಡೆದು ಪೋಸ್ಟರ್ ಪ್ರದರ್ಶನ ಮಾಡಿ, ಒತ್ತಾಯ ಮಾಡಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನ ಮುಂದೆ ಸಮಾವೇಶಗೊಂಡ ಮುಖಂಡರು ಹಾಗೂ ಅಭಿಮಾನಿಗಳು ಶಾಸಕ ಸಿ. ಪುಟ್ಟರಂಗಶೆಟ್ಟಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಪರ ಜಯ ಘೋಷಣೆ ಕೂಗಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್‌ಮಾತನಾಡಿ, ಶಾಸಕ ಸಿ. ಪುಟ್ಟರಂಗಶೆಟ್ಟಿ ಸತತ ನಾಲ್ಕು ಭಾರಿ ಶಾಸಕರಾಗಿ ಕ್ಷೇತ್ರ ಹಾಗೂ ಜಿಲ್ಲೆ ಜನಾನುರಾಗಿಯಾಗಿದ್ದಾರೆ. ಸೋಲಿಲ್ಲ ಸರದಾರರಾಗಿದ್ದು, ಅವರನ್ನು ಸಚಿವರನ್ನಾಗಿ ಮಾಡುವುದರಿಂದ ಜಿಲ್ಲೆಯ ಅಭಿವೃದ್ಧಿಯಾಗುತ್ತದೆ. ಹಿಂದುಳಿದ ವರ್ಗದ ನಾಯಕರಿಗೆ ಅವಕಾಶ ಕಲ್ಪಿಸಿದಂತಾಗುತ್ತದೆ. ಪುಟ್ಟರಂಗಶೆಟ್ಟರು ಜಿಲ್ಲೆಯ ಅಭಿವೃದ್ಧಿಯಾಗುತ್ತದೆ ಎಂದರು. ಕಾಂಗ್ರೆಸ್ ಯುವ ಮುಖಂಡ ಶ್ರೀನಿವಾಸ್‌ಶೆಟ್ಟಿ ಮಾತನಾಡಿ, ಶಾಸಕ ಸಿ.ಪುಟ್ಟರಂಗಶೆಟ್ಟರು ಹಿರಿಯರಾಗಿದ್ದು, ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜಕಾರಣವನ್ನು ಆರಂಭಿಸಿ, ವಿಧಾನಸಭೆಗೆ ನಾಲ್ಕನೇ ಭಾರಿ ಪ್ರವೇಶ ಮಾಡಿದ್ದಾರೆ. ಇವರನ್ನು ಕಾಂಗ್ರೆಸ್ ಹೈಕಮಾಂಡ್ ಮಂತ್ರಿ ಮಾಡಬೇಕೆಂದು ಒತ್ತಾಯಿಸಿದರು.

ಉಪ್ಪಾರ ಸಮಾಜದ ಮುಖಂಡರಾದ ಕೆ.ಟಿ. ನಾಗ, ನಂಜಪ್ಪ, ದೊಡ್ಡಮೋಳೆ ರಾಜಪ್ಪ, ಶ್ರೀನಿವಾಸಶೆಟ್ಟಿ, ನಾಗವಳ್ಳಿ ನಾಗಯ್ಯ, ರವಿಗೌಡ, ಬಿಸಲವಾಡಿ ರವಿ, ಪ್ರಸನ್ನ, ಉತ್ತುವಳ್ಳಿ ಕಾಂತರಾಜು, ಪ್ರಭುಸ್ವಾಮಿ, ಶಂಕುತಲಾ, ಸರಗೂರು ಶಂಕುತಲಾ ಇದ್ದರು.

ಹಿಂದುಳಿದ ವರ್ಗಗಳಿಂದ ಒತ್ತಾಯ

ಕೊಳ್ಳೇಗಾಲ: ಚಾಮರಾಜನಗರ ಕ್ಷೇತ್ರದ ಶಾಸಕ ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಬೇಕೆಂದು ಹಿಂದುಳಿದ ವರ್ಗಗಳ ಒಕ್ಕೂಟದ ವತಿಯಿಂದ ಒತ್ತಾಯ ಮಾಡಿದರು. ಪಟ್ಟಣದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದೇವಾಂಗಪೇಟೆಯ ಯಜಮಾನರಾದ ಅಚ್ಗಾಲ್ ನಾಗರಾಜಯ್ಯ ಮಾತನಾಡಿ, ಚಾಮಾರಾಜನಗರ ವಿಧಾನಸಭಾ ಕ್ಷೇತ್ರದಿಂದ ನಾಲ್ಕು



ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಹಿಂದುಳಿದ ಜನಾಂಗದ ಪರವಾಗಿ ಒತ್ತಾಯಿಸುತ್ತಿದ್ದೇವೆ. ರಾಜ್ಯದಲ್ಲಿ ಉಪ್ಪಾರ ಜನಾಂಗದ ಶಾಸಕರಾಗಿ ಇರುವ ಪುಟ್ಟರಂಗಶೆಟ್ಟಿ ರವರಿಗೆ ಅವಕಾಶ ನೀಡಬೇಕು. ಈ ಹಿಂದೆ ಸಚಿವರಾಗಿ, ಎಂಎಸ್‌ಐಎಲ್ ನಿಗಮದ ಅಧ್ಯಕ್ಷರಾಗಿ ಅನೇಕ ಜನಪರ ಕೆಲಸ ಮಾಡಿದ್ದಾರೆ. ಆದ್ದರಿಂದ ಪುಟ್ಟರಂಗಶೆಟ್ಟಿ ರವರಿಗೆ ಉನ್ನತ ಮಟ್ಟದ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಚೌಡೇಶ್ವರಿ ಕಲ್ಯಾಣ ಮಂಟಪದ ಮಹದೇವಯ್ಯ, ಮುಖಂಡರು ಅಣ್ಣಾದ್ರಯ್ಯ, ವೇಣುಗೋಪಾಲ್. ಕೆ.ಆರ್.ಕೆ, ಮಹದೇವು, ನಗರಸಭೆ ಮಾಜಿ ಉಪಾಧ್ಯಕ್ಷ ಎ.ಪಿ ಶಂಕರ್, ಸಿ.ವಿ.ಬಾಬು, ಟಿ.ವಿ.ಶ್ರೀಧರ್, ಸುಂದರಪ್ಪ, ಮಹದೇವಯ್ಯ, ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಗೋವಿಂದರಾಜು ಇದ್ದರು.

ಕಸ ವಿಲೇವಾರಿ ಪರಿಶೀಲಿಸಿದ ಪುರಸಭೆ ಅಧಿಕಾರಿ ಶರವಣ

ಗುಂಡ್ಲುಪೇಟೆ: ಪುರಸಭೆ ವ್ಯಾಪ್ತಿಯ ಶ್ರೀರಾಮ್ ದೇವರು ಗುಡ್ಡದ ಪಕ್ಕ ಇರುವ ಹಳೆ ಕಸದ ವಿಲೇವಾರಿ ಘಟಕದಲ್ಲಿ ದಶಕಗಳಿಂದ ಶೇಖರಣೆಯಾಗಿದ್ದ ಪರಂಪರೆ ಕಸವನ್ನು ಸಂಪೂರ್ಣವಾಗಿ ತೆರವುಗೊಳಿಸುವ ಕಾರ್ಯವನ್ನು ಪುರಸಭೆಯ ಮುಖ್ಯ ಅಧಿಕಾರಿ ಶರವಣ ಎಸ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಪುರಸಭೆಯ ಮುಖ್ಯ ಅಧಿಕಾರಿ ಶರವಣ ಎಸ್ ಮಾತನಾಡಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ವತಿಯಿಂದ ಟೆಂಡರ್ ಕರೆಯಲಾಗಿದ್ದು, ಈ ಘಟಕದಲ್ಲಿ ಸಂಗ್ರಹವಾಗಿರುವ ಸುಮಾರು 25000 ಟನ್ ಹಳೆಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ಮರುಬಳಕೆ ಮಾಡುವ ಪ್ರಕ್ರಿಯೆ ಪ್ರಸ್ತುತ ಭರದಿಂದ ಸಾಗುತ್ತಿದೆ ಎಂದು ತಿಳಿಸಿದರು.

ತ್ಯಾಜ್ಯ ವಿಂಗಡಣೆ, ಮರುಬಳಕೆಯ ವಿಧಾನ: ಪರಿಸರಕ್ಕೆ ಹಾನಿಯಾಗದಂತೆ ಈ ಕೆಳಗಿನಂತೆ ಕಸವನ್ನು ವೈಜ್ಞಾನಿಕವಾಗಿ ವರ್ಗೀಕರಿಸಲಾಗುತ್ತಿದೆ.

ಕಸದಿಂದ ಬೇರ್ಪಡಿಸಲಾದ ಗುಣಮಟ್ಟದ ಗೊಬ್ಬರವನ್ನು ಪಟ್ಟಣದ ಸಾರ್ವಜನಿಕ ಉದ್ಯಾನವನಗಳ ನಿರ್ವಹಣೆಗೆ ಬಳಸಲಾಗುತ್ತಿದೆ.

ಕಸದಿಂದ ಸಂಸ್ಕರಿಸಿದ ಮಣ್ಣನ್ನು ಅದೇ ಜಾಗದ ಫಲವತ್ತತೆ ಮತ್ತು ಮಣ್ಣಿನ ಪೋಷಕಾಂಶಗಳನ್ನು ವೃದ್ಧಿಸಲು ಮರು ಬಳಕೆ ಮಾಡಲಾಗುತ್ತಿದೆ. ದಹನ ಮಾಡಬಹುದಾದ ಮರು ಬಳಕೆಗೆ ಬಾರದ ಒಣ ತ್ಯಾಜ್ಯವನ್ನು ಸಿಮೆಂಟ್ ಕಾರ್ಖಾನೆಗಳಿಗೆ ಇಂಧನವಾಗಿ ಬಳಸಲು ಸುರಕ್ಷಿತವಾಗಿ ರವಾನಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆಯ ಕಿರಿಯ ಎಂಜಿನಿಯರ್ ಮಂಜುನಾಥ್, ಪರಿಸರ ಎಂಜಿನಿಯರ್ ಮಹೇಶ್, ಹಿರಿಯ ಆರೋಗ್ಯ ನಿರೀಕ್ಷಕರಾದ ಸುಷ್ಮಾ, ದಫೇದಾರ್ ಸಿದ್ದರಾಜು ಸೇರಿದಂತೆ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.



ಕಾನೂನು ಅರಿವು ಕಾರ್ಯಕ್ರಮ

ಕೊಳ್ಳೇಗಾಲ: ತಂಬಾಕು ಮತ್ತು ಅದರ ಉತ್ಪನ್ನಗಳ ಸೇವನೆಯಿಂದ ಉಂಟಾಗುವ ಗಂಭೀರ ಆರೋಗ್ಯ ಸಮಸ್ಯೆಗಳು, ಕುಟುಂಬ ಹಾಗೂ ಪರಿಸರದ ಮೇಲಿನ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಸುನಿತಾ ತಿಳಿಸಿದರು.

ಪಟ್ಟಣದ ತಾಲೂಕು ಕಾನೂನು ಸೇವೆಗಳ ಸಮಿತಿ ವಕೀಲರ ಸಂಘ ಆರೋಗ್ಯ ಇಲಾಖೆ ಪೊಲೀಸ್ ಇಲಾಖೆ ತಾಲೂಕು ಪಂಚಾಯಿತಿ ಇವರ ಸಹಯೋಗದಲ್ಲಿ ನಡೆದ ವಿಶ್ವ ತಂಬಾಕು ವಿರೋಧಿ ದಿನ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆಯು 1987 ರಲ್ಲಿ ತಂಬಾಕು ಸೇವನೆಯಿಂದಾಗುವ ಸಾವು-ನೋವುಗಳ ಬಗ್ಗೆ ಜಾಗತಿಕ ಅರಿವು ಮೂಡಿಸಲು ಈ ದಿನವನ್ನು ಪರಿಚಯಿಸಿತು. ಧೂಮಪಾನ ಮತ್ತು ತಂಬಾಕು ನಮೂನೆಗಳ ಸೇವನೆಯಿಂದ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು ಮತ್ತು ಶ್ವಾಸಕೋಶದ ಕಾಯಿಲೆಗಳು ಉಂಟಾಗುತ್ತವೆ. ಆದರಿಂದ ತಂಬಾಕು ಮುಕ್ತ ಸಮಾಜ ನಿರ್ಮಿಸಲು ಮತ್ತು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು.

ಥೀಮ್ ಮನಸೂರೆಯನ್ನು ಬಹಿರಂಗಪಡಿಸುವುದು ನಿಕೋಟಿನ್, ತಂಬಾಕು ವ್ಯಸನವನ್ನು ಎದುರಿಸುವುದು. ಈ ಥೀಮ್ ಮಕ್ಕಳು, ಹದಿಹರೆಯದವರನ್ನು ಆಕರ್ಷಿಸಲು ತಂಬಾಕು, ನಿಕೋಟಿನ್ ಉದ್ಯಮವು ಉತ್ಪನ್ನಗಳನ್ನು ಮರುಪ್ಯಾಕೇಜ್ ಮಾಡುತ್ತದೆ ಮತ್ತು ಮಾರಾಟ ಮಾಡುತ್ತದೆ ಎಂಬುದನ್ನು ಬಹಿರಂಗಪಡಿಸುತ್ತದೆ ಎಂದರು.

ವೀರಣ್ಣ ಸಮಾಜ ಕಾರ್ಯಕರ್ತರು ಎನ್ ಟಿಸಿಪಿ ಚಾಮರಾಜನಗರ ಮಾತನಾಡಿ, ತಂಬಾಕು ಬಳಕೆದಾರರಲ್ಲಿ ಸಂಪೂರ್ಣ ತಂಬಾಕಿನ ಜೀವನ ಚಕ್ರದ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು, ಅದರ ಕೃಷಿ, ಉತ್ಪಾದನೆ, ವಿತರಣೆ, ಬಳಕೆ ಮತ್ತು ತ್ಯಾಜ್ಯ ನಿರ್ವಹಣೆ, ಮೂಲಭೂತವಾಗಿ ಅವರಿಗೆ ಶಿಕ್ಷಣ ನೀಡುವುದು ಮತ್ತು ಅದನ್ನು ತ್ಯಜಿಸಲು ಸಾಕಷ್ಟು ಕಾರಣವನ್ನು ನೀಡುವುದು.

ತಂಬಾಕು ಕಂಪನಿಗಳು ತಮ್ಮ ಉತ್ಪನ್ನವನ್ನು ಪರಿಸರ ಸ್ನೇಹಿ ಎಂದು ಮಾರಾಟ ಮಾಡುವ ವಂಚನೆಯನ್ನು ಎತ್ತಿ ತೋರಿಸುವುದು.

ಅಧ್ಯಕ್ಷತೆಯನ್ನು ತಾಲೂಕು ಆರೋಗ್ಯ ಅಧಿಕಾರಿಗಳಾದ ಲೋಹಿತ್ ವಹಿಸಿದರು, ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣ ಅಧಿಕಾರಿಗಳಾದ ಸುಂದರೇಶ್, ಹಿರಿಯ ವಕೀಲರಾದ ಡಿ ವೆಂಕಟಚಲ ಕಾರ್ಯನಿರ್ವಾಹಕ ಅಧಿಕಾರಿ ಕುಮಾರ್ ಹಾಜರಿದ್ದರು.



ಮಹದೇವಪ್ಪಗೆ ಸಚಿವ ಸ್ಥಾನ ನೀಡಬೇಡಿ: ಪ್ರಕಾಶ್

ಚಾಮರಾಜನಗರ: ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಾ.ಬಾಬು ಜಗಜೀವನರಾಂ ಅಭಿವೃದ್ಧಿ ಹಾಗೂ ವಾಲ್ಮೀಕಿ ನಿಗಮಗಳಿಗೆ ಅನುದಾನ ನೀಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಿದ್ದು, ಫಲಾನುಭವಿಗಳಿಗೆ ಸವಲತ್ತುಗಳು ತಲುಪಿಲ್ಲ. ಮೂರು ವರ್ಷಗಳಲ್ಲಿ ಒಂದು ಬೋರ್ ಕೊರೆಸದ ಸಿಎಂ ಇದ್ದರೆ ಅದು ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ. ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಅವರ ಅಭಿವೃದ್ಧಿ ನಿಗಮದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬೋರ್ ವೆಲ್ ಕೊರೆಸಿಲ್ಲ, ವಾಲ್ಮೀಕಿ ನಿಗಮದಲ್ಲಿ ಬೋರ್ ವೆಲ್ ಕೊರಸಿದ್ದು, ಅದಕ್ಕೆ ಪರಿಕರಗಳನ್ನು ವಿತರಣೆ ಮಾಡಿಲ್ಲ, ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿ ನಿಗಮಗಳಿಗೆ ಸರಿಯಾಗಿ ಅನುದಾನ ನೀಡಿಲ್ಲ, ಅಲ್ಲದೇ ಎಸ್ ಇಪಿ ಹಾಗೂ ಟಿಎಸ್‌ಪಿ ಅನುದಾನವನ್ನು ಸಹ ದುರ್ಬಳಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಅಭಿವೃದ್ಧಿ ನಿಗಮಗಳಿಗೆ ಅನುದಾನ ಮತ್ತು ಫಲಾನುಭವಿಗಳಿಗೆ ಸಾಲ ಸೌಲಭ್ಯ ನೀಡದಿದ್ದರೆ ಮುಂದಿನ ದಿನಗಳಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮುಂಭಾಗ ಜಿಲ್ಲಾ ಬಿಜೆಪಿ ಘಟಕದಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.



ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ಸಮಾಜ ಕಲ್ಯಾಣ ಇಲಾಖೆಯ ಸಚಿವ ಸ್ಥಾನವನ್ನು ನೀಡಬಾರದು ಎಂದು ಆಗ್ರಹಿಸಿದರು.

ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಗ್ಯಾರಂಟಿ ಯೋಜನೆಗಳಿಗೆ ಎಸ್‌ಇಪಿ ಹಾಗೂ ಟಿಎಸ್‌ಪಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ಬೇರೆ ಯಾವುದಾದರೂ ಸ್ಥಾನವನ್ನು ನೀಡಿ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಮುಂಜು ಕೋಡಿಉಗನೆ, ಮೂಡಹಳ್ಳಿ ಮೂರ್ತಿ, ಶೇ?ಪ್ಪ, ಬಸವಣ್ಣ, ಗುರುಪ್ರಸಾದ್, ಹೇಮಂತ್ ಇದ್ದರು.

ಮದ್ಯದಂಗಡಿ ತೆರೆದರೆ ಉಗ್ರ ಹೋರಾಟ

ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನ ತೆರೆಕಣಾಂಬಿಹುಂಡಿಯಲ್ಲಿ ಎಂಎಸ್ ಐಎಲ್ ಮದ್ಯಂಗಡಿ ತೆರೆದರೆ ಗ್ರಾಮಸ್ಥರೊಂದಿಗೆ ಬೀದಿಗಿಳಿದು ಹೋರಾಟ ಮಾಡಲಾಗುತ್ತದೆ ಎಂದು ಗ್ರಾಪಂ ಮಾಜಿ ಸದಸ್ಯ ಶಶಿ ಅವ್ವ ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಗ್ರಾಮದಲ್ಲಿ ಬಾರ್ ತೆರೆಯಲು ಉದ್ದೇಶಿ ಸಿರುವ ಜಾಗದ ಅಕ್ಕಪಕ್ಕ ಮನೆಗಳು, ಹಾಗೂ ಖಾಲಿ ನಿವೇಶನಗಳಿವೆ. ಬಾರ್ ತೆರೆದರೆ ಶಾಲಾ ಮಕ್ಕಳು, ಹೆಂಗಸರು ಓಡಾಡಲು ತೊಂದರೆಯಾ ಗಲಿದೆ ಎಂದರು.

ಈಗಾಗಲೇ ತೆರಕಣಾಂಬಿ ಗ್ರಾಮದಲ್ಲಿ 4



ಬಾರ್‌ಗಳಿದ್ದು ಕುಡುಕರ ಹಾವಳಿ ಹೆಚ್ಚಾಗಿದೆ.ಈ ನಡುವೆ ತೆರಕಣಾಂಬಿಹುಂಡಿಯಲ್ಲಿ ಮತ್ತೊಂದು ಬಾರ್ ತೆರೆದರೆ ನಿವಾಸಿಗಳಿಗೆ ತೊಂದರೆಯಾಗಲಿದೆ ಎಂದರು. ಗ್ರಾಪಂ ಸದಸ್ಯರು ಹಾಗೂ ಅಧ್ಯಕ್ಷರ ಅವಧಿ ಮುಗಿದಿರುವುದರಿಂದ ಪಿಡಿಒ ಸ್ವಂತ ತೀರ್ಮಾನದಿಂದ ಮದ್ಯದ ಅಂಗಡಿಗೆ ಜನರಲ್ ಲೈಸೆನ್ಸ್ ಹಾಗೂ ಎನ್‌ಒಸಿ ನೀಡಿದ್ದಾರೆ. ಈ ಸಂಬಂಧ ಅಬಕಾರಿ ಡಿಸಿ ಹಾಗೂ ಇನ್ಸ್ಪೆಕ್ಟರ್‌ಗೆ ಮನವಿ ಸಲ್ಲಿಸಲಾಗಿದೆ. ಅಬಕಾರಿ ಇನ್ಸ್ ಪೆಕ್ಟರ್ ನಮಗೆ ಮಾಹಿತಿ ನೀಡದೆ ಸ್ಥಳ ಮಹಜರು ನಡೆಸಿದ್ದಾರೆ ಎಂದು ತಿಳಿಸಿದರು. ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಇತ್ತ ಗಮನಹರಿಸಿ ಹೊಸ ಬಾರ್ ತೆರೆಯಲು ಅನುಮತಿ ನೀಡಬಾರದು. ಒಂದು ವೇಳೆ ಅನುಮತಿ ನೀಡಿದರೆ ಗ್ರಾಮಸ್ಥರೆಲ್ಲರೂ ಸೇರಿ ಉಗ್ರ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುರೇಶ್, ನಂದೀಶ್, ಪ್ರದೀಪ್, ವಿನೋದ್, ಮಂಜು, ಪ್ರತಾಪ್, ಶಂಭು, ಜಗದೀಶ್ ಮನೋಜ್, ಅಶೋಕ ಹಾಜರಿದ್ದರು.

ಕೃಷ್ಣಮೂರ್ತಿ ಅಭಿಮಾನಿ ಬಳಗದ ವತಿಯಿಂದ ವರಿಷ್ಠರಿಗೆ ಮನವಿ

ಕೃಷ್ಣಮೂರ್ತಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಯಳಂದೂರು: ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎ.ಆರ್‌ಕೃಷ್ಣಮೂರ್ತಿಗೆ ಸಚಿವ ಸ್ಥಾನ ನೀಡಬೇಕೆಂದು ತಾಲೂಕು ಗ್ಯಾರಂಟಿ ಯೋಜನೆಯ ಅಧ್ಯಕ್ಷ ಕಿನಕಹಳ್ಳಿ ಪ್ರಭು ಪ್ರಸಾದ್ ಅವರು ಹಾಗೂ ಎ.ಆರ್‌ಕೃಷ್ಣಮೂರ್ತಿ ಅಭಿಮಾನಿ ಬಳಗದ ವತಿಯಿಂದ ಪಕ್ಷದ ವರಿಷ್ಠರನ್ನು ಒತ್ತಾಯಿಸಿದರು.

ಪತ್ರಿಕಾಗೋಷ್ಠಿ ಮಾತನಾಡಿದರ ಅವರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಈವರೆಗೂ ಕಾಂಗ್ರೆಸ್ ಪಕ್ಷದಿಂದಗೆದ್ದಂತಹ ಶಾಸಕರಿಗೆ ಸಚಿವ ಸ್ಥಾನ ನೀಡಿಲ್ಲ, ಮೂರು ಬಾರಿ ಶಾಸಕರಾಗಿರುವ ಶಾಸಕ ಸ್ಥಾನವನ್ನು ಪಡೆದಿದ್ದಾರೆ. ಆದರೆ ಎ.ಆರ್. ಕೃಷ್ಣಮೂರ್ತಿ ಅವರು ಅನುಭವಿ ರಾಜಕಾರಣಿಯಾಗಿದ್ದು, ಬಹಳ ಪ್ರಜ್ಞಾವಂತ, ಜನರ ಕಷ್ಟ ಹರಿತ ಜನನಾಯಕರಾಗಿದ್ದು, ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮತ್ತುಮುಖ್ಯಮಂತ್ರಿಗಳು ಅವರಿಗೆ ಸಚಿವ ಸ್ಥಾನ ನೀಡಲೇಬೇಕೆಂದು ಮನವಿ ಮಾಡಿದರು. ಕೇಂದ್ರ ಮತ್ತುರಾಜ್ಯ ಸರ್ಕಾರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದ, ರಾಜಕೀಯ ಹಿರಿಯ ಮುತ್ಸದಿ, ಬಿ ರಾಚಯ್ಯನವರ ಪುತ್ರರು ನಮ್ಮ



ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರಿಗೆ ಪಕ್ಷದ ವರಿಷ್ಠರು ಅವರಿಗೆ ಸಂಪುಟ ಪುನರ್ ರಚನೆಯಲ್ಲಿ ಸಚಿವ ಸ್ಥಾನ ನೀಡಬೇಕು. ಏಕೆಂದರೆ ಅವರು ಎರಡು ಬಾರಿ ಸಂತೆಮರಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕರಾಗಿದ್ದರು. ನಂತರ 19 ವರ್ಷಗಳ ರಾಜಕೀಯ ವನವಾಸ ಅನುಭವಿಸಿ, ಈ ಬಾರಿಯ ಚುನಾವಣೆಯಲ್ಲಿ ಐವತ್ತು ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದು ಶಾಸಕರಾಗಿದ್ದಾರೆ. ಮೂರು ವರ್ಷಗಳಲ್ಲಿ 500 ಕೋಟಿಗೂ ಹೆಚ್ಚು ಅನುದಾನ ತಂದು ಕ್ಷೇತ್ರದ ಸಮಗ್ರಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಸರ್ಕಾರ ವತಿಯಿಂದ ಎಲ್ಲಾ ರೀತಿಯಲ್ಲೂ ಅನುದಾನ ತಂದು ಜನರನ್ನು ಅಭಿವೃದ್ಧಿ ಪಡಿಸುತ್ತಿರುವ ಶಾಸಕರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಸಮಗ್ರಅಭಿವೃದ್ಧಿಯು ಆಗಲಿದೆ. ರಾಜ್ಯದ ಜನರಿಗೂ ಒಳಿತಾಗಲಿದೆ ಎಂದರು. ಈ ಸಂಧರ್ಭದಲ್ಲಿ ಮುಖಂಡರಾದ ಕಂದಹಳ್ಳಿ ನಂಜುಂಡ ಸ್ವಾಮಿ ಹೊನ್ನೂರು ರಾಘು, ಬೂಧಿತಿಟ್ಟು ಮಹಾದೇವ ಆರೋಗ್ಯರಕ್ಷಾ ಸಮಿತಿಯ ಸದಸ್ಯ ದುಗ್ಗಹಟ್ಟಿ ಮಾದೇಶ್, ಈರಣ್ಣ ಟೌನ್ ಪಂಚಾಯಿತಿ ಮಾಜಿ ನಾಮ ನಿರ್ದೇಶಿತ ಸದಸ್ಯ ಮುನಾವರ್ ಬೇಗ್, ತಾಲೂಕು ಗ್ಯಾರಂಟಿ ಯೋಜನೆಯ ಸದಸ್ಯ ವಿಶ್ವಗಣಿಗನೂರು, ವೈ ಕೆ ಮೋಳೆ ವಿಜಯ್ ಇದ್ದರು.


ಬಹುಜನ ಸಮಾಜ ಪಕ್ಷದ ವತಿಯಿಂದ ನಗರಸಭೆ ಕಚೇರಿ ಎದುರು ಪ್ರತಿಭಟನೆ

ಪಟ್ಟಣದ ಮೂಲ ಸಮಸ್ಯೆ ಪರಿಹಾರಕ್ಕೆ ಆಗ್ರಹ

ಕೊಳ್ಳೇಗಾಲ: ಪಟ್ಟಣದ ಅಭಿವೃದ್ಧಿ ಹಾಗೂ ಸಾರ್ವಜನಿಕರ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಬಹುಜನ ಸಮಾಜ ಪಕ್ಷದ ವತಿಯಿಂದ ನಗರಸಭೆ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ನಗರಸಭೆಯಲ್ಲಿ ಸಾರ್ವಜನಿಕರ ಕೆಲಸಗಳು ವಿಳಂಬವಾಗುತ್ತಿವೆ, ಮೂಲಸೌಕರ್ಯಗಳ ಕೊರತೆ ಹೆಚ್ಚಾಗಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಎಸ್‌ಪಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, ನಗರಸಭೆಯು ಪಟ್ಟಣ ನಿವಾಸಿಗಳಿಗೆ ಅಗತ್ಯ ಸೇವೆಗಳನ್ನು ಸಮರ್ಪಕವಾಗಿ ಒದಗಿಸುವಲ್ಲಿ ವಿಫಲವಾಗಿದೆ ಎಂದರು. ಸಾರ್ವಜನಿಕರು ಆಸ್ತಿ ಖಾತೆ ಸೇರಿದಂತೆ ವಿವಿಧ ದಾಖಲೆಗಳಿಗಾಗಿ ತಿಂಗಳಾನುಗಟ್ಟಲೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಹೇಳಿದರು. ಸಂಸದರು, ಶಾಸಕರು ಹಾಗೂ ಜಿಲ್ಲಾಡಳಿತ ತಕ್ಷಣ ಗಮನಹರಿಸಿ ನಗರಸಭೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಬೇಕು. ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ತಾಲೂಕು ಅಧ್ಯಕ್ಷ ಶಂಕರ್ ಚೇತನ್ ಮಾತನಾಡಿ, ಪಟ್ಟಣದಲ್ಲಿ ಕುಡಿಯುವ ನೀರು, ಒಳಚರಂಡಿ, ರಸ್ತೆ ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳ ಸಮಸ್ಯೆಗಳು ಮುಂದುವರಿದಿದ್ದರೂ ಸ್ಥಳೀಯ ಶಾಸಕರು ಮೌನವಾಗಿರುವುದು ಬೇಸರದ ಸಂಗತಿ ಎಂದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ್ದ ತಹಶಿಲ್ದಾರ್ ಬಸವರಾಜು ಅವರು ಮನವಿ ಸ್ವೀಕರಿಸಿ, ನಿಮ್ಮ ಅಹವಾಲು ಕುರಿತು ಜಿಲ್ಲಾಧಿಕಾರಿಗಳಿಗೆ ತಿಳಿಸುವ ಮೂಲಕ ಕೂಡಲೇ ಸಾರ್ವಜನಿಕರ ಸಭೆ ಕರೆಯಲು ನಿಮ್ಮ ಮನವಿ ನೀಡಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಬಿಎಸ್ಪಿ ರಾಜ್ಯ ಸಂಚಾಲಕ ಮಣಿ, ನಾಗಯ್ಯ, ಜಿಲ್ಲಾಧ್ಯಕ್ಷ ಬಾಮಾ ಕೃಷ್ಣಮೂರ್ತಿ, ಜಿಲ್ಲಾ ಉಸ್ತುವಾರಿ ವಕೀಲರು ಪುಟ್ಟಸ್ವಾಮಿ, ತಾಲ್ಲೂಕು ಅಧ್ಯಕ್ಷ ಶಂಕರ್ ಚೇತನ್, ಬ್ಲಾಕ್ ಅಧ್ಯಕ್ಷ ಶಶಿಧರ್, ತಾಲ್ಲೂಕು ಉಸ್ತುವಾರಿ ರಂಗಸ್ವಾಮಿ (ರವಿ), ಪ್ರಧಾನ ಕಾರ್ಯದರ್ಶಿ ಶಿವು ಉತ್ತಂಬಳ್ಳಿ, ಕವಿತಾ, ಶಿವಮ್ಮ, ನಗರಸಭೆ ಮಾಜಿ ನಾಮನಿರ್ದೇಶಿತ ಸದಸ್ಯ ಮಧುಚಂದ್ರ, ರೈತ ಮುಖಂಡರು ದಶರಥ, ರಾಮಕೃಷ್ಣ ಸೇರಿದಂತೆ ಅನೇಕರು ಹಾಜರಿದ್ದರು.

ಕಿರುಸುದ್ದಿ

ಕಸದ ರಾಶಿ: ಸಾರ್ವಜನಿಕರಿಗೆ ತೊಂದರೆ



ಮದ್ದೂರು: ಮದ್ದೂರು ರೈಲ್ವೆನಿಲ್ದಾಣ ದಲ್ಲಿ ಕೆಲಸ ಮಾಡುವ ನೌಕರರಿಗೆ ವಸತಿ ಗೃಹ ಗಳಿದ್ದು, ಇಲ್ಲಿ ವಾಸ ಮಾಡುವ ನೌಕರರ ಮಕ್ಕಳಿಗೋಸ್ಕರ ಆಟವಾಡಲು ರೈಲ್ವೆ ಇಲಾಖೆ ಉಯ್ಯಲೆ, ಜಾರು ಬಂಡಿ, ಹಾಗೂ ಇನ್ನಿತರ ಮಕ್ಕಳ ಆಟೋಪಕರಣಗಳನ್ನು ವ್ಯವಸ್ಥೆ ಮಾಡಿದ್ದು ಸರಿಯಾದ ನಿರ್ವಹಣೆ ಇಲ್ಲದೆ, ಇಲ್ಲಿ ಆಟವಾಡುವ ಜಾಗದ ಸುತ್ತ ಮುತ್ತ ಹಾಗೂ ಓಡಾಡುವ ರಸ್ತೆಯ ಬದಿಗಳಲ್ಲೇ ತುಂಬಾ ಒಣಗಿದ ಎಲೆಗಳರಾಶಿ ಪಾರ್ತೆನಿಯಂ, ಗಿಡ ಗಂಟಿಗಳು ಬೆಳೆದ್ದಿದ್ದು, ಕಸದರಾಶಿಗಳ ತುಂಬಿದೆ. ಕೊಳಕು ಗೊಬ್ಬು ವಾಸನೆಯು ವಾತಾವರಣದಿಂದ ಕೂಡಿದ್ದು ಬೀದಿ ನಾಯಿಗಳಹಾವಳಿ ಸಂಜೆ ಸೊಳ್ಳೆಗಳ ಕಾಟ ವಿಪರೀತವಾಗಿದೆ.
ಮಕ್ಕಳು ಆಟವಾಡುವ ಸಮಯದಲ್ಲಿ ಸೊಳ್ಳೆಗಳ ಕಾಟದಿಂದ ಮಕ್ಕಳಿಗೆ ಯಾವುದೇ ರೀತಿಯ ಖಾಯಿಲೆಗಳು ಬರುವ ಸಾಧ್ಯತೆ ಇದ್ದು, ಇಲ್ಲಿನ ಮಕ್ಕಳ ಹಿತದೃಷ್ಟಿಯಿಂದ ಇಲ್ಲಿನ ಸಂಬಂಧ ಪಟ್ಟ ಅಧಿಕಾರಿಗಳು ಗಮನಹರಿಸಿ ಕೊಳಕು ವಾತಾವರಣದಿಂದ ವಸತಿ ಗೃಹದಲ್ಲಿ ವಾಸ ಮಾಡುವ ರೈಲ್ವೆ ಸಿಬ್ಬಂದಿ ಅವರ ಮಕ್ಕಳು ಪೋಷಕರುಗಳ ಹಾಗೂ ಓಡಾಡುವ ಸಾರ್ವಜನಿಕರ ಆರೋಗ್ಯ ಕಾಪಾಡಬೇಕಾಗಿದೆ. ಇಲ್ಲಿನ ಸ್ಥಳದ ವಾತಾವರಣವನ್ನು ಶುಚಿತ್ವದ ಕಡೆಗೆ ಗಮನ ಹರಿಸಿ ಇಲ್ಲಿ ಬರುವ ಆಟವಾಡುವ ಮಕ್ಕಳಿಗೆ ಶುಚಿತ್ವ ಹಾಗೂ ಉತ್ತಮ ವಾತಾವರಣವನ್ನು ಸಂಬಂಧಪಟ್ಟ ಅಧಿಕಾರಿಗಳು ಕಲ್ಪಿಸಿ ಕೊಡಬೇಕಾಗಿದೆ.

ಮಳೆ: ಬಾಳೆ ತೋಟ ನೆಲಸಮ



ಮಳವಳ್ಳಿ: ಶುಕ್ರವಾರ ರಾತ್ರಿ ಸುರಿದ ಗಾಳಿ ಮಳೆಯಿಂದಾಗಿ ಸುಮಾರು 4 ಎಕರೆ ಜಮೀನಿನಲ್ಲಿದ್ದ ಬಾಳೆ ತೋಟ ನೆಲಕಚ್ಚಿರುವ ಘಟನೆ ತಾಲ್ಲೂಕಿನ ಮಾಗನೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ವಿಶ್ವಮೂರ್ತಿ, ಚಂದ್ರು, ಹಾಗೂ ಸೋಮೇಶ್ ಎಂಬುವವರಿಗೆ ಸೇರಿದ ಫಲಬಿಟ್ಟಿದ್ದ 4 ಎಕರೆ ಬಾಳೆ ನೆಲಕ್ಕುರುಳಿ ಸುಮಾರು ನಾಲ್ಕು ಲಕ್ಷಕ್ಕೂ ರೂ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ತೋಟಗಾರಿಕೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಮಾಹಿತಿಯನ್ನು ಪಡೆದರು. ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಎಸ್ ಶಾಂತರಾಜು ಮಾತನಾಡಿ, ರಾಷ್ಟ್ರೀಯ ವಿಪತ್ತು ನಿರ್ವಹಣೆ ಮಾರ್ಗಸೂಚಿಯನ್ವಯ ರೈತರಿಗೆ ಪರಿಹಾರ ನೀಡಲು ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಹೇಳಿದರು.

ನದಿಯಲ್ಲಿ ಮುಳುಗಿ ಬಾಲಕ ಸಾವು

ಶ್ರೀರಂಗಪಟ್ಟಣ: ಬಾಲಕನೊಬ್ಬ ಕಾವೇರಿ ನದಿಯಲ್ಲಿ ಸ್ನೇಹಿತರೊಂದಿಗೆ ಈಜಲು ಹೋಗಿ ಮೃತಪಟ್ಟಿರುವ ಘಟನೆ ಚಂದಗಾಲು ಗ್ರಾಮದ ಬಳಿ ನದಿಯಲ್ಲಿ ನಡೆದಿದೆ.



ನಗುವನಹಳ್ಳಿ ಗ್ರಾಮದ ರವಿ ಎಂಬುವರ ಪುತ್ರ ಮಾದೇಶ (15) ಮೃತ ಪಟ್ಟಿರುವ ಬಾಲಕ ಈತ 9 ನೇತರಗತಿಯಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದು, ಬೇಸಿಗೆ ಹಿನ್ನೆಲೆ ಸ್ನೇಹಿತರೊಂದಿಗೆ ಪಕ್ಕದ ಕಾವೇರಿ ನದಿಯಲ್ಲಿ ನೀರಲ್ಲಿ ಆಟವಾಡುವ ವೇಳೆ ನೀರಲ್ಲಿ ಮುಳುಗಿ ಸಾವನ್ನಪ್ಪಿರುವ ಮಾಹಿತಿ ಲಭ್ಯವಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಚನಕಾರ ಶ್ರೀ ಬಸವಣ್ಣ, ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್, ರಾಷ್ಟ್ರಕವಿ ಕುವೆಂಪು ಹಾಗೂ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಅವರ ಗೌರವಾರ್ಥ ಜೂನ್ 5ರಂದು ಮದ್ದೂರಿನ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ ಹಮ್ಮಿಕೊಂಡಿರುವ ರಕ್ತದಾನ ಶಿಬಿರದ ಪೋಸ್ಟರ್‌ನ್ನು ಬಿಡುಗಡೆಗೊಳಿಸಿದರು.

ಅಧ್ಯಕ್ಷರಾಗಿ ಕಾಂತರಾಜು ಆಯ್ಕೆ

ಕೃಷ್ಣರಾಜಪೇಟೆ: ಪಟ್ಟಣದ ಹೊಸಹೊಳಲು ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಕಾಂತರಾಜು, ಉಪಾಧ್ಯಕ್ಷರಾಗಿ ಸೂರ್ಯ ಪ್ರಕಾಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಂಗಣದಲ್ಲಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂತರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಸೂರ್ಯ ಪ್ರಕಾಶ್ ಹೊರತು ಉಳಿದ ನಿರ್ದೇಶಕರಿಂದ ನಾಮಪತ್ರ ಸಲ್ಲಿಕೆಯಾಗದ ಕಾರಣ,ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಮನ್ಮುಲ್ ವಿಸ್ತರಣಾಧಿಕಾರಿ ಭಾವನ ಅವಿರೋಧ ಆಯ್ಕೆ ಘೋಷಿಸಿದರು. ಕಾಂಗ್ರೆಸ್ ಮುಖಂಡ ಪ್ರವೀಣ್ ಕುಮಾರ್ ಮಾತನಾಡಿ, ಸಂಘದ ನಿರ್ದೇಶಕರ ಸ್ಥಾನಕ್ಕೆ ಪ್ರತಿಷ್ಠೆಯ ಚುನಾವಣೆ ನಡೆದರೂ, ಮನ್ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ. ಹರೀಶ್ ಸೇರಿದಂತೆ ಗ್ರಾಮದ ಮುಖಂಡರ ಮಾರ್ಗದರ್ಶನದ ಮೇರೆಗೆ ನಿರ್ದೇಶಕರ ಸಹಕಾರದಿಂದ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು. ಅಧ್ಯಕ್ಷ ಕಾಂತರಾಜು ಮಾತನಾಡಿ, ಸಂಘದ ಎಲ್ಲಾ ನಿರ್ದೇಶಕರ ವಿಶ್ವಾಸ ಪಡೆದು ಗ್ರಾಮಸ್ಥರ ಉತ್ತಮ ಸಲಹೆ ಪಡೆದು ಹಾಲು ಉತ್ಪಾದಕರಿಗೆ ಅನುಕೂಲ ಕಲ್ಪಿಸುತ್ತೇನೆ.ಈಗಾಗಲೇ ನಮ್ಮ ಸಂಘ ಆರ್ಥಿಕವಾಗಿ ಹಿಂದುಳಿದಿದೆ ಎಂದು ಹೇಳಿದರು. ಸಂಘದ ನಿರ್ದೇಶಕ ಪ್ರಕಾಶ್, ಎಚ್.ಜಿ. ರಮೇಶ್, ಶ್ರೀನಿವಾಸ್, ಬಸವರಾಜ, ಭಾರತಿ, ಶೈಲಜಾ, ಪೂರ್ಣಿಮಾ.ಸಿ, ಮಹೇಶ್, ಹೆಚ್.ಕೆ. ಚಂದ್ರ, ಮಾರ್ಗವಿಸ್ತರಣಾಧಿಕಾರಿ ಭವನ, ಮುಖಂಡರಾದ ಕೃಷ್ಣೇಗೌಡ ಇದ್ದರು.



ಕೃಷ್ಣರಾಜಪೇಟೆ ಪಟ್ಟಣದ ಹೊಸಹೊಳಲು ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಕಾಂತರಾಜು, ಉಪಾಧ್ಯಕ್ಷರಾಗಿ ಸೂರ್ಯ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಿಗೆ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಸಲಹೆ

ಮಹನೀಯರ ಆದರ್ಶ ಪಾಲಿಸಿ

ಮಂಡ್ಯ: ಇತಿಹಾಸದಲ್ಲಿ ಸಾಧನೆ ಮಾಡಿದವರ ಆದರ್ಶಗಳನ್ನು ಮೈಗೂಡಿಕೊಂಡು ನೀವು ಕೂಡ ಇತಿಹಾಸ ಸೃಷ್ಟಿಸುವಂತಾಗಬೇಕು. ನಿಮ್ಮಲ್ಲಿರುವ ಅಂತಃಶಕ್ತಿಯನ್ನು ಗುರುತಿಸಿಕೊಳ್ಳುವ ಜವಾಬ್ದಾರಿಯೂ ನಿಮ್ಮದೇ ಆಗಿದೆ. ಆ ಮೂಲಕ ಮಾತೃಭೂಮಿಗೆ ಏನಾದರೂ ಕೊಡುಗೆ ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಗಾಂಧಿಭವನದಲ್ಲಿ ಜಿಲ್ಲಾ ಒಕ್ಕಲಿಗರ ಸಂಘದಿಂದ ಶನಿವಾರ ಆಯೋಜಿಸಿದ್ದ ಗಣ್ಯ ಸಾಧಕರಿಗೆ ಅಭಿನಂದನೆ ಮತ್ತು ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಹಾಗೂ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಇಂದು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ದೊರೆಯುತ್ತಿರುವುದು ಅಂಕ ಗಳಿಕೆಯ ಪ್ರತಿಭೆಗಾಗಿ ಮಾತ್ರ. ಇದರೊಂದಿಗೆ ನೀವು ಪುರಸ್ಕಾರ ಪಡೆಯಬೇಕಾದದ್ದು ಶಿಕ್ಷಣ ಜತೆಗೆ ಸಂಸ್ಕಾರಕ್ಕೆ. ಉನ್ನತ ಅಂಕ ಪಡೆದು ಎಷ್ಟೋ ಮಕ್ಕಳು ತಂದೆ-ತಾಯಿಯನ್ನೇ ಗೌರವಿಸದಿರುವ ನಡವಳಿಕೆಗಳನ್ನು ನಾವು ನೋಡಿದ್ದೇವೆ. ಇದು ಆ ಮಕ್ಕಳ ಕುಟುಂಬಕ್ಕಷ್ಟೇ ಅಲ್ಲ, ಸಮಾಜಕ್ಕೂ ಅಪಾಯಕಾರಿ ಎಂದು ಎಚ್ಚರಿಸಿದರು. ಪ್ರತಿಭೆಯ ನಶೆಯನ್ನು ಯಾರೊಬ್ಬರೂ ತಲೆಗೇರಿಸಿಕೊಳ್ಳಬಾರದು. ಹಾಗೇನಾದರೂ ಆದರೆ ಮುಂದಿನ ನಿಮ್ಮ ಭವಿಷ್ಯ ಕತ್ತಲಮಯವಾಗಲಿದೆ. ಓದು ವುದು ಜ್ಞಾನಾರ್ಜನೆಗಾಗಿ, ಜೀವನದಲ್ಲಿ ಮೌಲ್ಯ ಹಾಗೂ ಗುರಿಯನ್ನಿಟ್ಟುಕೊಂಡು ಮುನ್ನಡೆಯಬೇಕೆಂದು ತಿಳಿ ಹೇಳಿದರು. ಸಂವಿಧಾನ ತಜ್ಞ ಡಾ.ಸುಧಾಕರ ಹೊಸಳ್ಳಿ ಮಾತನಾಡಿ, ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳು ನಾಡುಕಟ್ಟಿದ ದೊರೆಯ ವಾರಸುದಾರರು. ನೀವು ಶಿಕ್ಷಣ ಪಡೆಯುವುದು ಕೇವಲ ನಿಮ್ಮ ಬದುಕನ್ನು ಗಟ್ಟಿಮಾಡಿಕೊಳ್ಳಲು ಅಲ್ಲ, ಬದಲಾಗಿ ನಾಡು ಕಟ್ಟುವ ಕಾಯಕದಲ್ಲಿ ನಿಮ್ಮ ಜ್ಞಾನ ಬಳಕೆಯಾಗಬೇಕು. ಮೆಕಾಲೆ ಶಿಕ್ಷಣದಕಾರಣದಿಂದ ಭಾರತದ ಯುವಜನರಲ್ಲಿ ದಾಸ್ಯದ ಮನಃಸ್ಥಿತಿ ಗಟ್ಟಿಗೊಳ್ಳುತ್ತಲೇ ಇದೆ ಎಂದು ವಿಷಾದಿಸಿದರು. ಆದಿಚುಂಚನಗಿರಿ ಶಿಕ್ಷನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಮನುಷ್ಯ ಜನ್ಮ ಬಹಳ ಶ್ರೇಷ್ಠವಾದುದು. ಈ ಜನ್ಮವನ್ನು ಶ್ರೇಷ್ಠವಾಗಿಸಿಕೊಳ್ಳಬೇಕು. ಮಕ್ಕಳು ಒಳ್ಳೆಯ ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು. ತಂದೆ-ತಾಯಿ, ರಾಷ್ಟ್ರಕ್ಕೆ ಗೌರವ ತರುವ ಕೆಲಸ ಮಾಡಬೇಕು. ಎಲ್ಲ ಜೀವರಾಶಿಗಳಿಗೂ ಅನ್ನ ಕೊಡುವವರು ರೈತರು. ದೇಶದ ರಕ್ಷಣೆ ಮಾಡುವವರು ಸೈನಿಕರು. ಇವರಿಬ್ಬರ ಸೇವೆ, ತ್ಯಾಗ ಅವಿಸ್ಮರಣೀಯ ಎಂದರು.

ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ, ವಕೀಲರ ವಿಶಾಲ್‌ರಘು, ಅಂತಾರಾಷ್ಟ್ರೀಯ ಅಲಯನ್ಸ್ ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಕೆ.ಟಿ.ಹನುಮಂತು, ಹೊಸಪೇಟೆ-ತೋರಣಗಲ್ಲು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್.ಯೋಗಾನಂದ ಕೆರೆಗೋಡು ಭಾಗವಹಿಸಿದ್ದರು.



ಒಕಲಿಗ ಸಂಘಟನೆಗಳು ಒಗ್ಗೂಡಬೇಕು

ಒಕ್ಕಲಿಗ ಸಂಘಟನೆಗಳು ಒಗ್ಗೂಡಬೇಕು. ಒಕ್ಕಲಿಗರು ಒಟ್ಟುಗೂಡುವುದರಿಂದ ಸಮುದಾ ಯವನ್ನು ಹೊರತುಪಡಿಸಿಯೂ ಸಮಾಜಕ್ಕೆ ಸಹಕಾರಿಯಾಗಲಿದೆ. ಜಿಲ್ಲೆಯ ಅದಷ್ಟೋ ಪ್ರತಿಭಾವಂತ ಒಕ್ಕಲಿಗ ಸಮುದಾಯದ ಸಾಧಕರು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ, ಮಾಡುತ್ತಿದ್ದಾರೆ. ಇದೇ ಜಿಲ್ಲೆಯ ಡಾ.ವಿವೇಕ್ ಹಲ್ಲೇಗೆರೆ ಅವರು ಅಮೆರಿಕಾದ ಶ್ವೇತಭವನ ಮುಖ್ಯ ಸಲಹಾಽಕಾರಿಯಾಗಿ ಕರ್ಯನಿರ್ವಹಿಸುವುದು ಇದಕ್ಕೆ ಉದಾಹರಣೆಯಾಗಿದೆ.

ಮಂಡ್ಯದಲ್ಲಿ ದಾಖಲೆ ಮಳೆ



ಮಂಡ್ಯ: ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸುರಿದ ಬಿರುಗಾಳಿ ಮಳೆಗೆ ಹಲವು ಕಡೆಗಳಲ್ಲಿ ಹಾನಿಯುಂಟಾಗಿವೆ. ಜಿಲ್ಲೆಯಲಿ ನಿನ್ನೆ ರಾತ್ರಿ 24.5 ಎಂ.ಎಂ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ವರದಿಗಳು ತಿಳಿಸಿವೆ.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ವ್ಯಾಪಕ ಮಳೆಯಾಗಿದ್ದು, ತಾಲೂಕಿನ ಹೊಳಲು ಗ್ರಾಮದಲ್ಲಿ ಮಳೆಯಿಂದಾಗಿ ಗ್ರಾಮದ ಪುಷ್ಪ ಅವರು ವಾಸವಿದ್ದ ಮನೆಯ ಲ್ಯಾವಣಿ ಮುರಿದು ಬಿದ್ದಿದ್ದು, ವಾಟರ್ ಟ್ಯಾಂಕ್ ಮನೆ ಒಳಗೆ ಬಿದ್ದ ಪರಿಣಾಮ ಮನೆಯ ಒಳಗೆ ಇರುವ ವಸ್ತುಗಳಾದ ಟಿ.ವಿ., ಸೇರಿದಂತೆ ಹಲವು ಗೃಹೋಪಯೋಗಿ ವಸ್ತುಗಳು ಹಾಳಾಗಿವೆ.

ಮನೆಯ ಗೋಡೆಯೂ ಸಹ ಜಖಂಗೊಂಡಿದ್ದು, ಆ ಸಮಯದಲ್ಲಿ ಮನೆಯಲ್ಲಿ ಯಾರೂ ಮನೆಯಲ್ಲಿ ಇಲ್ಲದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ, ವಿಷಯ ತಿಳಿದು ಗ್ರಾಮಾಡಳಿತಾಧಿಕಾರಿ ಸಿ. ಗುಣಶೇಖರ್ ಅವರು ಭೇಟಿನೀಡಿ ಪರಿಶೀಲನೆನಡೆಸಿದ್ದು, ಮನೆಯವರನ್ನು ವಿಚಾರಿಸಿ ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಹಾರ ನೀಡುವ ಬಗ್ಗೆ ತಿಳಿಸಿದರು ಹಾಗೂ ಸರ್ಕಾರದಿಂದ ಬರುವ ಸೌವಲತ್ತುಗಳನ್ನು ಕೊಡಿಸುವುದಾಗಿ ಭರವಸೆ ನೀಡಿದರು. ಸುಮಾರು 2 ರಿಂದ 3 ಲಕ್ಷ ರೂ.ಗಳ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಈ ವೇಳೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಜಯಪ್ರಕಾಶ್ ನಾರಾಯಣ ಸಹ ಭೇಟಿ ನೀಡಿ ಮನೆಯನ್ನು ನಿರ್ಮಿಸಲು ಸರ್ಕಾರದಿಂದ ಬರುವ ವಿಶೇಷ ಸೌಲಭ್ಯಗಳನ್ನು ಕೊಡಿಸುವುದಾಗಿ ಭರವಸೆ ನೀಡಿದ್ದಾರೆ.

ಬಿರುಗಾಳಿ ಮಳೆ: ಹಾರಿ ಬಿದ್ದ ಲ್ಯಾವಣಿ ಶುಕ್ರವಾರ ರಾತ್ರಿ ಭಾರಿ ಮಳೆ ಗಾಳಿಗೆ ಮನೆಯೊಂದರ ಲ್ಯಾವಣಿ ಮುರಿದು ಬಿದ್ದಿರುವ ಘಟನೆ ಮಂಡ್ಯ ತಾಲೂಕಿನ ಹಳೇ ಬೂದನೂರು ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ಶ್ರೀಮಾನ್ ಎಂಬುವವರಿಗೆ ಸೇರಿದ ಮನೆ ಹಾನಿಗೊಂಡಿದ್ದು, ಹಳೇ ಬೂದನೂರು -ಕಚ್ಚಿ ಗೆರೆ ರಸ್ತೆಯಲ್ಲಿ ಮೇಲ್ಛಾವಣಿ ಗಾಳಿಯಲ್ಲಿ ತೂರಿ ಬಂದು ಬಿದ್ದಿದೆ. ರಸ್ತೆಯಲ್ಲಿ ಜನಸಂಚಾರವಿಲ್ಲದೆ ಭಾರಿ ಅನಾಹುತ ತಪ್ಪಿದಂತಾಗಿದೆ. ಘಟನೆಯಿಂದಾಗಿ ಗ್ರಾಮದಲ್ಲಿ ವಿದ್ಯುತ್ ನಿಲುಗಡೆ ಉಂಟಾಗಿತ್ತು. ಸಂತ್ರಸ್ತರಿಗೆ ಪರಿಹಾರ ನೀಡಲು ತಾಲ್ಲೂಕು ಆಡಳಿತಕ್ಕೆ ಒತ್ತಾಯಿಸಲಾಗಿದೆ. ಮದ್ದೂರು ತಾಲೂಕಿನ ಅತಿ ಹೆಚ್ಚು ಅಂದರೆ 31.5, ಮಂಡ್ಯ ಜಿಲ್ಲೆಯಲ್ಲಿ ಮಳವಳ್ಳಿಯಲ್ಲಿ 24.2, 30.0 ಎಂಎಂ ಮಳೆಯಾಗಿದ್ದು, ಕೆ.ಆರ್. ಪೇಟೆ ತಾಲೂಕಿನಲ್ಲಿ ಅತಿ ಕಡಿಮೆ 12.7 ಎಂ.ಎಂ ಮಳೆ ಬಿದ್ದಿದೆ. ನಾಗಮಂಗಲ ತಾಲೂಕಿನಲ್ಲಿ 28.0 ಎಂಎಂ, ಪಾಂಡವಪುರ ತಾಲೂಕಿನಲ್ಲಿ 24.3 ಎಂಎಂ., ಶ್ರೀರಂಗಪಟ್ಟಣ ತಾಲೂಕಿನಲ್ಲಿ 21.4ಎಂಎಂನಷ್ಟು ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ತಿಳಿಸಿದೆ.

ಜನಪರ ಸಂಘಟನೆಗಳ ಧರಣಿ



ಮಂಡ್ಯ: ಪ್ರಜಾತಂತ್ರದ ಅಡಿಪಾಯವನ್ನು ಬುಡಮೇಲು ಮಾಡುತ್ತಿರುವ ಹಾಗೂ ಸಂವಿಧಾನದ ನಿರ್ದೇಶನಕ್ಕೆ ವಿರುದ್ಧ ದಿಕ್ಕಿನಲ್ಲಿ ದೇಶವನ್ನು ಎಳೆದೊಯ್ಯಲು ಪ್ರಯತ್ನಿಸುತ್ತಿರುವ ಎಸ್‌ಐಆರ್ ಸಹಕರಿಸದಂತೆ ಒತ್ತಾಯಿಸಿ ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು, ಜನಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಸರ್ ಎಂ.ವಿ. ಪ್ರತಿಮೆ ಬಳಿ ಜಮಾವಣೆಗೊಂಡ ಕಾರ್ಯಕರ್ತರು, ಧರಣಿ ನಡೆಸಿ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ವಿರುದ್ಧ ಘೋಷಣೆ ಕೂಗಿದರು.

ಎಸ್‌ಐಆರ್‌ನ ಮೂರನೇ ಸುತ್ತಿನ ದಾಳಿ ಪ್ರಾರಂಭವಾಗುತ್ತಿದ್ದು, ಕರ್ನಾಟಕ ಅಪಾಯದ ಹೊಸ್ತಿಲಲ್ಲಿ ನಿಂತಿದೆ. ಆದರೆ, ಕರ್ನಾಟಕ ಈ ದುಷ್ಟ ಯೋಜನೆಯನ್ನು ತಿರಸ್ಕರಿಸಲು ತೀರ್ಮಾನಿಸಿದ್ದು, ತಾತ್ವಿಕವಾಗಿ ವಿರೋಽಸಿದರೆ ಸಾಲದು ಅದಕ್ಕಾಗಿ ಅಗತ್ಯವಿರುವ ಪರಿಣಾಮಕಾರಿ ಕ್ರಮಗಳಿಗೆ ರಾಜ್ಯ ಸರ್ಕಾರ ಮುಂದಾಗಬೇಕಿದೆ ಎಂದು ಒತ್ತಾಯಿಸಿದರು.

ಪ್ರತಿ ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಪ್ರದೇಶಗಳಲ್ಲಿ ಆ ಒಳಪಡಿಸಿ, ಮುಕ್ತವಾದ ರೀತಿಯಲ್ಲಿ ಎಲ್ಲರ ಸಮ್ಮುಖದಲ್ಲಿ ತಿದ್ದುಪಡಿಗಳನ್ನು ಮಾಡಬೇಕು. ಈ ಪ್ರಕ್ರಿಯೆಯನ್ನು ಗಡಿಬಿಡಿಯಲ್ಲಿ ನಡೆಸಬಾರದು ತನಿಷ್ಟ 1 ವರ್ಷಗಳ ಅವಽ ನಿಗದಿ ಮಾಡಬೇಕು. ಮತದಾರರ ಪಟ್ಟಿಯ ಪರಿಶೀಲನೆ ನಡೆಸಿ ಕರಡು ಪಟ್ಟಿ ತಯಾರಿಸಲು, ಕರಡನ್ನು ಸಾರ್ವಜನಿಕ ಪರಿಶೀಲನೆಗೆ ಒಳಪಡಿಸಲು ಹಾಗೂ ಅಹವಾಲುಗಳನ್ನು ಸ್ವೀಕರಿಸಿ ಅಂತಿಮ ಪಟ್ಟಿ ತಯಾರಿಸಲು 6 ತಿಂಗಳು ಸಮಯ ಇರಬೇಕು ಎಂದು ಒತ್ತಾಯಿಸಿದರು.

ಸ್ಮಾರ್ಟ್ ಕಾರ್ಡ್ ನೀಡಬೇಕು. ಮತದಾರರ ನೆರವು ಕೇಂದ್ರಗಳನ್ನು ತೆರೆಯಬೇಕು. ಈ ಕೇಂದ್ರಗಳ ಮೂಲಕ ಜನರು ಅಗತ್ಯವಿರುವ ಮೂಲ ದಾಖಲೆಗಳನ್ನು ಸತಾಯಿಸದೆ ತ್ವರಿತವಾಗಿ ಜನರಿಗೆ ನೀಡಬೇಕು ಎಂದುಅಽಕಾರಿ ವರ್ಗಕ್ಕೆ ಕಟ್ಟುನಿಟ್ಟಿನ ಆದೇಶ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ವಿವಿಧ ಸಂಘಟನೆಗಳ ಮುಖಂಡರಾದ ಎಂ.ಸಿ. ಕೃಷ್ಣಪ್ಪ, ನರಸಿಂಹಮೂರ್ತಿ, ಬಿ.ಟಿ. ವಿಶ್ವನಾಥ್, ಸಿದ್ದರಾಜು, ರಮಾನಂದ, ಅಂಜಲಿ, ಶಿಲ್ಪಪ್ಪ, ಶುಭದಾಯಿನಿ, ತಗ್ಗಹಳ್ಳಿ ಯಶೋಧ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಿ: ಎಓ ಧನುಷ್

ಮಳವಳ್ಳಿ: ಸಾರ್ವಜನಿಕರಿಗೆ ಕುಡಿಯುವ ನೀರು, ರಸ್ತೆ, ಸ್ವಚ್ಛತೆ ಸೇರಿದಂತೆ ನೀರು ಮೂಲ ಭೂತ ಸೌಕರ್ಯಗಳ ಕೊರತೆ ಕಾಡದಂತೆ ಜಾಗೃತಿ ವಹಿಸಬೇಕೆಂದು ಅಧಿಕಾರಿಗಳಿಗೆ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಸ್ ಧನುಷ್ ಸೂಚನೆ ನೀಡಿದರು

ಪಟ್ಟಣದ ತಾಲ್ಲೂಕು ಪಂಚಾಯಿತಿಯ ಸಭಾಂಗಣದಲ್ಲಿ ನಡೆದ ತಾಲ್ಲೂಕು ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಾವುದೇ ಕೆಲಸಗಳು ಬಾಕಿ ಉಳಿಯಬಾರದು, ವಿವಿಧ ಇಲಾಖೆಗಳಿಂದ ಬಿಡುಗಡೆಯಾಗಿರುವ ಅನುದಾನ ವಾಪಸ್ ಹೋಗದಂತೆ ಸಮರ್ಪಕವಾಗಿ ಬಳಸಬೇಕೆಂದು ಹೇಳಿದರು. ಜನರಿಗೆ ಶುದ್ಧ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕೆಟ್ಟು



ನಿಂತಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಕಾರ್ಯವನ್ನು ಸಂಪೂರ್ಣಗೊಳಿಸಬೇಕು. ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಿರುವ ಘಟಕಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಮಾಡಬೇಕು. ನರೇಗಾ ಅನು ದಾನದ ಕಾಯಗಾರಿಯನ್ನು ಅದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ಹೇಳಿದರು. ಮುಂಗಾರು ಆರಂಭಗೊಂಡಿರುವುದರಿಂದ ತೋಟಗಾರಿಕೆ ಮತ್ತು ಕೃಷಿ ಇಲಾಖೆಯಿಂದ ರೈತರಿಗೆ ಅಗತ್ಯ ಇರುವ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಗೆ ಸೂಕ್ತ ಕ್ರಮ ವಹಿಸಬೇಕು. ಬೆಳೆ ಬಿತ್ತನೆಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಜೆಜೆಎಂ ಯೋಜನೆಯಡಿ ಯಾವುದೇ ಮನೆಗಳಿಗೆ ನೀರು ತಪ್ಪದಂತೆ ಜಾಗೃತಿ ವಹಿಸಬೇಕು ಎಂದರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ನಿರ್ದೇಶಕ ರಂಗಸ್ವಾಮಿ ಮಾತನಾಡಿ, ಕುಡಿಯುವ ನೀರಿಗೆ ತೊಂದರೆಯಾಗದಂತೆ 36 ಗ್ರಾಮಗಳಲ್ಲಿ ಖಾಸಗಿ ಬೋರ್ ವೆಲ್ ಗಳಿಂದ ನೀರು ಪಡೆಯಲು ಗುರುತಿಸಲಾಗಿದೆ. ಈಗಾಗಲೇ ನಾಲ್ಕು ಗ್ರಾಮಗಳಲ್ಲಿ ಖಾಸಗಿಯಾಗಿ ನೀರು ಪಡೆಯಲಾಗುತ್ತಿದೆ. ಜೆಜೆಎಂ ಕಾಮಗಾರಿಯ ಕೆಲಸ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು.

ರೈತರ ಸಾವಯವ ಸಂತೆ ನಾಳೆ: ಕವಿತಾ ಕುರಗಂಟಿ

ಪಾಂಡವಪುರ: ರೈತರು ಬೆಳೆದ ಸಾವಯವ ಬೆಳೆಗಳಿಗೆ ಮಧ್ಯವರ್ತಿಗಳ ಹಾವಳಿ ಇಲ್ಲದೆ ಗ್ರಾಹಕರಿಗೆ ವಿಷಮುಕ್ತ ಆಹಾರ ಮತ್ತು ರೈತರಿಗೆ ಉತ್ತಮ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಜೂ.1 ರಂದು ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ರೈತರ ಸಾವಯವ ಸಂತೆ ಆಯೋಜಿಸಲಾಗಿದೆ ಎಂದು ರೈತ ಸ್ವರಾಜ್ಯ ವೇದಿಕೆಯ ಕವಿತಾ ಕುರಗಂಟಿ ತಿಳಿಸಿದರು. ಸಾವಯವ ಕೃಷಿಕರು ಸಂಘಟಿತರಾಗಿ ಸಾವಯವ ಸಂತೆ ಆಯೋಜಿಸುತ್ತಿದ್ದಾರೆ. ಹದಿನೈದು ದಿನಗಳಿಗೊಮ್ಮೆಯಂತೆ ಪ್ರಾಯೋಗಿಕವಾಗಿ ಮೂರು ತಿಂಗಳುಗಳ ಕಾಲ ಈ ಸಂತೆ ಆಯೋಜನೆಗೊಳ್ಳುತ್ತಿದೆ. ಸಂತೆ ಮೂರು ಗಂಟೆಗಳ ಕಾಲ ಮಾತ್ರ ನಡೆಯುತ್ತದೆ. ಈ ಸಂತೆಗೆ ಫರ್ಟಿಲೈರ್ಸ್ ಬಳಕೆ ಇಲ್ಲದೆ ನೈಸರ್ಗಿಕವಾಗಿ ಬೆಳೆದ ಬೆಳೆಗಳು, ನಾಟಿ ಹಸು ಹಾಲು, ಬೆಣ್ಣೆ, ತುಪ್ಪ, ಹುರುಳಿ, ತಣ್ಣೆ, ಅಲಸಂಧೆ ಸೇರಿದಂತೆ ಸಾವಯವ ಆಹಾರ ಪದಾರ್ಥಗಳನ್ನು ತಂದು ರೈತರು ನೇರವಾಗಿ ಮಾರಾಟ ಮಾಡಬಹುದು. ಇಲ್ಲಿ ಯಾವ ದಲ್ಲಾಳಿಗಳು ಇರುವುದಿಲ್ಲ. ರೈತರಿಗೆ ಉತ್ತೇಜನ ಕೊಡುವುದಕ್ಕಾಗಿಯೇ ಇಂತಹ ಸಂತೆ ಆಯೋಜಿಸಲಾಗುತ್ತಿದೆ. ಜಿಲ್ಲೆ ಮತ್ತು ತಾಲೂಕಿನ ರೈತರು ಈ ಸಂತೆಯಲ್ಲಿ ಭಗವಹಿಸಬಹುದು ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು. ಸಾವಯವ ಕೃಷಿ ಪದ್ಧತಿಯಲ್ಲಿ ಕಡಿಮೆ ಇಳುವರಿ ಸಿಗುತ್ತದೆ ಎಂಬುದು ಸತ್ಯವೂ ಅಲ್ಲ, ಸುಳ್ಳು ಅಲ್ಲ. ಸಾವಯವ ಕೃಷಿ ಮಾಡಲು ರೈತರು ಭಯ ಪಡಬಾರದು. ಸಾವಯವ ಬೆಳೆಗೆ ಮಾರುಕಟ್ಟೆಯಲ್ಲಿ ತುಂಬಾ ಬೇಡಿಕೆ ಇದೆ. ಬೇಡಿಕೆ ಇರುವ ಕಾರಣ ಉತ್ತಮ ದರವೂ ಸಿಗಲಿದೆ. ಹೀಗಾಗಿ ರೈತರು ಸಾವಯವ ಕೃಷಿಗೆ ಹೊಂದಿಕೊಳ್ಳಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್. ಕೆಂಪೂಗೌಡ, ತಾಲೂಕು ಅಧ್ಯಕ್ಷ ವೈ.ಪಿ. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಅಶೋಕ, ಉಪಾಧ್ಯಕ್ಷ ಟಿ.ಎಸ್.ಹಾಳಯ್ಯ, ಮುಖಂಡರಾದ ಕೆ.ಟಿ.ಗೋವಿಂದೇಗೌಡ, ಎಚ್.ಎಲ್. ಮುರುಳೀಧರ್, ಪಟೇಲ್ ರಮೇಶ್, ಪಿ.ನಾಗರಾಜು, ಡಿ.ಹುಚ್ಚೇಗೌಡ, ಮೊದಲಿಯಾರ್ ವೆಂಕಟೇಶ್, ಕಾಳೇಗೌಡನಕೊಪ್ಪಲು ವೆಂಕಟೇಶ್, ರಾ.ಸ. ಹನುಮಂತೇಗೌಡ, ದಸಂಸ ಮುಖಂಢ ಎಚ್.ಪಿ. ಸೋಮಶೇಖರ್ ಇದ್ದರು.

ಅರ್ಜಿ ಸಲ್ಲಿಸಿದ ಪ್ರತಿಯೊಬ್ಬರಿಗೂ ನಿವೇಶನ ನೀಡಬೇಕೆಂದು ಒತ್ತಾಯ

ದಲಿತ ಹಕ್ಕುಗಳ ಸಮಿತಿ ವತಿಯಿಂದ ಪ್ರತಿಭಟನೆ

ಮದ್ದೂರು: ನಿವೇಶನ ರಹಿತ ದಲಿತರಿಗೆ ಅರ್ಜಿ ಸಲ್ಲಿಸಲು ಅವದಿ ವಿಸ್ತರಿಸಬೇಕು ಹಾಗೂ ಅರ್ಜಿ ಸಲ್ಲಿಸಿದ ಪ್ರತಿಯೊಬ್ಬರಿಗೂ ನಿವೇಶನ ನೀಡಬೇಕೆಂದು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿ ವತಿಯಿಂದ ನಗರದ ತಾಲೂಕು ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.



ಸಮಿತಿ ಜಿಲ್ಲಾಧ್ಯಕ್ಷ ಆರ್.ಕೃಷ್ಣ ಮಾತನಾಡಿ, ನಿವೇಶನ ರಹಿತರು 2025 ರಂದು ವಿವಿಧ ಗ್ರಾಪಂಗಳಿಗೆ ಅರ್ಜಿ ಸಲ್ಲಿಸಲಾಗಿತ್ತು. ಅರ್ಜಿಗಳನ್ನು ಪುರಸ್ಕೃತ ಮಾಡಿ ಸರ್ಕಾರದಪಟ್ಟಿಗೆಸೇರಿಸಲುಹಾಗೂನಿವೇಶನರಹಿತರಿಗೆ ಅರ್ಜಿ ಸಲ್ಲಿಸಲು ಮೇ.30 ಗಡುವು ನೀಡಲಾಗಿತ್ತು. ಆದರೆ, ಇನ್ನೂ ಕೆಲವರು ಅರ್ಜಿ ಸಲ್ಲಿಸದ ಕಾರಣ ದಿನಾಂಕವಿಸ್ತರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ರಾಜ್ಯದ ದಲಿತರ ಆಸರೆಯಾಗಬೇಕಾದ ಸೂರು ಬಹುತೇಕ ದಲಿತರಿಗೆ ಇಲ್ಲವಾಗಿದೆ. ಒಂದು ಕೋಟಿಗೂ ಹೆಚ್ಚು ದಲಿತರನ್ನು ಬರಿ ಮತದಾನಕ್ಕೆ ಬಳಸಲಾಗುತ್ತಿದೆ. ದಲಿತರ ಅಭಿವೃದ್ಧಿಗೆ ಬರುತ್ತಿರುವ ಅನುದಾನಗಳು ಸಮರ್ಪಕ ಬಳಕೆಯಾಗದೆ ದಲಿತರ ಅಭಿವೃದ್ಧಿ ಮರೀಚಿಕೆಯಾಗುತ್ತಿದೆ ಎಂದು ಆರೋಪಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶದಲ್ಲಿ ಖಾಲಿ ಜಾಗ ಮತ್ತು ಮನೆ ಇಲ್ಲದೆ ಇರುವುದು ಕಂಡುಬರುತ್ತಿದೆ. ಇಡೀ ರಾಜ್ಯದಲ್ಲಿ ದಲಿತರಿಗೆ ನಿವೇಶನ, ಹಿತಲು ಸಹಿತ ಮನೆ, ಗಂಗಾ ಕಲ್ಯಾಣ ಕೊಳವೆ ಬಾವಿ, ಸ್ಮಶಾನ, ಕೃಷಿ ಭೂಮಿ ಮತ್ತು ಸ್ವಯಂ ಉದ್ಯೋಗ ಆರ್ಥಿಕ ಸಹಾಯಕ್ಕಾಗಿ ರಾಜ್ಯಾದ್ಯಂತ ದಲಿತರ ಹಕ್ಕೊತ್ತಾಯ ಭಾಗವಾಗಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಹಲವು ಗ್ರಾಮ ಪಂಚಾಯ್ತಿಗಳ ಮುಂದೆ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರು.

ತಾಲೂಕಿನ ಆತಗೂರು, ಹೆಮ್ಮನಹಳ್ಳಿ, ಸೋಮನಹಳ್ಳಿ ಹಾಗೂ ಸಾದೊಳಲು ಗ್ರಾಮ ಪಂಚಾತಿಗಳಲ್ಲಿ ನವೆಂಬರ್ 17, 2025 ರಂದು ಬೇಡಿಕೆ ಅರ್ಜಿ ಸಲ್ಲಿಸಲಾಗಿದೆ. ಇದುವರೆಗೂ ಗ್ರಾಮ ಪಂಚಾಯಿತಿಗಳು ನಿವೇಶನ ರಹಿತರಿಗೆ ನಿವೇಶನ ನೀಡಲು ಖಾಲಿ ಜಾಗ ಗುರುತಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆಂದರು. ಸೋಮನಹಳ್ಳಿಯ ಮಲ್ಲಯ್ಯನಗರದ ಕೆ.ಡಿ.ಬಿ. ಜಾಗದಲ್ಲಿ 3 ಎಕರೆ ಸರ್ಕಾರಿ ಜಾಗವಿದ್ದು ಹಾಗೂ ಆತಗೂರು ಗ್ರಾಮ ಪಂಚಾಯಿತಿಯ ಅಲ್ಲಂಶೆಟ್ಟಹಳ್ಳಿಯಲ್ಲಿ 1.20 ಎಕರೆ ಸರ್ಕಾರಿ ಜಾಗವಿದ್ದು ಉಳಿದ ಪಂಚಾಯ್ತಿಗಳಲ್ಲಿ ಸರ್ಕಾರಿ ಜಾಗಗಳನ್ನು ಗುರುತಿಸಿ ಅಥವಾ ಜಾಗ ಖರೀದಿ ಮಾಡಿ ನಿವೇಶನ ನೀಡಬೇಕೆಂದು ದಲಿತ ಹಕ್ಕುಗಳ ಸಮಿತಿ ಒತ್ತಾಯಿಸುತ್ತದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ತಾಪಂ ವ್ಯವಸ್ಥಾಪಕ ಮುನೇಂದ್ರಕುಮಾರ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಹಿಂಪಡೆಲಾಯಿತು.

ಸಮಿತಿ ಜಿಲ್ಲಾ ಕಾರ್ಯದರ್ಶಿ ಅಂಬೂಜಿ, ಖಜಾಂಚಿ ಎಂ.ವಿಜೇಂದ್ರಕುಮಾರ್, ಉಪಾಧ್ಯಕ್ಷರಾದ ಕೆ.ಶಿವಲಿಂಗಯ್ಯ, ವೆಂಕಟೇಶ್, ಸಹ ಕಾರ್ಯದರ್ಶಿ ಜಯರಾಮಯ್ಯ, ರೇಣುಕಮ್ಮ ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಚಾಲನೆ

ನಾನು ಸಚಿವ ಸ್ಥಾನದ ಆಕಾಂಕ್ಷಿ ಅಲ್ಲ: ಉದಯ್

ಕೆ.ಎಂ.ದೊಡ್ಡಿ: ನಾನು ಸಚಿವ ಸ್ಥಾನದ ಆಕಾಂಕ್ಷಿಯೂ ಅಲ್ಲ ಆ ರೇಸ್‌ನಲ್ಲಿ ನಾನಿಲ್ಲ ಎಂದು ಶಾಸಕ ಕದಲೂರು ಉದಯ್ ಸ್ಪಷ್ಟಪಡಿಸಿದರು.

ಸಮೀಪದ ಚಂದೂಪುರ ಗ್ರಾಮದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಅಂದಾಜು 6 ಕೋಟಿಗೂ ಹೆಚ್ಚಿನ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ನನಗೆ ಪ್ರೀತಿ ಕೊಟ್ಟು ಆರಿಸಿ ಆಶೀರ್ವದಿಸಿ ನನ್ನ ಕ್ಷೇತ್ರದ ಜನ ಶಾಸಕನನ್ನಾಗಿ ಮಾಡಿ ವಿದಾನಸೌಧಕ್ಕೆ ಕಳುಹಿಸಿದ್ದಾರೆ ಶಾಸಕನಾಗಿ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿವೆ ಅದನ್ನು ಮೊದಲ ಬಗೆ ಅರಿಸುವ ಕೆಲಸ ಮಾಡಬೇಕು ಪಕ್ಷದಲ್ಲಿ ಪಕ್ಷಕ್ಕಾಗಿ ದುಡಿದ ಸಾಕಷ್ಟು ಹಿರಿಯರಿದ್ದು ಮೊದಲು ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದರು. ರಾಜ್ಯದಲ್ಲಿ ಹೊಸ ಸರಕಾರ ಅಸ್ತಿತ್ವಕ್ಕೆ ಬರುತ್ತಿದ್ದು, ಹೀಗಾಗಿ ನಾನು ಯಾವುದೇ ಸ್ಥಾನಮಾನಗಳನ್ನು ನೀಡಿ ಎಂದು ಪಕ್ಷದ ವರಿಷ್ಠರ ಬಳಿ ಬೇಡಿಕೆ ಇಟ್ಟಿಲ್ಲ. ಪಕ್ಷದಲ್ಲಿ 140 ಮಂದಿ ಶಾಸಕರಲ್ಲಿ 100 ಕ್ಕೂ ಹೆಚ್ಚು ಮಂದಿ ಹಿರಿಯ ಶಾಸಕರು ಇದ್ದಾರೆ. ಜತೆಗೆ ಬೇರೆ ಪಕ್ಷಗಳಿಂದಲೂ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದು, ಅವರಿಗೂ ಸಹ ಯಾವುದಾದರೂ ಸ್ಥಾನಮಾನ ನೀಡಬೇಕಿದೆ. ಜಿಲ್ಲೆಗೆ ಒಂದು ಮಂತ್ರಿ



ಸ್ಥಾನ ಸಿಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ, ಮತ್ತೊಂದು ಸಚಿವ ಸ್ಥಾನ ಸಿಕ್ಕರೆ ಅವರ ಅದೃಷ್ಟ ಎಂದು ತಿಳಿಸಿದರು. ಇನ್ನುಳಿದ ಎರಡು ವರ್ಷಗಳಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕಿದ್ದು ಕ್ಷೇತ್ರದಲ್ಲಿ ರೈತರ ಪ್ರಮುಖ ಸಮಸ್ಯೆಯಾಗಿರುವ ನೀರಾವರಿ ಸಮಸ್ಯೆಯಿಂದ ಅವರನ್ನು ಪಾರು ಮಾಡಬೇಕಿದೆ. ಕೆರೆಗಳು ಮತ್ತು ನಾಲೆಗಳು ಸಾಕಷ್ಟು ಅಧ್ವಾನಗೊಂಡಿತ್ತು. ಅವುಗಳನ್ನು ಅಂದಾಜು 800 ಕೋಟಿ ಗೂ ಹೆಚ್ಚಿನ ಅನುದಾನದಲ್ಲಿ ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ ಎಂದರು. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ನನ್ನ ಪ್ರಥಮ ಆದ್ಯತೆಯಾಗಿದೆ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಹುದ್ದೆಗೇರುತ್ತಿರುವುದರಿಂದ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಿರೀಕ್ಷೆಗೂ ಮೀರಿ ಅನುದಾನ ಬಿಡುಗಡೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೈಲೂರು ಚಲುವರಾಜು, ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ರಾಜೀವ್, ಗ್ರಾ.ಪಂ. ಮಾಜಿ ಅಧ್ಯಕ್ಷ ಹೊಸೂರು ಮಹೇಶ್, ಎಸ್. ಐ, ಹೊನ್ನಲಗೆರೆ ಕೆಂಪೇಗೌಡ, ಹಾಗಲಹಳ್ಳಿ ವಿಶ್ವನಾಥ್, ಶೇಖರ್, ಮಡೇನಹಳ್ಳಿ ಪ್ರಸಾದ್, ಕಾವೇರಿ ನೀರಾವರಿ ನಿಗಮದ ಇಇ ನಾಗರಾಜ್, ಎಇಇ ಪ್ರಶಾಂತ್ ಇದ್ದರು.

ಕಿರುಸುದ್ದಿ

ಯೋಗದಿಂದ ಆರೋಗ್ಯ ವೃದ್ಧಿ



ಹಾಸನ: ಮಾಡುವುದರಿಂದ ಮನಸ್ಸಿನ ಹಾಗೂ ದೇಹದ ಆರೋಗ್ಯ ಉತ್ತಮ ಪಡಿಸಿಕೊಳ್ಳಲು ಸಾಧ್ಯ ಎಂದು ಹಾಸನ ಆರ್ಯವೈಶ್ಯ ಮಂಡಳಿ ಅಧ್ಯಕ್ಷರಾದ ಬಿ. ಹೆಚ್.ಸತ್ಯನಾರಾಯಣ ಶೆಟ್ಟಿ ತಿಳಿಸಿದರು. ನಗರದ ಕನ್ನಿಕಾ ಪರಮೇಶ್ವರಿ ದೇವಾಲಯದ ಆವರಣದ ಕಲ್ಯಾಣ ಮಂಠಪದಲ್ಲಿ ಬೆಂಗಳೂರು ಆರ್ಟ್ ಆಫ್ ಲಿವಿಂಗ್ ವತಿಯಿಂದ ಹಾಗೂ ಹಾಸನ ಆರ್ಯವೈಶ್ಯ ಮಂಡಲಿ ವತಿಯಿಂದ ನಡೆದ ಆರು ದಿನಗಳ ಆನಂದದ ಅನುಭೂತಿ ಶಿಬಿರದ ಕಾರ್ಯಕ್ರಮ ಉದ್ಘಾಟಿಸಿದ ಮಾತಾನಾಡಿದರು. ನಾವು ದಿನನಿತ್ಯ ಒತ್ತಡದಲ್ಲಿ ಬದುಕು ಸಾಗಿಸುತ್ತಿದ್ದೇವೆ. ನೆಮ್ಮದಿ ಬದುಕಾಗಿ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಯೋಗ ಪ್ರಕ್ರೀಯೆಗಳು ನಮಗೆ ಸಹಕಾರಿಯಾಗಲಿದೆ. ನಾವು ದಿನವು ಮಾಡುವುದರಿಂದ ಮನಸ್ಸು ಉಲ್ಲಾಸಗೋಳ್ಳುವುದು ಜೋತೆಗೆ ಆರೋಗ್ಯ ಕಾಪಾಡಲಿದೆ ಎಂದರು. ರವಿಶಂಕರ್ ಆರ್ಟ್ ಅಫ್ ಲಿವಿಂಗ್ ಶಿಕ್ಷಕರಾದ ಸುಬ್ರಮಣ್ಯ ಜಿ, ಹಾಗೂ ವೇದಾವತಿ, ರವರು ಆನಂದ ಶಿಭಿರದಿಂದ ಅಗುವ ಪ್ರಯೋಜನನ್ನು ವಿವರವಾಗಿ ತಿಳಿಸಿದರು. ಡಿ. ಡಿ. ಸಿ.ಸದಸ್ಯರಾದ ರಾಜು, ಪ್ರಕಾಶ್ ಸೇರಿದಂತೆ ಇತರರಿದ್ದರು.

ವಿದ್ಯುತ್ ವ್ಯತ್ಯಯ

ಹಾಸನ: ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿರುವ ದ್ವಿ-ವಿದ್ಯುತ್ ಮಾರ್ಗಗಳ ಗೋಪುರಗಳ ಮೇಲೆ ಹಾಲಿ ಇರುವ 66 ಕೆ.ವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಗೋಪುರ ಕಾಮಗಾರಿ ಹಾಗೂ ವಾಹಕ ಎಳೆಯುವ ಕಾಮಗಾರಿಗೆ ಹಿನ್ನೆಲೆ 66 ಕೆ.ವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಲೈಲ್ ಕ್ಲಿಯರ್ ತೆಗೆದುಕೊಳ್ಳುವುದರಿಂದ 66/11 ಕೆ.ವಿ ಅರೇಹಳ್ಳಿ ಮತ್ತು ಹಾನಬಾಳು ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ 11 ಕೆ.ವಿ ಪೂರಕಗಳ ಗ್ರಾಹಕರಿಗೆ ಜೂ. 2, 4, 8, 10, 12, 15, 17, 18, 22 ಮತ್ತ 23 ರಂದು ಬೆಳಗ್ಗೆ 8 ಗಂಟೆಯಿಂದ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಪ್ರೋತ್ಸಾಹಧನಕ್ಕೆ ಅರ್ಜಿ

ಹಾಸನ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಎಸ್.ಎಸ್.ಎಲ್.ಸಿ. ಮತ್ತು ಮೆಟ್ರಿಕ್ ನಂತರದ ಕೋರ್ಸ್‌ಗಳಾದ ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಭಾಗಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 2025-2026ನೇ ಸಾಲಿನ ಶೈಕ್ಷಣಿಕ ವರ್ಷದ ಸಾಲಿನಲ್ಲಿ ಪ್ರೋತ್ಸಾಹಧನ ಮಂಜೂರು ಮಾಡಲಾಗುತ್ತಿದೆ, ಅರ್ಹ ವಿದ್ಯಾರ್ಥಿಗಳು ಆನ್ ಲೈನ್ ವಿಳಾಸ ಅರ್ಜಿ ಸಲ್ಲಿಸಿ ದಾಖಲಾತಿಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರಿಂದ ದೃಡೀಕರಿಸಿ, ಹಾಸನ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಲು ತಿಳಿಸಿದ್ದಾರೆ.

ವಿಶೇಷ ಸೂಚನೆ: ಏಪ್ರೀಲ್ 2026ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡ 60 ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಆಧಾರ್ ಸೀಡ್ ಮಾಡಿಸಿರಬೇಕು, ಒಂದು ವೇಳೆ ಆಧಾರ್ ಸೀಡ್ ಆಗದೆ ಇರುವ ವಿದ್ಯಾರ್ಥಿಗಳು ಆಧಾರ್ ಸೀಡ್ ಮಾಡಿಸಿ ಕೊಂಡು ಅರ್ಜಿ ಸಲ್ಲಿಸಬೇಕು (ಬ್ಯಾಂಕ್‌ಗೆ ತೆರಳಿ ನಿಮ್ಮ ಆಧಾರ್ ನಂಬರ್‌ಗೆ ಎನ್. ಪಿ.ಸಿ.ಐ. ಮ್ಯಾಪ್ ಮಾಡಿಸಿ ನಂತರ ಅರ್ಜಿ ಸಲ್ಲಿಸಬೇಕು.

ಅರ್ಜಿ ಆಹ್ವಾನ

ಹಾಸನ: ಹಾಸನದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು 2026 ನೇ ಸಾಲಿನಲ್ಲಿ ವಿವಿಧ ವೃತ್ತಿ ಕೋರ್ಸ್‌ಗಳಲ್ಲಿ ಐ.ಟಿ.ಐ ತರಬೇತಿಗಾಗಿ ಎಸ್.ಎಸ್.ಎಲ್.ಸಿ ಉತ್ತೀರ್ಣ ಮತ್ತು ಅನುತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ, ಆನ್-ಲೈನ್ ಪ್ರವೇಶದ ನಂತರದ ಉಳಿದಿರುವ ಸ್ಥಾನಗಳ ಭರ್ತಿಗಾಗಿ ಆಫ್-ಲೈನ್ ನಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ. ಎಲೆಕ್ಟ್ರಾನಿಕ್ ಮೆಕಾನಿಕ್, ಟರ್ನರ್, ಎಲೆಕ್ಟ್ರೀಷಿಯನ್, ಆರ್.ಎ.ಸಿ ಟೆಕ್ನಿಷಿಯನ್, ಫಿಟ್ಟರ್, ಮಷಿನಿಸ್ಟ್, ಕೋಪಾ, ವೆಲ್ಡರ್, ಎಂ.ಇ.ವಿ, ಸಿ.ಎನ್.ಸಿ ಟೆಕ್ನಿಷಿಯನ್ ಸೇರಿದಂತೆ ಒಟ್ಟು 14 ವೃತ್ತಿ ಕೋರ್ಸ್‌ಗಳಲ್ಲಿ ಸೀಟು ಲಭ್ಯವಿದ್ದು, ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ, ಐ.ಟಿ.ಐ ತರಬೇತಿಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಂಸ್ಥೆಯಲ್ಲಿ ಖುದ್ದು ಜೂ.01 ರಿಂದ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಯನ್ನು ಹಾಸನ ಸರ್ಕಾರಿ ಐ.ಟಿ.ಐ ಸಂಸ್ಥೆಗೆ ಬೇಟಿ ನೀಡಿ ಪಡೆಯಬಹುದಾಗಿದೆ.



ಅರಕಲಗೂಡು ತಾಲೂಕು ಮಲ್ಲಿಪಟ್ಟಣದಲ್ಲಿ ವಿವಿಧ ರಸ್ತೆ ಕಾಮಗಾರಿಗೆ ಶಾಸಕ ಎ.ಮಂಜು ಚಾಲನೆ ನೀಡಿದರು.

ವಿಶಿಷ್ಟಚೇತನರಿಗೆ ವಾಹನ ವಿತರಣೆ

ಬೇಲೂರು: ವಿಶಿಷ್ಟಚೇತನರ ಜೀವನಮಟ್ಟ ಸುಧಾರಣೆ ಹಾಗೂ ಸ್ವಾವಲಂಬಿ ಬದುಕಿಗೆ ನೆರವಾಗುವ ಉದ್ದೇಶದಿಂದ 2025- 26ನೇ ಸಾಲಿನಲ್ಲಿ ವಿಶಿಷ್ಟಚೇತನರಿಗೆ ಒಟ್ಟು 11 ವಾಹನಗಳನ್ನು ವಿತರಿಸಲಾಗುತ್ತಿದೆ ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು.

ತಾಲೂಕು ಪಂಚಾಯತಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ಷೇತ್ರವಾರು ಕಡುಬಡವರು ಹಾಗೂ ನಿರ್ಗತಿಕರನ್ನು ಗುರುತಿಸಿ, ಅತ್ಯಗತ್ಯವಿ ರುವ ಅರ್ಹ ಫಲಾನುಭವಿ ಗಳಿಗೆ ಪ್ರಾಮಾಣಿಕವಾಗಿ ಈ ಸೌಲಭ್ಯ ಒದಗಿಸಲಾಗುತ್ತಿದೆ ಎಂದು ತಿಳಿಸಿದರು. ಈ ಯೋಜನೆಗಾಗಿ ಸುಮಾರು 11 ಲಕ್ಷ ರೂ. ಗಳ ಅನುದಾನವನ್ನು ಬಳಸಲಾಗಿದೆ ಎಂದರು.ಫಲಾನುಭವಿಗಳಿಗೆ ಕೇವಲ ವಾಹನಗಳನ್ನು ವಿತರಿಸು ವುದಷ್ಟೇ ಅಲ್ಲದೆ, ಅವರಿಗೆ ಹಾರ ಮತ್ತು ಶಾಲು ಹಾಕಿ ಗೌರವಿಸುವ ಮೂಲಕ ಆತ್ಮಸ್ಥೈರ್ಯ ತುಂಬುವ ಕೆಲಸವೂ ನಡೆಯುತ್ತಿದೆ ಎಂದು ಹೇಳಿದರು. ಈ ಯೋಜನೆಯಲ್ಲಿ ಯಾವುದೇ ಜಾತಿ,ಧರ್ಮ ಅಥವಾ ವರ್ಗದ ತಾರತ ಮ್ಯ ಇಲ್ಲ. ಎಲ್ಲಾ ಸಮಾಜ ಮತ್ತು ಧರ್ಮದ ಜನರಿಗೆ ಸಮಾನವಾಗಿ ಸೌಲಭ್ಯ ತಲುಪಿಸುವುದು ತಮ್ಮ ಕರ್ತವ್ಯವಾಗಿದೆ ಎಂದು ಶಾಸಕ ಸುರೇಶ್ ಹೇಳಿದರು. ಕೊನೆಯಲ್ಲಿ ಶ್ರೀ ಚನ್ನ ಕೇಶವ ಸ್ವಾಮಿಯನ್ನು ಸ್ಮರಿಸಿದ ಅವರು,ಫಲಾನು ಭವಿಗಳು ಹಾಗೂ ಅವರ ಕುಟುಂಬಗಳಿಗೆ ಆಯಸ್ಸು, ಆರೋಗ್ಯ, ಸುಖ-ಶಾಂತಿ ಮತ್ತು ಭಾಗ್ಯವನ್ನು ಕರುಣಿಸಿ, ನೆಮ್ಮದಿಯ ಜೀವನ ನಡೆಸಲು ದೇವರು ಆಶೀ ರ್ವದಿಸಲಿ ಎಂದು ಹಾರೈಸಿದರು.ಈ ಸಂದರ್ಭದಲ್ಲಿ ವಿವಿ ದೋದ್ದೇಶಪುನರ್ವಸತಿ ಕಾರ್ಯಕರ್ತೆ ತಾಹಿರಾ ಭಾನು,,ಕೃಷಿ ಇಲಾಖೆ ನಿರ್ದೇಶಕ ಕಾಂತರಾಜು, ಪಿಡಿಒ ಅಶೋಕ್ ಕುಮಾರ್, ಬಿಎಸ್ ಪಿ ಮುಖಂಡರಾದ ಗಂಗಾಧರ್ ಬಹುಜನ್, ಪ್ರಸನ್ನ ಇತರರು ಇದ್ದರು.



ಬೇಲೂರು ತಾಲೂಕು ಪಂಚಾಯತಿ ಆವರಣದಲ್ಲಿ 2025- 26ನೇ ಸಾಲಿನ ವಿಶಿಷ್ಟಚೇತನರಿಗೆ ಒಟ್ಟು 11 ವಾಹನಗಳನ್ನು ಶಾಸಕ ಎಚ್. ಕೆ. ಸುರೇಶ್ ವಿತರಿಸಿದರು.

ಭಾಷೆಯ ಮೇಲಿನ ಹಿಡಿತವೇ ಜೀವನದ ಯಶಸ್ಸಿನ ಮೂಲ: ಮಲ್ಲೇಶ್ ಗೌಡ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸಕಲೇಶಪುರ: ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಗೆಮಾತ್ರ ಸೀಮಿತರಾಗದೆ ಭಾಷೆ, ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್. ಮಲ್ಲೇಶ್ ಗೌಡ ಹೇಳಿದರು.

ಹೆತ್ತೂರು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಭಾಷೆಯ ಮೇಲಿನ ಹಿಡಿತ ಅತ್ಯಗತ್ಯವಾಗಿದೆ. ಭಾಷಾ ನೈಪುಣ್ಯತೆ ವ್ಯಕ್ತಿಯ ಚಿಂತನೆ, ಅಭಿವ್ಯಕ್ತಿ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿದ್ದು, ಜೀವನದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ನೆರವಾಗುತ್ತದೆ. ಕೇವಲ ಪ್ರಶ್ನೆಗಳಿಗೆ ಉತ್ತರ ಬರೆದು ಅಂಕ ಗಳಿಸುವುದೇ ಶಿಕ್ಷಣದ ಉದ್ದೇಶವಲ್ಲ. ಭಾಷೆಯಲ್ಲಿ ವಾಕ್ಯ ರೂಪದಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಮದನ್ ಗೌಡ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಅಂಕಗಳು ಮಾತ್ರ ಯಶಸ್ಸಿನ ಮಾನದಂಡವಲ್ಲ. ಉತ್ತಮ ವ್ಯಕ್ತಿತ್ವ ಹಾಗೂ ಮಾನವೀಯ ಮೌಲ್ಯಗಳೇ ಜೀವನದ ನಿಜವಾದ ಸಂಪತ್ತು. ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸುವುದರ ಜತೆಗೆ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆಂಚೇಗೌಡ ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಹಾಗೂ ಸಮಾಜಮುಖಿ ಹೋರಾಟಗಾರರು ಮತ್ತು ಶಿಕ್ಷಕರನ್ನು ಗೌರವಿಸುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಎಂದರು.

ರಾಜ್ಯ ಮಟ್ಟದ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ದಲಿತ ಮುಖಂಡ ಎಚ್.ಎನ್. ಅಣ್ಣಯ್ಯ ಹಾಗೂ 32 ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗುತ್ತಿರುವ ದೇವಕಿ ಅವರನ್ನು ಸನ್ಮಾನಿಸಲಾಯಿತು.

ಹೆತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಶ್ಮಿತಾ ಪವನ್, ಕೋಣಬನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಮುಖ್ಯ ಶಿಕ್ಷಕಿ ದೇವಕಿ, ಮಲೆನಾಡು ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಡಾ. ಸಾಗರ್ ಜಾನಕೆರೆ, ಸಮಾಜಸೇವಕ ಎಚ್.ವಿ. ಸೋಮಶೇಖರ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಇ. ನಾಗಭೂಷಣ, ರಾಜ್ಯ ಕಾರ್ಮಿಕ ಘಟಕದ ಸದಸ್ಯ ಬಿ.ಟಿ. ವಿಜಯ್ ಕುಮಾರ್, ಎಚ್.ಎನ್. ಅಣ್ಣಯ್ಯ, ಎಚ್.ಜಿ. ದೇವರಾಜ್ ಉಪಸ್ಥಿತರಿದ್ದರು.



ಭಾಷಾ ಶಿಕ್ಷಣ ಕಡೆಗಣನೆಗೆ ಆತಂಕ

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಭಾಷಾ ವಿಷಯಗಳಿಗೆ ನೀಡಲಾಗುತ್ತಿದ್ದ ಮಹತ್ವ ಕಡಿಮೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡುವ ಭರದಲ್ಲಿ ಭಾಷಾ ಶಿಕ್ಷಣ ಕಡೆಗಣನೆಗೆ ಒಳಗಾಗುತ್ತಿದೆ. ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಷೆಯ ಮಹತ್ವವನ್ನು ಅರಿತು ಅದಕ್ಕೆ ಅಗತ್ಯವಾದ ಪ್ರಾಮುಖ್ಯತೆ ನೀಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್. ಎಲ್. ಮಲ್ಲೇಶ್ ಗೌಡ ಹೇಳಿದರು.

ಧರ್ಮಸೇನಗೆ ಸಚಿವ ಸ್ಥಾನ ನೀಡಲು ಒತ್ತಾಯ



ಹಾಸನ: ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್. ಧರ್ಮಸೇನ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿ ನಂತರ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಕೆಪಿಸಿಸಿ ರಾಜ್ಯ ಸಂಚಾಲಕ ಹಾಗೂ ಎಸ್‌ಸಿ/ಎಸ್‌ಟಿ ವಿಭಾಗದ ಜಿಲ್ಲಾ ಮಾಧ್ಯಮ ವಕ್ತಾರ ಎಂ.ಜೆ. ಲಕ್ಷಣ್ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್. ಧರ್ಮಸೇನ ಅವರು ಸುಮಾರು ನಾಲ್ಕು ದಶಕಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಅಪಾರ ರಾಜಕೀಯ ಅನುಭವ ಗಳಿಸಿದ್ದಾರೆ ಎಂದು ಹೇಳಿದರು.

ಟಿ. ನರಸೀಪುರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸೇರಿದಂತೆ ಹಲವು ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವ ಧರ್ಮಸೇನ ಅವರು, ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಹಾಗೂ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ವಿವಿಧ ನಿಗಮ-ಮಂಡಳಿಗಳ ನಿರ್ದೇಶಕರಾಗಿ ಮತ್ತು ವಿಧಾನ ಮಂಡಲದ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿದ್ದಾರೆ ಎಂದು ವಿವರಿಸಿದರು. ಪ್ರಸ್ತುತ ಅವರು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷರಾಗಿ 4 ವರ್ಷಕ್ಕೂ ಅಧಿಕ ಅವಧಿಯಿಂದ ಕಾರ್ಯನಿರ್ವಹಿಸುತ್ತಿದ್ದು, ಪರಿಶಿಷ್ಟ ಜಾತಿ ವಿಭಾಗದ ರಾಷ್ಟ್ರೀಯ ಸಂಯೋಜಕ ಹಾಗೂ ಕೇರಳ ರಾಜ್ಯದ ಉಸ್ತುವಾರಿ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದಾರೆ ಎಂದು ಹೇಳಿದರು.

ಮೈಸೂರು ವಿಭಾಗದ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಆದಿಜಾಂಬವ ಎಡಗೈ ಸಮುದಾಯದ ಜನಪ್ರತಿನಿಧಿಗಳಿಗೆ ಸಮರ್ಪಕ ಅವಕಾಶ ದೊರೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ಆ ಸಮುದಾಯದ ಪ್ರಭಾವಿ ನಾಯಕನಾಗಿರುವ ಧರ್ಮಸೇನ ಅವರಿಗೆ ಎಂಎಲ್‌ಸಿ ಸ್ಥಾನ ನೀಡಿ, ಸಚಿವ ಸಂಪುಟದಲ್ಲೂ ಅವಕಾಶ ನೀಡಿದರೆ ತಳ ಸಮುದಾಯ ಅದರಲ್ಲೂ ಎಡಗೈ ಸಮುದಾಯಕ್ಕೆ ನ್ಯಾಯ ದೊರೆತಂತೆ ಆಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಇಂಟೆಕ್ ಜಿಲ್ಲಾಧ್ಯಕ್ಷ ಕಬ್ಬಳ್ಳಿ ರಾಮಚಂದ್ರ, ಮುಖಂಡರಾದ ಎಚ್. ಆರ್. ಮಹದೇವ, ಹರೀಶ್, ಸೋಮಣ್ಣ, ಧರ್ಮ ಇದ್ದರು.

ಜ್ಞಾನ ಸಂಪಾದಿಸುವಷ್ಟು ವಿದ್ಯೆ ಕಲ್ಪಿಸಿದರೆ ಸಾಕು: ಸ್ವಾಮೀಜಿ

ಚನ್ನರಾಯಪಟ್ಟಣ: ವಿದ್ಯೆಯನ್ನು ಅರಸಿ ಶಿಸ್ತು, ಶ್ರದ್ದೆ ಹಾಗೂ ಭಕ್ತಿಯಿಂದ ಮುನ್ನಡೆದವರು ಜೀವನದಲ್ಲಿ ಎಂದಿಗೂ ಸೋಲು ಕಾಣಲು ಸಾಧ್ಯವಿಲ್ಲ ಎಂದು ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ನುಗ್ಗೇಹಳ್ಳಿ ಪುರವರ್ಗ ಹಿರೇಮಠದಲ್ಲಿ ಪ್ರಸ್ತುತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.96 ಅಂಕಗಳನ್ನು ಪಡೆದು ಉತ್ತೀರ್ಣಗೊಂಡಿರುವ ವಿದ್ಯಾರ್ಥಿ ಅಭ್ಯುದಯ್ ಅವರಿಗೆ ಅಭಿನಂದಿಸಿ ಮಾತನಾಡಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಮೆಟ್ಟಿಲು ಎಂದರು.

ಸರ್ಕಾರಿ ಉನ್ನತ ಹುದ್ದೆಗಳನ್ನು ಅರಸಿ ತಮ್ಮ ಮಕ್ಕಳಿಗೆ ಹೆಚ್ಚು ಹಣ ವ್ಯಯ ಮಾಡಿ ವಿದ್ಯೆ ಕೊಡಿಸುವ ಬದಲು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ತಲೆ ಎತ್ತಿ ನಿಂತು ಮೌಲ್ಯಯುತ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಜ್ಞಾನ ಸಂಪಾದಿಸುವಷ್ಟು ವಿದ್ಯೆ ಕಲ್ಪಿಸಿದರೆ ಸಾಕು ಎಂದು ಪಾಲಕರಿಗೆ ಕಿವಿ ಮಾತು ಹೇಳಿದರು. ಓದಿದ ಎಲ್ಲರಿಗೂ ಸರ್ಕಾರಿ ಉದ್ಯೋಗ ಸಿಗುವುದು ಸುಲಭದ ಮಾತಲ್ಲ. ಬದಲಿಗೆ ಅಪಾರ ಜ್ಞಾನ ಸಂಪತ್ತು ಪಡೆದು ವಿದ್ಯಾರ್ಥಿಗಳು ಸ್ವಂತ ಕಾಲ ಮೇಲೆ ನಿಂತು ಉದ್ಯೋಗ ಸೃಷ್ಟಿಸಿ ಇತರರಿಗೂ ಉದ್ಯೋಗ ನೀಡುವಂತೆ ಬೆಳೆಯಬೇಕು. ಉದ್ಯೋಗ ಸೃಷ್ಟಿಸಲು ಅನೇಕ ಕ್ಷೇತ್ರಗಳು ಕಣ್ಣ ಮುಂದಿವೆ. ಅವುಗಳನ್ನು ಗ್ರಹಿಸುವ ಶಕ್ತಿ ಶಿಕ್ಷಣದಲ್ಲಿದೆ ಎಂದು ತಿಳಿಸಿದರು. ರಾಮಕೃಷ್ಣ ಆಶ್ರಮದ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದು ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ96 ರಷ್ಟು ಅಂಕಗಳನ್ನು ಗಳಿಸಿ ಹುಟ್ಟಿದ ಊರು ಹಾಗೂ ಹೆತ್ತವರಿಗೆ ಕೀರ್ತಿ ತಂದಿರುವ ನುಗ್ಗೇಹಳ್ಳಿ ಗ್ರಾಮದ ನೇತ್ರ ಮತ್ತು ಎಂ.ಉಮೇಶ್ ಅವರ ಸುಪುತ್ರ ವಿದ್ಯಾರ್ಥಿ ಅಭ್ಯುದಯ್ ಅವರಿಗೆ ಶ್ರೀಗಳು ಅಭಿನಂದಿಸಿ ಆಶೀರ್ವಾದ ನೀಡಿದರು.

ಶ್ರೀಮಠದ ಸದ್ಭಕ್ತರು ಹಾಗೂ ನೇತ್ರ, ಎಂ.ಉಮೇಶ್ ಮತ್ತು ಕುಟುಂಬ ವರ್ಗ ಹಾಜರಿದ್ದರು.



ಪರಿಸರ ರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ: ಜಯಣ್ಣ

ಅರಸೀಕೆರೆ: ಪರಿಸರ ರಕ್ಷಣೆ ಪ್ರತಿಯೊಬ್ಬರ ಹೊಣೆ ಎಂಬ ಆಶಯದೊಂದಿಗೆ ಆರಂಭವಾದ ಕರ್ನಾಟಕ ಪರಿಸರ ರಕ್ಷಣಾ ವೇದಿಕೆ ಗ್ರಾಮೀಣ ಭಾಗದಿಂದ ಹಿಡಿದು ನಗರ ವ್ಯಾಪ್ತಿಯಲ್ಲೂ ಜನರಲ್ಲಿ ಪರಿಸರ ಜಾಗೃತಿ ಅರಿವು ಮೂಡಿಸಲಾಗುತ್ತದೆ ಎಂದು ಕರ್ನಾಟಕ ಹಸಿರು ಪರಿಸರ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ. ಸಿ.ಜಯಣ್ಣ ಹೇಳಿದರು.



ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಎಸ್. ವಿಜಯಕುಮಾರ್ ಅವರನ್ನು ಘೋಷಿಸಿ ಮಾತನಾಡಿದ ಅವರು, ಪರಸರ ರಕ್ಷಣಾ ವೇದಿಕೆ ರಾಜ್ಯ ದ ಬಹುತೇಕ ಭಾಗ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು ಹಸಿರು ಕ್ರಾಂತಿಯ ಸಂಕಲ್ಪದೊಂದಿಗೆ ಪರಿಸರ ರಕ್ಷಣೆಯಲ್ಲಿ ಮನುಷ್ಯರ ಪಾತ್ರ ಮಹತ್ವದ್ದಾಗಿದೆ. ಗಿಡ-ಮರ ಪ್ರಾಣಿ-ಪಕ್ಷಿ ಹೀಗೆ ಭೂಮಿ ಮೇಲೆ ವಾಸಿಸುವ ಪ್ರತಿಯೊಂದು ಜೀವ ಸಂಕುಲದ ಮಹತ್ವ ಕುರಿತು ಸಂಘವು ಜಾಗೃತಿ ಮೂಡಿಸುತ್ತಿದೆ ಎಂದರು. ತಾಲೂಕು ಘಟಕದ ನೂತನ ಅಧ್ಯಕ್ಷ ಎಸ್. ವಿಜಯಕುಮಾರ್ ಮಾತನಾಡಿ, ನಾಗಪುರಿ ಅರಣ್ಯ ಪ್ರದೇಶ ಪ್ರದೇಶವು ಚಿರತೆ, ಕರಡಿ, ಸಾರಂಗ ಒಳಗೊಂಡಂತೆ ನೂರಾರು ಬಗೆಯ ಕಾಡುಪ್ರಾಣಿ ಮತ್ತು ಪಕ್ಷಿಗಳ ಆಶ್ರಯ ತಾಣವಾಗಿದ್ದು ತಾಲೂಕಿನ ಅದರಲ್ಲೂ ಯುವ ಜನತೆಗೆ ಇವುಗಳನ್ನು ಪರಿಚಯಿಸಿಕೊಡುವ ಜೊತೆಗೆ ಹಸಿರು ಪರಿಸರ ರಕ್ಷಣೆಗೆ ಪ್ರೇರೆಪಿಸುವ ಕೆಲಸವನ್ನು ನೂತನ ತಾಲ್ಲೂಕು ಘಟಕ ಮಾಡಲಿದೆ ಎಂದು ಭರವಸೆ ನೀಡಿದರು. ಈ ವೇಳೆ ಹಸಿರು ಕರ್ನಾಟಕ ಪರಿಸರ ರಕ್ಷಣಾ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಶುಕುಮಾರ್, ರಾಜ್ಯ ಸಂಚಾಲಕರು ಮೆಹಬೂಬ್ ಪಾಷಾ, ಅರಸೀಕೆರೆ ಗ್ರಾಮಾಂತರ ಅಧ್ಯಕ್ಷ ನರೇಂದ್ರ ಕುಮಾರ್, ಪ್ರಧಾನ ಕಾರ್ಯದರ್ಶಿ ಪರ್ವೀಜ್ ನೂರಿ ಇದ್ದರು.

ವಿವೇಕೋಪಾಸನೆಯಿಂದ ಉತ್ಕೃಷ್ಟ ಭವಿಷ್ಯ ನಿರ್ಮಾಣ

ಹಾಸನ: ನಾವು ಕೇವಲ ಅನ್ನದ ಮಟ್ಟದ ಅಗತ್ಯ ಪೂರೈಕೆಯಲ್ಲೇ ತೃಪ್ತಿಪಡಬಾರದು, ವಿವೇಕವನ್ನು ಉಪಾಸನೆ ಮಾಡಿದರೆ ಮಾತ್ರ ಮನುಷ್ಯನಿಗೆ ಉತ್ಕೃಷ್ಟ ಭವಿಷ್ಯ ದೊರೆಯುತ್ತದೆ ಎಂದು ತುಮಕೂರು ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತೀ ಮಹಾರಾಜ್ ನುಡಿದರು. ನಗರದ ಹೇಮಾವತಿನಗರದ ಶ್ರೀ ಗಾಯತ್ರಿಭವನದಲ್ಲಿಶ್ರೀಮತಿಎಂ.ಎನ್.ಚಂದ್ರಲೇಖ ಸುಬ್ರಹ್ಮಣ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಛಾತ್ರೋಪಯೋಗೀ ಸಂಕಲ್ಪಿತ 9ನೇ ವಾರ್ಷಿಕ ಆರ್ಥಿಕ ಸಹಾಯ ವಿತರಣೆ' ಸಮಾರಂಭದಲ್ಲಿ ದಿವ್ಯಸಾನ್ನಿಧ್ಯ ವಹಿಸಿ, ವಿವೇಕೋಪಾಸನೆಯಿಂದ ಉತ್ಕೃಷ್ಟ ಭವಿಷ್ಯ ಎಂಬ ವಿಷಯದ ಕುರಿತು ಅವರು ಮಾರ್ಗದರ್ಶನ ಮಾಡಿದರು. ಯಾವುದು ಒಳಿತು, ಯಾವುದು ಕೆಡುಕು ಎನ್ನುವುದರ ಪರಾಮರ್ಶೆಯೇ ವಿವೇಕ. ಶಂಕರಾಚಾರ್ಯರು ಹೇಳಿದಂತೆ ಯುಕ್ತಾಯುಕ್ತಾ ವಿವೇಕ ನಮ್ಮಲ್ಲಿರಬೇಕು. ನೀವು ವಿವೇಕದಿಂದ ನಡೆದುಕೊಂಡರೆ ಪ್ರಪಂಚ ಗೌರವಿಸುತ್ತದೆ ಎಂದು ಕಿವಿಮಾತು ಹೇಳಿದರು. ಮೂರ್ಖರಿಗೆ ದೊಡ್ಡ ಪ್ರಮಾಣದ ಅನುಯಾಯಿಗಳ ಪಡೆ ಇದೆ ಎನ್ನುವ ಮಾತಿದೆ. ಮೂರ್ಖರು ಎಷ್ಟು ಸಂಘಟಿತರಾಗುತ್ತಾರೋ ವಿವೇಕವಂತರು ಅಷ್ಟೇ ಸುರಕ್ಷಿತರಾಗುತ್ತಾರೆ. ವಿವೇಕ ಎಂದರೆ ಕೇವಲ ಬುದ್ಧಿಶಕ್ತಿ, ನಾಜೂಕುತನ, ಚಮತ್ಕಾರ ಅಥವಾ ಯಶಸ್ಸಿ ನ ವೈಭವ ಆಚರಣೆ ಅಲ್ಲ. ನಾನು ಇಷ್ಟಪಟ್ಟಿದ್ದನ್ನು ಯೋಗ್ಯ ರೀತಿಯಲ್ಲಿ ಪಡೆದು ಯೋಗ್ಯತೆಯನ್ನು ಊರ್ಜಿತಗೊಳಿಸಿಕೊಳ್ಳುವುದೇ ನಿಜವಾದ ವಿವೇಕ. ವಿವೇಕವನ್ನು ಕುರಿತು ಧ್ಯಾನಿಸುವುದೇ ಜೀವನದ ಚರಮ ಕರ್ತವ್ಯ. ವಿವೇಕಪೂರ್ಣವಾಗಿ ಯೋಚನೆ ಆರಂಭಿಸಿದಾಗ ಎಲ್ಲ ದೌರ್ಬಲ್ಯಗಳನ್ನು ಕೊಡವಿ ಹಾಕಿ ಮುಂದೆ ಹೋಗಲು ಸಾಧ್ಯ. ಉತ್ತಮ ಹವ್ಯಾಸ ಹಾಗೂ ಅಭ್ಯಾಸಗಳು ನಮ್ಮನ್ನು ತಪ್ಪುಗಳಿಂದ ಮುಕ್ತವಾಗಿ ಮಾಡುತ್ತವೆ ಎಂದು ಸ್ವಾಮೀಜಿ ವಿವರಿಸಿದರು.



ಕಾರ್ಯಕ್ರಮದಲ್ಲಿ ಆಯ್ದ ವಿದ್ಯಾರ್ಥಿಗಳಿಗೆ ಹಾಗೂ ಸಂಸ್ಥೆಗಳಿಗೆ 'ಸಂಕಲ್ಪಿತ ಸೇವಾಫಲ' (ಆರ್ಥಿಕ ಸಹಾಯ) ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಗಣ್ಯರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ, ನೌಕರರನ್ನು ಕಾಯಂ ಮಾಡಲು ಆಗ್ರಹ

ವಿವಿಧ ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆ

ಹಾಸನ: ಕಾರ್ಮಿಕರ ಕನಿಷ್ಠ ವೇತನವನ್ನು ತಿಂಗಳಿಗೆ 36ಸಾವಿರಕ್ಕೆ ಹೆಚ್ಚಿಸಬೇಕು ಹಾಗೂ ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಬೇಕು ಹಾಗೂ ಗುತ್ತಿಗೆ ನೌಕರರನ್ನು ಕಾಯಂ ಮಾಡಬೇಕಕು ಎಂದು ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳು ನಗರದಲ್ಲಿ ಪ್ರತಿಭಟನೆ ನಡೆಸಿದವು.



ಹೇಮಾವತಿ ಪ್ರತಿಮೆ ಬಳಿಯಿಂದ ಕೆಂಪು ಬಾವುಟ ಹಿಡಿದು ಮೆರವಣಿಗೆ ಹೊರಟ ನೂರಾರು ಮಂದಿ, ನಮ್ಮ ಹಕ್ಕುಗಳನ್ನು ನಮಗೆ ಕೊಡಿ, ದುಡಿಮೆ ತಕ್ಕಂತೆ ವೇತನ ಕೊಡಿ ಎಂದು ಒತ್ತಾಯಿಸಿದರು. ಅಲ್ಲಿಂದ ಡಿಸಿವರೆಗೂ ಮೆರವಣಿಗೆ ಸಾಗಿ, ನಂತರ ಕೆಲಹೊತ್ತು ಧರಣಿ ನಡೆಸಿದರು.

ಈ ವೇಳೆ ಮಾತನಾಡಿದ ಮುಖಂಡರು, ಸುಪ್ರೀಂಕೋರ್ಟ್ ತೀರ್ಮಾನದಂತೆ ವೈಜ್ಞಾನಿಕವಾಗಿ ಕನಿಷ್ಠ ವೇತನ ಕೊಡಬೇಕು. ಎಲ್ಲ ಗುತ್ತಿಗೆ ಕಾರ್ಮಿಕರನ್ನು ಕಾಯಂ ಮಾಡಬೇಕು. ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡಬೇಕು ಎಂದು ಒತ್ತಾಯಿಸಿದರು. ಮೊನ್ನೆಯಷ್ಟೇ ರಾಜ್ಯ ಸರ್ಕಾರ ಕನಿಷ್ಠ ವೇತನ ಜಾರಿ ಮಾಡಿರುವುದು ಸ್ವಾಗತಾರ್ಹ. ಆದರೆ ಅದರಿಂದ ಪ್ಲಾಂಟೇಶನ್, ಗಾರ್ಮೆಂಟ್ಸ್ ಕಾರ್ಮಿಕರನ್ನು ಕೈಬಿಡಲಾಗಿದೆ. ಎಲ್ಲ ಕಾರ್ಮಿಕರನ್ನು ಸೇರಿಸಿ ಕನಿಷ್ಠ ವೇತನ ಪರಿಷ್ಕರಣೆ ಮಾಡಬೇಕು ಎಂದು ಆಗ್ರಹಿಸಿದರು. ಬಳಕೆಯ ವಿದ್ಯುತ್ ಯೂನಿಟ್, ಆಹಾರದ ಅವಶ್ಯಕತೆ, ಬಟ್ಟೆಯ ಅವಶ್ಯಕತೆ, ವಸತಿ ಬಾಡಿಗೆ, ಇಂಧನ ಮತ್ತು ಇತರೆ ವೆಚ್ಚಗಳು, ಸಾಮಾಜಿಕ ಭದ್ರತೆ ಮತ್ತು ಶಿಕ್ಷಣಕ್ಕೆ ತಗುಲುವ ವೆಚ್ಚವನ್ನು ಲೆಕ್ಕಾಚಾರ ಹಾಕಿ ಕನಿಷ್ಠ ವೇತನ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು. ದೇಶವು ತೀವ್ರ ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಕೇಂದ್ರ ಸರ್ಕಾರದ ತಪ್ಪು ಆರ್ಥಿಕ ನೀತಿಗಳಿಂದ ಉತ್ಪಾದನಾ ವಲಯ ಕುಸಿತ ಕಂಡಿದೆ ಎಂದು ಆರೋಪಿಸಿದರು. ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ದೇಶದ ಆರ್ಥಿಕತೆ ಅಭಿವೃದ್ಧಿಯ ಹಾದಿಯಲ್ಲಿದೆ ಎಂಬ ಸರ್ಕಾರದ ವಾದ ವಾಸ್ತವಕ್ಕೆ ದೂರವಾಗಿದೆ ಎಂದು ಟೀಕಿಸಿದರು.

ದೇಶದ ಒಟ್ಟು ಸಂಪತ್ತಿನ ಶೇ.90ರಷ್ಟು ಭಾಗ ಕೇವಲ ಶೇ.10ರಷ್ಟು ಶ್ರೀಮಂತರ ಕೈಯಲ್ಲಿ ಕೇಂದ್ರೀಕೃತವಾಗಿದೆ ಎಂದು ಆರೋಪಿಸಿದ ಅವರು, ಉದ್ಯಮಿಗಳ ಆಸ್ತಿ ಅಪಾರವಾಗಿ ಏರಿಕೆಯಾಗುತ್ತಿರುವ ಸಂದರ್ಭದಲ್ಲಿ ಉನ್ನತ ಶಿಕ್ಷಣ ಪಡೆದ ಯುವಕರಿಗೂ ಸಮರ್ಪಕ ಸಂಬಳ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ರಸ್ತೆ ಡಾಂಬರೀಕರಣ ಅವೈಜ್ಞಾನಿಕ: ಸಾಗರ್ ಆರೋಪ

ಸಕಲೇಶಪುರ: ಸಕಲೇಶಪುರ ತಾಲೂಕಿನ ಬಾಳ್ಳುಪೇಟೆಯಿಂದ ಜಮನಹಳ್ಳಿ ವರೆಗೆ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಅವೈಜ್ಞಾನಿಕ ರೀತಿಯಲ್ಲಿ ನಡೆಯುತ್ತಿದೆ ಎಂದು ಮಲೆನಾಡು ರಕ್ಷಣಾ ಸೇನೆ ರಾಜ್ಯಾಧ್ಯಕ್ಷ ಜಾನೇಕೆರೆ ಡಾ.ಸಾಗರ್ ಆರೋಪಿಸಿದ್ದಾರೆ.

ರಸ್ತೆ ಬದಿಯ ಮರಗಳನ್ನು ತೆರವುಗೊಳಿಸದೇ ತುರ್ತಾಗಿ ಡಾಂಬರೀಕರಣ ಮಾಡಿರುವುದು ಗುಣಮಟ್ಟದ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟುಹಾಕಿದೆ. ಮಳೆಗಾಲದಲ್ಲಿ ಮರಗಳಿಂದ ಹರಿಯುವ ನೀರು ರಸ್ತೆಗೆ ಹಾನಿ ಮಾಡಿ, ಶೀಘ್ರವೇ ರಸ್ತೆ ಹದಗೆಡುವ ಸಾಧ್ಯತೆ ಇದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಆರ್‌ಟಿಐ ಮೂಲಕ ಮಾಹಿತಿ ಕೋರಿದರೂ ಸಮರ್ಪಕ ಉತ್ತರ ಬಂದಿಲ್ಲ. ಸಾರ್ವಜನಿಕರ ಸುರಕ್ಷತೆಗೆ ಅಪಾಯವಾಗುತ್ತಿದೆ'' ಎಂದು ಡಾ.ಸಾಗರ್ ಜಾನೇ ಕೆರೆ ಹೇಳಿದ್ದಾರೆ. ತಾಲೂಕು ಆಡಳಿತ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಕಾಮಗಾರಿಯ ಗುಣಮಟ್ಟವನ್ನು ಮರುಪರಿಶೀಲಿಸಬೇಕೆಂದು ಮಲೆನಾಡು ರಕ್ಷಣಾ ಸೇನೆ ಒತ್ತಾಯಿಸಿದೆ.



ಹೊಸದಿಗಂತ
ತುಮಕೂರು
ಭಾನುವಾರ 31 ಮೇ 2026
ಗರಿಷ್ಠ 32° | ಕನಿಷ್ಠ 22°

ಅಂತಿಮ ದರ್ಶನ...



ವಿವಿಧ ಮಠಗಳ ಮಠಾಧಿಪತಿಗಳು ವೆಂಕಟರಮಣಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಆತ್ಮಕ್ಕೆ ಶಾಂತಿ ಕೋರಿದರು.

ಮಾವು ಬೆಳೆಗಾರರಿಗೆ ಸಂಕಷ್ಟ | ೨ ರೈತರ ಜಮೀನು ಕಬಳಿಕೆಗೆ ಯತ್ನ | ೩ ವಿದ್ಯಾರ್ಥಿಗಳಿಂದ ಪ್ರತಿಭಟನೆ | ೪

ಕಿರುಸುದ್ದಿ

ವಸತಿ ಶಾಲೆ: ಅತಿಥಿ ಶಿಕ್ಷಕರ ನೇಮಕಾತಿ

ತುಮಕೂರು: ತುಮಕೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧೀನದ ಕಿತ್ತೂರು ರಾಣಿ ಚೆನ್ನಮ್ಮ ವಸತಿ/ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರ ಹುದ್ದೆಗಳನ್ನು ಗೌರವಧನ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ವಸತಿ ಶಾಲೆಗಳಲ್ಲಿ ಕನ್ನಡ, ಇಂಗ್ಲೀಷ್ ಹಾಗೂ ಕಂಪ್ಯೂಟರ್ ಸೈನ್ಸ್ ವಿಷಯದ ಶಿಕ್ಷಕರ ಹುದ್ದೆಗಳು ಖಾಲಿಯಿದ್ದು, ಕನ್ನಡ, ಇಂಗ್ಲೀಷ್ ವಿಷಯದ ಶಿಕ್ಷಕರ ಹುದ್ದೆಗೆ ಅಭ್ಯರ್ಥಿಗಳು ಬಿ.ಎ ಮತ್ತು ಬಿ.ಎಡ್/ಟಿಇಟಿ ಹಾಗೂ ಕಂಪ್ಯೂಟರ್ ಸೈನ್ಸ್ ವಿಷಯದ ಶಿಕ್ಷಕರ ಹುದ್ದೆಗೆ ಬಿಇ/ಬಿಸಿಎ/ಬಿ.ಎಸ್.ಸಿ.(ಕಂಪ್ಯೂಟರ್ ಸೈನ್ಸ್) ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು. ಅರ್ಜಿ ಸಲ್ಲಿಸುವವರು ಶಿಕ್ಷಕ ಹುದ್ದೆಯಲ್ಲಿ ಸೇವಾನುಭವ ಹೊಂದಿರಬೇಕು. ಆಸಕ್ತಿಯುಳ್ಳ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಜೂನ್ 3ರೊಳಗೆ ಸಮೀಪದ ವಸತಿ ಶಾಲೆಗೆ ಕಳುಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 8073753685ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜೂ.16 ರಿಂದ 5 ದಿನಗಳ ತರಬೇತಿ ಕಾರ್ಯಾಗಾರ

ತುಮಕೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ಉನ್ನತ ಬೌದ್ಧಿಕ ಆಸ್ತಿ ಹಕ್ಕುಗಳು ವಿಷಯ ಕುರಿತು ಜೂನ್ 16 ರಿಂದ 20ರವರೆಗೆ ಐದು ದಿನಗಳ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಈ ಕಾರ್ಯಾಗಾರವು ಬೆಂಗಳೂರಿನ ಅಕಾಡೆಮಿಯ ಕಚೇರಿಯಲ್ಲಿ ನಡೆಯಲಿದ್ದು, ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಉಪನ್ಯಾಸ ನೀಡಲಿದ್ದಾರೆ. ಆಸಕ್ತ ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು/ಪ್ರಾಧ್ಯಾಪಕರು, ವಿಜ್ಞಾನಾಸಕ್ತರು ಹಾಗೂ ಕೈಗಾರಿಕೋದ್ಯಮದ ಪ್ರತಿನಿಧಿಗಳು ಭಾಗವಹಿಸಬಹುದಾಗಿದೆ. ಆಸಕ್ತರು ಜೂನ್ 12ರೊಳಗಾಗಿ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಗಾರದ ಸಂಯೋಜಕ ವೈಜ್ಞಾನಿಕಾಧಿಕಾರಿ ವಿ. ಜಿ. ಉಮೇಶ ಇವರನ್ನು (ಮೊ: 9743084194) ಸಂಪರ್ಕಿಸಬಹುದಾಗಿದೆ ಅಥವಾ ಅಕಾಡೆಮಿಯ ವೆಬ್‌ಸೈಟ್ https://kstacademy.in ವೀಕ್ಷಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡ ಮಾಹಿತಿ ಕೊಡಿ

ತುಮಕೂರು: ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.1 ರಿಂದ 35ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡ, ಸರ್ಕಾರಿ ಕಾಂಪೌಂಡ್ ಗೋಡೆ, ಸರ್ಕಾರಿ ಇತರೆ ಕಟ್ಟಡಗಳು ಹಾಗೂ ಇತರೆ ಅಪಾಯಕಾರಿ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಕಂಡು ಬಂದಲ್ಲಿ ಕೂಡಲೇ ತುಮಕೂರು ಮಹಾನಗರಪಾಲಿಕೆಗೆ ದೂರವಾಣಿ ಅಥವಾ ವಾಟ್ಸಾಪ್ ಮುಖಾಂತರ ಮಾಹಿತಿಯನ್ನು ನೀಡಬೇಕೆಂದು ಪಾಲಿಕೆ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಪ್ರವೀಣ್ ಕುಮಾರ್ ಎ. (ಮೊ.ಸಂ.9343843026), ಸುಮ ಎಸ್.ಬಿ.(ಮೊ.ಸಂ.8722309671) ತುಮಕೂರು ಮಹಾನಗರಪಾಲಿಕೆ ಕಂಟ್ರೋಲ್ ರೂಂ ಮೊ.ಸಂ. 9449872599ನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ಶಿರಾ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಜೂನ್ 1ರಂದು ಮಧ್ಯಾಹ್ನ 12 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯಾನಗರ, ಬಾಲಾಜಿನಗರ,ಸಂತೇಪೇಟೆ, ದರ್ಗಾ ಸರ್ಕಲ್, ಬಿ.ಡಿ.ಕಾಲೋನಿ, ಬೇಗಂ ಮೊಹಲ್ಲಾ, ಪಾಕ್ ಮೊಹಲ್ಲಾ, ರಬ್ ನಗರ್, ಮೆಹಬೋಬ್ ನಗರ್, ನಾಯಕರಹಟ್ಟಿ, ಸಿವಿಲ್ ಬಸ್‌ಸ್ಟಾಂಡ್, ಜ್ಯೋತಿನಗರ, ಪ್ರೆಸಿಡೆನ್ಸಿ ಏರಿಯಾ, ಸಚೀನ್ ಲೇಔಟ್, ನಾಗಜ್ಜಿಗುಡ್ಲು, ಗ್ರಾಹಕರು ಸಹಕರಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ವೈ.ಎಚ್. ಹುಚ್ಚಯ್ಯ ಆಗ್ರಹ

ಕೆಎಚ್‌ಎಂಗೆ ಡಿಸಿಎಂ ನೀಡಿ

ತುಮಕೂರು: ರಾಜ್ಯದ ಹೊಸ ಸರ್ಕಾರದ ಸಚಿವ ಸಂಪುಟದಲ್ಲಿ ಮಾದಿಗ ಸಮಾಜದ ಸರ್ವೋಚ್ಚ ನಾಯಕಕೆ.ಎಚ್.ಮುನಿಯಪ್ಪರವರಿಗೆಉಪಮುಖ್ಯ ಮಂತ್ರಿಸ್ಥಾನ ಹಾಗೂ ಪ್ರಮುಖ ಖಾತೆ ನೀಡಬೇಕು ಎಂದುಕರ್ನಾಟಕಮಾದರಮಹಾಸಭಾದಜಿಲ್ಲಾಧ್ಯಕ್ಷ ವೈ.ಎಚ್. ಹುಚ್ಚಯ್ಯ ಒತ್ತಾಯಿಸಿದರು.



ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಅತಿ ಹೆಚ್ಚಿನ ಸಂಖ್ಯೆಯ ಮಾದಿಗ ಸಮುದಾಯದ ಹಿರಿಯ ಪ್ರಭಾವಿ ನಾಯಕರಾದಕೆ.ಎಚ್.ಮುನಿಯಪ್ಪರವರು ಕಾಂಗ್ರೆಸ್ ಸರ್ಕಾರವನ್ನುಅಧಿಕಾರಕ್ಕೆತರುವಲ್ಲಿಅವ'ರ ದುಡಿಮೆ ಮತ್ತು ಶ್ರಮ ವಹಿಸಿದ್ದಾರೆ.ಕೆ.ಎಚ್. ಮುನಿಯಪ್ಪನವರು ಈ ರಾಜ್ಯದ ಜನಾನುರಾಗಿ ಜನನಾಯಕರಾಗಿಕೋಲಾರ ಲೋಕಸಭಾಕ್ಷೇತ್ರದಿಂದ ಸತತ ಏಳು ಬಾರಿ ಆಯ್ಕೆಯಾಗಿ ಕೇಂದ್ರ ಸಚಿವರಾಗಿ, ಪ್ರಸ್ತುತಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರಾಗಿ ಸಮರ್ಥವಾಗಿ ಉತ್ತಮ ಆಡಳಿತ ನಿರ್ವಹಣೆ ಮಾಡಿಅಪಾರ ಅನುಭವ ಹೊಂದಿರುವ ದಕ್ಷ ಹಾಗೂ ಪ್ರಾಮಾಣಿಕ ಜನಪ್ರಿಯ ನಾಯಕರಾಗಿದ್ದಾರೆ ಎಂದು ಹೇಳಿದರು.

ಸುಮಾರು5 ದಶಕಗಳಕಾಲರಾಜಕೀಯಕ್ಷೇತ್ರದಲ್ಲಿ ಸರ್ಕಾರದ ಆಡಳಿತ, ಸಮುದಾಯದಜನರ ಹಕ್ಕುಗಳ ರಕ್ಷಣೆ ಹಾಗೂ ಸಾಮಾಜಿಕ ನ್ಯಾಯಪರ ವಿಚಾರದಲ್ಲಿ ಮುಂಚೂಣಿರಾಜಕೀಯ ಮುತ್ಸದ್ದಿಯಾಗಿದ್ದಾರೆ. ಪ್ರಸ್ತುತಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರ ನೂತನವಾಗಿ ಅಸ್ತಿತ್ವಕ್ಕೆ ಬರಲಿದೆ ಎಂದು ಹೇಳಲಾಗುತ್ತಿದೆ. ಹೊಸ ಸರ್ಕಾರದಲ್ಲಿ ಕೆ.ಎಚ್. ಮುನಿಯಪ್ಪನವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವುದಲ್ಲದೆ ಪ್ರಮುಖ ಖಾತೆಯನ್ನು ನೀಡಲು ಒತ್ತಾಯಿಸುತ್ತೇವೆ ಎಂದರು.

ಈ ಹಿಂದೆ ಕಾಂಗ್ರೆಸೇತರ ಸರ್ಕಾರಗಳು ಮಾದಿಗ ಸಮುದಾಯದ ಜನ ಪ್ರತಿನಿಧಿಗಳಿಗೆ ಶಿಕ್ಷಣ, ಕಂದಾಯ, ಗೃಹ ಸಮಾಜಕಲ್ಯಾಣ, ಲೋಕೋಪಯೋಗಿಯಂತಹ ಪ್ರಮುಖ ಖಾತೆಗಳನ್ನು ನೀಡಿದವು.ಆದರೆ ಕಾಂಗ್ರೆಸ್ ಸರ್ಕಾರದಲ್ಲಿ ಮಾತ್ರ ಮಾದಿಗ ಜನಪ್ರತಿನಿಧಿಗಳಿಗೆ ಪ್ರಮುಖಖಾತೆ ನೀಡದೆ ಅನ್ಯಾಯ ಮಾಡಲಾಗಿದೆ.ಆದ್ದರಿಂದ ಕೆ.ಎಚ್. ಮುನಿಯಪ್ಪನವರಿಗೆ ಹಾಗೂ ಇವರ ಜೊತೆ ಮತ್ತಿಬ್ಬರು ಮಾದಿಗ ಸಮುದಾಯದ ಶಾಸಕರುಗಳಿಗೆ ಮಂತ್ರಿ ಸ್ಥಾನ ನೀಡಬೇಕು.ಅಲ್ಲದೆ ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ಎಂಎಲ್ಸಿ ಸ್ಥಾನ ಹಾಗೂ ರಾಜ್ಯ ಸಭೆಯಲ್ಲಿ ಖಾಲಿ ಇರುವ ರಾಜ್ಯಸಭಾ ಸ್ಥಾನಗಳನ್ನು ಮಾದಿಗ ಸಮುದಾಯಕ್ಕೆ ನೀಡಿ ನ್ಯಾಯ ಒದಗಿಸಬೇಕಾಗಿದೆ ಎಂದು ವೈ.ಎಚ್. ಹುಚ್ಚಯ್ಯ ಆಗ್ರಹಿಸಿದರು.

ಒಗ್ಗಟ್ಟಿನ ಪ್ರದರ್ಶನ ಅಗತ್ಯ

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯಕೆಂಚಮಾರಯ್ಯ ಮಾತನಾಡಿ, ಕಾಂಗ್ರೆಸ್ ಮಾತ್ರವಲ್ಲಇದೂವರೆಗಿನಎಲ್ಲಾ ಸರ್ಕಾರಗಳೂ ಒಳಮೀಸಲಾತಿ ವಿಚಾರದಲ್ಲಿ ನಮಗೆ ನ್ಯಾಯಒದಗಿಸುವಲ್ಲಿ ವಿಫಲವಾಗಿವೆ. ಒಗ್ಗಟ್ಟಿನಕೊರತೆಯಿಂದ ಸರ್ಕಾರಗಳು ನಮ್ಮನ್ನು ನಿರ್ಲಕ್ಷ್ಯ ಮಾಡಿವೆ, ಇನ್ನುಮುಂದೆ ಮಾದಿಗ ಸಮುದಾಯ ಒಗ್ಗಟ್ಟು ಪ್ರದರ್ಶಿಸಿದರೆ ಸಿಗಬೇಕಾದ ಸ್ಥಾನಮಾನಗಳು ನಮಗೆ ಸಿಗುತ್ತವೆ ಎಂದರು.

ಪರಿಶಿಷ್ಟ ಜಾತಿಯ ಒಳಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರ ಮಾದಿಗ ಸಮಾಜಕ್ಕೆಅನ್ಯಾಯ ಮಾಡಿದೆ.ಮುಂಬರುವ ಸರ್ಕಾರ ಈ ಅನ್ಯಾಯ ಸರಿಪಡಿಸಬೇಕು.35 ವರ್ಷಗಳ ಹೋರಾಟಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಮುಖಂಡ ವೈ.ಕೆ. ಬಾಲಕೃಷ್ಣಪ್ಪ ಮಾತನಾಡಿ, ಸಂವಿಧಾನರಕ್ಷಣೆ ಮಾಡುತ್ತೇವೆ, ಸಾಮಾಜಿಕ ನ್ಯಾಯಒದಗಿಸುತ್ತೇವೆಎಂದು ಹೇಳುವ ಕಾಂಗ್ರೆಸ್ ನಾಯಕರು, ಬಹು ಸಂಖ್ಯೆಯಲ್ಲಿರುವ ಮಾದಿಗ ಸಮುದಾಯದ ನಾಯಕರಿಗೆ ಸೂಕ್ತ ಹುದ್ದೆ ನೀಡಬೇಕು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ನಾವು ಗೌರವಿಸುತ್ತೇವೆ, ಅವರಾದರೂ ಮಾದಿಗರಿಗೆ ಸ್ಥಾನಮಾನ ನೀಡುವ ಕುರಿತು ತೀರ್ಮಾನ ತೆಗೆದುಕೊಳ್ಳಲಿ ಎಂದರು.

ಮುಖಂಡ ಪಾವಗಡ ಶ್ರೀರಾಮ್ ಮಾತನಾಡಿದರು. ನಗರಸಭೆ ಮಾಜಿ ಸದಸ್ಯ ನರಸಿಯಪ್ಪ, ಮಹಾಸಭಾ ಕಾರ್ಯದರ್ಶಿ ಕೊಟ್ಟ ಶಂಕರ್, ತಾಲ್ಲೂಕುಅಧ್ಯಕ್ಷ ಹೊಳಕಲ್ಲು ಆಂಜನಪ್ಪ, ಕೊರಟಗೆರೆ ತಾಲೂಕುಅಧ್ಯಕ್ಷ ವಿಭೂತಿ ಸಿದ್ಧಪ್ಪ, ಮುಖಂಡರಾದಡಾ.ಮುಕುಂದ, ಸಿ.ಗಂಗರಾಜು, ಗೂಳರಿವೆ ನಾಗರಾಜ್, ರಂಗಧಾಮಯ್ಯ, ಕವಣದಾಳ ಶಿವಣ್ಣ, ಮಂಜುನಾಥ್, ಮಹದೇವ್, ಬಿ.ಜಿ. ಸಾಗರ್ ಮೊದಲಾದವರು ಭಾಗವಹಿಸಿದ್ದರು.

ಮಧ್ಯವರ್ತಿ ಮುಕ್ತ ಆಡಳಿತವೇ ಗುರಿ

ಅಧಿಕಾರಿಗಳನ್ನು ಹುಡುಕುವ ಅಲೆದಾಟವೂ ಇಲ್ಲ



ಹುಳಿಯಾರು: ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಸಮಸ್ಯೆ ಮುಕ್ತ ಹಾಗೂ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ದೃಢಸಂಕಲ್ಪದೊಂದಿಗೆ ಶಾಸಕ ಸಿ.ಬಿ. ಸುರೇಶ್ ಬಾಬು ಹಮ್ಮಿಕೊಂಡಿರುವ ಮನೆ ಬಾಗಿಲಿಗೆ ಮನೆ ಮಗ 29ನೇ ವಾರದ ಜನಸ್ಪಂದನ ಕಾರ್ಯಕ್ರಮವು ಕೋರಟಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಶಸ್ವಿಯಾಗಿ ಜರುಗಿತು.

ಮರಾಠಪಾಳ್ಯದಲ್ಲಿ ನಡೆದ ವಿಶೇಷ ಜನಸ್ಪಂದನ ಸಭೆಯನ್ನುದ್ದೇಶಿಸಿ ಮಾತನಾಡಿದ ಶಾಸಕ ಸುರೇಶ್ ಬಾಬು, ಸಾರ್ವಜನಿಕರು ದೂರದ ಹಳ್ಳಿಗಳಿಂದ ತಾಲೂಕು ಕಚೇರಿಗೆ ಬರಲು ಪಡುತ್ತಿದ್ದ ಕಷ್ಟವನ್ನು ಮನಗಂಡು, ನಾವೇ ಅಧಿಕಾರಿಗಳೊಂದಿಗೆ ನೇರವಾಗಿ ಜನರ ಮನೆ ಬಾಗಿಲಿಗೆ ಬಂದು ಅಹವಾಲು ಆಲಿಸುತ್ತಿದ್ದೇವೆ ಎಂದರು.

ಈ ಕಾರ್ಯಕ್ರಮದಲ್ಲಿ ಯಾವುದೇ ಲಂಚ ಅಥವಾ ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. ಸಾರ್ವಜನಿಕರು ಯಾವುದೇ ಇಲಾಖೆಯ ಸಮಸ್ಯೆಯಿದ್ದರೂ ನೇರವಾಗಿ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳ ಬಹುದು. ಇದೇ ವೇಳೆ, ಶಿರಾದ ಬುಕ್ಕಾಪಟ್ಟಣದಲ್ಲೂ ಇಂತಹದ್ದೇ ಕಾರ್ಯಕ್ರಮ ನಡೆದು 50 ವಾರಗಳನ್ನು ಪೂರೈಸಿದ್ದು, ಈ ವಿಶಿಷ್ಟ ಪ್ರಯತ್ನ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ದಾಖಲಾಗಿದೆ ಎಂದು ಹೆಮ್ಮೆಯಿಂದ ಹಂಚಿಕೊಂಡರು.

ನೂರಾರು ಅರ್ಜಿಗಳ ಸ್ವೀಕಾರ: ಕಾರ್ಯಕ್ರಮದಲ್ಲಿ ಮರಾಠಪಾಳ್ಯ, ಭಟ್ಟರಹಳ್ಳಿ, ಮೋತಿಹಳ್ಳಿ, ಡೆಂಕನಹಳ್ಳಿ, ಸಾಲಪುರ ಸೇರಿದಂತೆ ಹಲವು ಗ್ರಾಮಗಳ ಜನರಿಂದ ವಿದ್ಯುತ್, ರಸ್ತೆ, ನಿವೇಶನ ಹಾಗೂ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ನೂರಾರು ಅಹವಾಲುಗಳನ್ನು ಸ್ವೀಕರಿಸಲಾಯಿತು. ಗಂಗಾ ಕಲ್ಯಾಣ ಮತ್ತು ಸಂಧ್ಯಾ ಸುರಕ್ಷಾ ಯೋಜನೆಗಳ ತಾಂತ್ರಿಕ ದೋಷಗಳನ್ನು ತಕ್ಷಣ ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಶಾಸಕರು, ಭಟ್ಟರಹಳ್ಳಿಯ ರಸ್ತೆ ಮತ್ತು ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಭರವಸೆ ನೀಡಿದರು.

ಪಶು ಇಲಾಖೆಯ ಸಹಾಯಕ ನಿರ್ದೇಶಕ ಕಾಂತರಾಜು, ಕ್ಷೇತ್ರದ ಬಡ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ ಶಾಸಕರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದರು. ವೇದಿಕೆಯಲ್ಲಿ ತಹಸೀಲ್ದಾರ್ ಮಮತಾ ಎಂ., ಇಒ ಗವಿರಂಗಯ್ಯ, ಸಿಡಿಪಿಒ ಹೊನ್ನಪ್ಪ, ಉಪತಹಸೀಲ್ದಾರ್ ವಿನುತ, ತಾಲೂಕು ಪಂಚಾಯಿತಿ ವ್ಯವಸ್ಥಾಪಕ ಬಸವರಾಜು, ಕೋರಟಗೆರೆ ಪಿಡಿಒ ನವೀನ್ ಇದ್ದರು.

ಮುಖ್ಯ ಶಿಕ್ಷಕ ಸಿದ್ದಲಿಂಗಯ್ಯಗೆ ಬೀಳ್ಕೊಡುಗೆ

ಕೊಡಿಗೇನಹಳ್ಳಿ: ಶಿಕ್ಷಣ ಇಲಾಖೆಯಲ್ಲಿ 31 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಬೂದೇನಹಳ್ಳಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಎಚ್. ಸಿದ್ದಲಿಂಗಯ್ಯ ಅವರಿಗೆ ಗ್ರಾಮಸ್ಥರು ಹಾಗೂ ಹಳೆಯ ವಿದ್ಯಾರ್ಥಿ ಬಳಗದಿಂದ ಶನಿವಾರ ಅದ್ದೂರಿ ಸನ್ಮಾನದೊಂದಿಗೆ ಬೀಳ್ಕೊಡುಗೆ ನೀಡಲಾಯಿತು.



ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿದ್ದಲಿಂಗಯ್ಯ ಅವರು, ವೃತ್ತಿಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು ಶಿಕ್ಷಕ ವೃತ್ತಿ. ನನ್ನ 31 ವರ್ಷಗಳ ಸೇವೆಗೆ ಸಹಕರಿಸಿದ ಗ್ರಾಮಸ್ಥರು, ಸಹಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ನಾನೆಂದಿಗೂ ಮರೆಯುವುದಿಲ್ಲ ಎಂದು ಭಾವುಕರಾಗಿ ನುಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಬಿಇಒ ಹನುಮಂತರಾಯಪ್ಪ ಮಾತನಾಡಿ, ಸಿದ್ದಲಿಂಗಯ್ಯ ಅವರು ಪ್ರಾಮಾಣಿಕತೆಗೆ ಮತ್ತೊಂದು ಹೆಸರು. ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಸೇವೆ ಸಲ್ಲಿಸಿ ಮೂರು ಬಾರಿ ಉತ್ತಮ ಶಿಕ್ಷಕ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ ಎಂದು ಶ್ಲಾಘಿಸಿದರು. ಸಹಶಿಕ್ಷಕ ತೋಟದಪ್ಪ ಮಾತನಾಡಿ, ದಾನಿಗಳ ನೆರವಿನಿಂದ ಶಾಲೆಯ ಏಳಿಗೆಗೆ ಶ್ರಮಿಸಿದ ಸಿದ್ದಲಿಂಗಯ್ಯ ಅವರ ಗುಣಮಟ್ಟದ ಶಿಕ್ಷಣದಿಂದಲೇ ಇಂದು ಸರ್ಕಾರಿ ಶಾಲೆಗಳು ಯಶಸ್ವಿಯಾಗಿ ನಡೆಯುತ್ತಿವೆ ಎಂದರು. ಇದೇ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ನೆಚ್ಚಿನ ಶಿಕ್ಷಕರಿಂದ ಕೇಕ್ ಕತ್ತರಿಸಿ ಸಂಭ್ರಮಿಸಿದರು. ಬಂದಿದ್ದ ಎಲ್ಲರಿಗೂ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಶಿಕ್ಷಕ ಸಂಘದ ಅಧ್ಯಕ್ಷ ರಂಗಧಾಮ, ಪ್ರಮುಖರಾದ ರಮೇಶ್, ಅಶ್ವಥನಾರಾಯಣ, ರೂಪದೇವಿ, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಧರ್ಮಸ್ಥಳ ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಬಯೋಟೆಕ್ ಕಂಪನಿ ವಿರುದ್ಧ ದೂರು

ಶಿರಾ: ಕಳಪೆ ದಾಳಿಂಬೆ ಸಸಿ ನೀಡಿದ ಶಾಯೋನ ಬಯೋಟೆಕ್ ಕಂಪನಿ ವಿರುದ್ಧ, ಪಟ್ಟನಾಯಕನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ ದಾಳಿಂಬೆ ಬೆಳೆಗಾರ ರೈತರು.



ದೂರು ನೀಡಿ ಮಾತನಾಡಿದ ದಾಳಿಂಬೆ ಬೆಳೆಗಾರ ಸೀಗಲಹಳ್ಳಿ ವೀರೇಂದ್ರ, ಶಿರಾ ತಾಲೂಕಿನಲ್ಲಿ ಮಳೆಯ ಅಭಾವವಿದ್ದು ಇರುವಂತ ಅಲ್ಪಪ್ರಮಾಣದ ನೀರಿನಲ್ಲಿ ತೋಟಗಾರಿಕೆ ಕೃಷಿ ಮಾಡಬೇಕೆಂದು ರೈತರು ದಾಳಿಂಬೆ ಬೆಳೆಯಲು ಮುಂದಾಗಿ ಶಾಯೋನ ಬಯೋಟಿಕ್ ಕಂಪನಿ ಯಿಂದ 1.ಲಕ್ಷಕ್ಕೂ ಹೆಚ್ಚು ದಾಳಿಂಬೆ ಸಸಿಗಳನ್ನು ಖರೀದಿ ಮಾಡಿ ಬೆಳೆ ಇಟ್ಟಿದ್ದರು.

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ದಾಳಿಂಬೆ ತೋಟ ಬೆಳೆಸಿದ ರೈತರಿಗೆ ದಾಳಿಂಬೆ ಗಿಡಗಳು ಆಘಾತ ನೀಡಿದ್ದು, ಶಾಯೋನ ಬಯೋಟಿಕ್ ಕಂಪನಿ ನೀಡಿದ ಸಸಿಗಳು ಸಂಪೂರ್ಣ ಕಳಪೆಯಿಂದ ಕೂಡಿದ್ದು , ಈ ತಳಿಯಲ್ಲಿ ಬಿಟ್ಟ ದಾಳಿಂಬೆ ಹಣ್ಣಿಗೆ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದಂತಾಗಿದ್ದು ರೈತ ಕಂಗಾಲಾಗಿದ್ದಾನೆ. ಇದರಿಂದ ಶಿರಾ ತಾಲೂಕಿನ ರೈತರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿದ್ದು ತಕ್ಷಣ ಈ ಕಂಪನಿ ವಿರುದ್ಧ ದೂರು ದಾಖಲಿಸಿ ಕಂಪನಿಯಿಂದ ಬೆಳೆ ನಷ್ಟ ಪರಿಹಾರ ಕೊಡಿಸುವುದರ ಜತೆಗೆ, ರೈತರಿಗೆ ಮೋಸ ಮಾಡಿದ ಈ ಕಂಪನಿ ವಿರುದ್ಧ ದೂರು

ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳುವುದರ ಜತೆಗೆ, ರೈತರಿಗೆ ಮೋಸ ಮಾಡಿದ ಶಾಯೋನ ಬಯೋಟಿಕ್ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ರೈತರು ಆಗ್ರಹಿಸಿದ್ದಾರೆ. ದಾಳಿಂಬೆ ಬೆಳೆಗಾರರಾದ ಸೀಗಲಹಳ್ಳಿ ವೀರೇಂದ್ರ, ಉದ್ದರಾಮನಹಳ್ಳಿ ಕಾಂತರಾಜು, ಗೋಪಿಕುಂಟೆ ನರಸಿಂಹಮೂರ್ತಿ, ಹೊಸಹಳ್ಳಿ ಹನುಮಂತರಾಯಪ್ಪ, ಹೆಂದೊರೆ ಮೋಹನ್, ಮದ್ದೇವಳ್ಳಿ ನಾಗಣ್ಣ ಸೇರಿದಂತೆ ಹಲವಾರು ರೈತರು ಹಾಜರಿದ್ದರು.

ಕೆ.ಷಡಕ್ಷರಿಗೆ ಸಚಿವ ಸ್ಥಾನ ನೀಡಿ: ಮೇಘಶ್ರೀ

ತಿಪಟೂರು: ತಿಪಟೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಕೆ. ಷಡಕ್ಷರಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಭಾವಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಮುಂಬರುವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ತಿಪಟೂರು ನಗರಸಭೆಯ ಮಾಜಿ ಸದಸ್ಯೆ ಮೇಘಶ್ರೀ ಭೂಷಣ್ ಒತ್ತಾಯಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕ್ಷೇತ್ರದ ಅಭಿವೃದ್ಧಿ ಹಾಗೂ ಪಕ್ಷದ ಸಂಘಟನೆಯಲ್ಲಿ ಶಾಸಕ ಕೆ. ಷಡಕ್ಷರಿ ಅವರ ಕೊಡುಗೆ ಶ್ಲಾಘನೀಯ. ಶಾಸಕ ಕೆ. ಷಡಕ್ಷರಿ ಅವರು ತಿಪಟೂರು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರ ದೂರದರ್ಶಿತ್ವದ ನಾಯಕತ್ವದಿಂದಾಗಿ ಕ್ಷೇತ್ರದಲ್ಲಿ ಹಲವು ಜನಪರ ಕಾರ್ಯಕ್ರಮಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿವೆ.

ತುಮಕೂರು ಜಿಲ್ಲೆ ಹಾಗೂ ತಿಪಟೂರು ಭಾಗದ ಸಮಗ್ರ ಅಭಿವೃದ್ಧಿಗೆ ಮತ್ತು ಈ ಭಾಗದ ಜನ ಧ್ವನಿಯಾಗಲು ಶಾಸಕರಾದ ಕೆ ಷಡಕ್ಷರಿ ಅವರಿಗೆ ಸಚಿವ ಸ್ಥಾನ ಸಿಗುವುದು ಅತ್ಯಂತ ಅತ್ಯಗತ್ಯವಾಗಿದೆ. ಶಾಸಕ ಕೆ. ಷಡಕ್ಷರಿ ಅವರು ಕೇವಲ ಒಬ್ಬ ಶಾಸಕರಾಗಿ ಅಲ್ಲದೆ, ಜನರ ಕಷ್ಟ-ಸುಖಗಳಿಗೆ ತಕ್ಷಣ ಸ್ಪಂದಿಸುವ ಸರಳ ಸಜ್ಜನಿಕೆಯ ನಾಯಕರಾಗಿದ್ದಾರೆ. ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಇವರಿಗೆ ಸಚಿವ ಸ್ಥಾನ ನೀಡುವ ಮೂಲಕ ಹೈಕಮಾಂಡ್ ಮತ್ತು ರಾಜ್ಯ ನಾಯಕರು ತಿಪಟೂರು ಕ್ಷೇತ್ರದ ಜನತೆಗೆ ನ್ಯಾಯ ಒದಗಿಸಬೇಕು.

ಶಾಸಕ ಕೆ. ಷಡಕ್ಷರಿ ಅವರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡುವ ಮೂಲಕ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಪಡಿಸಲು ಮತ್ತು ಅಭಿವೃದ್ಧಿ ವೇಗವನ್ನು ಹೆಚ್ಚಿಸಲು ಹಿರಿಯ ನಾಯಕರು ಮುಂದಾಗಬೇಕು ಎಂದು ಈ ಸಂದರ್ಭದಲ್ಲಿ ಅವರು ಮನವಿ ಮಾಡಿದ್ದಾರೆ.

ಶಿಕ್ಷಣದ ಜತೆಗೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಿ

ಗುಬ್ಬಿ: ವಿದ್ಯಾರ್ಥಿಗಳು ಗುರು-ಹಿರಿಯರು ಹಾಗೂ ಪೋಷಕರಿಗೆ ವಿಧೇಯರಾಗಿರಬೇಕು. ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಜೀವನದಲ್ಲಿ ಉನ್ನತ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಗುಬ್ಬಿ ಸರ್ಕಾರಿ ಪ್ರಥಮ ದರ್ಜೆ (ಸ್ವಾಯತ್ತ) ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರಸನ್ನ ಕರೆ ನೀಡಿದರು.



ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ತಮ್ಮ ವಯೋನಿವೃತ್ತಿ ಪ್ರಯುಕ್ತ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ತಮ್ಮ ಸೇವಾ ಅವಧಿಯ ನೆನಪುಗಳನ್ನು ಹಂಚಿಕೊಂಡ ಡಾ. ಪ್ರಸನ್ನ ಅವರು, ಸ್ವಂತ ತಾಲೂಕಿನಲ್ಲೇ ಸೇವೆ ಸಲ್ಲಿಸುವ ಉದ್ದೇಶದಿಂದ ಗುಬ್ಬಿ ಕಾಲೇಜನ್ನು ಆಯ್ಕೆ ಮಾಡಿಕೊಂಡಿದ್ದೆ. ಶೈಕ್ಷಣಿಕ ಡೀನ್ ಡಾ. ಕೆ. ನಾಗರಾಜು ಮಾತನಾಡಿದರು. ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ತಿಪ್ಪೇಸ್ವಾಮಿ ಮಾತನಾಡಿದರು. ವಲಯ ಅರಣ್ಯಾಧಿಕಾರಿ ಕೆ.ಆರ್. ಸತೀಶ್ಚಂದ್ರ, ಪತ್ರಾಂಕಿತ ವ್ಯವಸ್ಥಾಪಕ ಶಿವಯ್ಯ, ಗ್ರಂಥಪಾಲಕ ರಾಘವೇಂದ್ರ, ನಿತಿನ್ ಪ್ರಸನ್ನ, ಬಿಇಒಗಳಾದ ಟಿ.ಎಸ್. ತಾರಾಮಣಿ ಹಾಗೂ ಎಂ.ಎಸ್. ನಟರಾಜು, ಪ್ರಾಧ್ಯಾಪಕರಾದ ಜಿ. ಗಂಗಾಧರ್, ತಿಮ್ಮಣ್ಣ, ತಿಮ್ಮೇಗೌಡ, ಕಾಳಪ್ಪ, ಜಿ.ಆರ್. ಶಿವಕುಮಾರ್, ಲೀಲಾವತಿ, ಸಿದ್ದಲಿಂಗಪ್ಪ, ಕುಮಾರಸ್ವಾಮಿ ಸೇರಿದಂತೆ ಇತರರು ಇದ್ದರು.

ರೈತರ ಮುಖದಲ್ಲಿ ಮಂದಹಾಸ | ಕಡಬ ಹೋಬಳಿಯಲ್ಲಿ ಅತ್ಯಧಿಕ 56.2 ಮೀ.ಮೀ

ಗುಬ್ಬಿ ತಾಲೂಕಿನಲ್ಲಿ ಉತ್ತಮ ಮಳೆ

ಗುಬ್ಬಿ: ಗುಬ್ಬಿ ತಾಲೂಕಿನ ಬಹುತೇಕ ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಗುಡುಗು ಸಹಿತ ಉತ್ತಮ ಮಳೆಯಾಗಿದ್ದು, ಮಳೆಯ ನಿರೀಕ್ಷೆಯಲ್ಲಿದ್ದ ರೈತಾಪಿ ವರ್ಗದ ಮುಖದಲ್ಲಿ ಸಂತಸ ಮೂಡಿಸಿದೆ. ಕಳೆದ ಕೆಲವು ದಿನಗಳಿಂದ ಮಳೆಯ ಕಣ್ಣಾಮುಚ್ಚಾಲೆಯಿಂದ ಬಸವಳಿದಿದ್ದ ರೈತರಿಗೆ ಈ ಮಳೆ ಆಶಾದಾಯಕವಾಗಿದೆ.

ಮಳೆ ಪ್ರಮಾಣ (ಮೀ.ಮೀ)	
ಕಡಬ	56.2
ಕಸಬಾ	19.0
ಸಿ.ಎಸ್. ಪುರ	12.4
ಚೇಳೂರು	11.0
ಹಾಗಲವಾಡಿ	10.0
ನಿಟ್ಟೂರು	8.0
ಅಂಕಸಂದ್ರ	3.2



ತಾಲ್ಲೂಕಿನ ವಿವಿಧ ಹೋಬಳಿ ಹಾಗೂ ಗ್ರಾಮಗಳಲ್ಲಿ ಉತ್ತಮ ಪ್ರಮಾಣದ ಮಳೆಯಾಗಿದ್ದು, ಕೆಲವೆಡೆ ಸಣ್ಣಪುಟ್ಟ ಹಾನಿ ಸಂಭವಿಸಿದ ಹೊರತು ಯಾವುದೇ ದೊಡ್ಡ ಅನಾಹುತಗಳು ವರದಿಯಾಗಿಲ್ಲ. ಮಳೆಯ ನೀರು ಕೃಷಿ ಚಟುವಟಿಕೆಗಳಿಗೆ ಅನುಕೂಲಕರ ವಾತಾವರಣ ನಿರ್ಮಿಸಿದ್ದು, ಬಿತ್ತನೆ ಕಾರ್ಯಗಳಿಗೆ ರೈತರು ಸಜ್ಜಾಗುತ್ತಿದ್ದಾರೆ.

ಆದರೆ, ಪ್ರತಿ ಬಾರಿ ಮಳೆಯಾದಾಗ ಎದುರಾಗುವ ಸಮಸ್ಯೆಯಂತೆ ಈ ಬಾರಿಯೂ ಗುಬ್ಬಿ ನಗರದ ಬಸ್ ನಿಲ್ದಾಣದ ಪಕ್ಕದ ರಸ್ತೆ ಜಲಾವೃತವಾಯಿತು. ಸುಮಾರು ಮೂರುರಿಂದ ನಾಲ್ಕು ಅಡಿ ಎತ್ತರದ ನೀರು ರಸ್ತೆಯಲ್ಲಿ ಹರಿದ ಪರಿಣಾಮ ವಾಹನ ಸವಾರರು ಹಾಗೂ ಸಾರ್ವಜನಿಕರು ಸಂಚಾರಕ್ಕೆ ತೀವ್ರ ತೊಂದರೆ ಅನುಭವಿಸಿದರು. ಮಳೆಗಾಲದಲ್ಲಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇವುಗಳಲ್ಲಿ ಕಡಬ ಹೋಬಳಿಯಲ್ಲಿ ಅತ್ಯಧಿಕ 56.2 ಮಿ.ಮೀ. ಮಳೆಯಾಗಿದ್ದು, ಅಂಕಸಂದ್ರದಲ್ಲಿ ಕನಿಷ್ಠ 3.2 ಮಿ.ಮೀ. ಮಳೆ ದಾಖಲಾಗಿದೆ. ಮಳೆಯು ಮುಂದುವರಿದರೆ ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ದೊರೆಯುವ ನಿರೀಕ್ಷೆಯಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ

ಶೈಕ್ಷಣಿಕ ಅಭಿವೃದ್ಧಿ, ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಿ

ಕುಣಿಗಲ್: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದರ ಜತೆಗೆ ಶೈಕ್ಷಣಿಕ ಅಭಿವೃದ್ಧಿಗೆ ಹಾಗೂ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ಶ್ರಮಿಸಬೇಕು ಎಂದು ಜಿಲ್ಲಾ ಅಧ್ಯಕ್ಷ ತಿಮ್ಮೇಗೌಡ ಹೇಳಿದರು.



ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಚುನಾವಣೆ ಯಲ್ಲಿ ನೂತನವಾಗಿ ಆಯ್ಕೆಯಾದ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ತಾಲೂಕಿನಲ್ಲಿ 22 ಶಾಲೆಗಳಲ್ಲಿ ಶಿಕ್ಷಕರು ಇಲ್ಲದಿರುವುದರಿಂದ ಹೆಚ್ಚುವರಿ ಶಿಕ್ಷಕರನ್ನ ಆ ಶಾಲೆಗಳಿಗೆ ನಿಯೋಜಿಸಲಾಗುವುದು, ತಾವುಗಳು ಇಂತಹ ಸಂದರ್ಭದಲ್ಲಿ ಯಾವುದೇ ಪ್ರಭಾವವನ್ನು ಬೀರದೆ ಸ್ಪಂದಿಸಿ ಸಹಕಾರ ನೀಡಬೇಕು, ತಾಲೂಕಿನ ಅಂಚಿನಲ್ಲಿರುವ ಶಾಲೆಗಳಲ್ಲಿರುವ ಮಕ್ಕಳು ನಮ್ಮವರೇ ಎಂದರು.

ತುಮಕೂರು ತಾಲೂಕು ಅಧ್ಯಕ್ಷ ನಾಗರಾಜು ಮಾತಾನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷರಾದ ಪದ್ಮಾವತಿ, ಎ, ಸವಿತಾ ಜೆ, ಪ್ರಧಾನ ಕಾರ್ಯದರ್ಶಿ ಉಮೇಶ್, ಖಜಾಂಚಿ ಹನುಮಂತರಾಯಪ್ಪ, ಬಿ ಹೆಚ್, ನಿರ್ದೇಶಕ ನಟರಾಜು ಅಧಿಕಾರ ವಹಿಸಿಕೊಂಡರು. ಅವರನ್ನು ವಿವಿಧ ಶಿಕ್ಷಕರ ಸಂಘಟನೆಗಳಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರುಳು ಸಿದ್ದಪ್ಪ, ನಿವೃತ್ತ ಬಿ ಇ ಒ ಸಿದ್ದಯ್ಯ, ಎಚ್ ಬಿ ರವಿಕುಮಾರ್, ರೇಣುಕಾ ವೈ ಎಚ್, ಸಿ ಆರ್ ಪಿ ನಾಗರಾಜು, ಸಾವಿತ್ರಿಬಾಯಿ ಫುಲೆ ಅಧ್ಯಕ್ಷೆ ಜಯಲಕ್ಷ್ಮಿ, ಶ್ರೀನಿವಾಸ್, ರವಿಕುಮಾರ್ ವಿವಿಧ ಶಿಕ್ಷಕರ ಸಂಘದ ಪದಾಧಿಕಾರಿಗಳು ಮುತ್ತು ನೂರಾರು ಶಿಕ್ಷಕರು ಇದ್ದರು.

ಕಿರುಸುದ್ದಿ

ಜೂ.2ಕ್ಕೆ ಉದ್ಯೋಗ ಮೇಳ

ರಾಮನಗರ: ಬಿಡದಿಯ ಜ್ಞಾನವಿಕಾಸ್ ವಿದ್ಯಾಸಂಘದ ಅಂಗಸಂಸ್ಥೆಯಾದ ಜ್ಞಾನ ವಿಕಾಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜೂನ್ 2ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5ರವರೆಗೆ ಉದ್ಯೋಗ ಮೇಳ (ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ) ಹಮ್ಮಿಕೊಳ್ಳಲಾಗಿದೆ.

ಬಿ.ಇ, ಎ೦.ಬಿ.ಎ, ಬಿ.ಕಾಂ, ಎ೦.ಕಾಂ, ಡಿಪ್ಲೊಮಾ, ಐಟಿಐ, ಬಿಸಿಎ ಹಾಗೂ ಬಿಬಿಎ ವಿದ್ಯಾರ್ಹತೆ ಹೊ೦ದಿರುವ ಅಭ್ಯರ್ಥಿಗಳು ಮೇಳದಲ್ಲಿ ಭಾಗವಹಿಸಿ ಉದ್ಯೋಗಾವಕಾಶ ಪಡೆಯಬಹುದು. ಮೇಳದಲ್ಲಿ ಪಾಲ್ಗೊಳ್ಳುವವರಿಗೆ ಯಾವುದೇ ನೋಂದಣಿ ಶುಲ್ಕವಿರುವುದಿಲ್ಲ.

ಹೆಚ್ಚಿನ ಮಾಹಿತಿಗೆ ತರಬೇತಿ ಮತ್ತು ನಿಯೋಜನಾಧಿಕಾರಿ ಮೊಬೈಲ್ ಸಂಖ್ಯೆ: 99802 66988 ಮತ್ತು ಉದ್ಯೋಗ ಮೇಳದ ಉದ್ಯೋಗ ಮೇಳದ ಸ೦ಚಾಲಕರ ಮೊ. ಸಂಖ್ಯೆ: 96067 47534 ಸಂಪರ್ಕಿಸಬಹುದು ಎಂದು ಜ್ಞಾನವಿಕಾಸ್ ವಿದ್ಯಾಸ೦ಘದ ಅಧ್ಯಕ್ಷ ಸಿ.ಎ೦. ಲಿ೦ಗಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಗಾರಿ: ಆಕ್ಷೇಪಣೆ ಸಲ್ಲಿಸಲು ಅವಕಾಶ

ತುಮಕೂರು: ಕವಿಪ್ರನಿನಿ ವತಿಯಿಂದ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಹೊನ್ನವಳ್ಳಿ ಹೋಬಳಿ ಬಳುವನೆರಳು ಗ್ರಾಮದಲ್ಲಿ ಉದ್ದೇಶಿತ 2★20ಎಂ.ವಿ.ಎ. 110/11ಕೆವಿ ವಿದ್ಯುತ್ ಉಪಸ್ಥಾವರ ಮತ್ತು ಹಾಲಿ ಇರುವ 110ಕೆವಿ ತಿಪಟೂರು-ಹಾಲ್ಕುರ್ಕೆ ಮಾರ್ಗದಿಂದ ಉದ್ದೇಶಿತ ಉಪಸ್ಥಾವರದವರೆಗೆ 4.402ಕಿಮೀ ಉದ್ದದ 110ಕೆವಿ ಲಿಲೋ ಪ್ರಸರಣ ಮಾರ್ಗ ನಿರ್ಮಾಣ ಕಾಮಗಾರಿ ಜೊತೆಗೆ ಹಾಲಿ ಇರುವ ಹಾಲ್ಕುರ್ಕೆ ಟ್ಯಾಪ್ ಪಾಯಿಂಟ್‌ನಿಂದ 110/11ಕೆವಿ ಹಾಲ್ಕುರ್ಕೆ ಉಪಸ್ಥಾವರದವರೆಗೆ ದ್ವಿಮುಖ ಗೋಪುರಗಳ ಮೇಲೆ 12.095 ಕಿಮೀ ಉದ್ದದ 2ನೇ ಸರ್ಕೀಟ್ ಅನ್ನು ಲಿಂಕ್ಸ್ ವಾಹಕದೊಂದಿಗೆ ನಿರ್ಮಾಣ ಕಾಮಗಾರಿ ಮತ್ತು 110/11ಕೆವಿ ಹಾಲ್ಕುರ್ಕೆ ಉಪಸ್ಥಾವರದಲ್ಲಿ ಒಂದು ಟರ್ಮಿನಲ್ ಬೇ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು. ಈ ಕಾಮಗಾರಿಯನ್ನು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಹೊನ್ನವಳ್ಳಿ ಹೋಬಳಿ ಬಳುವನೆರಳು ಗ್ರಾಮ ಹಾಗೂ ಸುತ್ತಮುತ್ತಲ ಪ್ರದೇಶಗಳ ವೋಲ್ಟೇಜ್ ಸ್ಥಿತಿ ಉತ್ತಮ ಪಡಿಸಲು ಮತ್ತು ಭವಿಷ್ಯದಲ್ಲಿ ವಿದ್ಯುತ ಹೊರೆ ಸರಿದೂಗಿಸುವ ಸಲುವಾಗಿ ಕೈಗೊಳ್ಳಲಾಗಿದೆ. ಈ ಮಾರ್ಗವು ತುಮಕೂರು ಜಿಲ್ಲೆ ತಿಪಟೂರು ತಾಲೂಕು, ಹೊನ್ನವಳ್ಳಿ ಹೋಬಳಿ, ಚೌಲಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 12, 9, ಬೈರಾಪುರ ಗ್ರಾಮದ ಸರ್ವೆ ಸಂಖ್ಯೆ 22, ಘಟಕಿನಕೆರೆ ಗ್ರಾಮದ ಸರ್ವೆ ಸಂಖ್ಯೆ 59, 60, 18, 61, 3, 62, 63, 64, 65, 70, 71, 72, 74, 75, ಸಾರತಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 358, 359, 357, 356, 361, ನೆಲಗೊಂಡನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 66, 65, 69, 64, 59, 58 ಹಾಗೂ ಹುಲಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 104, 102ರಲ್ಲಿ ಹಾದುಹೋಗುತ್ತದೆ. ಈ ಯೋಜನೆಯ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 30ದಿನಗಳ ಒಳಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಯೋಜನೆ ವಿಭಾಗ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ತುಮಕೂರು ಇವರಿಗೆ ಸಲ್ಲಿಸಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

ಹನುಮಂತರಾವ್ ಕುಟುಂಬದಿಂದ ದೇಗುಲಕ್ಕೆ ರಥ

ಚಿಕ್ಕನಾಯಕನಹಳ್ಳಿ: ಪಟ್ಟಣದ ಪ್ರಸಿದ್ಧ ಶ್ರೀ ಹಳೆಯೂರು ಆಂಜನೇಯಸ್ವಾಮಿ ದೇವಾಲಯಕ್ಕೆ ಭಕ್ತಕುಟುಂಬದಿಂದ ನೂತನ ರಥ ಸಮರ್ಪಣೆ ಕಾರ್ಯಕ್ರಮವು ವಿಜೃಂಭಣೆಯಿಂದನಡೆಯಿತು.

ಇತಿಹಾಸ ಪ್ರಸಿದ್ಧ ಶ್ರೀಹಳೆಯೂರು ಆಂಜನೇಯಸ್ವಾಮಿಯು ಅಪಾರ ಭಕ್ತರೊನ್ನೊಳಗೊಂಡ ಈ ಭಾಗದ ಪ್ರಸಿದ್ಧ ದೇವಾಲಯವೆನಿಸಿದೆ. ನಂಬಿದ ಭಕ್ತರನ್ನು ಕೈಹಿಡಿಯುವ ಈ ದೇವರಿಗೆ ಭಕ್ತರಿಂದ ಅನೇಕ ಸೇವಾಕಾರ್ಯಗಳು ನಡೆಯುತ್ತಿರುತ್ತದೆ. ಶನಿವಾರ ತಿಪಟೂರು ತಾಲೂಕು ಬಿಳಿಗೆರೆ ಮೂಲದ ಕೀರ್ತಿಶೇಷ ಹನುಮಂತರಾವ್ ಕುಟುಂಬ ವರ್ಗದವರಿಂದ ಹಳೆಯೂರು ಶ್ರೀ ಆಂಜನೇಯಸ್ವಾಮಿಗೆ ನೂತನ ರಥವನ್ನು ಸಮರ್ಪಣೆ ಮಾಡಲಾಯಿತು.

ರಥಸಮರ್ಪಣೆ ಅಂಗವಾಗಿ ಶನಿವಾರ ಬೆಳಿಗ್ಗೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಸಹಸ್ರನಾಮ ಪೂಜೆಗಳು ನಡೆದು ವಿಶೇಷ ಹೂವಿನ ಅಲಂಕಾರ ಮಾಡಲಾಯಿತು. ನಂತರ ಪವಮಾನ ಹೋಮವನ್ನು ನೆರವೇರಿಸಿ, ಉತ್ಸವಮೂರ್ತಿಗೆ ವಿಶೇಷ ಅಲಂಕಾರಗೊಳಿಸಿ ದೇವಾಲಯದ ಪ್ರಾಂಗಣದಲ್ಲಿ ಉತ್ಸವಮೂರ್ತಿಯ ಉತ್ಸವವನ್ನು ಅಪಾರ ಭಕ್ತರ ಸಮಕ್ಷಮದಲ್ಲಿ ನೆರವೇರಿಸಲಾಯಿತು, ನಂತರ ನೂತನ ರಥಕ್ಕೆ ಬಲಿಪೂಜೆ ನಡೆದು ಅಲಂಕೃತ ನೂತನ ರಥಕ್ಕೆ ಉತ್ಸವಮೂರ್ತಿಯನ್ನು ರಥಾರೋಹಣಗೊಳಿಸಲಾಯಿತು. ನಂತರ ನೆರೆದಿದ್ದ ಭಕ್ತರು ಹಾಗೂ ಸಮರ್ಪಿತ ಕುಟುಂಬಸ್ಥರು ರಥವನ್ನೆಳೆದು ಸಂಪನ್ನಗೊಳಿಸಿದರು. ಭಾನುವಾರ ಸೀತಾರಾಮ ಕಲ್ಯಾಣ ನಡೆಯಲಿದೆ.




ಶಾಸಕಾಂಗ ಪಕ್ಷಕ್ಕೆ ಡಿಕೆಶಿ ಆಯ್ಕೆಯಾಗಿರುವ ಹಿನ್ನೆಲೆ ಕುಣಿಗಲ್ ಪಟ್ಟಣದ ಹುಚ್ಚ ಮಾಸ್ತಿ ಗೌಡರ ಸರ್ಕಲ್ ನಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರಿಂದ ಸಂಭ್ರಮಾಚರಣೆ.

ಶಾಸಕಾಂಗ ಪಕ್ಷಕ್ಕೆ ಡಿಕೆಶಿ ಆಯ್ಕೆ: ಸಂಭ್ರಮ

ಕುಣಿಗಲ್: ಡಿಕೆ ಶಿವಕುಮಾರ್ ರವರು ಮುಖ್ಯಮಂತ್ರಿ ಆಗುತ್ತಿರುವುದರಿಂದ ಪಕ್ಷದ ಕಾರ್ಯಕರ್ತರಿಗೆ ಹೆಚ್ಚಿನ ಶಕ್ತಿ ಸಿಗುವುದರ ಜತೆಗೆ ನಮ್ಮ ಶಾಸಕರಾದ ಡಾ. ರಂಗನಾಥ್ ರವರ ನೇತೃತ್ವದಲ್ಲಿ ಕ್ಷೇತ್ರವು ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಣ್ಣ ಗೌಡ ತಿಳಿಸಿದರು.

ಬೆಂಗಳೂರಿನಲ್ಲಿ ನಡೆದ ಸಿ ಎಲ್ ಪಿ ಸಭೆಯಲ್ಲಿ ಡಿ ಕೆ ಶಿವಕುಮಾರ್ ರವರು ಮುಂದಿನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಯಾಗುತ್ತಿದ್ದಂತೆ ಪಟ್ಟಣದ ಹುಚ್ಚ ಮಾಸ್ತಿ ಗೌಡರ ಸರ್ಕಲ್ ನಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಹೊಡೆದು, ಸಿಹಿ ಹಂಚಿ ಸಂಭ್ರಮಿಸಿ ಮಾತನಾಡಿ ಬಡವರು ಹಿಂದುಳಿದ ವರ್ಗ ದೀನ ದಲಿತರ ಅಭಿವೃದ್ಧಿಯ ಜತೆಗೆ ಕ್ಷೇತ್ರವು ಸರ್ವತೋಮುಖ ಅಭಿವೃದ್ಧಿಗೊಂದಲಿದೆ ಎಂದರು. ಕಾಂಗ್ರೆಸ್ ಮುಖಂಡ ಬೇಗೂರು ನಾರಾಯಣ ಮಾತನಾಡಿ ಡಿ ಕೆ ಶಿವಕುಮಾರ್ ರವರು ರಾಜ್ಯದ ಮುಖ್ಯಮಂತ್ರಿಯಾಗುತ್ತಿರುವುದು ನಮ್ಮೆಲ್ಲರಿಗೂ ಸಂತಸ ತಂದಿದೆ, ಕಾಂಗ್ರೆಸ್ ಪಕ್ಷವನ್ನು ಬಲವಾಗಿ ಕಟ್ಟಿ ಸಂಘಟಿಸಿದವ ರಲ್ಲಿ ಡಿಕೆ ಶಿವಕುಮಾರ್ ರವರು ಒಬ್ಬರು, ಅವರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿದೆ ಎಂದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸುಮತಿ, ಕಾಂಗ್ರೆಸ್ ಮುಖಂಡರಾದ ರೆಹಮಾನ್ ಷರೀಫ್, ಪ್ರಚಾರ ಸಮಿತಿ ಅಧ್ಯಕ್ಷ ಶಂಕರ್, ಮಾಜಿ ಪುರಸಭಾ ಸದಸ್ಯ ಸರಸ್ವತಿ, ಸತೀಶ, ಧನಂಜಯ, ಮುಂತಾದವರು ಇದ್ದರು.



ಪಾವಗಡ ತಾಲೂಕಿನ ಮೃತ ಮಾಜಿ ಸಚಿವ ವೆಂಕಟರಮಣಪ್ಪ ಅವರಿಗೆ ಸರ್ಕಾರದ ವತಿಯಿಂದ ಕುಶಾಲು ತೋಪು ಆರಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಶೇ. 80 ಕೈಕೊಟ್ಟ ಬೆಳೆ | 51.35 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ

ಮಾವು ಬೆಳೆಗಾರರಿಗೆ ಸಂಕಷ್ಟ

ಎಸ್. ರುದ್ರೇಶ್ವರ

ರಾಮನಗರ: ಮಳೆ ಕೊರತೆ ಹಾಗೂ ತೀವ್ರ ಹವಾಮಾನ ವೈಪರೀತ್ಯದಿಂದಾಗಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯಲ್ಲಿ ಈ ಬಾರಿ ಮಾವು ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲೆಯ ಒಟ್ಟು ಮಾವು ಬೆಳೆಯ ಪೈಕಿ ಬರೋಬ್ಬರಿ ಶೇ. 80ರಷ್ಟು ಬೆಳೆ ಕೈಕೊಟ್ಟಿದ್ದು, ಕೇವಲ ಶೇ. 20ರಷ್ಟು ಮಾತ್ರ ಫಸಲು ಸಿಕ್ಕಿದೆ. ಸಿಕ್ಕ ಅಲ್ಪಸ್ವಲ್ಪ ಬೆಳೆಗೂ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದೆ ಬೆಳೆಗಾರರು ಕಣ್ಣೀರು ಹಾಕುವಂತಾಗಿದೆ.

ತೋಟಗಾರಿಕೆ, ಕಂದಾಯ, ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಪ್ರತಿನಿಧಿಗಳ ಜಂಟಿ ತಂಡ ನಡೆಸಿದ ಸಮಗ್ರ ಅಧ್ಯಯನದಿಂದ ಈ ಆಘಾತಕಾರಿ ಸತ್ಯ ಬೆಳಕಿಗೆ ಬಂದಿದೆ. ಈ ವರದಿಯ ಆಧಾರದ ಮೇಲೆ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ (ವಿಪತ್ತು ನಿರ್ವಹಣಾ ವಿಭಾಗ) ಪತ್ರ ಬರೆದಿದ್ದು, ರಾಜ್ಯ ಮತ್ತು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಖಆಖಈ / ಓಆಖಈ) ಮಾರ್ಗಸೂಚಿ ಅನ್ವಯ ಜಿಲ್ಲೆಗೆ ಅಂದಾಜು 51.35 ಕೋಟಿ ರೂ. ಪರಿಹಾರ ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ರಾಮನಗರ ತಾಲೂಕಿಗೆ ಅತಿ ಹೆಚ್ಚು ಹಾನಿ: ಜಂಟಿ ತಂಡವು ಜಿಲ್ಲೆಯ ಒಟ್ಟು 54 ಆಯ್ದ ರೈತರ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಿದೆ. ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಡಿ. ಮಂಜುನಾಥ್ ನೀಡಿರುವ ಮಾಹಿತಿ ಪ್ರಕಾರ, ರಾಮನಗರ ತಾಲೂಕಿನಲ್ಲಿ ಅತಿ ಹೆಚ್ಚು ಹಾನಿಯಾಗಿದ್ದು, ಇಲ್ಲಿನ 8,300 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಈ ತಾಲೂಕಿಗೆ 18.68 ಕೋಟಿ ರೂ. ಪರಿಹಾರಕ್ಕೆ ಶಿಫಾರಸು ಮಾಡಲಾಗಿದೆ. ಇಲ್ಲಿ ಮುಖ್ಯವಾಗಿ ಬಾದಾಮಿ, ರಸಪೂರಿ, ತೋತಾಪುರಿ ತಳಿಗಳನ್ನು ಬೆಳೆಯಲಾಗುತ್ತದೆ. ಹಾರೋಹಳ್ಳಿ ತಾಲೂಕಿನಲ್ಲಿ 560 ಹೆಕ್ಟೇರ್‌ನಲ್ಲಿ ಹಾನಿಯಾಗಿದ್ದು, 26 ಲಕ್ಷ ರೂ.ಪರಿಹಾರಕ್ಕೆ ಮನವಿ ಮಾಡಲಾಗಿದೆ.

ಹವಾಮಾನ ವೈಪರೀತ್ಯದಿಂದ ತತ್ತರಿಸಿರುವ ಮಾವು ಬೆಳೆಗಾರರ ನೆರವಿಗೆ ಧಾವಿಸಿರುವ ಜಿಲ್ಲಾಡಳಿತ, ಎಸ್‌ಡಿಆರ್ ಎಫ್ ಮತ್ತು ಎನ್‌ಡಿಆರ್ ಈ ಮಾರ್ಗಸೂಚಿಗಳ ಪ್ರಕಾರ ಪ್ರತಿ ಹೆಕ್ಟೇರ್‌ಗೆ 22,500 ರೂ. ರಂತೆ ಒಟ್ಟು 51.37 ಕೋಟಿರೂ ಪರಿಹಾರವನ್ನು ಜಿಲ್ಲೆಗೆ ತುರ್ತಾಗಿ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ.



ತೀವ್ರಗೊಂಡ ಜೋನಿ ರೋಗದ ಬಾಧೆ

ಜಿಲ್ಲೆಯ ಸುಮಾರು 28,574 ಹೆಕ್ಟೇರ್ ಪ್ರದೇಶದಲ್ಲಿ 40 ಸಾವಿರಕ್ಕೂ ಹೆಚ್ಚು ರೈತರು ಮಾವು ಬೆಳೆಯುತ್ತಿದ್ದು, ವಾರ್ಷಿಕವಾಗಿ 2.65 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತಿತ್ತು. ಇಲ್ಲಿನ ಶೇ. 90ರಷ್ಟು ಮಾವು ಪ್ರದೇಶ ಮಳೆ ಆಶ್ರಿತವಾಗಿದೆ. ಆರಂಭದಲ್ಲಿ ಮಾವಿನ ಮರಗಳು ಹೂವಿನಿಂದ ಮೈದುಂಬಿ ಭಾರಿ ಫಸಲಿನ ನಿರೀಕ್ಷೆ ಮೂಡಿಸಿದ್ದವು. ಆದರೆ, ಏಕಾಏಕಿ ಉಂಟಾದ ತಾಪಮಾನ ಏರಿಕೆ ಮತ್ತು ಅಕಾಲಿಕ ಮಳೆಯಿಂದಾಗಿ ಮರಗಳು ಬೇಗನೆ ರೋಗಕ್ಕೆ ತುತ್ತಾದವು. ಕಾಯಿ ಕಟ್ಟುವ ಹಂತದಲ್ಲಿ ತೀವ್ರ ಬಿಸಿಲಿನಿಂದಾಗಿ ಜೋನಿ ರೋಗ ಕಾಣಿಸಿಕೊಂಡು, ತೊಟ್ಟಿನ ಬಳಿಯೇ ಕಾಯಿಗಳು ಕಪ್ಪಾಗತೊಡಗಿದವು ಎಂದು ಗುಂಗರಹಳ್ಳಿಯ ರೈತ ಚನ್ನಪ್ಪ ಅಳಲು ತೋಡಿಕೊಂಡಿದ್ದಾರೆ. ಹಾಕಿದ ಬಂಡವಾಳವೂ ಕೈಗೆ ಸಿಗದ ಕಾರಣ ರೈತರು ಮಾವಿನ ಕಾಯಿಗಳನ್ನು ಕೊಯ್ಯದೆ ಹಾಗೇ ಮರದಲ್ಲೇ ಬಿಟ್ಟಿದ್ದಾರೆ.

ಮಾಜಿ ಶಾಸಕರ ಬಗ್ಗೆ ಹಗುರ ಮಾತು ಬೇಡ

ರಾಮನಗರ: ಬಿಡದಿ ಟೌನ್ ಷಿಪ್ ವಿಚಾರದಲ್ಲಿ ಜೆಡಿಎಸ್ ಮುಖಂಡರು ಮಾತನಾಡುವ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ರಾಜು ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ ಎಂದು ತಾಪಂ ಮಾಜಿ ಸದಸ್ಯ ಪಿ. ಅಶ್ವತ್ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಮನಗರದಲ್ಲಿ ಜೆಡಿಎಸ್ ಪಕ್ಷ ಕಟ್ಟಲು ಹಗಲಿರುಳು ಶ್ರಮಿಸಿದ್ದಾರೆ. ತಮ್ಮ ಆಸ್ತಿಯನ್ನು ಮಾರಿಕೊಂಡು ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ. ಎಚ್ಡಿಕೆ ಅವರು ಸಿಎಂ ಆಗಲು ಕೆ.ರಾಜು ಅವರ ಶ್ರಮ ಎಷ್ಟು ಎಂದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ ಎಂದು ಹೇಳಿದರು.

ಕೆ.ರಾಜು ಅವರು ಶಾಸಕರಾಗಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರೆ ಅದನ್ನು ಜನರ ಮುಂದಿಡಲಿ. ಇದನ್ನು ಬಿಟ್ಟು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ. ಆಪರೇಷನ್ ಕಮಲ ನಡೆದಾಗ ಹಣ ಹಾಗೂ ಮಂತ್ರಿ ಗಿರಿ ಆಫರ್ ಬಂದರು ಅವರು ಪಕ್ಷಕ್ಕೆ ನಿಷ್ಠರಾಗಿದ್ದರು ಎಂಬುದನ್ನು ಜೆಡಿಎಸ್ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದರು. ಪಕ್ಷದಲ್ಲಿ ನಿಷ್ಠಾಂತರಿಗೆ ಟಿಕೇಟ್ ನೀಡಿ ಅದರ ಹಿಂದೆ ಅವರ ಸೋಲಿಗೆ ಚಿತಾವಣೆ ನಡೆಸಿರುವ ಬಗ್ಗೆ ಚಾಮುಂಡೇಶ್ವರಿ ದೇವಾಲಯದ ಮುಂದೆ ಪ್ರಮಾಣ ಮಾಡಲು ಸಿದ್ಧ.

ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ ಮಾತನಾಡಿದರು.

ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜಶೇಖರ್, ಮುಖಂಡ ಮಂಚೇಗೌಡ, ತಾಪಂ ಮಾಜಿ ಅಧ್ಯಕ್ಷ ಜಗದೀಶ್, ಬೈರಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ ಹಾಗೂ ಇತರರು ಇದ್ದರು.



32 ವರ್ಷ ಸಾರ್ಥಕ ಸೇವೆಗೆ ಬೀಳ್ಕೊಡುಗೆ

ಚನ್ನಪಟ್ಟಣ: ತಾಲೂಕಿನ ಸುಳ್ಳೇರಿ ಅವ್ವೇರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಅಕ್ಕೂರು ಹೊಸಹಳ್ಳಿ ವೀರಾಸ್ವಾಮಿ ಅವರು ಮೇ 31ರಂದು ವಯೋನಿವೃತ್ತಿ ಹೊಂದಲಿರುವ ಹಿನ್ನೆಲೆಯಲ್ಲಿ ಶಾಲಾ ಎಸ್‌ಡಿಎಂಸಿ ಸಮಿತಿ, ಗ್ರಾಮಸ್ಥರು ಹಾಗೂ ವಿವಿಧ ಶಿಕ್ಷಕ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ಆತ್ಮೀಯ ಹಾಗೂ ಹೃದಯಸ್ಪರ್ಶಿ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಶಾಲಾ ಆವರಣದಲ್ಲಿ ನಡೆದ ಸಮಾರಂಭದಲ್ಲಿ ವೀರಾಸ್ವಾಮಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು, ಪೋಷಕರು, ಗ್ರಾಮಸ್ಥರು ಹಾಗೂ ಸಹೋದ್ಯೋಗಿಗಳು ತಮ್ಮ ನೆಚ್ಚಿನ ಶಿಕ್ಷಕರಿಗೆ ಶುಭ ಹಾರೈಸಿ ಅವರ ಸೇವಾ ಸಾಧನೆಯನ್ನು ಕೊಂಡಾಡಿದರು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಲಿಂಗಯ್ಯ, ಶಿಕ್ಷಣ ಇಲಾಖೆಯಲ್ಲಿ ವೀರಾಸ್ವಾಮಿ ಅವರು ಸಲ್ಲಿಸಿರುವ 32 ವರ್ಷಗಳ ಸೇವೆ ಅನುಕರಣೀಯವಾಗಿದೆ ಎಂದು ಶ್ಲಾಘಿಸಿದರು.

ವೀರಾಸ್ವಾಮಿ ಅವರು ನಿವೃತ್ತಿ ಜೀವನವನ್ನು ಪತ್ನಿ ಸುಮಿತ್ರಾ, ಪುತ್ರ ನವೀನ್ ಕುಮಾರ್ ಹೆಚ್.ವಿ., ಪುತ್ರಿ ಹೆಚ್.ವಿ. ರಂಜಿತಾ ಹಾಗೂ ಇಬ್ಬರು ಮೊಮ್ಮಕ್ಕಳೊಂದಿಗೆ ಆರೋಗ್ಯ, ನೆಮ್ಮದಿ ಮತ್ತು ಸಂತೋಷದಿಂದ ಕಳೆಯಲಿ ಎಂದು ಶುಭ ಹಾರೈಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿ, ವೀರಾಸ್ವಾಮಿ ಅವರು, ತಮ್ಮ ಸೇವಾ ಅವಧಿಯಲ್ಲಿ ಸಹಕರಿಸಿದ ಶಿಕ್ಷಣ ಇಲಾಖೆ ಅಧಿಕಾರಿಗಳು, ಸಹ ಶಿಕ್ಷಕರು, ಗ್ರಾಮಸ್ಥರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಶಾಲೆಯ ಶಿಕ್ಷಕಿ ಪ್ರಭಾ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರಾಮು, ಅವ್ವೇರಹಳ್ಳಿ ಡೇರಿ ಸಿಇಒ ಮಹೇಶ್ ಬಿ., ಡೇರಿ ಮಾಜಿ ಅಧ್ಯಕ್ಷ ಮಹೇಶ್, ಎಲ್‌ಐಸಿ ಜವರಯ್ಯ, ಜಗದೀಶ್, ಚಲುವರಾಜು, ಕರಿಯಪ್ಪ, ಪೊಲೀಸ್ ಉಮೇಶ್, ಸಿದ್ದು, ತಮ್ಮಯ್ಯ, ಚಿಕ್ಕಮರಿ ಇದ್ದರು.



ಕರಿಯಮ್ಮ ದೇವಾಲಯಕ್ಕೆ ಬಸ್ ಕೊಡುಗೆ

ಚಿಕ್ಕನಾಯಕನಹಳ್ಳಿ: ತಾಲೂಕಿನ ಶಕ್ತಿದೇವತೆಯೆನಿಸಿ ಅಪಾರ ಭಕ್ತವರ್ಗವನ್ನು ಹೊಂದಿರುವ ಶ್ರೀ ಮಲ್ಲಿಗೆರೆ ಕರಿಯಮ್ಮ ದೇವಿ ದೇವಾಲಯಕ್ಕೆ ಭಕ್ತರಿಂದ ನೂತನ ಬಸ್ ಸಮರ್ಪಣೆ ಮಾಡಲಾಯಿತು.

ತಾಲೂಕಿನ ಹಂದಕೆರೆ ಹೋಬಳಿ ಮಲ್ಲಿಗೆರೆ ಗ್ರಾಮದೇವತೆ ಶಕ್ತಿದೇವತೆ ಶ್ರೀಮಲ್ಲಿಗೆರೆ ಕರಿಯಮ್ಮ ದೇವಾಲಯ ಹೆಸರಿಗೆ ತಕ್ಕಹಾಗೆ ಸಾವಿರಾರು ಭಕ್ತರ ಆರಾಧ್ಯದೈವವೆನಿಸಿ ಪ್ರಸಿದ್ಧಿ ಹೊಂದಿದ್ದು ದಿನೇದಿನೇ ಭಕ್ತರನ್ನು ತನ್ನ ಪ್ರಭಾವಲಯಕ್ಕೆ ಸೆಳೆಯುತ್ತಲೇ ಇದೆ. ಈ ದೇವರಿಗೆ ತಾಲೂಕಿನ ಸೋರಲಮಾವು ಗ್ರಾಮದ ಕೀರ್ತಿಶೇಷ ಬಾಲಯ್ಯ ನಿಂಗಪ್ಪ ಹಾಗೂ ತಿಮ್ಮಕ್ಕ ಭಕ್ತರಾಗಿದ್ದು, ಅವರ ಸ್ಮರಣಾರ್ಥ ಅವರ ಮಕ್ಕಳಾದ ಕುಮಾರಸ್ವಾಮಿ, ಚಂದ್ರಕಲಾ ಕುಟುಂಬದಿಂದ ನೂತನ ಬಸ್‌ನ್ನು ದೇವಾಲಯಕ್ಕೆ ವಿಧ್ಯುಕ್ತವಾಗಿ ಸಮರ್ಪಿಸಲಾಯಿತು. ಮೂಲ ದೇವರಿಗೆ ಅಭಿಷೇಕ ಹಾಗೂ ವಿಶೇಷ ಪೂಜಾಕಾರ್ಯಗಳು ನಡೆದು, ನಂತರ ದೇವರ ಉತ್ಸವ ಮೂರ್ತಿಯ ಮೆರವಣಿಗೆಯನ್ನು ಅಪಾರಭಕ್ತರ ಸಮ್ಮುಖದಲ್ಲಿ ನಡೆಸಿ ನಂತರ ಅಲಂಕೃತ ಉತ್ಸವ ಮೂರ್ತಿಯನ್ನು ನೂತನ ಬಸ್‌ನಲ್ಲಿರಿಸಿ ಪೂಜೆ ಸಲ್ಲಿಸಿ ದೇವಾಲಯಕ್ಕೆ ಹಸ್ತಾಂತರಿಸಲಾಯಿತು. ಮಲ್ಲಿಗೆರೆ ಶ್ರೀ ಕರಿಯಮ್ಮ ದೇವಿಯು ಈಚೆಗೆ ತನ್ನ ಪ್ರಭಾವವನ್ನು ರಾಜ್ಯದ ಮೂಲೆಮೂಲೆಗಳಲ್ಲಿ ಪಸರಿಸಿದ್ದು, ಭಕ್ತರು ವಿವಿದೆಡೆ ದೇವರನ್ನು ನಮ್ಮ ನೆಲೆಗಳಿಗೆ ಕೊಂಡೊಯ್ಯುತ್ತಾರೆ, ಇದಕ್ಕೆ ಸಹಾಯಕವಾಗಲಿ ಎಂಬ ಸದುದ್ದೇಶದಿಂದ ಭಕ್ತರು ನೂತನ ಬಸ್‌ನ್ನು ದೇವಾಲಯಕ್ಕೆ ಸಮರ್ಪಿಸಿದ್ದಾರೆ.



ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ರಾಮನಗರ: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಪದಾಧಿಕಾರಿಗಳು ಹಾಗೂ ನೌಕರರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಿದರು. ಜಿಲ್ಲೆಯ ವಿವಿಧ ಗ್ರಾಪಂಗಳಿಂದ ಆಗಮಿಸಿದ್ದ ನೌಕರರು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಸಂಘದ ಜಿಲ್ಲಾಧ್ಯಕ್ಷ ಪ್ರದೀಪ್ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಹೊರಡಿಸಿ ತಕ್ಷಣ ಜಾರಿಗೊಳಿಸಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರರು, ಕ್ಲರ್ಕ್, ದತ್ತಾಂಶ ನಮೂದಕರು, ನೀರುಗಂಟಿಗಳು, ಜವಾನರು ಹಾಗೂ ಸ್ವಚ್ಛತಾಗಾರರನ್ನು ಏಕಕಾಲಕ್ಕೆ ಸರ್ಕಾರಿ ನೌಕರರೆಂದು ಘೋಷಿಸಬೇಕು ಮತ್ತು ಸೇವಾ ಹಿರಿತನ ಪರಿಗಣಿಸಿ ವೇತನ ಬಡ್ತಿ ನೀಡಬೇಕು, ಎಂದು ಒತ್ತಾಯಿಸಿದರು.

ನೌಕರರು ನಿವೃತ್ತಿ ಅಥವಾ ಮರಣ ಹೊಂದಿದರೆ ರೂ. 6 ಲಕ್ಷ ಇಡುಗಂಟು ನೀಡಬೇಕು, ಸ್ವಚ್ಛವಾಹಿನಿ ನೌಕರರ ವಾರ್ಷಿಕ ನವೀಕರಣ ಪದ್ಧತಿ ರದ್ದುಪಡಿಸಿ ರೂ. 15 ಸಾವಿರ ವೇತನ ನಿಗದಿಪಡಿಸಬೇಕು ಹಾಗೂ ಖಾಲಿ ಇರುವ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು. ಬಳಿಕ ಜಿಲ್ಲಾಡಳಿತಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ಜಯಲಿಂಗು, ಸುರೇಶ್, ರಾಜೇಶ್, ನಾಗರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಯಲಿಯೂರು ನಾಗಣ್ಣ ಒತ್ತಾಯ

ರೇವಣ್ಣಗೆ ಮಂತ್ರಿ ಸ್ಥಾನ ನೀಡಿ: ಕುರುಬ ಸಂಘ

ಚನ್ನಪಟ್ಟಣ: ಕಾಂಗ್ರೆಸ್ ಹೈಕಮಾಂಡ್ ಸೂಚನೆಗೆ ತಲೆಬಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ, ನುಡಿದಂತೆ ನಡೆದಿದ್ದು, ಇದಕ್ಕೆ ದ್ಯೋತಕವಾಗಿ ಕುರುಬ ಸಮುದಾಯದ ಎಚ್ ಎಂ ರೇವಣ್ಣ ಹಾಗೂ ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಯಲಿಯೂರು ನಾಗಣ್ಣ ಒತ್ತಾಯಿಸಿದರು.

ಪಟ್ಟಣದ ತಾಲೂಕು ಕುರುಬರ ಸಂಘದ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಸಚಿವ ಸಂಪುಟದಲ್ಲಿ ಕುರುಬ ಸಮುದಾಯದ ಹಿರಿಯ ನಾಯಕರಾದ ಹೆಚ್.ಎಂ. ರೇವಣ್ಣ ಹಾಗೂ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದರು.

ತಾಲೂಕು ಕುರುಬರ ಸಂಘದ ಗೌರವಾಧ್ಯಕ್ಷ ಕೆ.ಬಿ. ಬೀರಯ್ಯ ಮಾತನಾಡಿ, ಹೈಕಮಾಂಡ್ ಮೇಲಿನ ಗೌರವದಿಂದ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ್ದಾರೆ. ಇಂತಹ ನಾಯಕನಿಗೆ ಪಕ್ಷದಲ್ಲಿ ಉನ್ನತ ಸ್ಥಾನಮಾನ ನೀಡಬೇಕು. ಜೊತೆಗೆ ಡಾ. ಯತೀಂದ್ರ ಸಿದ್ದರಾಮಯ್ಯ ಹಾಗೂ ಹೆಚ್.ಎಂ. ರೇವಣ್ಣ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಹೆಚ್.ಬಿ. ರಾಮಣ್ಣ ಮಾತನಾಡಿ, ಕಾಂಗ್ರೆಸ್ ಪಕ್ಷವನ್ನು ರಾಜ್ಯದಾದ್ಯಂತ ಸಂಘಟಿಸುವಲ್ಲಿ ಸಿದ್ದರಾಮಯ್ಯ ಅವರ ಪಾತ್ರ ಮಹತ್ವದ್ದಾಗಿದೆ. 2013 ಹಾಗೂ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಅವರ ಕೊಡುಗೆ ಅಪಾರ. ಹೀಗಾಗಿ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು ಎಂದು ಹೇಳಿದರು.

ಸಂಘದ ನಿರ್ದೇಶಕ ಟಾಯ್ಸ್ ವೆಂಕಟೇಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನವಲೇಶ್ ಮಾತನಾಡಿದರು. ತಾಲೂಕು ಕುರುಬರ ಸಂಘದ ನಿರ್ದೇಶಕರಾದ ಮಾದೇಶ್, ಶಿವಬೀರಯ್ಯ, ಹುಚ್ಚಯ್ಯನದೊಡ್ಡಿ ಶಿವಣ್ಣ, ಉಮೇಶ್, ಶ್ರೀನಿವಾಸ್, ರೇವಣ್ಣ, ಅಮ್ಮಳ್ಳಿದೊಡ್ಡಿ ಶಿವಲಿಂಗಯ್ಯ, ಜಯಲಕ್ಷ್ಮಿ, ಶಿವಲಿಂಗಪ್ಪ, ಸಂಕಲಗೆರೆ ದೊಡ್ಡಹುಚ್ಚಯ್ಯ, ರವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಪದಗ್ರಹಣ

ಶೈಕ್ಷಣಿಕ ಅಭಿವೃದ್ಧಿ, ಶಾಲಾ ದಾಖಲಾತಿ ಹೆಚ್ಚಿಸಿ

ಕುಣಿಗಲ್: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದರ ಜತೆಗೆ ಶೈಕ್ಷಣಿಕ ಅಭಿವೃದ್ಧಿಗೆ ಹಾಗೂ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ಶ್ರಮಿಸಬೇಕು ಎಂದು ಜಿಲ್ಲಾ ಅಧ್ಯಕ್ಷ ತಿಮ್ಮೇಗೌಡ ಹೇಳಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಚುನಾವಣೆಯಲ್ಲಿ ನೂತನವಾಗಿ ಆಯ್ಕೆಯಾದ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ತಾಲೂಕಿನಲ್ಲಿ 22 ಶಾಲೆಗಳಲ್ಲಿ ಶಿಕ್ಷಕರು ಇಲ್ಲದಿರುವುದರಿಂದ ಹೆಚ್ಚುವರಿ ಶಿಕ್ಷಕರನ್ನ ಆ ಶಾಲೆಗಳಿಗೆ ನಿಯೋಜಿಸಲಾಗುವುದು, ತಾವುಗಳು ಇಂತಹ ಸಂದರ್ಭದಲ್ಲಿ ಯಾವುದೇ ಪ್ರಭಾವವನ್ನು ಬೀರದೆ ಸ್ಪಂದಿಸಿ ಸಹಕಾರ ನೀಡಬೇಕು, ತಾಲೂಕಿನ ಅಂಚಿನಲ್ಲಿರುವ ಶಾಲೆಗಳಲ್ಲಿರುವ ಮಕ್ಕಳು ನಮ್ಮವರೇ ಎಂದರು.

ತುಮಕೂರು ತಾಲೂಕು ಅಧ್ಯಕ್ಷ ನಾಗರಾಜು ಮಾತಾನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷರಾದ ಪದ್ಮಾವತಿ, ಎ, ಸವಿತಾ ಜೆ, ಪ್ರಧಾನ ಕಾರ್ಯದರ್ಶಿ ಉಮೇಶ್, ಖಜಾಂಚಿ ಹನುಮಂತರಾಯಪ್ಪ, ಬಿ ಹೆಚ್, ನಿರ್ದೇಶಕ ನಟರಾಜು ಅಧಿಕಾರ ವಹಿಸಿಕೊಂಡರು. ಅವರನ್ನು ವಿವಿಧ ಶಿಕ್ಷಕರ ಸಂಘಟನೆಗಳಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರುಳು ಸಿದ್ದಪ್ಪ, ನಿವೃತ್ತ ಬಿ ಇ ಒ ಸಿದ್ದಯ್ಯ, ಎಚ್ ಬಿ ರವಿಕುಮಾರ್, ರೇಣುಕಾ ವೈ ಎಚ್, ಸಿ ಆರ್ ಪಿ ನಾಗರಾಜು, ಸಾವಿತ್ರಿಬಾಯಿ ಫುಲೆ ಅಧ್ಯಕ್ಷೆ ಜಯಲಕ್ಷ್ಮಿ, ಶ್ರೀನಿವಾಸ್, ರವಿಕುಮಾರ್ ವಿವಿಧ ಶಿಕ್ಷಕರ ಸಂಘದ ಪದಾಧಿಕಾರಿಗಳು ಮುತ್ತು ನೂರಾರು ಶಿಕ್ಷಕರು ಇದ್ದರು.



ಕಿರುಸುದ್ದಿ

ಕೋಲಾರ ಜಿಲ್ಲೆಗೆ ಸಚಿವ ಸ್ಥಾನ ನೀಡಲು ಮಾಜಿ ಶಾಸಕ ಒತ್ತಾಯ

ಬಂಗಾರಪೇಟೆ: ಬಂಗಾರಪೇಟೆ ಶಾಸಕ ಎಸ್.ಎನ್.ನಾರಾಯಣಸ್ವಾಮಿಗೆ ಮೊದಲ ಆದ್ಯತೆಯನ್ನು ರಾಜ್ಯ ಸಚಿವ ಸಂಪುಟದಲ್ಲಿ ನೀಡಬೇಕೆಂದು ಮಾಜಿ ಶಾಸಕ ಎಂ.ನಾರಾಯಣಸ್ವಾಮಿ ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಒತ್ತಾಯಿಸಿದ್ದಾರೆ. ಪಟ್ಟಣದ ಅವರ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಇತ್ತೀಚಿನ ರಾಜಕೀಯ ವಿದ್ಯಮಾನಗಳಲ್ಲಿ ಕೋಲಾರ ಜಿಲ್ಲೆಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂಬ ಕಳವಳ ವ್ಯಕ್ತಪಡಿಸಿರುವ ಅವರು ನೂತನ ಸಚಿವ ಸಂಪುಟದಲ್ಲಿ ಜಿಲ್ಲೆಯ



ಶಾಸಕರಿಗೆ ಹೆಚ್ಚಿನ ಸಚಿವ ಸ್ಥಾನಗಳನ್ನು ನೀಡಬೇಕೆಂದು ಒತ್ತಾಯಿಸಿದ್ದಾರೆ. ರಾಜಕೀಯ ಇತಿಹಾಸದಲ್ಲಿ ಕೋಲಾರ ಮತ್ತು ಅವಿಭಜಿತ ಚಿಕ್ಕಬಳ್ಳಾಪುರ ಜಿಲ್ಲೆಯು ದೇಶ ಹಾಗೂ ರಾಜ್ಯ ಮಟ್ಟದಲ್ಲಿ ಅತ್ಯಂತ ಪ್ರಸಿದ್ಧ ಪಡೆದಿದೆ, ಕೆ.ಸಿ.ರೆಡ್ಡಿ, ವೈ.ರಾಮಚಂದ್ರ, ಗೌರಿಬಿದನೂರಿನ ನಾಗರೆಡ್ಡಿ, ಆಂಜನೇಯರೆಡ್ಡಿ, ಸೀತಪ್ಪ, ಎಂ.ವಿ.ಕೃಷ್ಣಪ್ಪ, ಎಸ್.ಸಿ.ಲಿಂಗಾರೆಡ್ಡಿ, ಮೊಗಳಗೆರೆನಾರಾಯಣಗೌಡ, ಬೈರೇಗೌಡರು ಹಾಗೂ ಶ್ರೀನಿವಾಸಗೌಡರಂತಹ ಮಹನೀಯರು ಈ ಭಾಗದಿಂದ ಸಚಿವರಾಗಿ, ಮುಖ್ಯಮಂತ್ರಿಗಳಾಗಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದು ಸ್ಮರಿಸಿದರು. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯ ಹಿತದೃಷ್ಟಿಯಿಂದ ಬಂಗಾರಪೇಟೆ ಕ್ಷೇತ್ರವನ್ನು ಸತತ ಮೂರು ಬಾರಿ ಪ್ರತಿನಿಧಿಸಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಹಿರಿಯ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಅವರಿಗೆ ಮೊದಲ ಆದ್ಯತೆಯಾಗಿ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು. ಒಟ್ಟಾರೆಯಾಗಿ, ಪಕ್ಷದ ಬಲವರ್ಧನೆ ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳು ಕೋಲಾರ ಜಿಲ್ಲೆಗೆ ಸಚಿವ ಸಂಪುಟದಲ್ಲಿ ಹೆಚ್ಚಿನ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಶ್ರೀನಿವಾಸ್‌ಗೆ ಸಚಿವ ಸ್ಥಾನಕ್ಕೆ ಆಗ್ರಹ

ಮಾಲೂರು: ಸಾಮಾಜಿಕ ನ್ಯಾಯದ ಧ್ವನಿ ವಿಧಾನ ಪರಿಷತ್ ಸದಸ್ಯರು ಆದ ಡಿಟಿ ಶ್ರೀನಿವಾಸ್ ರವರಿಗೆ ಮುಂಬರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಮಾಲೂರು ತಾಲೂಕು ಯಾದವ (ಗೊಲ್ಲ)ಸಂಘದ ಅಧ್ಯಕ್ಷರಾದ ಎ ವೈ ಗೋವಿಂದಪ್ಪ ರವರು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಗೆ ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಎ ವೈ ಗೋವಿಂದಪ್ಪ ರವರು ರಾಜ್ಯದಲ್ಲಿ ಯಾದವ ಗೊಲ್ಲ ಸಮುದಾಯ 19 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದೆ ಈ ಹಿಂದೆ ಸಮಾಜದ ಧೀಮಂತ ನಾಯಕರಾಗಿದ್ದ ಎ ಕೃಷ್ಣಪ್ಪನವರ ನಿಧನದ ನಂತರ ರಾಜ್ಯದಲ್ಲಿ ನಡೆದ ಸಂಘದ ಚುನಾವಣೆಯಲ್ಲಿ ಡಿಟಿ ಶ್ರೀನಿವಾಸ್ ರವರು



ಆಯ್ಕೆಯಾಗುವ ಮೂಲಕ ಇಡೀ ರಾಜ್ಯದ ಪ್ರವಾಸ ಕೈಗೊಂಡು ಸಮಾಜದ ಸಂಘಟನೆಗೆ ಶ್ರಮಿಸಿದ್ದಾರೆ. ನಂತರ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಇವರು ಗೆಲುವು ಸಾಧಿಸುವ ಮೂಲಕ ಕಾಂಗ್ರೆಸ್ ಪಕ್ಷ ಜಯ ಸಾಧಿಸಿದೆ ಇದ್ದ ಕ್ಷೇತ್ರದಲ್ಲಿ ಇವರು ಮೊದಲ ಬಾರಿಗೆ ಪರಿಷತ್ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಪಕ್ಷಕ್ಕೆ ಶಕ್ತಿ ತುಂಬಿದ್ದಾರೆ. ರಾಜ್ಯದಲ್ಲಿ ಹಿಂದುಳಿದ ಪ್ರವರ್ಗ 1 ಜಾತಿಗಳ ಒಕ್ಕೂಟ ಅಧ್ಯಕ್ಷರಾಗಿ 95ಕ್ಕೂ ಹೆಚ್ಚು ಸಮಾಜಗಳನ್ನು ಸಂಘಟಿಸಿ ಅವರನ್ನು ಮುಂದಾಗಿ ತರುವ ಮೂಲಕ ಶ್ರಮಿಸಿದ್ದಾರೆ. ಇನ್ನು ಮುಂದಿನ ಇನ್ನಷ್ಟು ಕಾಂಗ್ರೆಸ್ ಪಕ್ಷ ಬಲಪಡಿಸಲು ಜತೆಗೆ ಪ್ರವರ್ಗ 1 ಸಮಾಜದಲ್ಲಿರುವ ಎಲ್ಲಾ ಜಾತಿ ಜನಾಂಗಗಳನ್ನು ಒಗ್ಗೂಡಿಸಲು ಶ್ರಮಿಸಲು ಸಚಿವ ಸ್ಥಾನ ನೀಡಬೇಕೆಂದು ನ್ಯಾಯ ಕಲ್ಪಿಸಬೇಕೆಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ

ಅಂಬೇಡ್ಕರ್ ಸೇವಾ ಸಮಿತಿ ಗ್ರಾಮ ಶಾಖೆಗಳ ಉದ್ಘಾಟನೆ

ಶಿಡ್ಲಘಟ್ಟ: ತಾಲೂಕಿನ ಲಕ್ಕಳ್ಳಿ ಹಾಗೂ ಬೈಲಹಳ್ಳಿ ಗ್ರಾಮಗಳಲ್ಲಿ ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕದ ಗ್ರಾಮ ಶಾಖೆಗಳನ್ನು ಸಂಸ್ಥಾಪಕ ರಾಜ್ಯಾಧ್ಯಕ್ಷ ಥೇಮ್ಸ್ ಸಂದೇಶ್ ಉದ್ಘಾಟಿಸಿದರು.ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಮಾಜದಲ್ಲಿ ಹಿಂದುಳಿದ ವರ್ಗಗಳು, ದಲಿತರು ಹಾಗೂ ಬಡ ಜನರಿಗೆ ನ್ಯಾಯ ಮತ್ತು ಸರ್ಕಾರದ ಸೌಲಭ್ಯಗಳು ಸಮರ್ಪಕವಾಗಿ ದೊರೆಯಬೇಕಾದರೆ ಸಂಘಟಿತ ಹೋರಾಟ ಅತ್ಯಗತ್ಯವಾಗಿದೆ ಎಂದು ಹೇಳಿದರು. ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕದ ಲಕ್ಕಳ್ಳಿ ಗ್ರಾಮ ಶಾಖೆಯ ನೂತನ ಪದಾಧಿಕಾರಿಗಳನ್ನು ಘೋಷಿಸಲಾಯಿತು. ವೆಂಕಟೇಶ್, ನರಸಿಂಹಮೂರ್ತಿ, ಮುನಿ ಪಾಪಣ್ಣ ಹಾಗೂ ಸುಬ್ರಮಣಿ ಅವರನ್ನು ವಿವಿಧ ಹುದ್ದೆಗಳಿಗೆ ಆಯ್ಕೆ ಮಾಡಲಾಯಿತು. ಹರೀಶ್ ಎಂ.ವಿ., ಅನಿಲ್, ನಾಗರಾಜ್, ನರಸಿಂಹರಾಜು, ಇದ್ದರು.



ಬಂಗಾರಪೇಟೆಯಲ್ಲಿ ಶುಕ್ರವಾರ ಭಾರೀ ಗಾಳಿ-ಮಳೆಗೆ ಬೃಹತ್ ಮರಗಳು ಧರೆಗುರುಳಿ ಜನಜೀವನ ಅಸ್ತವ್ಯಸ್ತಗೊಂಡಿತು.

ಮಳೆಗೆ ಜನಜೀವನ ಅಸ್ತವ್ಯಸ್ತ

ಬಂಗಾರಪೇಟೆ: ಶುಕ್ರವಾರ ಸಂಜೆ ಸುರಿದ ಭಾರಿ ಮಳೆಗೆ ಬಂಗಾರಪೇಟೆ ತಾಲೂಕಿನಲ್ಲಿ ಅನೇಕ ಕಡೆ ದೊಡ್ಡ ದೊಡ್ಡ ಮರಗಳು ಧರೆಗೆ ಉರುಳಿದ್ದು, ರೈತರ ಬೆಳೆಗಳು ಹಾನಿಗೊಳಗಾಗಿ ಅಪಾರ ನಷ್ಟ ಸಂಭವಿಸಿದೆ. ಏಕಾಏಕಿ ಸುರಿದ ಗಾಳಿ ಸಹಿತ ಮಳೆಯಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತು.

ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಮಳೆಯ ಆರ್ಭಟ ಹೆಚ್ಚಾಗಿದ್ದು, ರಸ್ತೆಗಳ ಪಕ್ಕದಲ್ಲಿದ್ದ ಹಳೆಯ ಮರಗಳು ನೆಲಕ್ಕುರುಳಿ ವಾಹನ ಸಂಚಾರಕ್ಕೂ ಅಡಚಣೆ ಉಂಟಾಯಿತು. ಕೆಲವೆಡೆ ವಿದ್ಯುತ್ ಕಂಬಗಳು ಹಾನಿಗೊಂಡ ಪರಿಣಾಮ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವೂ ಕಂಡುಬಂದಿದೆ.

ಮಳೆಯ ತೀವ್ರತೆಗೆ ರೈತರು ಬೆಳೆದಿದ್ದ ಟೊಮೇಟೊ, ಸೇರಿದಂತೆ ಹಲವು ಬೆಳೆಗಳು ನೀರಿನಲ್ಲಿ ಮುಳುಗಿ ಹಾನಿಗೊಳಗಾಗಿವೆ. ಗಾಳಿಯ ರಭಸಕ್ಕೆ ಬೆಳೆಗಳು ನೆಲಕ್ಕುರುಳಿದ್ದು, ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಮತ್ತೊಂದು ಹೊಡೆತ ಬಿದ್ದಂತಾಗಿದೆ. ಕಷ್ಟಪಟ್ಟು ಬೆಳೆದ ಬೆಳೆ ಮಳೆಯಿಂದ ಹಾಳಾಗಿದೆ. ಸಂಬಂಧಪಟ್ಟ ಪಟ್ಟ ಇಲಾಖೆ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಪರಿಹಾರ ನೀಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಮರಗಳು ವಿದ್ಯುತ್ ತಂತಿಯ ಮೇಲೆ ಬಿದ್ದ ಪರಿಣಾಮ ಕೆಲ ಗಂಟೆಗಳ ಕಾಲ ವಿದ್ಯುತ್ ಇಲ್ಲದೆ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು.



ಕೋಲಾರದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾಗಿದ್ದ ಲೋಕನಾಥ್ ಅವರು ನಿವೃತ್ತರಾಗಿದ್ದು, ಅವರನ್ನು ಶನಿವಾರ ವಿವಿಯ ಕುಲಪತಿ ಪ್ರೊ.ಬಿ.ಕೆ.ರವಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸನ್ಮಾನಿಸಿ ಬೀಳ್ಕೊಡಲಾಯಿತು. ವಿವಿಯ ವಿತ್ತಾಧಿಕಾರಿ ವಸಂತಕುಮಾರ್, ಸ್ನಾತಕೋತ್ತರಕೇಂದ್ರದ ನಿರ್ದೇಶಕಿ ಪ್ರೊ.ಕುಮುದಾ ಮತ್ತಿತರರಿದ್ದರು.

ಜೂ.5ಕ್ಕೆ ಚಿಕ್ಕಬಳ್ಳಾಪುರದಿಂದ ವಿಧಾನಸೌಧ ಚಲೋ: ಕೋಡಿಹಳ್ಳಿ

ಜಮೀನು ಕಬಳಿಕೆಗೆ ಯತ್ನ

ಕೋಲಾರ: ಕೈಗಾರಿಕೆಗಾಗಿ ರೈತರ ಜಮೀನನ್ನು ಕಬಳಿಸಲು ಸರ್ಕಾರ ಮುಂದಾಗಿರುವ ಕ್ರಮವನ್ನು ಖಂಡಿಸಿ, ಜೂನ್ 5ರಂದು ಬೆಳಗ್ಗೆ 10.30ಕ್ಕೆ ಚಿಕ್ಕಬಳ್ಳಾಪುರದಿಂದ ವಿಧಾನ ಸೌಧ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರೈತರ ಜಮೀನನ್ನು ಕೈಗಾರಿಕೆಗಳ ಹೆಸರಿನಲ್ಲಿ ಸ್ವಾಧೀನ ಪಡಿಸಿಕೊಳ್ಳುತ್ತಾ ಹೋದರೆ ಮುಂದಿನ ದಿನಗಳಲ್ಲಿ ಆಹಾರ ಬೆಳೆದು ಕೊಡುವವರು ಯಾರು ಎಂದು ಪ್ರಶ್ನಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ವ್ಯಾಪ್ತಿಯಲ್ಲಿ 2823 ಎಕರೆ ಕೃಷಿ ಭೂಮಿಯನ್ನು ಸ್ವಾಧೀನ ಮಾಡಲಾಗುತ್ತಿದೆ. ಇದರಿಂದ ನೂರಾರು ಕುಟುಂಬಗಳು ಬೀದಿಪಾಲಾಗುತ್ತಿವೆ. ಸದರಿ ಜಮೀನಿನಲ್ಲಿ ರೈತರು ಹೂವು, ತರಕಾರಿ, ಹಣ್ಣು ಬೆಳೆದು ದೇಶಕ್ಕೆ ಪೂರೈಕೆ ಮಾಡುತ್ತಿದ್ದರು. ಆ ಮೂಲಕ ಆಹಾರ ಸಮಸ್ಯೆ ನಿಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದೀಗ ಜಮೀನು ಕೈಗಾರಿಕೆಗೆ ಸ್ವಾಧೀನ ಪಡಿಸಿಕೊಳ್ಳದಂತೆ ರೈತರು ಸುಮಾರು ದಿನಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸುತ್ತಿದ್ದು, 81ನೇ ದಿನಕ್ಕೆ ಕಾಲಿಡುವ ದಿನ ವಿಧಾನ ಸೌಧ ಚಲೋ ಹಮ್ಮಿಕೊಂಡಿದ್ದೇವೆ, ಇದಕ್ಕೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಕೋರಿದರು.

ಅಭಿವೃದ್ಧಿಗೆ ಕೈಗಾರಿಕೆಗಳು ಸಹ ಬೇಕು, ಇದಕ್ಕೆ ರೈತರ ಕೃಷಿ ಜಮೀನೆ ಬೇಕಾ, ರಾಜಕಾರಣಿಗಳು, ಉದ್ಯಮಿಗಳು ಒತ್ತುವರಿ ಮಾಡಿಕೊಂಡಿರುವ ನೂರಾರು ಎಕರೆ ಸರ್ಕಾರಿ ಜಮೀನು ಇಲ್ಲವೇ. ಅದನ್ನು ತೆರವುಗೊಳಿಸಿ ಕೈಗಾರಿಕೆಗಳ ಸ್ಥಾಪನೆಗೆ ಬಳಕೆ ಮಾಡಿಕೊಳ್ಳಿ, ಅದು ಬಿಟ್ಟು ರೈತರ ಜಮೀನಿನ ಮೇಲೆ ಕಣ್ಣಿಡುವುದು ಎಷ್ಟು ಮಾತ್ರ ಸರಿ ಎಂದು ಪ್ರಶ್ನಿಸಿದರು.

ಬಲವಂತವಾಗಿ ರೈತರ ಜಮೀನನ್ನು ಸರ್ಕಾರ ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳಬಾರದು, 2013ರ ಭೂ ಸ್ವಾಧೀನ ಕಾಯ್ದೆಯನ್ನು ಅಧಿಕಾರಿಗಳು ಪಾಲನೆ ಮಾಡಬೇಕು, ಇದನ್ನು ಜಾರಿಗೆ ತಂದಿದ್ದು ಯುಪಿಎ ಸರ್ಕಾರ, ಇದರಿಂದ ರೈತರಿಗೆ ಅನೇಕ ಅನುಕೂಲಗಳು ಸಹ ಇವೆ. ಸ್ವಾಧೀನ ಮಾಡಬೇಕಾದರೆ ಸಾರ್ವಜನಿಕರ ಉದ್ದೇಶ ಇರಬೇಕು. ಮಾರುಕಟ್ಟೆಗೆ ದರಕ್ಕಿಂತ ಗ್ರಾಮೀಣ ಭಾಗ ದಲ್ಲಿ 4 ಪಟ್ಟು, ನಗರ ಭಾಗದಲ್ಲಿ 2 ಪಟ್ಟು ದರ ಹೆಚ್ಚಿರಬೇಕು ಎಂದರು. ಸಂಘದ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ, ಪದಾಧಿಕಾರಿಗಳಾದ ನಾರಾಯಣಸ್ವಾಮಿ, ವೀರಭದ್ರಸ್ವಾಮಿ, ಚೌಡರೆಡ್ಡಿ ಉಪಸ್ಥಿತರಿದ್ದರು.



ರೈತರನ್ನು ಒಕ್ಕಲೆಬ್ಬಿಸ ಬೇಡಿ

ರೈತರು ಸ್ವಾಧೀನದಲ್ಲಿರುವ ಜಮೀನನ್ನು ಅರಣ್ಯ ಇಲಾಖೆಯವರು ಸ್ವಾಧೀನಪಡಿಸಿಕೊಳ್ಳಬಾರದು, 3 ಎಕರೆ ಒಳಗಿರುವ ರೈತರನ್ನು ಒಕ್ಕಲೆಬ್ಬಿಸಬಾರದು ಎಂದು ಸುಪ್ರೀಂ ಕೋರ್ಟ್ ಸಹ ಹೇಳಿದೆ. ಇದನ್ನು ಅಧಿಕೃತವಾಗಿ ಘೋಷಣೆ ಮಾಡುವುದಾಗಿ ಹಿಂದಿನ ಸಿಎಂ ಸಿದ್ದರಾಮಯ್ಯ ಹೇಳಿದ್ದರು. ಆದರೆ ಘೋಷಣೆ ಮಾಡಲಿಲ್ಲ, ಅರಣ್ಯಯವರು ಯಾವುದೇ ಕಾರಣಕ್ಕೂ ರೈತರನ್ನು ಒಕ್ಕಲೆಬ್ಬಿಸಬಾರದು ಎಂದು ಒತ್ತಾಯಿಸಿದರು.

ಕಾರ್ಮಿಕರ ಕನಿಷ್ಠ ವೇತನಕ್ಕೆ ಸಿಐಟಿಯುನಿಂದ ಒತ್ತಾಯ

ಕೋಲಾರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆ

ಕೋಲಾರ: ರೆಪ್ತಕೋಸ್ ಬ್ರೆಟ್ ಆಂಡ್ ಕಂಪನಿ ಪ್ರಕರಣದಲ್ಲಿ ಭಾರತದ ಸರ್ವೋಚ್ಚನ್ಯಾಯಾಲಯದ ತೀರ್ಪಿನಲ್ಲಿ ತಿಳಿಸಿರುವ ಮಾರ್ಗದರ್ಶಿ ಸೂತ್ರಗಳ ಅನ್ವಯ ಈಗಿನ ಬೆಲೆ ಏರಿಕೆಗೆ ಅನುಗುಣವಾಗಿ ರಾಜ್ಯದಲ್ಲಿನ ಕಾರ್ಮಿಕರಿಗೆ ಸಮಾನ ಕನಿಷ್ಠ ವೇತನ 36 ಸಾವಿರ ರೂ. ನಿಗಧಿಪಡಿಸಲು ಆಗ್ರಹಿಸಿ ಸಿಐಟಿಯುನಿಂದ ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ವಿಜಯಕೃಷ್ಣ ಮಾತನಾಡಿ, ದೇಶದಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ಕನಿಷ್ಠ ವೇತನವನ್ನು ಪರಿಷ್ಕರಣೆ ಕಡ್ಡಾಯವಾಗಿ ಮಾಡಬೇಕೆಂದು ಕಾನೂನು ಇದ್ದರೂ, ರಾಜ್ಯದಲ್ಲಿ 7 ವರ್ಷಗಳ ನಂತರ 22 ಮೇ 2026 ರಂದು ಪರಿಷ್ಕರಣೆ ಮಾಡಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ ಎಂದರು.

ರಾಜ್ಯ ಸರ್ಕಾರ ಪ್ರಕಟಿಸಿರುವ ಕನಿಷ್ಠ ವೇತನದಿಂದ ಒಂದು ಕೋಟಿಗಿಂತ ಹೆಚ್ಚಿನ ಕಾರ್ಮಿಕರಿಗೆ ಪ್ರಯೋಜನವಾಗಲಿದೆ ಎಂಬುದನ್ನು ಸಿಐಟಿಯು ಮನಗಾಣುತ್ತಲೇ ಹೆಚ್ಚಳ ಮಾಡಿರುವ ಕನಿಷ್ಠ ವೇತನವು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಾನದಂಡಗಳಿಗೆ ಪೂರಕವಾಗಿಲ್ಲ, ಇವತ್ತಿನ ಬೆಲೆಗಳು ಮತ್ತು ಜೀವನ ವೆಚ್ಚಕ್ಕೆ ಅನುಗುಣವಾಗಿ ಸರಾಸರಿ 36 ಸಾವಿರ ಕನಿಷ್ಠ ವೇತನ ನಿಗದಿ ಮಾಡಬೇಕು. ಜೊತೆಗೆ 1 ಎಪ್ರಿಲ್ 2026ರಿಂದ ಪೂರ್ವಾನ್ವಯವಾಗುವಂತೆ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಶ್ರೀನಿವಾಸ್ ಮಾತನಾಡಿ ಗಾರ್ಮೆಂಟ್ಸ್, ಪ್ಲಾಂಟೇಷನ್, ಬೀಡಿ, ಅಗರಬತ್ತಿ, ಕೈಮಗ್ಗ ಸೇರಿ 19 ವಿಭಾಗದ ಉದ್ದಿಮೆಗಳನ್ನು ಹೊರಗಿಟ್ಟಿರುವ ರಾಜ್ಯ ಸರ್ಕಾರದ ಕ್ರಮದಿಂದ ಬಹುಸಂಖ್ಯಾತ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳದಿಂದ ವಂಚಿತರಾಗಲಿದ್ದಾರೆ ಎಂದರು.

ಸಿಐಟಿಯು ಜಿಲ್ಲಾ ಖಜಾಂಚಿ ಚ್.ಬಿ ಕೃಷ್ಣಪ್ಪ, ಜಿಲ್ಲಾ ಉಪಾಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ, ಜಿಲ್ಲಾ ಮುಖಂಡರಾದ ಎ.ಆರ್.ಬಾಬು, ಬಿ.ಎಲ್. ಕೇಶವರಾವ್, ಎಂ.ಭೀಮರಾಜ್, ಆಂಜಲಮ್ಮ, ಕಲ್ಪನಾ, ಶಿವಾನಂದ್, ವೀರಭದ್ರ, ಜಯಲಕ್ಷ್ಮೀ, ಅಮರನಾರಾಯಣ, ಲಿಯೋ ರಾಜ, ಮತ್ತಿತರರು ಉಪಸ್ಥಿತರಿದ್ದರು.



ಎಸ್.ಎನ್. ನಾರಾಯಣಸ್ವಾಮಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಬಂಗಾರಪೇಟೆ: ರಾಜ್ಯದ ನೂತನ ಸಚಿವ ಸಂಪುಟದಲ್ಲಿ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್.ಎನ್.ನಾರಾಯಣಸ್ವಾಮಿ ರವರಿಗೆ ಸಚಿವ ಸ್ಥಾನ ನೀಡಬೇಕೆಂದು ಕೆಂಪೇಗೌಡ ಒಕ್ಕಲಿಗರ ಸಂಘ ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ಸಂಘದ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಸಂಘದ ಮುಖಂಡರು ಮಾತನಾಡಿ, ಎಸ್.ಎನ್. ನಾರಾಯಣಸ್ವಾಮಿ ಅವರು ರಾಜಕೀಯದಲ್ಲಿ ಸುಮಾರು 35 ವರ್ಷಗಳ ಸುದೀರ್ಘ ಅನುಭವ ಹೊಂದಿದ್ದಾರೆ, ಪುರಸಭೆಯಲ್ಲಿ 25 ವರ್ಷಗಳ ಕಾಲ ಸದಸ್ಯರಾಗಿ, ಅಧ್ಯಕ್ಷರಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ್ದಾರೆ, ತಾವು ವಹಿಸಿಕೊಂಡ ಎಲ್ಲಾ ಜವಾಬ್ದಾರಿಗಳಲ್ಲೂ ಅವರು ದಕ್ಷತೆ ಮೆರೆದಿದ್ದಾರೆ, ಅಭಿವೃದ್ಧಿಯ ಹರಿಕಾರರಾಗಿದ್ದಾರೆ. ಒಗ್ಗಟ್ಟಿನ ಪ್ರದರ್ಶನ: ಕೋಲಾರ ಜಿಲ್ಲೆಯಲ್ಲಿ ಪ್ರಸ್ತುತ ನಾಲ್ಕು ಜನ ಕಾಂಗ್ರೆಸ್ ಶಾಸಕರಿದ್ದು, ನಾರಾಯಣಸ್ವಾಮಿ ಅವರಿಗೆ ಸಚಿವ ಸ್ಥಾನ ಸಿಗಬೇಕೆಂಬ ವಿಷಯದಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದಾರೆ, ಅವರಿಗೆ ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸುವ ಶಕ್ತಿ ಅವರಿಗಿದೆ, ಆದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೆಂಪೇಗೌಡ ಒಕ್ಕಲಿಗರ ಸಂಘ ಮತ್ತು ಕ್ಷೇತ್ರದ ಎಲ್ಲಾ ಸಮುದಾಯಗಳ ಮುಖಂಡರು ಜಂಟಿಯಾಗಿ ಆಗ್ರಹಿಸಿದ್ದಾರೆ.

ಈ ವೇಳೆ ಕೆಂಪೇಗೌಡ ಒಕ್ಕಲಿಗರ ಸಂಘದ ಅಧ್ಯಕ್ಷ ಮಾದಮಂಗಲ ಮುನಿರಾಜು, ಎಚ್.ಕೆ.ನಾರಾಯಣಸ್ವಾಮಿ, ಮಹದೇವ್, ಆಲೂಗಡ್ಡೆ ಶೇಖರ್, ಬಾರ್ ಚಂದ್ರಪ್ಪ, ಡಾ.ಪ್ರಕಾಶ್, ರಮೇಶ್, ಶ್ರೀನಿವಾಸ್, ವೀಣಾ ವೆಂಕಟೇಶ್, ಬಾರ್ ಸತೀಶ್, ಎಸ್, ಗೌಡ, ಲಕ್ಷ್ಮಣ್‌ಗೌಡ, ರಾಮೇಗೌಡ, ಚಂದ್ರಪ್ಪ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು.



ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ರಾಜಗೋಪಾಲ್

ಕೋಲಾರ: ಮಡಿವಾಳ ಸಮಾಜದ ಮಂದಿಯ ಅಭ್ಯುದಯದ ಜೊತೆಗೆ ಸಮಾಜದ ಸಂಘಟನೆಯಲ್ಲೂ ತನ್ನನ್ನು ತೊಡಗಿಸಿಕೊಳ್ಳುತ್ತೇನೆ ಎಂದು ಜಿಲ್ಲಾ ಮಡಿವಾಳ ಸಂಘದ ನೂತನ ಅಧ್ಯಕ್ಷ ರಾಜಗೋಪಾಲ್ ತಿಳಿಸಿದರು.

ಜಿಲ್ಲಾ ಮಡಿವಾಳ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಡೋಬಿ ಘಾಟ್ ನಲ್ಲಿ ಜಿಲ್ಲಾ ಮಡಿವಾಳ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ತನ್ನನ್ನು ಅವಿರೋಧವಾಗಿ ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಇವರ ನಿರೀಕ್ಷೆಯಂತೆ ಸಶಕ್ತ ಸಮಾಜವನ್ನು ಕಟ್ಟುತ್ತೇನೆ ಎಂದು ಹೇಳಿದರು.

ಮಡಿವಾಳ ಸಮುದಾಯವು ಕೋಲಾರದಲ್ಲಿ ಸಂಘಟನಾತ್ಮಕವಾಗಿ ಬೆಳೆಯಬೇಕು. ನಮ್ಮದೇ ಸಮುದಾಯದ ಸಂಸದರು, ಶಾಸಕರು ಆಯ್ಕೆಯಾಗಿ ಬರಬೇಕು. ಹಿಂದುಳಿದ ಸಮುದಾಯಕ್ಕೆ ಸೇರಿದ ನಾವು ಶೈಕ್ಷಣಿಕ, ರಾಜಕೀಯವಾಗಿ ಬೆಳೆಯಬೇಕು. ಈ ನಿಟ್ಟಿನಲ್ಲಿ ಎಲ್ಲರ ಸಹಕಾರದಿಂದ ಸಂಘಟನೆ ಮಾಡುವ ಮೂಲಕ ಶಕ್ತಿಶಾಲಿಯಾಗಿ ಸಂಘವನ್ನು ಮುಂದುವರಿಸಿಕೊಂಡು ಹೋಗುತ್ತೇನೆ ಎಂದರು.

ಜಿ.ಪಂ ಸದಸ್ಯನಾಗಿ, ರಾಜ್ಯ ಮಡಿವಾಳ ಸಂಘದ ನಿರ್ದೇಶಕನಾಗಿ ಜನರ ಸೇವೆ ಮಾಡುತ್ತಾ ಬಂದಿದ್ದೇನೆ. ನನ್ನ ಸೇವೆಯನ್ನು ಗುರುತಿಸಿ ಮಡಿವಾಳ ಜನಾಂಗದ ಸಮಸ್ಯೆಗಳಿಗೆ ಸ್ಪಂದಿಸಲು ನನ್ನನ್ನು ಜಿಲ್ಲಾ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಡಿವಾಳ ಸಂಘದ ಪದಾಧಿಕಾರಿಗಳಾದ ಸೋಮಶೇಖರ್, ರಂಗನಾಥ್, ಅಂಜಿನಪ್ಪ, ನಾಗರಾಜ್, ರಮೇಶ್, ಕೆಜಿಎಫ್ ರವಿಕುಮಾರ್, ಭೀಮರಾಜ್, ಸುರೇಶ್, ರಾಮು, ನಾಗರಾಜಪ್ಪ ಮತ್ತಿತರರು ಹಾಜರಿದ್ದರು.



ನಿವೃತ್ತಿ ವಯಸ್ಸಿಗೇ ಹೊರತು ಮನಸ್ಸಿಗಲ್ಲ: ಬಿಇಒ

ಬಂಗಾರಪೇಟೆ: ನಿವೃತ್ತಿ ಎಂಬುದು ವಯಸ್ಸಿಗೆ ಹೊರತು, ಮನಸಿಗಲ್ಲ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೆ.ಶಶಿಕಲಾ ಹೇಳಿದರು.

ಪಟ್ಟಣದ ಬಿಆರ್‌ಸಿ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಕಚೇರಿ ಗುಮಾಸ್ತೆ ಕಮಲಮ್ಮನವರ ವಯೋ ನಿವೃತ್ತಿ ಬಿಳ್ಕೊಡಿಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರತಿ ವ್ಯಕ್ತಿಯು ತನ್ನ ಕುಟುಂಬ ಮತ್ತು ಕೆಲಸದ ಸ್ಥಳದಲ್ಲಿ ಪ್ರೀತಿ, ವಿಶ್ವಾಸ, ಸಹಾನುಭೂತಿ, ಕರ್ತವ್ಯ ಪ್ರಜ್ಞೆಗಳಿಂದ ಕೆಲಸ ನಿರ್ವಹಿಸಿದಲ್ಲಿ ಜೀವನವು ಸಂತೋಷವಾಗಿರುತ್ತದೆ, ಸರ್ಕಾರಿ ನೌಕರನಿಗೆ ನಿವೃತ್ತಿ ಎಂಬುದು ಜೀವನದ ಎರಡನೇ ಮಜಲು. ಇದನ್ನು ಸಂತೋಷದಿಂದ ಸ್ವೀಕರಿಸಿ, ಅನುಭವಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕ್ಷೇತ್ರ ಸಮನ್ವಯಾಧಿಕಾರಿ ಎಂ.ಎಸ್.ನಾರಾಯಣಸ್ವಾಮಿ ಕಮಲಮ್ಮನವರು ಕಚೇರಿಯ ಅತ್ಯುತ್ತಮ ಸಿಬ್ಬಂದಿಯಾಗಿದ್ದರು, ಎಲ್ಲಾ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಎಲ್ಲಾ ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿದ್ದರು, ಅವರ ಕಾರ್ಯವೈಕರಿ ಅನುಕರಣೆಯ ಎಂದರು.

ಶಿಕ್ಷಕರ ಸಂಘದ ಅಧ್ಯಕ್ಷ ನಾಗೇಂದ್ರ ಮಾತನಾಡಿ ನೌಕರಿಯಲ್ಲಿ ನಿವೃತ್ತಿ ಎಂಬುದು ಕಡ್ಡಾಯವಾಗಿದೆ, ಆದರೆ ನೌಕರನಿಗೆ ತೃಪ್ತಿ ಎಂಬುದು, ಆತ ಅತ್ಯುತ್ತಮವಾಗಿ ಕೆಲಸ ನಿರ್ವಹಿಸಿದಾಗ ಮಾತ್ರ ಸಿಗುತ್ತದೆ, ಅಂತಹ ತೃಪ್ತಿಯನ್ನು ಕಮಲಮ್ಮನವರು ಪಡೆದಿದ್ದಾರೆ, ಅವರ ನಿವೃತ್ತಿ ಜೀವನ, ಆರೋಗ್ಯ ಮತ್ತು ಸಂತೋಷದಿಂದ ಕೂಡಿರಲಿ ಎಂದು ಆಶಿಸಿದರು. ಸರ್ಕಾರಿ ನೌಕರ ಸಂಘದ ಕಾರ್ಯದರ್ಶಿ ಸುಜಾತ ಮಾತನಾಡಿದರು. ಸಿಆರ್‌ಪಿ ನಾಗರಾಜ್, ಬಿಆರ್‌ಪಿ ಬಿ.ನಾಗರಾಜ್, ಗೋಪಿನಾಥ್, ಮುನಿರಾಜು, ಶಿಕ್ಷಕರ ಸಂಘದ ಕಾರ್ಯದರ್ಶಿ ಶ್ಯಾಮಮೂರ್ತಿ, ಟಿಪಿಇಒ ಮಂಜುನಾಥ್, ಸಮನ್ವಯ ಸಮಿತಿಯ ಅಧ್ಯಕ್ಷ ಎಸ್.ಕೆ.ನಾಗರಾಜಪ್ಪ, ಎಸ್ಸಿ ಎಸ್ಟಿ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ನಾರಾಯಣಸ್ವಾಮಿ ಇದ್ದರು.



ಬೂದಿಕೋಟೆ ವೃತ್ತದ ರೈಲ್ವೆ ಮೇಲ್ಸೇತುವೆ ಜುಲೈನಲ್ಲಿ ಲೋಕಾರ್ಪಣೆ

ರೈಲ್ವೆ ಸೇತುವೆ ಕಾಮಗಾರಿ ಪರಿಶೀಲಿಸಿ: ಸಂಸದ

ಬಂಗಾರಪೇಟೆ: ಪಟ್ಟಣದ ಬೂದಿಕೋಟೆ ವೃತ್ತದ ರೈಲ್ವೆ ಮೇಲುಸೇತುವೆ ಕಾಮಗಾರಿಯನ್ನು ಜುಲೈ ತಿಂಗಳ ಒಳಗಾಗಿ ಪೂರ್ಣಗೊಳಿಸಿ ಜುಲೈ ಕೊನೆಯವಾರದಲ್ಲಿ ಲೋಕಾರ್ಪಣೆ ಮಾಡಲಾಗುವುದೆಂದು ಸಂಸದ ಎಂ. ಮಲ್ಲೇಶ್‌ಬಾಬು ಹೇಳಿದರು.

ಪಟ್ಟಣದಲ್ಲಿ ನಡೆಯುತ್ತಿರುವ ಬೂದಿಕೋಟೆ ರೈಲ್ವೆ ಸೇತುವೆ ಕಾಮಗಾರಿಯನ್ನು ಪರಿಶೀಲಿಸಿ ನಂತರ ಮಾತನಾಡಿದ ಅವರು ಡಿಸೆಂಬರ್ 2023ರಲ್ಲಿ ಪ್ರಾರಂಭವಾಗಿರುವ ಕಾಮಗಾರಿಯು ಮೇಲ್ಸೇತುವೆ ಹಾಗೂ ರೈಲ್ವೆ ಸಂಬಂಧಿತ ಕಾಮಗಾರಿಗಳು ರೈಲ್ವೆ ಕ್ವಾರ್ಟರ್ಸ್ ಸಮಸ್ಯೆಯಿಂದ ವಿಳಂಬವಾಗಿದ್ದು, ಅಧಿಕಾರಿಗಳು ಸಮಾಲೋಚನೆ ನಡೆಸಿ ಸಮಸ್ಯೆ ಬಗೆಹರಿಸಿರುವುದರಿಂದ ಕಾಮಗಾರಿ ಆರಂಭಗೊಂಡಿದೆ ಎಂದರು, ಸಿವಿಲ್ ಕಾಮಗಾರಿಗಳನ್ನು ಜೂನ್ 30ರೊಳಗೆ ಹಾಗೂ ವಿದ್ಯುದೀಕರಣ ಸೇರಿದಂತೆ ಸಂಪೂರ್ಣ ಯೋಜನೆಯನ್ನು ಜುಲೈ 15 ರಿಂದ 20ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಭರವಸೆ ನೀಡಿದ್ದಾರೆ, ಜುಲೈ 20 ರಿಂದ ವಿಧಾನಮಂಡಲ ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಮಂತ್ರಿಗಳ ಮೂಲಕ ಡಿಆರ್‌ಎಂ ನೇತೃತ್ವದಲ್ಲಿ ಉದ್ಘಾಟನೆ ನಡೆಸಲು ಯೋಜಿಸಲಾಗಿದೆ, ಯೋಜನೆಗೆ ಅಡಿಪಾಯ ಹಾಕಿದ್ದ ಮಾಜಿ ಸಂಸದ ಎಸ್.ಮುನಿಸ್ವಾಮಿ ಅವರ ಕೊಡುಗೆಯನ್ನು ಸ್ಮರಿಸಿದರು.

ಇನ್ನೊಂದೆಡೆ, ಕುಪ್ಪಂನಿಂದ ಮಾಲೂರು ಬಳಿಯ ಎಸ್‌ಟಿಆರ್‌ಆರ್ ರಸ್ತೆಗೆ ಸಂಪರ್ಕ ಕಲ್ಪಿಸುವ ಹೊಸೂರು-ಕುಪ್ಪಂ ರಸ್ತೆ ಯೋಜನೆ ಕುರಿತು ರೈತರಲ್ಲಿ ಆತಂಕ ವ್ಯಕ್ತವಾಗಿದ್ದು, ಕರ್ನಾಟಕ ಭಾಗದ ಸುಮಾರು 33 ಗ್ರಾಮಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ, ಬಂಗಾರಪೇಟೆ ಸುತ್ತಮುತ್ತಲಿನ 16 ರಿಂದ 17 ಗ್ರಾಮಗಳ ರೈತರು ಜಮೀನು ಕಳೆದುಕೊಳ್ಳುವ ಭೀತಿಯಲ್ಲಿದ್ದು, ಈ ಕುರಿತು ಬೆಂಗಳೂರು ಎನ್‌ಎಚ್‌ಎಐ ಕಚೇರಿಯಿಂದ ಹೆಚ್ಚಿನ ಮಾಹಿತಿ ಕೋರಲಾಗಿದೆ.

ಈ ವೇಳೆ ಮುಖಂಡರುಗಳಾದ ಹನುಮಂತು, ಮಂಜುನಾಥ್, ಕೀಲುಕೊಪ್ಪ ಯಲ್ಲಪ್ಪ, ದೇವರಾಜು, ಬಾಲಚಂದ್ರ, ಪ್ರಸಾದ್, ಶಿವಕುಮಾರ್, ರೈಲ್ವೆ ಅಧಿಕಾರಿ ಗಳಾದ ಆನಂದ್ ಯಾದವ್, ಲಿಂಗಪ್ಪ, ಸಂತೋಷ್, ರಾಮಚಂದ್ರ ಇನ್ನೂ ಮೊದಲಾದವರು ಹಾಜರಿದ್ದರು.



ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆ

ಸಿಎಂ ಬದಲಾದರೂ ಗ್ಯಾರಂಟಿ ಯೋಜನೆ ನಿಲ್ಲಲ್ಲ

ಕೋಲಾರ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾದರೂ ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಲಿದೆ ವಿರೋಧಿಗಳ ಅಪಪ್ರಚಾರಕ್ಕೆ ಕಿವಿ ಕೊಡದೆ ಗ್ಯಾರಂಟಿ ಯೋಜನೆಗಳ ಸವಲತ್ತುಗಳನ್ನು ನೈಜ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತಷ್ಟು ದಕ್ಷತೆ ಹಾಗು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ಗ್ಯಾರಂಟಿ ಸಮಿತಿಗಳ ಪ್ರಾಧಿಕಾರದ ತಾಲೂಕು ಅಧ್ಯಕ್ಷ ವೇಮಗಲ್ ವಿ.ಎಂ ಮುನಿಯಪ್ಪ ತಿಳಿಸಿದರು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ಜವಾಬ್ದಾರಿ ಮತ್ತು ಸಮನ್ವಯತೆ ಪ್ರಮುಖ ಪಾತ್ರ ವಹಿಸುತ್ತದೆ. ಈ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಉತ್ತಮ ಫಲಿತಾಂಶ ಸಾಧಿಸಲು ಅಧಿಕಾರಿಗಳು ಮತ್ತು ಸಮಿತಿ ಸದಸ್ಯರು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಸಮಗ್ರ ಪರಿಷ್ಕರಣೆ ಹಾಗೂ ಅನರ್ಹರು ಸೌಲಭ್ಯ ಪಡೆಯುತ್ತಿದ್ದರೆ ಅದನ್ನು ತಡೆಗಟ್ಟಿ, ಕೇವಲ ಅರ್ಹರಿಗೆ ಮಾತ್ರ ಯೋಜನೆಗಳನ್ನು ತಲುಪಿಸಬೇಕು. ಸಮಿತಿ ಸದಸ್ಯರು ಅಧ್ಯಕ್ಷರು ಉಪಾಧ್ಯಕ್ಷರು ನಿರಂತರವಾಗಿ ಜನರ ಮಧ್ಯೆ ಇದ್ದು ಅವರಿಗೆ ಜನರ ಕಷ್ಟ ಏನೆಂದು ಗೊತ್ತು ಅವರಿಂದ ಅಧಿಕಾರಿಗಳು ಮಾಹಿತಿ ಪಡೆದು ಫಲಾನುಭವಿಯಾಗಿ ಮಾಡಬೇಕು ಜೊತೆಗೆ ಅಧಿಕಾರಿಗಳು ಫಲಾನುಭವಿಗಳಿಗೆ ಸಂದಾಯವಾದ ಅಷ್ಟು ದಾಖಲೆಗಳು ಪ್ರತಿ ತಿಂಗಳ ಮಾಹಿತಿಯನ್ನು ಕೊಡಬೇಕು ಎಂದು ಸೂಚನೆ ನೀಡಿದರು.

ಗ್ರಾಮ ಪಂಚಾಯಿತಿಯ ಪಿಡಿಒ ನೇತೃತ್ವದಲ್ಲಿ ಅಂಗನವಾಡಿ, ಆಶಾ ಕಾರ್ಯಕರ್ತರ ಮೂಲಕ ಪ್ರಚಾರ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾಪಂ ಸಹಾಯಕ ನಿರ್ದೇಶಕ ಮಂಜುನಾಥ್ ಪ್ರಸಾದ್, ಸಿಡಿಪಿಒ, ಬೆಸ್ಕಾಂ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಕೆಎಸ್‌ಆರ್‌ಟಿಸಿ, ಯುವನಿಧಿ ಯೋಜನೆಗಳ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಸಿಬ್ಬಂದಿ ಸೇರಿದಂತೆ ಗ್ಯಾರಂಟಿ ಸಮಿತಿ ಸದಸ್ಯರು ಹಾಜರಿದ್ದರು.



ಕಿರುಸುದ್ದಿ

ಶ್ರೀ ವೇಣುಗೋಪಾಲಸ್ವಾಮಿ ದೇವರಿಗೆ ವಿಶೇಷ ಪೂಜೆ



ಶಿಡ್ಲಘಟ್ಟ: ಪಟ್ಟಣದ ಅಶೋಕ ರಸ್ತೆಯ ಕೆನರಾ ಬ್ಯಾಂಕ್ ಮುಂಭಾಗದಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಶನಿವಾರದ ಅಂಗವಾಗಿ ವಿಶೇಷ ಪೂಜೆ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಹಮ್ಮಿಕೊಳ್ಳಲಾಗಿತ್ತು.ಬೆಳಗಿನ ಜಾವದಿಂದಲೇ ದೇವಾಲಯದಲ್ಲಿ ಅಭಿಷೇಕ, ಹೂವಿನ ಅಲಂಕಾರ ಹಾಗೂ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ನಂತರ ಮಹಾಮಂಗಳಾರತಿ ನಡೆಸಿ ಭಕ್ತರಿಗೆ ತೀರ್ಥ ಪ್ರಸಾದ ಹಾಗೂ ಪ್ರಸಾದ ವಿನಿಯೋಗ ಮಾಡಲಾಯಿತು.ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ದೇವಾಲಯಕ್ಕೆ ಆಗಮಿಸಿ ಶ್ರೀ ವೇಣುಗೋಪಾಲಸ್ವಾಮಿಯ ದರ್ಶನ ಪಡೆದು ಆಶೀರ್ವಾದ ಪಡೆದರು.ಈ ಪೂಜಾ ಕಾರ್ಯಕ್ರಮವನ್ನು ದೇವಾಲಯದ ಅರ್ಚಕರಾದ ವೆಂಕಟೇಶ್ ಮೂರ್ತಿ ಸ್ವಾಮಿಗಳು ನೆರವೇರಿಸಿದರು.

ಡಿ.ಟಿ.ಎಸ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಕೋಲಾರ: ರಾಜ್ಯದಲ್ಲಿ ಹೊಸ ಸಂಪುಟ ರಚನೆಯಾಗುತ್ತಿರುವ ಹಿನ್ನೆಲೆಯಲ್ಲಿ, ವಿಧಾನ ಪರಿಷತ್ ಸದಸ್ಯರಾದ ಡಿ.ಟಿ. ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಪ್ರವರ್ಗ–1 ರ ಜನಾಂಗಗಳಿಗೆ ಸೂಕ್ತ ಪ್ರಾತಿನಿಧ್ಯ ಹಾಗೂ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಕೋಲಾರ ಜಿಲ್ಲಾ ಯಾದವ ಸಂಘದ ಅಧ್ಯಕ್ಷ



ವಕ್ಕಲೇರಿ ನಾರಾಯಣಸ್ವಾಮಿ ಕಾಂಗ್ರೆಸ್ ಹೈಕಮಾಂಡ್ ಅನ್ನು ಒತ್ತಾಯಿಸಿದ್ದಾರೆ. ಈ ಕುರಿತು ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಪದಾಧಿಕಾರಿಗಳು, ಕರ್ನಾಟಕ ರಾಜ್ಯ ಯಾದವ ಸಂಘ ಮತ್ತು ಪ್ರವರ್ಗ–1 ರ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿರುವ ಡಿ.ಟಿ. ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡಿದರೆ ಈ ವರ್ಗದ 95 ಜಾತಿಗಳಿಗೆ ನ್ಯಾಯ ಸಿಗಲಿದೆ ಎಂದಿದ್ದಾರೆ. ರಾಜ್ಯದಲ್ಲಿ 19 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ಯಾದವ (ಗೊಲ್ಲ) ಸಮುದಾಯಕ್ಕೆ ದಿವಂಗತ ಎ. ಕೃಷ್ಣಪ್ಪ ಅವರ ನಂತರ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ. ಚುನಾವಣೆಯ ಮೂಲಕ ಯಾದವ ಸಂಘದ ಮೊದಲ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀನಿವಾಸ್ ಅವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು. ಡಿ.ಟಿ. ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಸಂಘದ ಗೌರವಾಧ್ಯಕ್ಷ ಗೋಕುಲ ನಾರಾಯಣಸ್ವಾಮಿ, ಮುಖಂಡ ಮುಕುಂದ್ ವೆಂಕಟೇಶ್, ಮಣಿಯಾದವ್, ನಾಗರಾಜ್, ಅಮರನಾಥ್ ಯಾದವ್ ಹಾಗೂ ಪದಾಧಿಕಾರಿಗಳು ಒಟ್ಟಾಗಿ ಆಗ್ರಹಿಸಿದ್ದಾರೆ.

ಭೂ ಸ್ವಾಧೀನ ವಿರೋಧಿಸಿ ಪ್ರತಿಭಟನೆ

ಗುಡಿಬಂಡೆ: ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿಯಲ್ಲಿ ಕೆಐಎಡಿಬಿ ವತಿಯಿಂದ ಕೈಗಾರಿಕಾ ಪ್ರದೇಶಕ್ಕೆ ಸ್ವಾಧೀನ ಪಡಿಸಿಕೊಳ್ಳುತ್ತಿರುವ ಪ್ರಕ್ರಿಯೆ ವಿರುದ್ಧ ಜೂನ್ 6 ರಂದು ಬೃಹತ್ ಬೈಕ್ ರಾಲಿ ಮೂಲಕ ವಿಧಾನ ಸೌಧ ಮುತ್ತಿಗೆಯನ್ನು ಹಮ್ಮಿಕೊಂಡಿದ್ದು, ಈ ಪ್ರತಿಭಟನೆಗೆ ರೈತರು ಹಾಗೂ ರೈತರ ಮಕ್ಕಳು ಸ್ವಯಂ ಪ್ರೇರಿತರಾಗಿ ಭಾಗಿಯಾಗಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಹೆಚ್.ಪಿ.ರಾಮನಾಥ್ ಮನವಿ ಮಾಡಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಈ ಕುರಿತು ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು ದಿನಗಳಿಂದ ನಮ್ಮ ರೈತರು ಕೆಐಡಿಬಿ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದೇವೆ. ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ಕೃಷಿಗೆ ಯೋಗ್ಯವಾದ ಸುಮಾರು 2823 ಎಕರೆಯಷ್ಟು ಭೂಮಿಯನ್ನು ಕೆಐಡಿಬಿ ಅಧಿಕಾರಿಗಳು ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿದ್ದಾರೆ. ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡರೇ ನಮ್ಮಅಭ್ಯಂತರವಿಲ್ಲ. ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಮುಂದಾಗಿರುವುದು ನಮ್ಮ ಆಕ್ರೋಶಕ್ಕೆ ಕಾರಣವಾಗಿದೆ. ಈ ಕಾರಣದಿಂದ ಜೂ.6 ರಂದು ಬೈಕ್ ಜಾಥಾ ಮೂಲಕ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಪ್ರತಿಭಟನೆ ನಡೆಸುತ್ತಿದ್ದೇವೆ. ಈ ಹೋರಾಟಕ್ಕೆ ಸ್ವಯಂ ಪ್ರೇರಿತರಾಗಿ ಭಾಗವಹಿಸಬೇಕೆಂದು ಮನವಿ ಮಾಡಿದರು.




ಗುಡಿಬಂಡೆ ಜಂಗಮಕೋಟೆ ಹೋಬಳಿಯಲ್ಲಿ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ಜೂನ್ 6 ರಂದು ಹಮ್ಮಿಕೊಂಡಿರುವ ಬೃಹತ್ ಬೈಕ್ ರ್‍ಯಾಲಿ ಹಾಗೂ ವಿಧಾನಸೌಧ ಮುತ್ತಿಗೆ ಪ್ರತಿಭಟನೆಗೆ ಬೆಂಬಲ ನೀಡಲು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಧ್ಯಕ್ಷ ಎಚ್.ಪಿ. ರಾಮನಾಥ್ ಕರೆ ನೀಡಿದರು.

ರಾಯಲ್ ಸಂಸ್ಥೆಯಲ್ಲಿ ರಕ್ತದಾನ ಶಿಬಿರ

ಚಿಂತಾಮಣಿ: ರಕ್ತದಾನ ಸಮಾಜ ಸೇವೆಯ ಒಂದು ಮಹತ್ವದ ಕಾರ್ಯವಾಗಿದೆ ಒಬ್ಬರ ರಕ್ತದಾನ ಮತ್ತೊಬ್ಬರ ಜೀವವನ್ನು ಉಳಿಸಬಹುದಾಗಿದೆಯೆಂದು ಸಂಸ್ಥೆಯ ಅಧ್ಯಕ್ಷ ಕೆ.ರಾಮಕೃಷ್ಣ ನುಡಿದರು.

ನಗರದ ರಾಯಲ್ ಪದವಿ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಮತ್ತು ರಾಯಲ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿ ಅಪಘಾತ, ಶಸ್ತ್ರಚಿಕಿತ್ಸೆ ಹೆರಿಗೆ ಸಂದರ್ಭಗಳು ಹಾಗೂ ಅನೇಕ ರೋಗಿಗಳ ಚಿಕಿತ್ಸೆಗೆ ರಕ್ತದ ಅವಶ್ಯಕತೆ ಇರುತ್ತದೆ. 18 ರಿಂದ 65 ವರ್ಷದ ಒಳಗಿನ ಆರೋಗ್ಯವಂತರು ರಕ್ತದಾನ ಮಾಡಲು ಅರ್ಹರು, ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನದ ಮಹತ್ವವನ್ನು ಅರಿತು ರಕ್ತದಾನ ಶಿಬಿರಗಳಲ್ಲಿ ಭಾಗವಹಿಸಿ ಮಾನವೀಯತೆ ಮೆರೆಯಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾಯ್ರಕ್ರಮದಲ್ಲಿ ಯುವಕರು ಸೇರಿ ಅನೇಕರಿಂದ ಸುಮಾರು 40 ಯೂನಿಟ್ ರಕ್ತ ಸಂಗ್ರಹವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಕೆ.ಆರ್. ಪ್ರೇಮಲತಾ, ನಿರ್ದೇಶಕ ಡಾ. ಜಿವಿಕೆ ರೆಡ್ಡಿ, ರೆಡ್ ಕ್ರಾಸ್ ಸಂಸ್ಥೆಯ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ನಾರಾಯಣರೆಡ್ಡಿ, ಪ್ರಾಂಶುಪಾಲ ಬಿ.ಫಯಾಜ್ ಪಾಷಾ, ಉಪನ್ಯಾಸಕರು, ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ನಗರದ ರಾಯಲ್ ಪದವಿ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ರಾಯಲ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ರಕ್ತದಾನ ಶಿಬಿರವನ್ನು ಸಂಸ್ಥೆಯ ಅಧ್ಯಕ್ಷ ಕೆ. ರಾಮಕೃಷ್ಣ ಉದ್ಘಾಟಿಸಿದರು. ಪ್ರಮುಖರಾದ ಕೆ.ಆರ್. ಪ್ರೇಮಲತಾ, ಡಾ. ಜಿವಿಕೆ ರೆಡ್ಡಿ, ನಾರಾಯಣರೆಡ್ಡಿ, ಪ್ರಾಂಶುಪಾಲ ಬಿ. ಫಯಾಜ್ ಪಾಷಾ ಹಾಗೂ ವಿದ್ಯಾರ್ಥಿಗಳು ಇದ್ದರು.

ಗೇಟ್‌ಪಾಸ್ ನಿಯಮ ವಿರೋಧ | ಪೊಲೀಸರ ಮಧ್ಯಸ್ಥಿಕೆ ಸಂಧಾನ

ವಿದ್ಯಾರ್ಥಿಗಳಿಂದ ಪ್ರತಿಭಟನೆ

ಚಿಕ್ಕಬಳ್ಳಾಪುರ: ಇಲ್ಲಿನ ಮುದ್ದೇನಹಳ್ಳಿ ಕ್ಯಾಂಪಸ್‌ನಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ಗಿವಿಗ) ವಿದ್ಯಾರ್ಥಿಗಳು ಗೇಟ್‌ಪಾಸ್ ನಿಯಮವನ್ನು ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ವಿಶ್ವವಿದ್ಯಾಲಯದ ಮುಖ್ಯ ದ್ವಾರಕ್ಕೆ ಬೀಗ ಜಡಿದು ದಿಢೀರ್ ಪ್ರತಿಭಟನೆ ನಡೆಸಿದರು. ಕಾಲೇಜಿನ ಆವರಣದಲ್ಲಿ ಯು.ಜಿ.ಸಿಇಟಿ ಮಂಥನ್ ಕಾರ್ಯಗಾರ ನಡೆಯುತ್ತಿದ್ದ ಹೊತ್ತಿನಲ್ಲೇ ಈ ಘಟನೆ ನಡೆದಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಪ್ರತಿಭಟನಾಕಾರರು ವಾಹನಗಳು ಹಾಗೂ ವಿದ್ಯಾರ್ಥಿಗಳ ಸಂಚಾರವನ್ನು ಒಂದು ಗಂಟೆಗೂ ಹೆಚ್ಚು ಕಾಲ ತಡೆದಿದ್ದರಿಂದ ಕ್ಯಾಂಪಸ್ ಆವರಣದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ವಿಟಿಯು ಕೇಂದ್ರದ ಕೋಆರ್ಡಿನೇಟರ್ ಡಾ. ರಂಗಪ್ಪ ಅವರ ಕಟ್ಟುನಿಟ್ಟಿನ ಶಿಸ್ತು ಕ್ರಮಗಳ ವಿರುದ್ಧ ವಿದ್ಯಾರ್ಥಿಗಳು ತಿರುಗಿಬಿದ್ದಿದ್ದೇ ಈ ದಿಢೀರ್ ಪ್ರತಿಭಟನೆಗೆ ಮುಖ್ಯ ಕಾರಣ ಎನ್ನಲಾಗಿದೆ. ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಡಾ. ರಂಗಪ್ಪ, ನಮ್ಮ ಕ್ಯಾಂಪಸ್‌ನಲ್ಲಿ ವಿವಿಧ ತಾಂತ್ರಿಕ ವಿಭಾಗಗಳಲ್ಲಿ 1400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ತರಗತಿಗಳು ನಡೆಯುವುದರಿಂದ, ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಶಿಸ್ತಿನ ದೃಷ್ಟಿಯಿಂದ ಈ ಅವಧಿಯಲ್ಲಿ ಅವರು ಕ್ಯಾಂಪಸ್‌ನಲ್ಲಿಯೇ ಇರಲಿ ಎಂದು ಗೇಟ್ ಪಾಸ್ ವ್ಯವಸ್ಥೆ ಜಾರಿ ಮಾಡಲಾಗಿದೆ. ಇದರ ಮಹತ್ವವನ್ನು ಮನವರಿಕೆ ಮಾಡಿಕೊಡಲಾಗಿದ್ದರೂ ಕೆಲವರು ಪ್ರತಿಭಟನೆ ನಡೆಸುತ್ತಿದ್ದು, ಎಲ್ಲವನ್ನೂ ಸರಿಪಡಿಸಲಾಗುವುದು, ಎಂದರು.

ವಿದ್ಯಾರ್ಥಿಗಳು ಮನೆಗೆ ಹೋಗುವ ಸಮಯದಲ್ಲಿ ದಿಢೀರ್ ಪ್ರತಿಭಟನೆ ನಡೆಸಿದ್ದರಿಂದ ದೂರದ ಹಳ್ಳಿಗಳಿಗೆ ತೆರಳಬೇಕಿದ್ದ ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸಿದರು. ಕಾಲೇಜು ಸಿಬ್ಬಂದಿಯ ಮಾತಿಗೆ ವಿದ್ಯಾರ್ಥಿಗಳು ಮಣಿಯದ ಕಾರಣ ಪೊಲೀಸರು ಸ್ಥಳಕ್ಕೆ ಆಗಮಿಸಬೇಕಾಯಿತು. ಪೊಲೀಸರ ಸಮ್ಮುಖದಲ್ಲಿ ನಡೆದ ಸಂಧಾನ ಸಭೆಯಲ್ಲಿ ವಿದ್ಯಾರ್ಥಿಗಳು ತಮ್ಮ ಅಹವಾಲುಗಳನ್ನು ಮಂಡಿಸಿದರು. ಅಧಿಕಾರಿಗಳಿಂದ ಸಮಸ್ಯೆ ಇತ್ಯರ್ಥಪಡಿಸುವ ಭರವಸೆ ಸಿಕ್ಕ ನಂತರವಷ್ಟೇ ವಿದ್ಯಾರ್ಥಿಗಳು ಪ್ರತಿಭಟನೆ ಹಿಂಪಡೆದು ಮುಖ್ಯ ದ್ವಾರವನ್ನು ತೆರೆದರು.

ಇದೇ ವೇಳೆ, ಸ್ಥಳಕ್ಕೆ ಆಗಮಿಸಿದ ಮಾಧ್ಯಮದವರನ್ನು ಕಂಡು ವಿದ್ಯಾರ್ಥಿಗಳು ಹಾಗೂ ಕೆಲವು ಬೋಧಕರು ಆಶ್ಚರ್ಯ ವ್ಯಕ್ತಪಡಿಸಿದರು. ಗುರು– ಶಿಷ್ಯರ ನಡುವಿನ ಸಮನ್ವಯದ ಕೊರತೆಯಿಂದ ಇಂತಹ ಅಹಿತಕರ ಘಟನೆಗಳು ನಡೆದು ವಿಶ್ವವಿದ್ಯಾಲಯದ ಗೌರವಕ್ಕೆ ಧಕ್ಕೆ ಬರುತ್ತಿದೆ ಎಂದು ಕಾರ್ಯಾಗಾರಕ್ಕೆ ಬಂದಿದ್ದ ಪೋಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.



ಈ ವ್ಯವಸ್ಥೆಯೇ ಬೇಡ

ಆದರೆ ಆಡಳಿತ ಮಂಡಳಿಯ ಈ ನಿಯಮಕ್ಕೆ ವಿದ್ಯಾರ್ಥಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬೆಳಗ್ಗೆಯಿಂದ ಸಂಜೆಯವರೆಗೆ ವಿದ್ಯಾರ್ಥಿಗಳನ್ನು ಕ್ಯಾಂಪಸ್‌ನಲ್ಲೇ ಕಟ್ಟಿ ಹಾಕುವುದು ಸರಿಯಲ್ಲ. ಮಧ್ಯಾಹ್ನದ ಊಟಕ್ಕೆ ಕ್ಯಾಂಪಸ್ ಪಕ್ಕದಲ್ಲೇ ಉಚಿತ ವ್ಯವಸ್ಥೆಯಿದ್ದರೂ, ಅಲ್ಲಿಗೆ ಹೋಗಿ ಬರಲು ಗೇಟ್‌ಪಾಸ್ ಪಡೆಯುವುದು ದೊಡ್ಡ ಯಮಯಾತನೆಯಾಗಿದೆ. ಕ್ಯಾಂಟೀನ್‌ನಲ್ಲಿ ಚೀಟಿ ಪಡೆದು, ಅದಕ್ಕೆ ವಿಭಾಗದ ಮುಖ್ಯಸ್ಥರು (ಊಔಆ) ಹಾಗೂ ಹಾಸ್ಟೆಲ್ ಇನ್‌ಚಾರ್ಜ್‌ರಿಂದ ಸಹಿ ಪಡೆಯುವಷ್ಟರಲ್ಲಿ ಸಾಕಾಗುತ್ತದೆ. ತುರ್ತು ಅನಾರೋಗ್ಯದ ಸಂದರ್ಭದಲ್ಲೂ ಇದೇ ಸಂಕೀರ್ಣ ಪ್ರಕ್ರಿಯೆ ಅನುಸರಿಸಬೇಕಿರುವುದರಿಂದ ಈ ಗೇಟ್‌ಪಾಸ್ ವ್ಯವಸ್ಥೆಯೇ ಬೇಡ ಎಂದು ವಿದ್ಯಾರ್ಥಿಗಳು ಪಟ್ಟುಹಿಡಿದರು.

ನೀರಿನ ಸಮಸ್ಯೆ ಆಗದಂತೆ ಕ್ರಮವಹಿಸಿ: ಸಂಸದ

ಕುಡಿಯುವ ನೀರಿನ ಸಮಸ್ಯೆ ತಡೆಗೆ ಅಧಿಕಾರಿಗಳೊಂದಿಗೆ ಸಭೆ

ಚಿಂತಾಮಣಿ: ಹಲವೆಡೆ ನೀರಿನ ಸಮಸ್ಯೆ ಉದ್ಭವಿಸುತ್ತಿದ್ದು ಈ ಹಿನ್ನಲೆಯಲ್ಲಿ ತಾಲೂಕಿನಲ್ಲಿ ಜನರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಹಾಗೂ ಜಲಜೀವನ್ ಮಿಷನ್ ಕಾಮಗಾರಿಗಳ ಪ್ರಗತಿ ಮತ್ತು ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆಯಲು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಹಮ್ಮಿಕೊಳ್ಳಲಾಗಿತ್ತೆಂದು ಕೋಲಾರ ಸಂಸದ ಎಂ. ಮಲ್ಲೇಶ್ ಬಾಬು ತಿಳಿಸಿದರು.

ನಗರದ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ ಸಂಸದ ಎಂ. ಮಲ್ಲೇಶ್ ಬಾಬು ಅವರು ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಈಗಾಗಲೇ ಕೈಗೊಂಡಿರುವ ಕ್ರಮಗಳ ಕುರಿತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ವಿವರವಾದ ಮಾಹಿತಿ ಪಡೆದುಕೊಂಡರು. ಅಲ್ಲದೆ, ಜಲಜೀವನ್ ಮಿಷನ್ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ, ನೀರು ಸರಬರಾಜು ವ್ಯವಸ್ಥೆ ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳ ಕುರಿತು ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಮಾತನಾಡಿ ಬೇಸಿಗೆ ಸಮಯದಲ್ಲಿ ಗ್ರಾಮೀಣ ಭಾಗಗಳಲ್ಲಿ ನೀರಿನ ಅಭಾವ ಉಂಟಾಗದಂತೆ ಅಧಿಕಾರಿಗಳು ಮುಂಚಿತವಾಗಿ ಕ್ರಮವಹಿಸಬೇಕು. ಸಾರ್ವಜನಿಕರಿಗೆ ನಿರಂತರವಾಗಿ ಶುದ್ಧ ಕುಡಿಯುವ ನೀರು ಪೂರೈಕೆ ಆಗುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದ ಸಂಸದರು, ಕುಡಿಯುವ ನೀರು, ಪೈಪ್‌ಲೈನ್ ದುರಸ್ತಿ ಹಾಗೂ ಇತರ ಮೂಲಭೂತ ಸೌಕರ್ಯಗಳ ಸಮಸ್ಯೆಗಳ ಕುರಿತು ಮನವಿ ಆಲಿಸಿ, ಕೂಡಲೇ ಸಮಸ್ಯೆಗಳನ್ನು ಪರಿಹರಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ತಹಸೀಲ್ದಾರ್ ಸುದರ್ಶನ್ ಯಾದವ್, ಇಒ ಆನಂದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಪೌರ ಕಾರ್ಮಿಕರಿಗೆ ಒಂದು ದಿನದ ತರಬೇತಿ

ಗೌರಿಬಿದನೂರು: ನಗರಸಭೆ ಕಚೇರಿ ಆವರಣದಲ್ಲಿ ಪೌರ ಕಾರ್ಮಿಕರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.

ನಗರಸಭೆ ಪೌರಾಯುಕ್ತ ರಮೇಶ್ ಕೆ ಜಿ ಮಾತನಾಡಿ, ಘನ ತ್ಯಾಜ್ಯ ನಿರ್ವಹಣೆ ಕುರಿತಂತೆ ಕೇಂದ್ರ ಸರ್ಕಾರ ಏಪ್ರಿಲ್ 1 ರಿಂದ ನೂತನ ನಿಯಮಗಳನ್ನು ಜಾರಿಗೆ ಬರುವಂತೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಕಸವನ್ನು ಮೂಲದಲ್ಲಿಯೇ ನಾಲ್ಕು ವಿಧಗಳಾಗಿ ಬೇರ್ಪಡಿಸುವುದು ಕಡ್ಡಾಯ ಮಾಡಲಾಗಿದೆ.

ಹಸಿ ಕಸ, ಒಣ ಕಸ, ಸ್ಯಾನಿಟರಿ ವೇಸ್ಟ್, ಮತ್ತು ಅಪಾಯಕಾರಿ ತ್ಯಾಜ್ಯಗಳಾಗಿ ವಿಂಗಡಿಸಿ, ಸಂಗ್ರಹಣೆ ಮತ್ತು ನಿರ್ವಹಣೆ ಬಗ್ಗೆ ಎಲ್ಲಾ ಪೌರ ಕಾರ್ಮಿಕರಿಗೆ ತರಬೇತಿ ನೀಡಲಾಗುತ್ತಿದೆ ಎಂದರು. ಸಿ.ಮ್ಯಾಕ್ಸ್ ಸಂಸ್ಥೆ ತರಬೇತಿ ಸಮನ್ವಯ ಅಧಿಕಾರಿ ಹರೀಶ್, ಹಸಿ ಕಸ ಒಣ ಕಸ, ಸ್ಯಾನಿಟರಿ ವೇಸ್ಟ್, ಮತ್ತು ಅಪಾಯಕಾರಿ ತ್ಯಾಜ್ಯದ ನಿರ್ವಹಣೆ, ಕಸದಿಂದ ಗೊಬ್ಬರ ತಯಾರಿ ಮಾಡುವುದು, ಭೂಮಿಗೆ ವಿಷಹರಡದಂತೆ ಕ್ರಮ ಕೈಗೊಳ್ಳುವುದು. ಸೇರಿದಂತೆ ಹಲವು ಸಂಭಂದಿತ ವಿಷಯಗಳ ಬಗ್ಗೆ ಹಾಗೂ ಕಸ ಸಂಗ್ರಹಣೆ ಸಂದರ್ಭದಲ್ಲಿ ಪೌರ ಕಾರ್ಮಿಕರು ಪಾಲಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ವಿವರಿಸಿದರು.

ಇದೆ ಸಂದರ್ಭದಲ್ಲಿ, ಪರಿಸರ ಅಭಿ ಯಂತರ ಶಿವ ಶಂಕರ್, ಆರೋಗ್ಯ ನಿರೀಕ್ಷಕಿ ಶ್ವೇತಾ ಸೇರಿದಂತೆ ಪೌರ ಕಾರ್ಮಿಕರು ಪಾಲ್ಗೊಂಡಿದ್ದರು.



ಆಟದ ಮೂಲಕ ಶಿಕ್ಷಣ ನೀಡಿದರೆ ಕಲಿಕೆ ಶಾಶ್ವತ

ಶಿಡ್ಲಘಟ್ಟ: ಶಾಲಾ ಪೂರ್ವ ಹಂತದಲ್ಲಿ ಮಕ್ಕಳ ಮೆದುಳು ಅತ್ಯಂತ ವೇಗವಾಗಿ ವಿಕಸನಗೊಳ್ಳುತ್ತದೆ. ಈ ಸಮಯದಲ್ಲಿ ಸಾಂಪ್ರದಾಯಿಕ ಕಲಿಕೆಗೆ ಮಾತ್ರ ಒತ್ತು ನೀಡುವುದಕ್ಕಿಂತ ಆಟದ ಮೂಲಕ ಶಿಕ್ಷಣ ನೀಡಿದಾಗ ಕಲಿಕೆ ಶಾಶ್ವತವಾಗಿ ಉಳಿಯುತ್ತದೆ ಎಂದು ಪ್ರಥಮ ಎಜುಕೇಶನ್ ಫೌಂಡೇಶನ್ ಮುಖ್ಯಸ್ಥ ಮಂಜುನಾಥ್ ತಿಳಿಸಿದರು.

ತಾಲೂಕಿನ ಸುಗುಟೂರು ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಪ್ರಥಮ ಎಜುಕೇಶನ್ ಫೌಂಡೇಶನ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಶಾಲಾಪೂರ್ವ ತಯಾರಿ ಮೇಳದಲ್ಲಿ ಅವರು ಮಾತನಾಡಿದರು. ಅಂಗನವಾಡಿಯ ಆಟದ ವಾತಾವರಣದಿಂದ ಶಾಲೆಯ ಔಪಚಾರಿಕ ವಾತಾವರಣಕ್ಕೆ ಮಕ್ಕಳು ಸುಲಭ ವಾಗಿ ಹೊಂದಿಕೊಳ್ಳಲು ಮನೋವೈಜ್ಞಾನಿಕ ಚಟುವಟಿಕೆಗಳು ಅತ್ಯಗತ್ಯ. ಪ್ರತಿಯೊಬ್ಬ ತಾಯಿಯೂ ಮಗುವಿನ ಮಾನಸಿಕ ಬೆಳವಣಿಗೆಯನ್ನು ಹತ್ತಿರದಿಂದ ಅರಿತಿರುತ್ತಾರೆ. ಆದ್ದರಿಂದ ತಾಯಂದಿರು ಪ್ರತಿದಿನ ಕನಿಷ್ಠ 15 ನಿಮಿಷಗಳ ಕಾಲ ಮಗುವಿನೊಂದಿಗೆ ಕಳೆಯಬೇಕು. ಆಟದ ಮೂಲಕ ಮಕ್ಕಳ ಭೌತಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ಉತ್ತೇಜಿಸಿದಾಗ ಅವರ ಗ್ರಹಣಶಕ್ತಿ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ ಎಂದು ಮಂಜುನಾಥ್ ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕ ಎಚ್.ಎಂ. ರುದ್ರೇಶ್ ಮೂರ್ತಿ ಅವರು, ಮೇಳದಲ್ಲಿ ಅಳವಡಿಸಿರುವ ವೈವಿಧ್ಯಮಯ ಚಟುವಟಿಕೆಗಳು ಮಕ್ಕಳ ಮನೋವಿಕಾಸಕ್ಕೆ ಸಹಕಾರಿಯಾಗಿವೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಸುನೀತಾ, ಭಾರತಿ, ಲಕ್ಷ್ಮಿಪತಿ, ಗಣೇಶ್, ಚೈತ್ರಾ, ರಶ್ಮಿ, ಶಾಲೆಯ ಶಿಕ್ಷಕ ಟಿ.ವಿ. ನಾಗರಾಜ್, ನಿವೃತ್ತ ಶಿಕ್ಷಕ ಬಿ. ನಾಗರಾಜ್ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ವೆಂಕಟೇಶ್ ಸೇರಿದಂತೆ ಶಾಲಾ ಮಕ್ಕಳು ಮತ್ತು ಪೋಷಕರು ಉಪಸ್ಥಿತರಿದ್ದರು.



ಕುಂಬಿಗಾನಹಳ್ಳಿ ಪಿಕೆಪಿಎಸ್ ಅಧ್ಯಕ್ಷರಾಗಿ ಕೆ.ಎಂ. ಭೀಮೇಶ್

ಶಿಡ್ಲಘಟ್ಟ: ತಾಲೂಕಿನ ಕುಂಬಿಗಾನಹಳ್ಳಿ (ಎಚ್ ಕ್ರಾಸ್) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಲ್ನಾಯಕನಹಳ್ಳಿಯ ಕೆ.ಎಂ. ಭೀಮೇಶ್ ಹಾಗೂ ಉಪಾಧ್ಯಕ್ಷರಾಗಿ ಟಿ. ಬುಸವನಹಳ್ಳಿಯ ಸೋಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಚೀಮಂಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದಿರುವ ಕುಂಬಿಗಾನ ಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಐದು ವರ್ಷದ ಆಡಳಿತ ಮಂಡಳಿಯ ಪದಾಧಿಕಾರಿಗಳ ಆಯ್ಕೆಗಾಗಿ ಗುರುವಾರ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು.ಅಧ್ಯಕ್ಷ ಸ್ಥಾನಕ್ಕೆ ಕೆ.ಎಂ. ಭೀಮೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸೋಮೇಶ್ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಇತರೆ ಯಾವುದೇ ನಾಮಪತ್ರಗಳು ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಮಂಜುನಾಥ್ ಘೋಷಿಸಿದರು.

ನಂತರ ನೂತನ ಅಧ್ಯಕ್ಷ ಕೆ.ಎಂ. ಭೀಮೇಶ್ ಹಾಗೂ ಉಪಾಧ್ಯಕ್ಷ ಸೋಮೇಶ್ ಮಾತನಾಡಿ, ನಮ್ಮ ಮೇಲೆ ವಿಶ್ವಾಸವಿಟ್ಟು ಈ ಜವಾಬ್ದಾರಿಯನ್ನು ನೀಡಿರುವ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ಸಂಘದ ಅಭಿವೃದ್ಧಿ ಹಾಗೂ ರೈತರ ಹಿತದೃಷ್ಟಿಯಿಂದ ಪ್ರಾಮಾಣಿಕವಾಗಿ ಮತ್ತು ನಿಸ್ವಾರ್ಥವಾಗಿ ಕಾರ್ಯನಿರ್ವಹಿಸು ತ್ತೇವೆ. ಮುಂದಿನ ದಿನಗಳಲ್ಲಿಯೂ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.

ಸಚಿವ ಕೆ.ಎಚ್.ಮುನಿಯಪ್ಪ ಅಭಿಮಾನಿಗಳಿಂದ ವಿಶೇಷ ಪೂಜೆ

ಡಿಸಿಎಂ ಸ್ಥಾನ ನೀಡಲು ಕಾರ್ಯಕರ್ತರ ಆಗ್ರಹ

ಕೋಲಾರ: ಪಕ್ಷನಿಷ್ಠೆ ಹಾಗೂ ಜನಸೇವೆಗೆ ಹೆಸರಾಗಿರುವ ರಾಜ್ಯ ಆಹಾರ ಪೂರೈಕೆ ಖಾತೆ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಉಪ ಮುಖ್ಯ ಮಂತ್ರಿಯಾಗಿ ನೇಮಕ ಮಾಡುವಂತೆ ಪಕ್ಷದ ಹೈಕಮಾಂಡ್‌ಗೆ ಆಗ್ರಹದ ಜತೆಗೆ ದೇವರ ಮೊರೆ ಹೋಗಿದ್ದೇವೆ ಎಂದು ಕೋಲಾರ ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷರಾದ ಕೆ ಜಯದೇವ್ ತಿಳಿಸಿದರು.

ಶನಿವಾರ ನಗರದ ಎಸ್ಪಿ ನಿವಾಸದ ಸಮೀಪದ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ 101 ಈಡುಗಾಯಿ ಹೊಡೆದು ಕೆಎಚ್.ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನಕ್ಕಾಗಿ ಪ್ರಾರ್ಥಿಸಿದ ಸಂದರ್ಭದಲ್ಲಿ ಅವರು ಮಾತನಾಡುತ್ತಿದ್ದರು.

ಕೆ.ಹೆಚ್.ಮುನಿಯಪ್ಪನವರು ಉಪಮುಖ್ಯ ಮಂತ್ರಿ ಸ್ಥಾನಕ್ಕೆ ಸೂಕ್ತವಾಗಿದ್ದಾರೆ. 7 ಭಾರಿ ಲೋಕಸಭಾ ಸದಸ್ಯರಾಗಿ, ಕೇಂದ್ರದ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ ಖಾತೆ ಸೇರಿದಂತೆ ಎರಡು ಬಾರಿ ಕೇಂದ್ರ ಸಚಿವರಾಗಿ ಅಪಾರವಾದ ಅನುಭವ ಹೊಂದಿರುವ ಸಂಘಟನಾ ಚತುರರಾಗಿದ್ದು ಉಪಮುಖ್ಯ ಮಂತ್ರಿ ಸ್ಥಾನಕ್ಕೆ ಎಲ್ಲಾ ರೀತಿಯಲ್ಲೂ ಅರ್ಹರಾಗಿದ್ದಾರೆ ಎಂದು ಪ್ರತಿಪಾದಿಸಿದರು. ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಮಲ್ಲಿಕಾರ್ಜುನ್ ಖರ್ಗೆಯ ನಂತರದಲ್ಲಿ ಕೆ.ಎಚ್. ಮುನಿಯಪ್ಪ ಅವರು ಮುಂಚೂಣಿಯಲ್ಲಿದ್ದಾರೆ. ಅವರಿಗೆ ಕಳೆದ ಬಾರಿಯೇ ಉಪಮುಖ್ಯ ಮಂತ್ರಿ ಸ್ಥಾನದ ಅವಕಾಶ ತಪ್ಪಿದ್ದು, ಈ ಬಾರಿ ಅವಕಾಶ ನೀಡಬೇಕು ಎಂದು ಕೋರಿದರು.ಮುಖಂಡರಾದ ಹಾರೋಹಳ್ಳಿ ರವಿ ದೇವುಡು, ಚನ್ನಸಂದ್ರ ಮುನಿರಾಜು, ವೆಂಕಟೇಶ್, ಶ್ರೀನಿವಾಸ್, ಕೆ.ಆರ್.ತ್ಯಾಗರಾಜು, ರಾಮಮೂರ್ತಿ, ನಾರಾಯಣ ಸ್ವಾಮಿ, ವೆಂಕಟಪತಿ, ಪ್ಯಾರಜಾನ್, ಕೃಷ್ಣೆಗೌಡ ಮತ್ತಿತರರಿದ್ದರು.



> ಅನ್ನಭಾಗ್ಯ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ ಹಾಗಾಗಿ ಉಪ ಮುಖ್ಯ ಮಂತ್ರಿ ಸ್ಥಾನವನ್ನು ನೀಡಿದಲ್ಲಿ ಪಕ್ಷದ ಘನತೆ ಹೆಚ್ಚಿಸುವುದರ ಜತೆಗೆ ಪಕ್ಷವನ್ನು ಮತ್ತಷ್ಟು ಬಲಗೊಳಿಸಲು ಸಹಕಾರಿಯಾಗಲಿದೆ .
>
> ■ ವಿ ಮಂಜುನಾಥ್, ಕೋಲಾರ ಜಿಲ್ಲಾ ಬೀದಿಬದಿ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷ

ಆರಾಧನೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆ

ಜೂ.17ಕ್ಕೆ ಕೈವಾರ ತಾತಯ್ಯನವರ ಆರಾಧನೆ

ಚಿಂತಾಮಣಿ: ಶ್ರೀಕ್ಷೇತ್ರ ಕೈವಾರದಲ್ಲಿ ತ್ರಿಕಾಲಜ್ಞಾನಿ, ಸಂತ ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ 191ನೇ ಜೀವ ಸಮಾಧಿ ಪ್ರವೇಶ ಪರ್ವ ಆರಾಧನಾ ಮಹೋತ್ಸವವನ್ನು ಜೂನ್ 17 ಬುಧವಾರದಂದು ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುವುದು ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ತಿಳಿಸಿದ್ದಾರೆ.

ತಾಲ್ಲೂಕಿನ ಕೈವಾರದ ಶ್ರೀಯೋಗಿನಾರೇಯಣ ಮಠದ ಸದ್ಗುರು ಕೈವಾರ ತಾತಯ್ಯನವರ ಸನ್ನಿಧಾನದಲ್ಲಿ ಆರಾಧನಾ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಮಾತನಾಡಿ ಆರಾಧನೆಯ ಪರ್ವ ಮಹೋತ್ಸವದ ದಿನದಂದು ಪ್ರಾತಃಕಾಲ ಘಂಟಾನಾದ, ಸುಪ್ರಭಾತ, ಗೋಪೂಜೆಯೊಂದಿಗೆ ಪೂಜಾ ಕೈಂಕರ್ಯಗಳು ಆರಂಭವಾಗುತ್ತದೆ. ಬೆಳಿಗ್ಗೆ 8 ಗಂಟೆಗೆ ಸದ್ಗುರು ತಾತಯ್ಯನವರನ್ನು ಅಲಂಕೃತ ಪಲ್ಲಕ್ಕಿಯಲ್ಲಿ ಸಭಾಂಗಣಕ್ಕೆ ಕರೆತರಲಾಗುವುದು. ತಾತಯ್ಯನವರಿಗೆ ವಿಶೇಷ ಅಭಿಷೇಕ, ಅಷ್ಟಾವಧಾನ ಸೇವೆ, ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುತ್ತದೆ. ಪ್ರತಿವರ್ಷದಂತೆ ಈ ಸಮಾರಂಭದಲ್ಲಿ ಭಾಗವಹಿಸುವ ಎಲ್ಲಾ ಸಾಧು - ಸತ್ಪುರುಷರಿಗೆ ಕಾಷಾಯ ವಸ್ತ್ರವನ್ನು ಉಚಿತವಾಗಿ ನೀಡಲಾಗುತ್ತದೆ. ಸದ್ಗುರು ತಾತಯ್ಯನವರಿಗೆ 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಸಮರ್ಪಿಸಲಾಗುತ್ತದೆ. ತಾತಯ್ಯನವರ ಗುರುಚಿಂತನಾ ಸಂದೇಶವನ್ನು ನೀಡಲಾಗುತ್ತದೆಯೆಂದರು.

ಸದ್ಗುರು ತಾತಯ್ಯನವರ ಜೀವ ಸಮಾಧಿ ಪ್ರವೇಶ ಮಹೋತ್ಸವ ಆರಾಧನೆಯ ಅಂಗವಾಗಿ ಜೂನ್ 16 ಮಂಗಳವಾರದಂದು ಬೆಳಿಗ್ಗೆ ವಿಶೇಷ ಹೋಮವನ್ನು ಹಮ್ಮಿಕೊಳ್ಳಲಾಗಿದೆ. ಅಂದು ರಾತ್ರಿ ಕ್ಷೇತ್ರದ ಭಜನಾ ಮಂದಿರದಲ್ಲಿ ಅಖಂಡ ನಾಮ ಸಂಕೀರ್ತನಾ ಭಜನಾ ಕಾರ್ಯಕ್ರಮಗಳು ನಡೆಯುತ್ತದೆ ಎಂದರು.



ಆಹ್ವಾನ ಪತ್ರಿಕೆಗಳನ್ನು ತಾತಯ್ಯನವರ ಸನ್ನಿಧಿಯಲ್ಲಿ ಇಟ್ಟು ಪೂಜಿಸಲಾಯಿತು. ಆಹ್ವಾನಪತ್ರಿಕೆ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀಯೋಗಿನಾರೇಯಣ ಮಠ ಟ್ರಸ್ಟ್ ಉಪಾಧ್ಯಕ್ಷ ಜೆ.ವಿಭಾಕರರೆಡ್ಡಿ, ಖಜಾಂಚಿ ಆರ್.ಪಿ.ಎಂ.ಸತ್ಯನಾರಾಯಣ, ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕ ವಿದ್ವಾನ್ ವಾನರಾಶಿ ಬಾಲಕೃಷ್ಣ ಭಾಗವತರ್ ಸದಸ್ಯ ಕೆ.ನರಸಿಂಹಪ್ಪ, ವ್ಯವಸ್ಥಾಪಕ ಕೆ.ಲಕ್ಷ್ಮೀನಾರಾಯಣ್ ಮುಂತಾದವರು ಉಪಸ್ಥಿತರಿದ್ದರು.